# ಕರ್ನಾಟಕ ವಿಧಾನ ಪರಿಷತ್ತಿನ ನಡವಳಿಕೆಗಳು

# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

## ೧೨೭ನೇ ಅಧಿವೇಶನ

**127th Session**

(01 ಏಪ್ರಿಲ್ 2015)

**(01st APRIL 2015)**

ಸಂಪುಟ ೪೩೧ ಕ್ರಮಾಂಕ (೪)

Volume 431 No (4)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

**Karnataka Legislature Secretariat, Bengaluru**

# ಕರ್ನಾಟಕ ವಿಧಾನ ಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

**೧೨೭ನೇ ಅಧಿವೇಶನ**

**127th Session**

(01 ಏಪ್ರಿಲ್ 2015)

**(01st APRIL 2015)**


ಸಂಪುಟ ೪೩೧ ಕ್ರಮಾಂಕ (೪)

Volume 431 No (4)


ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

**Karnataka Legislature Secretariat, Bengaluru**

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ 01ನೇ ಏಪ್ರಿಲ್ 2015

ಬುಧವಾರ

## ವಿಷಯಾನುಕ್ರಮಣಿಕೆ

1 ನಿಲುವಳಿ ಸೂಚನೆ ಪ್ರಸ್ತಾವ ಮಂಡಿಸಲು ಅನುಮತಿ ಕೋರಿ ಚರ್ಚೆ 1–23

"ರಾಜ್ಯದ 'ಸಿ' ಕೆಟಗರಿ ಗಣಿ ಹರಾಜು ಪ್ರಕ್ರಿಯೆ ಬಗ್ಗೆ ಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ವರದಿಯಾಗಿರುವ ಅಂಶಗಳ ಬಗ್ಗೆ."

ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)
ಡಾ: ಮತ್ತಿಕಟ್ಟಿ ವೀರಣ್ಣ
ಶ್ರೀ ಐವನ್ ಡಿ'ಸೋಜಾ
ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು)
ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
ಶ್ರೀ ಬಿ. ರಮಾನಾಥ ರೈ (ಅರಣ್ಯ ಸಚಿವರು)
ಶ್ರೀ ಆರ್.ಕೆ. ಸಿದ್ದರಾಮಣ್ಣ
ಶ್ರೀ ವಿ.ಎಸ್. ಉಗ್ರಪ್ಪ

2 ಸಭೆಯ ಮುಂದಿಡಲಾದ ಕಾಗದ ಪತ್ರಗಳು 24–24

3 ಶಾಸನ ರಚನೆ 24–86

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(ಅ) ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2015

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)
ಶ್ರೀ ರಾಮಚಂದ್ರಗೌಡ
ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಶ್ರೀ ಕೆ. ಅಬ್ದುಲ್ ಜಬ್ಬಾರ್
ಶ್ರೀ ಗೋ. ಮದುಸೂಧನ್
ಶ್ರೀ ಇ. ಕೃಷ್ಣಪ್ಪ
ಡಾ: ಎಂ.ಆರ್. ಹುಲಿನಾಯ್ಕರ್
ಶ್ರೀ ಪಟೇಲ್ ಶಿವರಾಂ
ಶ್ರೀ ಅಲ್ಲಮಪ್ರಭು ಪಾಟೀಲ್
ಶ್ರೀ ದಯಾನಂದ
ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ

ಶ್ರೀ ಆಚಾರ್ ಹಾಲಪ್ಪ ಬಸಪ್ಪ
ಶ್ರೀ ಆರ್.ಕೆ. ಸಿದ್ದರಾಮಣ್ಣ
ಶ್ರೀ ವಿ.ಎಸ್. ಉಗ್ರಪ್ಪ
ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
(ವಿಧೇಯಕ ಅಂಗೀಕರಿಸಲ್ಪಟ್ಟಿತು)

(ಆ) ಕನ್ನಡ ಭಾಷಾ ಕಲಿಕೆ ವಿಧೇಯಕ, 2015
ಶ್ರೀ ವೈ.ಎ. ನಾರಾಯಣಸ್ವಾಮಿ
ಶ್ರೀ ರಾಮಚಂದ್ರಗೌಡ
ಶ್ರೀ ಗೋ. ಮಧುಸೂದನ್
ಕ್ಯಾಪ್ಟನ್ ಗಣೇಶ್ ಕಾರ್ಣಿಕ್
ಶ್ರೀ ಬಸವರಾಜ ಹೊರಟ್ಟಿ
ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ)
ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)
ಶ್ರೀಎಸ್.ಆರ್. ಪಾಟೀಲ್ (ಸಭಾನಾಯಕರು)
ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)
(ಚರ್ಚೆ ಮುಂದುವರೆದಿತ್ತು)

4 ಮುಖ್ಯಮಂತ್ರಿಗಳ ಹೇಳಿಕೆ 86–101
“ರಾಜ್ಯದ ‘ಸಿ’ ಕೆಟಗರಿ ಗಣಿ ಹರಾಜು ಪ್ರಕ್ರಿಯೆ ಬಗ್ಗೆ ಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ವರದಿಯಾಗಿರುವ ಅಂಶಗಳ ಬಗ್ಗೆ.
ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು)
ಶ್ರೀ ರಾಮಚಂದ್ರಗೌಡ
ಶ್ರೀ ಗೋ. ಮಧುಸೂದನ್
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)
ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
ಶ್ರೀ ಟಿ.ಬಿ. ಜಯಚಂದ್ರ
ಶ್ರೀ ಅರುಣ ಶಹಾಪುರ
ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು)

5 ಶಾಸನ ರಚನೆ 101–123
(ಅ) ಕನ್ನಡ ಭಾಷಾ ಕಲಿಕೆ ವಿಧೇಯಕ, 2015ರ ಬಗ್ಗೆ ಮುಂದುವರೆದ ಚರ್ಚೆ.
ಶ್ರೀ ಎಸ್.ವ್ಹಿ. ಸಂಕನೂರ
ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)
ಶ್ರೀ ಅರುಣ ಶಹಾಪುರ
ಶ್ರೀ ಮರಿತಿಬ್ಬೇಗೌಡ
ಶ್ರೀ ವಿ.ಎಸ್. ಉಗ್ರಪ್ಪ

ಶ್ರೀ ಪುಟ್ಟಣ್ಣ
ಶ್ರೀ ಆರ್. ಕೆ. ಸಿದ್ದರಾಮಣ್ಣ
ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ
ಶ್ರೀ ಬಸವರಾಜ ಹೊರಟ್ಟಿ
ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)
(ವಿಧೇಯಕ ಅಂಗೀಕರಿಸಲ್ಪಟ್ಟಿತು)

(ಆ) ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು (ಕರ್ನಾಟಕ ತಿದ್ದುಪಡಿ) ವಿಧೇಯಕ, 2015
ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)
(ವಿಧೇಯಕ ಅಂಗೀಕರಿಸಲ್ಪಟ್ಟಿತು)

6 **ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ** 123–123

7 **ಸಚಿವರ ಹೇಳಿಕೆಗಳು** 123–131

(ಅ) ಅಕ್ಷರ ದಾಸೋಹದಲ್ಲಿ ನಕಲಿ ಫೈರ್‌ಪ್ರೂಫ್ ಏಪ್ರಾನ್ ಖರೀದಿಸಿ ಅಕ್ರಮವೆಸಗಿರುವ ಬಗ್ಗೆ.
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಪರವಾಗಿ)

(ಆ) ರಾಜ್ಯದ ಮುಜರಾಯಿ ಇಲಾಖೆಯಡಿ ಇರುವ ದೇವಸ್ಥಾನಗಳ ಆರ್ಥಿಕ ಪರಿಸ್ಥಿತಿಯ ನಿರ್ವಹಣೆಯಲ್ಲಿರುವ ಕೊರತೆಗಳಿಂದಾಗಿ ಸಾರ್ವಜನಿಕರ ಮನಸ್ಸಿನಲ್ಲಿ ಆತಂಕ ಉಂಟಾಗಿರುವ ಬಗ್ಗೆ.
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು) (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರ ಪರವಾಗಿ)

(ಇ) ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಹೊರಗುತ್ತಿಗೆ ನೇಮಕದ ಬಗ್ಗೆ.
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು) (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

(ಈ) ಕರ್ನಾಟಕ ರಾಜ್ಯದ ನಿವೃತ್ತ ಪೊಲೀಸ್ ಸಿಬ್ಬಂದಿ/ಅಧಿಕಾರಿಗಳಿಗೆ ಆರೋಗ್ಯ ಭಾಗ್ಯ ಯೋಜನೆಯನ್ನು ಕ್ಯಾಂಟೀನ್ ಸೌಲಭ್ಯವನ್ನು, ಶವ ಸಂಸ್ಕಾರಕ್ಕೆ ಆರ್ಥಿಕ ನೆರವು ನೀಡಬೇಕೆಂಬ ವಿವಿಧ ಬೇಡಿಕೆಗಳನ್ನು ಒತ್ತಾಯಿಸಿ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘ ಮಂಗಳೂರು ನಗರದಲ್ಲಿ ಜಾತಾ ನಡೆಸಿರುವುದಲ್ಲದೆ ಏಪ್ರಿಲ್ 2 ರಂದು ನಡೆಯುವ ಪೊಲೀಸ್ ಫ್ಲ್ಯಾಗ್ ಡೇ ಬಹಿಷ್ಕರಿಸುವುದಾಗಿ ತಿಳಿಸಿರುವ ಬಗ್ಗೆ.
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು) (ಗೃಹ ಸಚಿವರ ಪರವಾಗಿ)

(ಉ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಖಾಲಿ ಇದ್ದ 472 ಕಿರಿಯ ಇಂಜಿನಿಯರ್ ಮತ್ತು 207 ಸಹಾಯಕ ಇಂಜಿನಿಯರ್ ವೃಂದದ ಹುದ್ದೆಗಳನ್ನು ವಿಶೇಷ ನೇಮಕಾತಿ ಸಮಿತಿಯ ಮೂಲಕ ಆಯ್ಕೆ ಮಾಡುವ ಬಗ್ಗೆ.

ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)

8 **ಸಾರಾಂಶ** 132–140

ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)

ಶ್ರೀ ರಾಮಚಂದ್ರಗೌಡ

~~~~~~~~
~~~~~~~~

# ಕರ್ನಾಟಕ ವಿಧಾನ ಪರಿಷತ್ತು

*ಬುಧವಾರ, 1ನೇ ಏಪ್ರಿಲ್ 2015*

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಪೂರ್ವಾಹ್ನ 10 ಗಂಟೆ 56 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

~~~~~~~~
~~~~~~~~

(11:00 ಗಂಟೆ)

1. ನಿಲುವಳಿ ಸೂಚನೆ ಪ್ರಸ್ತಾವ ಮಂಡಿಸಲು ಅನುಮತಿ ಕೋರಿ ಚರ್ಚೆ.

'ರಾಜ್ಯದ 'ಸಿ' ಕೆಟಗರಿ ಗಣಿ ಹರಾಜು ಪ್ರಕ್ರಿಯೆ ಬಗ್ಗೆ ಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ವರದಿಯಾಗಿರುವ ಅಂಶಗಳ ಬಗ್ಗೆ'.

---

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದ ಗಣಿ ಹಗರಣದ ಬಗ್ಗೆ ಸುಪ್ರೀಂ ಕೋರ್ಟ್ ನೆನ್ನೆ ದಿವಸ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ. ಎರಡು ವರ್ಷದ ಕೆಳಗಡೆ 51ಸಿ ಅಕ್ರಮ ಗಣಿಗಾರಿಕೆಗಳಿಗೆ 51 ಗಣಿ ಕಂಪನಿಗಳನ್ನು ಹರಾಜು ಹಾಕಬೇಕೆಂದು ಹೇಳಿದೆ. ಕೇಂದ್ರ ಸರ್ಕಾರ ಹೇಳಿದ ನಂತರವೂ ಕೂಡ 'ಸಿ' ಕೆಟಗರಿ ಅಕ್ರಮ ಗಣಿಗಾರಿಕೆ ಕಂಪನಿಗಳಿಗೆ ಇವರು ಪ್ರೋತ್ಸಾಹ ಮಾಡುತ್ತಾ ಇದ್ದಾರೆ. ಅವರ ಪರವಾನಗಿಯನ್ನು ಕ್ಯಾನ್ಸಲ್ ಮಾಡುವುದಕ್ಕೆ ಆರು ತಿಂಗಳು ಬೇಕಾಗಿದೆ. ನೆನ್ನೆಯ ದಿವಸ ನಮ್ಮ ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದೆ. ಯಾವಾಗ ಹರಾಜು ಹಾಕಲಾಗುವುದು, ಎಷ್ಟು ಅದಿರು ಇದೆ ಎಂದು ಮಾಹಿತಿಯನ್ನು ಕೊಡುವುದಕ್ಕೆ ಸರ್ಕಾರಕ್ಕೆ ತಾಕತ್ತು ಇಲ್ಲವೇ? 29ನೇ ತಾರೀಖಿನೊಳಗೆ ಇದರ ಬಗ್ಗೆ ಮಾಹಿತಿ ನೀಡಬೇಕೆಂದು ಸುಪ್ರೀಂ ಕೋರ್ಟ್ ಬಹಳ ಸ್ಪಷ್ಟವಾಗಿ ಹೇಳಿದೆ. ಈ ರೀತಿ ಮಾಡುತ್ತಿರುವುದರಿಂದ ಗಣಿ ಹಗರಣವನ್ನು ಸೃಷ್ಟಿ ಮಾಡುವುದಕ್ಕೆ ಸರ್ಕಾರ ಹೊರಟಿದೆಯೇ ಎಂದು ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಕ್ಕೆ ತರಾಟೆಗೆ ತೆಗೆದುಕೊಂಡಿದೆ; ಕರ್ನಾಟಕ ರಾಜ್ಯ ಸರ್ಕಾರದ ಮಾನ-ಮರ್ಯಾದೆಯನ್ನು ಹರಾಜು ಹಾಕಿದೆ. ಈ ರೀತಿ 51 ಅಕ್ರಮ ಗಣಿಗಾರಿಕೆಯ ಕಂಪನಿಗಳಿಗೆ ಇವರು ಪ್ರೊತ್ಸಹವನ್ನು ಮಾಡುತ್ತಿದ್ದಾರೆ. ಈ ಅಕ್ರಮ ಗಣಿಗಾರಿಕೆಗಳನ್ನು ಹರಾಜು ಹಾಕಬೇಕೆಂದು ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಹೇಳಿದರು ಕೂಡ; ಇದನ್ನು ಎರಡು ವರ್ಷಗಳ ಕೆಳಗಡೆ ಹೇಳಿರುವಂಥದ್ದು. ಆದರೆ, ಎರಡು ವರ್ಷಗಳಾದರೂ ಕೂಡ ಆ ಕಂಪನಿಗಳನ್ನು ಹರಾಜು ಮಾಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ? ಇವರು ಅವರು ಬೀಗರಾ? ಅವರಿಗೂ ಇವರಿಗೂ ಸಂಬಂಧವೇನು? ಏಕೆ ಹರಾಜು ಹಾಕುತ್ತಿಲ್ಲ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, ನನಗೇನು ಅರ್ಥವೇ ಆಗುತ್ತಿಲ್ಲ. ನನಗೂ ಕೂಡ ಸುಪ್ರೀಂ ಕೋರ್ಟ್ ಆ ರೀತಿ ಹೇಳಿರುವ ಬಗ್ಗೆ ಪ್ರತಿ ಮುಟ್ಟಿದೆ. The provision is very clear. ನೋಡಿ ಕರ್ನಾಟಕ ವಿಧಾನ ಪರಿಷತ್ತಿನ Rule 61, sub-rule (vii) is very clear. It says,

> "the motion shall not deal with any matter which is under adjudication by a Court of Law having jurisdiction in any part of India."

This provision is very very clear. ನಿಯಮ 61ರ ಉಪ ನಿಯಮ 7ರ ಕೆಳಗಡೆ ಕೋರ್ಟ್‌ನಲ್ಲಿ ಬಾಕಿ ಇರುವಂತಹ ವಿಷಯದ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. It is a restriction. It is a restriction for taking up Adjournment Motion. ದಯಮಾಡಿ, ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. The Opposition Leader has no locus standi to make a Preliminary Submission. ಮಾನ್ಯ ವಿರೋಧ ಪಕ್ಷದ ನಾಯಕರು ಹಿಂದಿನ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಕೆಲಸವನ್ನು ಮಾಡಿ ಅನುಭವ ಇರುವವರು. ಆದರೆ ನಾವೇ ಮಾಡಿರುವಂತಹ Rules of Procedure ಗೆ ವ್ಯತಿರಿಕ್ತವಾಗಿ ಇವರು ಇಲ್ಲಿ ಚರ್ಚೆ ಮಾಡುತ್ತಿದ್ದಾರೆ. ದಯಮಾಡಿ ಇವರು ಈ ವಿಷಯದ ಬಗ್ಗೆ ಮಾತನಾಡುವುದರ ಬಗ್ಗೆ ತಾವು ನಿಯಂತ್ರಣ ಮಾಡಬೇಕಾಗುತ್ತದೆ. He cannot discuss any matter. Nothing… not a single word uttered by the Opposition Leader should go on record. It should not go on record. The matter is very clear. You go through it. …*(Interruptions)*… I have received the notice copy. I have got a right to say that this matter cannot be taken up for discussion.

**(ಗೊಂದಲ)**

ಇದು ಯಾವ ಸೆಕ್ಷನ್ ಮತ್ತು ರೆಫರೆನ್ಸ್ ಎಂಬುದರ ಬಗ್ಗೆ ಅವರಿಗೆ ಮಾಹಿತಿ ಬೇಕೆಂದರೆ, ಅದನ್ನು ನಾನು ಅವರಿಗೆ ಕೊಡುತ್ತೇನೆ. ಈ ವಿಷಯವನ್ನು ಏನು ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 59ರ ನಿಲುವಳಿ ಸೂಚನೆಯ ಅಡಿಯಲ್ಲಿ ಮಂಡಿಸಿದ್ದಾರೆ, ಅದಕ್ಕೆ ನಿಯಮ 61(7) ಏನು ಹೇಳುತ್ತದೆಂದರೆ,

> "the motion shall not deal with any matter which is under adjudication by a Court of Law having jurisdiction in any part of India."

I will rely only on this rule. The Hon. Chair should not allow it. Absolutely, this Adjournment Motion cannot be moved at all.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಕೋರ್ಟ್‌ನಲ್ಲಿರುವಂತಹ ವಿಷಯದ ಬಗ್ಗೆ ಮಾತನಾಡುತ್ತಿಲ್ಲ. ಸುಪ್ರೀಂ ಕೋರ್ಟ್ ಹೇಳಿದ್ದನ್ನು ಏಕೆ ಸರ್ಕಾರ ಇಂಪ್ಲಿಮೆಂಟ್ ಮಾಡುತ್ತಿಲ್ಲ ಎನ್ನುವುದನ್ನು ತಮ್ಮ ಮುಖಾಂತರ ಕೇಳುತ್ತಿರುವುದು. ಏಕೆ ಇದುವರೆಗೂ ಸರ್ಕಾರ ಇಂಪ್ಲಿಮೆಂಟ್ ಮಾಡಿಲ್ಲ; ಇದುವರೆಗೂ ಅವುಗಳನ್ನು ಏಕೆ ಹರಾಜು ಮಾಡಿಲ್ಲ?

**(ಗೊಂದಲ)**

ಹಿಂದೆ ಈ ವಿಷಯದ ಬಗ್ಗೆಯೇ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಅವತ್ತಿನ ದಿವಸ ಕೂಡ ವಿಷಯ ಸುಪ್ರೀಂ ಕೋರ್ಟ್‌ನಲ್ಲಿ ಪೆಂಡಿಂಗ್ ಇತ್ತು. ಅದರೂ ಕೂಡ ಚರ್ಚೆ ಮಾಡುವುದಕ್ಕೆ ಅವತ್ತಿನ ದಿವಸ ಅವಕಾಶವನ್ನು ಕಲ್ಪಿಸಲಾಗಿತ್ತು. ಅದೇ ರೀತಿ ಇವತ್ತಿನ ದಿವಸ ಕೂಡ ಏಕೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, I will rely on this rule. ನಿಯಮ 61(7)ರ ಕೆಳಗಡೆ ಬಹಳ ಕ್ಲಿಯರ್ ಆಗಿ ಹೇಳಿದೆ. It is very clear.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಒಂದೇ ಇಶ್ಯೂ ಮೇಲೆ ಒಂದೇ ಅಧಿವೇಶನದಲ್ಲಿ ಎರಡು ಬಾರಿ ಚರ್ಚೆ ಮಾಡುವುದಕ್ಕೆ ಬರುತ್ತದೆಯೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅಕ್ರಮ ಗಣಿಗಾರಿಕೆಯನ್ನು ಎರಡು ವರ್ಷಗಳ ಹಿಂದೆಯೇ ಕೇಂದ್ರ ಸರ್ಕಾರ ಈ ಕಂಪನಿಗಳನ್ನು ಹರಾಜು ಹಾಕಬೇಕೆಂದು ಹೇಳಿತ್ತು. ಆದರೆ ಎರಡು ವರ್ಷಗಳಾದರೂ ಕೂಡ ಇನ್ನು ಹರಾಜು ಮಾಡುತ್ತಿಲ್ಲ ಎಂದರೆ, ಈ ಅಕ್ರಮ ಗಣಿಗಾರಿಕೆಗಳ ಜೊತೆಯಲ್ಲಿ ಸರ್ಕಾರಕ್ಕೆ ಏನು ಸಂಬಂಧ, ಇವರಿಗೂ ಅವರಿಗೂ ಏನು ಸಂಬಂಧ ಇದೆ. ಏಕೆ ಆ ಅಕ್ರಮ ಗಣಿಗಾರಿಕೆಗಳನ್ನು ಹರಾಜು ಹಾಕುತ್ತಿಲ್ಲ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಎರಡು ವರ್ಷವಾದರೂ ಇವರು ಗಣಿ ಗುತ್ತಿಗೆಯನ್ನು ಹರಾಜು ಹಾಕುವುದಿಲ್ಲವೆಂದರೆ, ಈ ಅಕ್ರಮ ಗಣಿಗಾರಿಕೆಯವರ ಜೊತೆಗೆ ಇವರ ಭ್ರಷ್ಟಾಚಾರದ ಸಂಬಂಧವೇನು? ಇವರಿಗೂ, ಅವರಿಗೂ ಏನು ಸಂಬಂಧ? ಏಕೆ ಇವರು ಹರಾಜು ಹಾಕುತ್ತಿಲ್ಲ?

**ಡಾ: ಮತ್ತಿಕಟ್ಟಿ ವೀರಣ್ಣ:–** ಸನ್ಮಾನ್ಯ ಸಭಾಪತಿಯವರೇ, ಒಂದು ಅಧಿವೇಶನದಲ್ಲಿ ಒಂದೇ ವಿಷಯದ ಮೇಲೆ ಎರಡು ಬಾರಿ ನಿಲುವಳಿ ಸೂಚನೆಯ ಪ್ರಸ್ತಾವನೆಯನ್ನು ತರುವುದಕ್ಕಾಗುತ್ತದೆಯೆ? Don't allow this. This is against to the rules of procedure.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ತಾವು ಈ ವಿಚಾರದಲ್ಲಿ ರೂಲಿಂಗ್ ನೀಡಬೇಕಾಗುತ್ತದೆ. ಒಂದು ಅಧಿವೇಶನದಲ್ಲಿ ಒಂದೇ ವಿಷಯದ ಬಗ್ಗೆ ಎರಡು ಬಾರಿ ನಿಲುವಳಿ ಸೂಚನೆಯ ನಿಯಮದ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೋರುವುದಕ್ಕೆ ನಮ್ಮ ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. ಆದ್ದರಿಂದ ಈ ವಿಷಯವನ್ನು ನಿಲುವಳಿ ಸೂಚನೆಯ ನಿಯಮದ ಅಡಿಯಲ್ಲಿ ಪ್ರಸ್ತಾಪಿಸಲು ತಾವೀಗ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಡಕೂಡದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾವು ಈ ಅಧಿವೇಶನದಲ್ಲಿ ಈ ವಿಚಾರದ ಬಗ್ಗೆ ನಿಲುವಳಿ ಸೂಚನೆಯ ಪ್ರಸ್ತಾವನೆಯನ್ನು ಈ ಮೊದಲು ತಂದಿಲ್ಲ. ಈ ಅಧಿವೇಶನದಲ್ಲಿ ನಾವು 8 ಕಂಪನಿಗಳಿಗೆ ಗಣಿ ಗುತ್ತಿಗೆಯನ್ನು ನವೀಕರಣ ಮಾಡಿದ್ದು ತಪ್ಪು ಎಂದು ನಾನು ನಿಲುವಳಿ ಸೂಚನೆಯನ್ನು ತಂದಂತಹ ಸಂದರ್ಭದಲ್ಲಿ ಕಾನೂನು ಇಲಾಖೆಯ ಅಭಿಪ್ರಾಯದ ಪ್ರಕಾರ ಇದು ಊರ್ಜಿತ ಅಲ್ಲ ಎಂದು ಗಣಿ ಗುತ್ತಿಗೆಯ ನವೀಕರಣ ರದ್ದಾಯಿತು. ಅದನ್ನು ನಾನು ಸ್ವಾಗತ ಮಾಡುತ್ತೇನೆ. ನಾವು ಆ ಪ್ರಯತ್ನದಲ್ಲಿ ಯಶಸ್ವಿಯಾದೆವು. ಆದರೆ ಈಗ ನಾವು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ತರುತ್ತಿರುವುದು ಆ ವಿಷಯವನ್ನಲ್ಲ. ಈಗ 51 ಅಕ್ರಮ ಗಣಿಗಾರಿಕೆ ಕಂಪನಿಗಳಿಗೆ ಗಣಿ ಗುತ್ತಿಗೆಯನ್ನು ಹರಾಜು ಹಾಕಬೇಕೆಂದು ಸುಪ್ರೀಂ ಕೋರ್ಟ್ ಹೇಳಿದರೂ ಕೂಡ ನೀವು ಏಕೆ ಹರಾಜು ಹಾಕಲಿಲ್ಲ? ಈ ವಿಚಾರದ ಬಗ್ಗೆ ನಾವು ಈಗ ನಿಲುವಳಿ ಸೂಚನೆಯ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅನುಮತಿ ಕೋರುತ್ತಿದ್ದೇವೆ. ಈ ಅಧಿವೇಶನದಲ್ಲಿ ಕೋರಲಾಗಿದ್ದ ಇನ್ನೊಂದು ನಿಲುವಳಿ ಸೂಚನೆಯ ವಿಷಯವೇ ಬೇರೆ, ಆ ವಿಷಯ ಮುಗಿದುಹೋಯಿತು.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಮ್ಮ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪ್ರಕಾರ ನಿಲುವಳಿ ಸೂಚನೆಯ ನಿಯಮ 61(vii)ರಲ್ಲಿ "ನಿಲುವಳಿ ಸೂಚನೆಯು ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿರತಕ್ಕದ್ದಲ್ಲ" ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ನಾವೇ ಒಪ್ಪಿಕೊಂಡಿರುವಂತಹ ಈ ನಿಯಮಕ್ಕೆ ವ್ಯತಿರಿಕ್ತವಾಗಿ ಇವರು ಆ ವಿಷಯದ ಬಗ್ಗೆ ಪ್ರಿಲಿಮಿನರಿ ಸಬ್ಮಿಷನ್ ಅಲ್ಲ, ಇವರ ಒಂದು ಶಬ್ದ ಸಹ ಕಡತದಲ್ಲಿ ಹೋಗುವುದಕ್ಕೆ ಅವಕಾಶವಿಲ್ಲ. ನಿಯಮ ಬಹಳ ಸ್ಪಷ್ಟವಾಗಿದೆ. ಈ ನಿಯಮದ ಪ್ರಕಾರ ಇವರ ಈ ಪ್ರಸ್ತಾವನೆಯನ್ನು ತಿರಸ್ಕಾರ ಮಾಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ತಿರಸ್ಕಾರ ಅಲ್ಲ, allow ಮಾಡುವಂತೆಯೇ ಇಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ನಾನು ಹೇಳುವುದನ್ನು ಸಹ ತಾವು ಒಂದು ನಿಮಿಷ ಕೇಳಬೇಕಾಗುತ್ತದೆ. ಈ 51 ಅಕ್ರಮ ಗಣಿಗಾರಿಕೆ ಕಂಪನಿಗಳ ಬಗ್ಗೆ ನಾನು ವಿಧಾನ ಪರಿಷತ್ತಿಗೆ ಬಂದ ಮೊದಲನೆಯ ದಿವಸವೇ ಪ್ರಸ್ತಾಪ ಮಾಡಿದ್ದೆ. ಮಾನ್ಯ ಮುಖ್ಯಮಂತ್ರಿಯವರು ಅದಕ್ಕೆ ಉತ್ತರ ಕೊಟ್ಟರು. ಅವತ್ತು ಸುಪ್ರೀಂ ಕೋರ್ಟ್‌ನ ಮುಂದಿರುವ ವಿಚಾರದ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲವೆಂದು ಹೇಳಿದ ಇವರು ಇವತ್ತು ಈ ವಿಷಯದ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪು ಬಂದ ಮೇಲೆ ಏಕೆ ಚರ್ಚೆಗೆ ಅವಕಾಶ ಕೊಡುವುದಿಲ್ಲ? ನೆನ್ನೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದೆ, ಈ ಸರ್ಕಾರದವರು ಕರ್ನಾಟಕ ರಾಜ್ಯದ ಜನರ ಮಾನ–ಮರ್ಯಾದೆ ತೆಗೆದಿದ್ದಾರೆ.

**(ಗೊಂದಲ)**

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಇಲ್ಲ, ಇಲ್ಲ. ತಾವು ಇವರಿಗೆ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಕೊಟ್ಟರೆ ಇದು ಈ ಸದನದಲ್ಲಿ ಕೆಟ್ಟ ಪರಂಪರೆಯಾಗುತ್ತದೆ. ದಯಮಾಡಿ ತಾವು ಈ ಸದನದ ಘನತೆಯನ್ನು ಎತ್ತಿ ಹಿಡಿಯಬೇಕಾಗುತ್ತದೆ.

**ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಪ್ರಚಾರ ಗಳಿಸುವುದಕ್ಕಾಗಿ ಇವರು ಈ ರೀತಿ ಮಾತನಾಡುತ್ತಿದ್ದಾರೆ, ನಿಯಮ ಬಾಹಿರವಾಗಿ ಇವರು ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಇವರು ಕರ್ನಾಟಕದ ಮಾನ ಹರಾಜು ಮಾಡಿರುವುದರ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಮಗೆ ಅವಕಾಶ ಇಲ್ಲವೆ? ಸುಪ್ರೀಂ ಕೋರ್ಟ್ ಹೇಳಿದೆ, ಅದನ್ನು ಏಕೆ ಇವರು ಇಂಪ್ಲಿಮೆಂಟ್ ಮಾಡಿಲ್ಲ ಎಂದು ನಾವು ಕೇಳಬಯಸುತ್ತಿದ್ದೇವೆ.

**Sri S.R. PATIL:-** No, not at all.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಇವರು ಕರ್ನಾಟಕ ಜನತೆಯ ಮಾನ ಹರಾಜು ಮಾಡಿದ್ದಾರೆ, ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಮಗೆ ಅವಕಾಶವಿಲ್ಲವೆ? ಇದನ್ನು ಏಕೆ ಇಂಪ್ಲಿಮೆಂಟ್ ಮಾಡಿಲ್ಲ ಎಂದು ಸುಪ್ರೀಂ ಕೋರ್ಟ್ ಕೇಳಿದೆ, ಇದೇ ಏಪ್ರಿಲ್ 24ನೇ ತಾರೀಖಿನೊಳಗೆ ನೀವು ಅದನ್ನು ಕೊಡಬೇಕೆಂದು ಸರ್ಕಾರಕ್ಕೆ ಸೂಚನೆ ಕೊಟ್ಟಿದೆ. ಆ ರೀತಿ ಸೂಚನೆ ಕೊಟ್ಟಿರುವುದರ ಬಗ್ಗೆ ಸರ್ಕಾರ ಇಂಪ್ಲಿಮೆಂಟ್ ಮಾಡುತ್ತದೆಯೋ, ಇಲ್ಲವೋ ಎನ್ನುವುದು ನನ್ನ ಪ್ರಶ್ನೆ.

**(ಗೊಂದಲ)**

**Sri S.R. PATIL:-** No, not at all. You have no locus standi to discuss this matter. This is very clear and it goes against the rules and procedure. You can't discuss any such matter which goes against the rules and procedure. You have not allowed to discuss. ಚರ್ಚೆಗೆ ಅವಕಾಶ ಕೊಟ್ಟರೆ ನ್ಯಾಯಾಲಯದ ನಿಂದನೆ ಆಗುವ ಸಾಧ್ಯತೆ ಇದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಹಾಗಾದರೆ ಸನ್ಮಾನ್ಯ ಮುಖ್ಯಮಂತ್ರಿಯವರು ಆ ಸಂದರ್ಭದಲ್ಲಿ ಕಾನೂನು ಬಾಹಿರವಾಗಿ ಉತ್ತರ ಕೊಟ್ಟಿದ್ದಾರೆಯೇ? ಸುಪ್ರೀಂ ಕೋರ್ಟ್ ಮುಂದೆ ಇದ್ದಂತಹ ವಿಚಾರದ ಬಗ್ಗೆ ಚರ್ಚೆ ನಡೆಸಿದಂತಹ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಕಾನೂನು ಬಾಹಿರವಾಗಿ ಉತ್ತರ ಕೊಟ್ಟಿದ್ದಾರೆಯೇ?

**(ಗೊಂದಲ)**

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಈ ಅಧಿವೇಶನವನ್ನು ಇವತ್ತಿಗೆ ಮುಂದುವರೆಸಿದ್ದರ ಉದ್ದೇಶವೇನು?

**ಸಭಾಪತಿಯವರು:–** ಮಾನ್ಯ ಹೆಚ್.ಕೆ. ಪಾಟೀಲ್‌ರವರು ಮಾತನಾಡಬಯಸುತ್ತಿದ್ದಾರೆ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯ ನಿಯಮದ ಅಡಿಯಲ್ಲಿ ಗಣಿಗಾರಿಕೆಗೆ ಸಂಬಂಧಿಸಿದ ವಿಚಾರವನ್ನು ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ತಮಗೆ ನೋಟೀಸ್ ಕೊಟ್ಟಿದ್ದಾರೆ. ಅದಕ್ಕೆ ಸಮರ್ಪಕವಾಗಿ ಮಾನ್ಯ ಸಭಾನಾಯಕರು ತಮ್ಮ ಮುಖಾಂತರ ನಮ್ಮ ಸದನದ ನಿಯಮಾವಳಿಗಳನ್ನು ಉಲ್ಲೇಖ ಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅರುಹಿದ್ದಾರೆ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದಿಷ್ಟೆ, ಯಾವ ವಿಷಯವನ್ನು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸದನದಲ್ಲಿ ಪ್ರಸ್ತಾಪಿಸಬೇಕೆಂದು ಬಯಸುತ್ತಿದ್ದಾರೆ, ಅದು ಸುಪ್ರೀಂ ಕೋರ್ಟ್‌ನಲ್ಲಿ ನಡೆದಂತಹ ಒಂದು ಪ್ರಕರಣದ ಆರ್ಗ್ಯುಮೆಂಟ್ ಸ್ಟೇಜ್‌ನೊಳಗೆ ಬಂದಿರುವಂತಹ ಪತ್ರಿಕೆಯ ಕವರೇಜ್. It is not a verdict of the Supreme Court. When there is an active hearing is going on, can we discuss? Can make our observation on the discussions that are going on in Supreme Court? If there is any decision, direction or Court has given its verdict, then making reference of it is something. But this is going to be total sub judice. ಅದನ್ನು ಯಾವುದೇ ಕಾರಣಕ್ಕೆ ತಾವು allow ಮಾಡುವುದೇನಿದೆ, ನಿಯಮಾನುಸಾರವಾಗಿ ಬಹಳಷ್ಟು ತಪ್ಪಾಗುತ್ತದೆ, ಅಂತಹ precedent ಆಗದಂತೆ ತಾವು ನೋಡಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಬಿ. ರಮಾನಾಥ ರೈ (ಅರಣ್ಯ ಸಚಿವರು):–** ಮಾನ್ಯ ಸಭಾಪತಿಯವರೇ, ಅದಕ್ಕೆ ಗೌರವವನ್ನು ಉಳಿಸುವಂತಹ ಕೀರ್ತಿ ವಿರೋಧ ಪಕ್ಷದವರದಾಗಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅವರು ಹೇಳಿದ ವಿಚಾರಕ್ಕೆ ನಾನು ಪ್ರತಿಕ್ರಿಯೆ ನೀಡಲು ತಾವು ನನಗೆ ಅವಕಾಶ ಮಾಡಿಕೊಡಬೇಕಾಗುತ್ತದೆ.

**ಶ್ರೀ ಬಿ.ರಮಾನಾಥ ರೈ:–** ಸದನದ ಗೌರವವನ್ನು ಎತ್ತಿ ಹಿಡಿಯುವಂತಹ ಕೆಲಸವನ್ನು ನೀವು ಮಾಡಬೇಕು. ಒಂದು ಕೆಟ್ಟ precedent ಇಲ್ಲಿಂದ ಆಗಬಾರದು. ಈ ಸದನದ ಮುಖಾಂತರ ಅಂತಹ ಒಂದು ಕೆಟ್ಟ ಸಂದೇಶ ಹೋಗಬಾರದು.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ದಯಮಾಡಿ ನನಗೆ ಒಂದು ಮಾತನ್ನು ಹೇಳಲು ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಆರ್.ಕೆ. ಸಿದ್ದರಾಮಣ್ಣನವರು ಕೂಡ ಮಾತನಾಡಲು ಅವಕಾಶ ಕೋರುತ್ತಿದ್ದಾರೆ. ಅನಂತರ ನಾನು ತಮಗೂ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಸದನದ ಮುಂದೆ ಎರಡು ಅಂಶಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಿಯಮ 61(i)ರಲ್ಲಿ ಇರುವಂಥದ್ದು ಒಂದು ಅಂಶವಾದರೆ, ನಿಯಮ 61(vii)ರಲ್ಲಿ ಇರುವುದು ಮತ್ತೊಂದು ಅಂಶವಾಗಿದೆ.

**Sri S.R. PATIL:-** I am hundred percent relying on Rule.61(vii).

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ತಾವು ನಿಯಮ 61(i)ರ ಜೊತೆಗೆ ನಿಯಮ 61(vii)ರ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದೀರಿ. ಆಡಳಿತ ಪಕ್ಷದ ಕಡೆಯಿಂದ ಈ ನಿಯಮದ ಎರಡು ಅಂಶಗಳ ಬಗ್ಗೆ ಪ್ರಸ್ತಾಪವಾಗಿದೆ. ನಿಯಮ 61(i)ರಲ್ಲಿ ಏನು ಹೇಳಲಾಗಿದೆ ಎಂದರೆ, **'ಒಂದು ಉಪವೇಶನದಲ್ಲಿ ಅಂಥ ಒಂದಕ್ಕಿಂತ ಹೆಚ್ಚು ನಿಲುವಳಿ ಸೂಚನೆಯನ್ನು ಕೊಡತಕ್ಕದ್ದಲ್ಲ;'** ಅಂದರೆ, ಒಂದೇ ವಿಷಯಕ್ಕೆ ಸಂಬಂಧಪಟ್ಟಂತೆ ಒಂದಕ್ಕಿಂತ

ಹೆಚ್ಚು ಅಂದರೆ, ಅದೇ ವಿಷಯದ ಮೇಲೆ ನಾವು 2ನೇ ಬಾರಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎನ್ನುವಂತಹ ವಿಚಾರವನ್ನು ತಿಳಿಸಲಾಗಿದೆ. ಆದರೆ ಗಣಿ ಗುತ್ತಿಗೆಯ ನವೀಕರಣದ ಬಗ್ಗೆ ಬಹಳ ದೀರ್ಘವಾಗಿರುವಂತಹ ಚರ್ಚೆಯನ್ನು ನಾವು ಇದೇ ಅಧಿವೇಶನದಲ್ಲಿ ಮಾಡಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಿದ್ದರಾಮಣ್ಣನವರೇ, ಈ ಸದನದ ಮೂಲಕ ತಪ್ಪು ಸಂದೇಶ ಹೋಗಬಾರದು.

**ಸಭಾಪತಿಯವರು:–** ಅವರ ವಾದವನ್ನು ಅವರು ಮಂಡಿಸಲಿ ಬಿಡಿ.

**ಶ್ರೀ ಎಸ್.ಆರ್. ಪಾಟೀಲ್:–** ನಾವು hundred percent relying on Rule.61(vii).

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಣ್ಣನವರು ಅವರ ಅಭಿಪ್ರಾಯವನ್ನು ಪೂರ್ಣವಾಗಿ ವ್ಯಕ್ತಪಡಿಸಲು ಇವರು ಅವಕಾಶವನ್ನೇ ನೀಡದಿದ್ದರೆ ಹೇಗೆ? ನಾವು ಮಾನ್ಯ ಸಭಾನಾಯಕರು, ಮಾನ್ಯ ಹೆಚ್.ಕೆ. ಪಾಟೀಲ್‌ರವರ ಮಾತುಗಳನ್ನೆಲ್ಲಾ ಕೇಳಿದ್ದೇವೆ. ಅದೇರೀತಿ ಈಗ ಅವರು ಮಾನ್ಯ ಸಿದ್ದರಾಮಣ್ಣನವರ ಮಾತುಗಳನ್ನು ಕೇಳಬೇಕಲ್ಲವೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಯಮ 61(i)ನ್ನು ಉಲ್ಲೇಖಿಸಿ ನಾನು ಮಾತನಾಡಿಲ್ಲ. ಆದರೂ ನಾನು ಆ ನಿಯಮವನ್ನು ಉಲ್ಲೇಖಿಸಿ ಮಾತನಾಡಿದ್ದೇನೆ ಎಂದು ಮಾನ್ಯ ಆರ್.ಕೆ.ಸಿದ್ದರಾಮಣ್ಣನವರು ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈ ಕಾನೂನು ಏನು ಹೇಳುತ್ತದೆ ಎಂಬುದನ್ನು ಅವರು ಹೇಳುತ್ತಿದ್ದಾರೆ. ಅವರ ಮಾತುಗಳನ್ನು ಇವರು ಕೇಳುವುದಕ್ಕೆ ಸಿದ್ಧರಿಲ್ಲ ಎಂದರೆ ಇದು ನ್ಯಾಯವೆ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ನಿಯಮ 61(i) ಕೆಳಗೆ cite ಮಾಡಿಲ್ಲ. ಆದರೂ ಅವರು ಆ ರೀತಿ ಹೇಳುವುದನ್ನು ಕೇಳಿಕೊಂಡು ನಾನು ಸುಮ್ಮನೆ ಕುಳಿತುಕೊಳ್ಳಬೇಕೆ? ಅವರಿಗೆ ನಾವು ಏನು ಹೇಳುತ್ತಿದ್ದೇವೆ ಎನ್ನುವುದು ಅರ್ಥವಾಗುವುದೇ ಇಲ್ಲ; ನಾವು ಏನು ಹೇಳುತ್ತಿದ್ದೇವೆ ಎನ್ನುವುದನ್ನು ತಿಳಿದುಕೊಳ್ಳುವ ಶಕ್ತಿಯೇ ಅವರಿಗಿಲ್ಲ. ಆ ಮಾತು ಬೇರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅವರಿಗೊಂದು ಕಾನೂನು, ನಮಗೊಂದು ಕಾನೂನಿದೆಯೇ? ಮಾನ್ಯ ಸಿದ್ದರಾಮಣ್ಣನವರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ದಯಮಾಡಿ ತಾವು ಅವಕಾಶ ಕೊಡಬೇಕು. ಅವರ ಮಾತನಾಡಿ ಮುಗಿಸಿದ ನಂತರ ಮತ್ತೆ ಬೇಕಾದರೆ ಅವರು ಮಾತನಾಡಬಹುದಾಗಿದೆ.

**ಸಭಾಪತಿಯವರು:–** ಮಾನ್ಯ ಸಿದ್ದರಾಮಣ್ಣನವರೇ, ನಿಯಮ 61(i) ಬಗ್ಗೆ ಮಾನ್ಯ ಸಭಾನಾಯಕರು ಪ್ರಸ್ತಾಪ ಮಾಡಿಲ್ಲ, ಆ ನಿಯಮದ ಬಗ್ಗೆ ನೀವೀಗ ಉಲ್ಲೇಖ ಮಾಡಬಹುದು, ಆದರೆ ಆ ಸಂದರ್ಭದಲ್ಲಿ ಮಾನ್ಯ ಸಭಾನಾಯಕರ ಹೆಸರನ್ನು ತೆಗೆದುಕೊಳ್ಳಬಾರದು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಯಮ 61(i) ಕೆಳಗೆ ನಾನು cite ಮಾಡಿಲ್ಲ ಎನ್ನುವುದು ಬಹಳ ಕ್ಲಿಯರ್ ಆಗಿದೆ. ಆದ್ದರಿಂದ ನಾನು ನಿಯಮ 61(vii) ನ್ನು ಉಲ್ಲೇಖಿಸಿರುವುದರಿಂದ ಅದರ ಬಗ್ಗೆ ಅವರು ಮಾತನಾಡುವಾಗ ಬೇಕಾದರೆ ಅವರು ನನ್ನ ಹೆಸರನ್ನು ತೆಗೆದುಕೊಂಡು ಮಾತನಾಡಲಿ, ನನ್ನದೇನೂ ಅಭ್ಯಂತರವಿಲ್ಲ. ಕಾನೂನಿನ ಬಗ್ಗೆ ನನಗೆ ಅರಿವಿದೆ, ಅದಕ್ಕಾಗಿಯೇ ನಾನು ನಿಯಮ 61(i) ನ್ನು ಉಲ್ಲೇಖಿಸದೆ ನಿಯಮ 61(vii)ನ್ನು ಉಲ್ಲೇಖಿಸಿದ್ದೇನೆ.

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಮಾನ್ಯ ಸಭಾಪತಿಯವರೇ, ನನಗೆ ಇದರಲ್ಲಿ ಅರ್ಥವಾಗದಿರುವಂತಹ ಒಂದು ಸಂಗತಿಯೆಂದರೆ, ಬೆಳಗಾವಿ ಅಧಿವೇಶನದಲ್ಲಿಯೂ ಸಹ ಇದೇ ರೀತಿಯ ಒಂದು point of order ನ್ನು ಮಾನ್ಯ ಸಭಾನಾಯಕರೇನು rise ಮಾಡಿದ್ದರು, ಅದರ ಬಗ್ಗೆ ನಾನು ಹೆಚ್ಚು ವಿಸ್ತಾರ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಿಯಮ 61(vii)ರಲ್ಲಿ ಏನಿದೆಯೋ ಅದನ್ನು ಪ್ರಸ್ತಾಪ ಮಾಡಿದ್ದಾರೆ, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ನಾವು ನಿಯಮ 62 ರ ಮುಂದಿನ ಭಾಗವನ್ನು ನೋಡಬೇಕಾಗುತ್ತದೆ. 'ನ್ಯಾಯಾಧೀಕರಣ, ಆಯೋಗ ಮುಂತಾದುವುಗಳ ಮುಂದಿರುವ ಯಾವುದೇ ನ್ಯಾಯಿಕ ಅಥವಾ ನ್ಯಾಯಿಕ ಸ್ವರೂಪದ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಯಾವುದೇ ಶಾಸನಬದ್ಧ ನ್ಯಾಯಾಧೀಕರಣ, ಶಾಸನಬದ್ಧ ಪ್ರಾಧಿಕಾರದ ಮುಂದೆ ಅಥವಾ ಯಾವುದೇ ವಿಷಯದ ಬಗ್ಗೆ ವಿಚಾರಣೆ, ತನಿಖೆ ನಡೆಸಲು ನಿಯಮಿತವಾದ ಆಯೋಗ, ವಿಚಾರಣಾ ನ್ಯಾಯಾಲಯ ಇತ್ಯರ್ಥದಲ್ಲಿ ಇರುವ ವಿಷಯದ ಮೇಲೆ ಚರ್ಚಿಸುವ ಯಾವುದೇ ನಿಲುವಳಿ ಸೂಚನೆಯನ್ನು ತರಲು ಸಾಮಾನ್ಯವಾಗಿ ಅವಕಾಶವನ್ನು ಕೊಡತಕ್ಕದ್ದಲ್ಲ' ಎನ್ನುವಂಥದ್ದನ್ನು ಇದರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಅದರ ಮುಂದೆ ಇರುವಂಥದ್ದು,

**‘ಅಲ್ಲದೆ, ಅಂಥ ವಿಚಾರವನ್ನು ಚರ್ಚಿಸಲು ಅವಕಾಶ ಕೊಡುವುದರಿಂದ ಶಾಸನಬದ್ಧ ನ್ಯಾಯಾಧೀಕರಣ, ಪ್ರಾಧಿಕಾರ, ಆಯೋಗ ಅಥವಾ ವಿಚಾರಣಾ ನ್ಯಾಯಾಲಯದವರು ಈ ವಿಷಯವನ್ನು ಪರಿಶೀಲಿಸಲು ಬಾಧಕ ಉಂಟಾಗುವ ಸಂಭವ ಇಲ್ಲವೆಂದು ಸಭಾಪತಿಯವರಿಗೆ ಮನವರಿಕೆಯಾದರೆ ಅವರು ತಮ್ಮ ವಿವೇಚನಾನುಸಾರ ವಿಚಾರಣೆ ಕಾರ್ಯವಿಧಾನ ವಿಷಯ ಹಂತಕ್ಕೆ ಸಂಬಂಧಪಟ್ಟಂತೆ ಅಂತಹ ವಿಷಯವನ್ನು ಕುರಿತು ಸಭೆಯಲ್ಲಿ ಚರ್ಚೆ ನಡೆಸಲು ಅವಕಾಶ ಕೊಡಬಹುದು.’** ಎಂದು ಸ್ಪಷ್ಟಪಡಿಸಲಾಗಿದೆ.

ರಿನ್ಯೂವಲ್ ಬಗ್ಗೆ ಹಿಂದೆ ಚರ್ಚೆ ಮಾಡಿದ್ದೇವೆ, ಆದರೆ ಈಗ ನಾವು ಪ್ರಸ್ತಾಪ ಮಾಡುತ್ತಿರುವುದು ರಿನ್ಯೂವಲ್ ಬಗ್ಗೆ ಅಲ್ಲ. ಗಣಿಗಾರಿಕೆಗೆ ಸಂಬಂಧಿಸಿದ ಇನ್ನೊಂದು ಗಂಭೀರವಾದಂತಹ ವಿಷಯದ ಬಗ್ಗೆ ಈಗ ನಾವು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರುತ್ತಿದ್ದು, ಇದು ಗಣಿಯ ಹರಾಜು ಹಾಗೂ ನಮ್ಮ ರಾಜ್ಯದಲ್ಲಿರುವ ಗಣಿ ಸಂಪತ್ತಿನ ಅಂದಾಜನ್ನು ಈ ಕ್ಷಣದವರೆಗೂ ಸಹ ಸರ್ಕಾರ ಮಾಡದಿರುವ ವಿಚಾರಕ್ಕೆ ಸಂಬಂಧಿಸಿದೆ. ಹಾಗಾಗಿ ಇದು ಬಹಳ ಗಂಭೀರವಾದ ವಿಚಾರವಾಗಿದೆ. ಇದರಲ್ಲಿ ಇಡೀ ಕರ್ನಾಟಕ ರಾಜ್ಯದ ಗಣಿ ಸಂಪತ್ತಿನ ಬಗ್ಗೆ ಪ್ರಶ್ನೆ ಇದೆ. ಈ ಸಂಪತ್ತನ್ನು ಸರಿಯಾದಂತಹ ರೀತಿಯಲ್ಲಿ assess ಮಾಡದೆ ಇರುವ ವಿಚಾರದ ಬಗ್ಗೆ ನಾವು ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ಕೋರುತ್ತಿದ್ದೇವೆ.

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಅವರು ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬಾರದು.

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೇ, ಈ ಸದನದ ಯಾವ ನಿಯಮಾವಳಿಗಳ ಪ್ರಕಾರ ಅವರು ಚರ್ಚೆಗೆ ಅವಕಾಶ ಕೋರುತ್ತಿದ್ದಾರೆ ಎಂಬುದನ್ನು ಬೇಕಾದರೆ ಅವರು ಹೇಳಲಿ, ಆದರೆ ಈ ವಿಷಯದ ಬಗ್ಗೆ ಚರ್ಚೆ ಮಾಡಲು ತಾವು ಅವರಿಗೆ ಅವಕಾಶ ಮಾಡಿಕೊಡಬಾರದೆಂಬುದು ನಮ್ಮ ವಿನಂತಿಯಾಗಿದೆ.

**ಸಭಾಪತಿಯವರು:–** ಅವರ ಅಭಿಪ್ರಾಯವನ್ನು ಅವರು ಹೇಳಲಿ ಬಿಡಿ.

**(ಗೊಂದಲ)**

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೋರಿ ಯಾವ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆಯೋ ಅದು ಯಾವುದೇ ರೀತಿಯಲ್ಲಿಯೂ sub judice ಆಗುವುದಕ್ಕೆ ಸಾಧ್ಯವಿಲ್ಲದಿರುವಂತಹ ಒಂದು ವಿಚಾರವಾಗಿದೆ. ಹಾಗಾಗಿ ಇದನ್ನು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಣ್ಣನವರು ಮಾಡಿರುವಂತಹ reference ಗೆ ಸಂಬಂಧಿಸಿದಂತೆ ನಾನು ಒಂದೇ ನಿಮಿಷದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬಯಸುತ್ತಿದ್ದೇನೆ. ಅವರು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ನಾನು ನಿಯಮ 61(vii) ರ ಬಗ್ಗೆ ಬೆಳಕನ್ನು ಚೆಲ್ಲಿದಾಗ ಅವರು ನಿಯಮ 62ರ ಬಗ್ಗೆ ಉಲ್ಲೇಖ ಮಾಡಿದ್ದಾರೆ.

**"ನಿಯಮ 62. ನ್ಯಾಯಾಧೀಕರಣಗಳು, ಆಯೋಗಗಳು ಮುಂತಾದವುಗಳ ಮುಂದಿರುವ ವಿಷಯಗಳನ್ನು ಕುರಿತು ಚರ್ಚಿಸಲು ನಿಲುವಳಿ ಸೂಚನೆ ತರುವುದು:**

**'ಯಾವುದೇ ನ್ಯಾಯಿಕ ಅಥವಾ ನ್ಯಾಯಿಕ ಸ್ವರೂಪದ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಯಾವುದೇ ಶಾಸನಬದ್ಧ ನ್ಯಾಯಾಧೀಕರಣ ಅಥವಾ ಶಾಸನಬದ್ಧ ಪ್ರಾಧಿಕಾರದ ಮುಂದೆ ಅಥವಾ ಯಾವುದೇ ವಿಷಯದ ಬಗ್ಗೆ ವಿಚಾರಣೆ ಅಥವಾ ತನಿಖೆ ನಡೆಸಲು ನೇಮಿತವಾದ ಯಾವುದೇ ಆಯೋಗ ಅಥವಾ ವಿಚಾರಣಾ ನ್ಯಾಯಾಲಯದ ಮುಂದೆ ಬಾಕಿ ಇರುವ ವಿಷಯದ ಮೇಲೆ ಚರ್ಚಿಸುವ ಯಾವುದೇ ನಿಲುವಳಿ ಸೂಚನೆಯನ್ನು ತರಲು ಸಾಮಾನ್ಯವಾಗಿ ಅವಕಾಶವನ್ನು ಕೊಡತಕ್ಕದ್ದಲ್ಲ;'** ಎಂದು ತಿಳಿಸುತ್ತಾ, ಮುಂದುವರೆದ ಪ್ಯಾರಾದಲ್ಲಿ **'ಆ ವಿಚಾರವನ್ನು ಪರಿಶೀಲಿಸಲು ಬಾಧಕವುಂಟಾಗುವ ಸಂಭವವಿಲ್ಲವೆಂದು ಸಭಾಪತಿಯವರಿಗೆ ಮನವರಿಕೆಯಾದರೆ ಅವರು ತಮ್ಮ ವಿವೇಚಾನುಸಾರ ವಿಚಾರಣೆಯ ಕಾರ್ಯವಿಧಾನ ಅಥವಾ ವಿಷಯ ಅಥವಾ ಹಂತಕ್ಕೆ ಸಂಬಂಧಪಟ್ಟಂತೆ ಅಂಥ ವಿಷಯವನ್ನು ಕುರಿತು ಸಭೆಯಲ್ಲಿ ಚರ್ಚೆ ನಡೆಸಲು ಅವಕಾಶ ಕೊಡಬಹುದು'** ಅಂದರೆ, ತಮಗೆ ಮನವರಿಕೆಯಾದರೆ ಕೊಡಬಹುದು ಎನ್ನುವಂತಹ ವಿಚಾರವನ್ನು ಅದರಲ್ಲಿ ತಿಳಿಸಲಾಗಿದೆ.

ಆದರೆ ನಿಯಮ 61ರ ಉಪನಿಯಮ ಅಥವಾ (vii) ರಲ್ಲಿ ಏನಿದೆ ಎಂದರೆ,

**(vii)** ನಿಲುವಳಿ ಸೂಚನೆಯು ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿರತಕ್ಕದಲ್ಲ.

ಇದು ನ್ಯಾಯಾಲಯ, ಇದು ಪ್ರಾಧಿಕಾರ, enquiry commission. ಇದಕ್ಕೂ ಅದಕ್ಕೂ ಸೆಕ್ಷನ್ ಅಪ್ಲೈ ಆಗುವುದಿಲ್ಲ. ಗೌರವಾನ್ವಿತ ಸದಸ್ಯರಾದಂತಹ ಮಾನ್ಯ ಆರ್.ಕೆ. ಸಿದ್ದರಾಮಣ್ಣನವರು ನಿಯಮ 61ರ ಉಪನಿಯಮವನ್ನು ಕೋಟ್ ಮಾಡಿದ್ದಾರೆ, ಆದರೆ ನಿಯಮ 62ರಲ್ಲಿ ಬೇರೆ ರೀತಿಯಲ್ಲಿದೆ. ಇದು ನ್ಯಾಯಾಲಯ. Apex Court of this land. ಈ ವಿಷಯ ದೇಶದ ಸರ್ವೋಚ್ಚ ನ್ಯಾಯಾಲಯದ ಮುಂದೆ ಇರುವಂತಹ ವಿಷಯ. ಆದರೆ ನಿಯಮ 62ರಲ್ಲಿ ಏನಿದೆ, enquiry commissions ಮತ್ತು ಪ್ರಾಧಿಕಾರಗಳು, legally enquiry ಮಾಡುವುದಕ್ಕಾಗಿ ಮಾಡಿದಂತಹ organizations ಗೆ ಸಂಬಂಧಿಸಿದ್ದು ನಿಯಮ 62, ಆ ಸಂದರ್ಭದಲ್ಲಿ ತಾವು ವಿಚಾರಣೆ ಮಾಡಿ ಇದಕ್ಕೆ ಬಾಧಕ ಉಂಟಾಗುವುದಿಲ್ಲವೆಂದು ಹೇಳಿದಾಗ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದು. ಆದರೆ ನಿಯಮ 61ರ ಉಪನಿಯ (vii) ರಲ್ಲಿ ಬಹಳ ಕ್ಲಿಯರ್ ಆಗಿದೆ.

**(vii)** ನಿಲುವಳಿ ಸೂಚನೆಯು ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿರತಕ್ಕದಲ್ಲ.

ಇದು ನ್ಯಾಯಾಲಯಗಳು, ಎನ್‌ಕ್ವಯರಿ ಕಮೀಶನ್ ಮುಂತಾದವು. ಅದಕ್ಕೆ ಮಾನ್ಯ ಸಿದ್ದರಾಮಣ್ಣನವರು ಕೋಟ್ ಮಾಡಿದಂತಹ ನಿಯಮಕ್ಕೂ, ನಾನು ಕೋಟ್ ಮಾಡಿದಂತಹ ನಿಯಮಕ್ಕೂ ಏನೂ ಸಂಬಂಧವಿಲ್ಲ. ಅದಕ್ಕೆ ನಿಯಮ 61ರ ಉಪನಿಯಮ (vii) ರ ಪ್ರಕಾರ, ತಾವು ಇದನ್ನು ಕೈಗೆತ್ತಿಕೊಳ್ಳುವುದಕ್ಕೆ ಬರುವುದಿಲ್ಲ, ಆದುದರಿಂದ ಅದನ್ನು ತಾವು straight away reject ಮಾಡಬೇಕು.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಈ ಸದನ ನಾವೇ ಮಾಡಿಕೊಂಡಿರುವಂತಹ ನಿಯಮದ ಮೇಲೆ ನಡೆಯಬೇಕು. ಎರಡನೆಯದಾಗಿ, ನಾವು ನಡೆದು ಬಂದ ಪರಂಪರೆ. ಇವೆರಡು ಬಹಳ ಮುಖ್ಯ. ಒಂದು ವಿಷಯವಾಗಿ ಒಂದೇ ಸದನದಲ್ಲಿ ನಿಲುವಳಿ ಸೂಚನೆ ತಂದು, ಅದರ ಬಗ್ಗೆ ಚರ್ಚೆಯಾಗಿ ಅದರ ಮೇಲೆ ಉತ್ತರವಾದ ಮೇಲೆ ಮತ್ತೊಮ್ಮೆ ಅದನ್ನು ತರುವುದಕ್ಕೆ ಬರುವುದಿಲ್ಲ. ಮೂರನೆಯದಾಗಿ, ನಾನು ಬಹಳ ನೋವಿನಿಂದ ಹೇಳುವುದೇನೆಂದರೆ, ಈ ಸದನದಲ್ಲಿ ಹಲವಾರು ಸಲ ರಾತ್ರಿ 2 ಗಂಟೆಯವರೆಗೂ ಕುಳಿತು...

**ಶ್ರೀ ಕೆ.ಎಸ್. ಈಶ್ವರಪ್ಪ:–**ರಾತ್ರಿ ನಡೆದಂತಹ ವಿಷಯಕ್ಕೂ ಈ ವಿಷಯಕ್ಕೂ ಸಂಬಂಧವೇನು?

**ಡಾ॥ ಮತ್ತಿಕಟ್ಟಿ ವೀರಣ್ಣ:–** ವಿರೋಧ ಪಕ್ಷದ ನಾಯಕರಾದ ಮೇಲೆ ತಮಗೆ ಸ್ವಲ್ಪ ಸಮಾಧಾನವಿರಬೇಕು.

**ಸಭಾಪತಿಯವರು:–** ಅವರು ಹೇಳಲಿ ಬಿಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಇದಕ್ಕೂ ಅದಕ್ಕೂ ಏನು ಸಂಬಂಧ?

**(ಗೊಂದಲ)**

**ಸಭಾಪತಿಯವರು:–** ಅವರಿಗೆ ಮಾತನಾಡುವುದಕ್ಕೆ ಬಿಡೋಣ. ಅದರ ಬಗ್ಗೆ ನಾನು ನಿರ್ಣಯ ಮಾಡುತ್ತೇನೆ, ದಯಮಾಡಿ ಕುಳಿತುಕೊಳ್ಳಿ. ಒಬ್ಬೊಬ್ಬರೆ ಮಾತನಾಡಿ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ, ತಾವು ಕುಳಿತುಕೊಳ್ಳಿ. ಅವರು ಮಾತನಾಡಿದ ನಂತರ ಬೇರೆಯವರಿಗೆ ಅವಕಾಶ ಕೊಡುತ್ತೇನೆ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಈ ಹಿಂದೆರಾತ್ರಿ 2 ಗಂಟೆಯವರೆಗೆ ಸದನವನ್ನು ನಡೆಸಿ, ಬಿಲ್ಲುಗಳನ್ನು ಮತ್ತು university formation ಬಿಲ್ಲುಗಳನ್ನು ಪಾಸ್ ಮಾಡಿಕೊಟ್ಟಿದ್ದೇವೆ. ನಿನ್ನೆ ದಿವಸ ಇನ್ನೊಂದೆರಡು ಗಂಟೆ ಕುಳಿತುಕೊಳ್ಳೋಣವೆಂದು ಹೇಳಿದೆವು. ಅದಕ್ಕೆ ನಮ್ಮ ವಿರೋಧ ಪಕ್ಷದ ಜೆ.ಡಿ(ಎಸ್.) ಸದಸ್ಯರೆಲ್ಲರೂ ಒಪ್ಪಿದ್ದರು. ಆದರೆ ನೀವು ಸದನವನ್ನು adjourn ಮಾಡಬೇಕೆಂದು ಹೇಳಿದಿರಿ. ಯಾವ ಉದ್ದೇಶಕ್ಕಾಗಿ ಎಂದರೆ, ನಾಳೆ ಎಲ್ಲಾ ಬಿಲ್ಲುಗಳನ್ನು ತೆಗೆದುಕೊಳ್ಳೋಣ ಎಂಬ ಉದ್ದೇಶದಿಂದ. ಇವೆಲ್ಲಾ ಸಾಮಾನ್ಯ ಪ್ರಜ್ಞೆ, ಇವೆಲ್ಲವನ್ನು ನಾವು ಪರಿಶೀಲಿಸಬೇಕಾಗಿದೆ. Larger interest ನಲ್ಲಿ ನಮ್ಮ ವಯಕ್ತಿಕವಾದ ನೋವುಗಳನ್ನು ಮರೆತು, ನಾವು ಈ ಸದನವನ್ನು ನಡೆಸಬೇಕಾಗುತ್ತದೆ. ಅದನ್ನೆಲ್ಲಾ ಬಿಟ್ಟು ಹೋದರೆ, ಯಾವ ಸದನ ಇಡೀ ರಾಜ್ಯಕ್ಕೆ ಆದರ್ಶವಾಗಿತ್ತು, ಇಡೀ ರಾಷ್ಟ್ರದಲ್ಲಿ ಆದರ್ಶವಾಗಿತ್ತು, ಈಗ ಕೆಲವು ದಿನಗಳಿಂದ ನಡೆಯುತ್ತಿರುವಂತಹ ಘಟನೆಯನ್ನು ನೋಡಿದರೆ ನಮ್ಮ ಮನಸ್ಸಿಗೆ ಬಹಳ ನೋವಾಗುತ್ತಿದೆ. ಮಾನ್ಯ ಸಭಾಪತಿಯವರೇ, ಇಲ್ಲಿ ನಾವು ನಮ್ಮ ನೋವನ್ನು ಹೇಳಿಕೊಳ್ಳುವುದಕ್ಕೆ ಅವಕಾಶವಿದೆ. ಆ ದೃಷ್ಟಿಯಿಂದ ಈ ವಿಚಾರವಾಗಿ ಈಗಾಗಲೇ ಈ ಸದನದಲ್ಲಿ ಚರ್ಚೆ ಆಗಿರುವುದರಿಂದ ಮತ್ತೊಮ್ಮೆ ಅದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ.

ಎರಡನೆಯದಾಗಿ, ನಿಮ್ಮ ಆದೇಶದ ಮೂಲಕವೇ ಈಗಾಗಲೆ ನಮ್ಮ ಸಭಾ ನಾಯಕರು ನಿಯಮ 61ರ ಉಪನಿಯಮ(vii) ರ ಬಗ್ಗೆ ತಿಳಿಸಿದ್ದಾರೆ. ಆದಕಾರಣ ಆ ದಿಶೆಯಲ್ಲಿ ನೀವು ನೇರವಾಗಿ ನಿರ್ಧಾರ ತೆಗೆದುಕೊಳ್ಳಬೇಕು. ಈ ಪೀಠ ಏನಿದೆ, ಇದು ಪಕ್ಷಾತೀತವಾಗಿ ರಾಜ್ಯದ ಹಿತದೃಷ್ಟಿಯಿಂದ ಬಹುಪಾಲು ಜನರ ಹಿತದೃಷ್ಟಿಯಿಂದ ನಡೆದುಕೊಳ್ಳಬೇಕಾಗುತ್ತದೆ. ಬಹುಪಾಲು ಸದಸ್ಯರ ಅಭಿಪ್ರಾಯ ಬೇರೆ ಇದ್ದಾಗಲು ಸಹ ಹಲವಾರು ಸಲ ವ್ಯತಿರಿಕ್ತವಾಗಿ ನಡೆದಿದೆ. ಅದನ್ನು ನಾನು ಬಹಳ ನೋವಿನಿಂದ ತಮಗೆ ನಿವೇದನೆ ಮಾಡಲು ಇಚ್ಛೆಪಡುತ್ತೇನೆ. ಆ ರೀತಿ continue ಆಗಬಾರದು. ನಮ್ಮ ಪೂರ್ವಾರ್ಜಿತ ಏನೇ ಇರಲಿ; ಪೂರ್ವ ಸಂಬಂಧ ಏನೇ ಇರಲಿ, ಅದರಿಂದ ಹೊರ ಬಂದು ಈ ಪೀಠದ ಮರ್ಯಾದೆಯನ್ನು ತಾವು ಕಾಪಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈ ಅಧಿವೇಶನ 31ನೇ ಮಾಚ್ 2015 ರಂದು ಕಡೆಯ ದಿವಸ ಎಂದು ನಿಗದಿಯಾಗಿತ್ತು. ನಿನ್ನೆ ದಿವಸ ಸದನ ನಡೆಯುತ್ತಿತ್ತು, ಮೂರು ಬಿಲ್ಲುಗಳು ಪೆಂಡಿಂಗ್ ಇತ್ತು. ಈ ಮೂರು ಬಿಲ್ಲುಗಳನ್ನು ಪಾಸ್ ಮಾಡಿದ ನಂತರ ಸದನದ ಕಲಾಪ adjourn ಆಗುತ್ತದೆಯೆಂದು ನಾವು ಭಾವಿಸಿದ್ದೆವು. ಆದರೆ ಇಲ್ಲಿ ತಡ ಆಗಬಹುದೆಂದು ವಿಧಾನ ಸಭೆಯನ್ನು adjourn ಮಾಡಿದರು. ಆದರೆ ಇಲ್ಲಿಯೂ ಸಹ ರಾತ್ರಿ 8 ಗಂಟೆಯ ಸಮಯದಲ್ಲಿ ಇವತ್ತು ಎಷ್ಟು ಹೊತ್ತಾದರು ಪರವಾಗಿಲ್ಲ, ಬಿಲ್ಲುಗಳು ಪಾಸ್ ಆಗಲಿ; ಎಲ್ಲರೂ ಊರುಗಳಿಗೆ ಹೋಗಬೇಕು, ಅಲ್ಲದೆ ಅವರವರದೇ ಕಾರ್ಯಕ್ರಮಗಳು ಇದೆ ಎಂದು ತಮಗೆ ಮನವರಿಕೆ ಮಾಡಿಕೊಂಡಿದ್ದೆವು. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಈಗ ತುಂಬಾ ತಡವಾಗಿದೆ, ಇವತ್ತು ಬೇಡ, ಇವತ್ತು ನಮಗೆ ಆಗುವುದಿಲ್ಲ, ನಾಳೆ ತೆಗೆದುಕೊಳ್ಳಿ ಎಂದು ಮನವರಿಕೆ ಮಾಡಿದರು. ಹಾಗಾಗಿ ಅದಕ್ಕೆ ಒಪ್ಪಿದೆವು. ನಾವು ಕೂಡ ಬೆಳಿಗ್ಗೆ ಬೇಗ ಬಂದು ಈ ಬಿಲ್ಲನ್ನು ಪಾಸ್ ಮಾಡೋಣವೆಂದುಕೊಂಡಿದ್ದೆವು. ಏಕೆಂದರೆ ವಿಧಾನಸಭೆ ಈ ವಿಧೇಯಕಗಳಿಗೆ ಕಾಯುತ್ತಿದೆ, ಬೇಗ ನಾವು ಮಾಡಿ ಕಳಿಸಿದರೆ ಅವರು ಪಾಸ್ ಮಾಡುತ್ತಾರೆಂಬ ಉದ್ದೇಶದಿಂದ ನಾವೂ ಕೂಡ ಅದಕ್ಕೆ ಒಪ್ಪಿಕೊಟ್ಟೆವು. ಇವತ್ತು ಬೇರೆ ಯಾವುದೇ ಇತರ ಕಾರ್ಯಕಲಾಪ ಇಲ್ಲವೆಂದು ತಿಳಿದುಕೊಂಡಿದ್ದೆವು. ಆದರೆ ಇವತ್ತು ನೋಡಿದರೆ ನಿನ್ನೆ ದಿವಸ ಸದನವನ್ನು adjourn ಮಾಡಿಸಿರುವುದೇ ಉದ್ದೇಶ ಪೂರ್ವಕವಾಗಿ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದುದರಿಂದ ಎಲ್ಲಾ ನಿಯಮಗಳನ್ನು ಮೀರಿ ಈ ರೀತಿಯ ಹೊಸ ಪದ್ಧತಿಗಳಿಗೆ ತಾವು ಅವಕಾಶ ಕೊಡಬಾರದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈ ಸದನ ಯಾವಾಗ ನಡೆಯಬೇಕು, ಯಾವಾಗ ನಡೆಯಬಾರದು ಎಂದು ಅವರ ಅಭಿಪ್ರಾಯ ಏನು ಕೊಟ್ಟರು...

**ಡಾ॥ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಈ ಸದನ ನಾವು ಹೇಳಿದಂತಾಗಲಿ ಅಥವಾ ಅವರು ಹೇಳಿದಂತಾಗಲಿ ನಡೆಯುವುದು ಬೇಡ. ಈ ಸದನ ಯಾವ ಒಂದು ಘನತೆ ಗೌರವಗಳಿಂದ ರಚನೆಯಾಗಿದೆಯೋ ಅದರ ಪ್ರಕಾರ ನಡೆಯಲಿ ಎಂದು ಹೇಳುತ್ತಿರುವುದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅವರುಗಳಲ್ಲಿಯೇ ಕೆಲವರ ಅಭಿಪ್ರಾಯ ಸದನ ನಡೆಯಬೇಕೆಂದು ಇತ್ತು, ನಾನು ಹೊರಗಡೆ ಹೋಗುತ್ತಿದ್ದಂತೆಯೇ ನಮ್ಮ ಸಚಿವೆ ಶ್ರೀಮತಿ ಉಮಾಶ್ರೀಯವರು 'ಅಣ್ಣ ಥ್ಯಾಂಕ್ಸ್, adjourn ಮಾಡಿಸಿದ್ದಕ್ಕೆ' ಎಂದು ಹೇಳಿದರು.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಅವರು ಆ ರೀತಿ ಹೇಳಿದರೆ ನಾವೇನು ಮಾಡೋಣ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಹಾಗಾದರೆ ನಾನು ಹೇಳುವುದನ್ನು ಕೇಳುವುದಿಲ್ಲವೆ?

**ಸಭಾಪತಿಯವರು:–** ಅವರು ಅವರ ಅಭಿಪ್ರಾಯವನ್ನು ಹೇಳಲಿ ಬಿಡಿ, ಅವರು ಅಭಿಪ್ರಾಯವನ್ನು ಹೇಳುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ? ಅವರು ಏನು ಬೇಕಾದರು ಹೇಳಲಿ ಬಿಡಿ, ಅಂತಿಮ ನಿರ್ಣಯವನ್ನು ನಾನು ಮಾಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಇದೇನು ನಮ್ಮ ಮನೆಯ ಕೆಲಸವೆ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಇಲ್ಲಿ ನೀವು ಸಭಾಪತಿಯವರೋ ಅಥವಾ ಮಾನ್ಯ ಮತ್ತಿಕಟ್ಟಿ ವೀರಣ್ಣನವರು ಸಭಾಪತಿಯವರೋ ಎಂದು ನನಗೆ ತಿಳಿಯುತ್ತಿಲ್ಲ. ಅದಕ್ಕೆ ನಾನು ಅವರಿಗೆ ಹೇಳುತ್ತಿರುವುದು ಸದನವನ್ನು adjourn ಮಾಡಬೇಕೆಂದು ನಮ್ಮ ಅಭಿಪ್ರಾಯವನ್ನು ನಾವು ತಿಳಿಸಿದೆವು, ಅಲ್ಲದೆ ನಾವು ಸದನದಿಂದ ಹೊರಗಡೆ ಬಂದಂತಹ ಸಂದರ್ಭದಲ್ಲಿ ಅನೇಕ ಪತ್ರಕರ್ತರು ಸರ್, ನೀವು adjourn ಮಾಡಿಸಿದ್ದು ಒಳ್ಳೆಯದಾಯಿತು ಎಂದು ಹೇಳಿದರು. ಹಾಗಾಗಿ ನಾನು ಎಲ್ಲರ ಅಭಿಪ್ರಾಯವನ್ನು ತಮ್ಮ ಮುಂದೆ ಇಟ್ಟೆ. ನನ್ನ ಅಭಿಪ್ರಾಯ ಹೇಳುವುದಕ್ಕೆ ನನಗೆ ಸ್ವಾತಂತ್ರ್ಯವಿದೆ, ನನ್ನ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದಕ್ಕೆ ಅವರ್ಯಾರಿಗೂ ಅಧಿಕಾರವಿಲ್ಲ. ಇದರ ಬಗ್ಗೆ ತೀರ್ಮಾನ ಮಾಡುವವರು ತಾವು. ನಮ್ಮ ಅಭಿಪ್ರಾಯ ಹೇಳುವುದಕ್ಕೂ ನಮಗೆ ಅಧಿಕಾರವಿಲ್ಲವೇನು? ಎರಡನೆಯದಾಗಿ, ಮಾನ್ಯ ಆರ್.ವಿ.

ವೆಂಕಟೇಶ್‌ರವರು ಹೇಳಿದರು, ಹೌದು ಇದೇ ವಿಷಯಕ್ಕೋಸ್ಕರವಾಗಿಯೇ ನಾನು adjourn ಮಾಡಿಸಿದೆ. ಉದ್ದೇಶ ಪೂರ್ವಕವಾಗಿಯೇ ಲೂಟಿ ಆಗುತ್ತಿದೆ ಎನ್ನುವ ಕಾರಣಕ್ಕಾಗಿಯೇ ಮಾಡಿಸಿದೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ತಾವು ನಿನ್ನೆ ದಿವಸ ತಮ್ಮ ಪೀಠದಿಂದ ಮೊದಲು 11 ಗಂಟೆಗೆ ಸದನ ಸೇರುವುದೆಂದು ಹೇಳಿದಿರಿ. ಅನಂತರ 10 ಗಂಟೆಗೆ ಎಂದು ಹೇಳಿದಿರಿ ಅದಕ್ಕೂ ನಾವು ಒಪ್ಪಿಕೊಂಡೆವು. ತಾವು remote ಮನಸ್ಕರಾಗಬಾರದು.

**ಸಭಾಪತಿಯವರು:–** ಕುಳಿತುಕೊಳ್ಳಿ, ಅವರು ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ? ಅಂತಿಮ ನಿರ್ಣಯವನ್ನು ನಾನು ಮಾಡುತ್ತೇನೆ. ಅವರು ಏನು ಬೇಕಾದರು ಹೇಳಲಿ ಬಿಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವೇ, ನಾನು ಯಾವ ವಿಷಯದ ಬಗ್ಗೆ ಮಾತನಾಡಬೇಕೆಂದು ಅವರ ಹತ್ತಿರ ಬರೆಸಿಕೊಂಡು ಬಂದು ಹೇಳುವುದಕ್ಕೆ ನಾನೇನು ವಿದ್ಯಾರ್ಥಿಯು ಅಲ್ಲ, ಅವರೇನು ಟೀಚರೂ ಅಲ್ಲ. ವಿಧಾನ ಪರಿಷತ್ತಿನ ಸದಸ್ಯರಿಗೆ ಏನು ಅಧಿಕಾರವಿದೆ, ಆ ಅಧಿಕಾರವನ್ನು ನಾನು ಚಲಾಯಿಸುವ ಪ್ರಯತ್ನ ಮಾಡುತ್ತಿದ್ದೇನೆ. ಯಾವ ವಿಷಯ ತೆಗೆದುಕೊಳ್ಳಬೇಕು, ಯಾವ ವಿಷಯ ತೆಗೆದುಕೊಳ್ಳಬಾರದು ಎಂದು ಇವರನ್ನು ಕೇಳಿ ಮಾಡಬೇಕಾಗಿಲ್ಲ. ಹಿರಿಯ ಸದಸ್ಯರಾದಂತಹ ಮಾನ್ಯ ಸಭಾಪತಿಯವರು ಹೇಳಿದರು, ಒಂದು ವಿಷಯವನ್ನು ಹಿಂದಿನ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದರೆ ಅದೇ ವಿಷಯವನ್ನು ಈ ಅಧಿವೇಶನದಲ್ಲಿ ತೆಗೆದುಕೊಳ್ಳಬಾರದು ಎಂದು ಹೇಳಿದರು. ನನಗೂ ಸ್ವಲ್ಪ ಪರಿಜ್ಞಾನವಿದೆ. ತುಂಬಾ ಸ್ಪಷ್ಟವಾಗಿ ಹೇಳಬಯಸುವುದೇನೆಂದರೆ, ನಾವು ಹೇಳುತ್ತಿರುವಂತಹ ವಿಷಯವೇನೆಂದರೆ, ಆ 8 ಕಂಪನಿಗಳಿಗೆ renewal ಮಾಡಿದ್ದು ತಪ್ಪಿದೆ. ಯಾವ ಕಾರಣಕ್ಕೂ ದಿನಾಂಕ:12/1/2015ರ ನಂತರ renewal ಮಾಡುವುದಕ್ಕೆ ಅವಕಾಶವಿಲ್ಲ. ಅದನ್ನು ರದ್ದು ಮಾಡಬೇಕೆಂಬ ಹಿನ್ನೆಲೆಯಲ್ಲಿ ಚರ್ಚೆಗಳಾಯಿತು. ನಾವು ಕಾನೂನು ಬದ್ಧವಾಗಿಯೇ ಕೊಟ್ಟಿದ್ದೇವೆಂದು ಸರ್ಕಾರ ತಿಳಿಸಿತು, ನಂತರ IBM (Indian Bureau of Mines) ಪ್ರಕಾರ ಕೊಟ್ಟಿದ್ದೇವೆಂದಾಯಿತು, ಕೊನೆಗೆ ಕಾನೂನು ಇಲಾಖೆಯ ಅಭಿಪ್ರಾಯ ತೆಗೆದುಕೊಂಡಾಗ ಕಾನೂನು ಇಲಾಖೆಯು ಇದು ಊರ್ಜಿತವಲ್ಲವೆಂದು ತಿಳಿಸಿದಾಗ ಅದನ್ನು ಕ್ಯಾನ್ಸಲ್ ಮಾಡಿದರು. ಆದರೆ ಈಗ ನಾನು ಪ್ರಸ್ತಾಪ ಮಾಡುತ್ತಿರುವಂಥದ್ದು ಆ ವಿಷಯವಲ್ಲ. ವಿಧಾನ ಪರಿಷತ್ತಿಗೆ ಕಾಲಿಟ್ಟ ಮೊದಲನೇ ದಿವಸವೆ ಅಕ್ರಮ ಗಣಿಗಾರಿಕೆ ಮಾಡುತ್ತಿರುವ "ಸಿ" ಕ್ಯಾಟಗರಿಯ 51 ಕಂಪನಿಗಳಿಗೆ ಗಣಿ ಗುತ್ತಿಗೆಯನ್ನು ಹರಾಜು ಹಾಕಬೇಕೆಂದು ಸುಪ್ರೀಂ ಕೋರ್ಟ್ ಹೇಳಿ ಒಂದು ವರ್ಷವಾದರೂ ಇನ್ನು ಏಕೆ ಹರಾಜು ಹಾಕಿಲ್ಲ ಎಂಬ ವಿಷಯವನ್ನು ಪ್ರಸ್ತಾಪ ಮಾಡಿದೆ. ಸುಪ್ರೀಂ ಕೋರ್ಟ್ 'ತಕ್ಷಣವೇ ಅವರ ಲೈಸೆನ್ಸ್ ರದ್ದುಪಡಿಸಿ'

ಎಂದು ಹೇಳಿದ್ದರೂ ಸಹ ಲೈಸೆನ್ಸ್ ರದ್ದುಪಡಿಸುವುದಕ್ಕೆ ಏಕೆ 6 ತಿಂಗಳ ಕಾಲಾವಕಾಶ ತೆಗೆದುಕೊಂಡಿರಿ ಎಂದು ಕೇಳಿದೆ. ಸುಪ್ರೀಂ ಕೋರ್ಟಿನಲ್ಲಿರುವಂತಹ ವಿಷಯವನ್ನು ಚರ್ಚೆ ಮಾಡಬಾರದು ಎಂಬ ಅಂಶ ನೀವು ಆ ದಿವಸವೇ ಹೇಳಿದ್ದರೆ... ಸ್ವತಃ ಮಾನ್ಯ ಮುಖ್ಯಮಂತ್ರಿಗಳೇ ಆ ದಿವಸ ಬಂದು ಉತ್ತರ ಕೊಟ್ಟರು, ಆ ದಿವಸ ಕೂಡ ಇದೇ ವಿಷಯ ಇದ್ದಿದ್ದು, ಬೇರೆ ವಿಷಯವಲ್ಲ.

**ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ,..

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಲಿ ಬಿಡಿ. ನಾನು ನಿರ್ಣಯ ಮಾಡುತ್ತೇನೆ, ನಾನು ನಿರ್ಣಯ ಮಾಡುವುದಕ್ಕಾದರು ಅವಕಾಶ ಕೊಡಿ. I want to give a decision on that.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮೊದಲನೆಯದಾಗಿ ನಾನು ಹೇಳಿದಂತಹ ಮಾತಿನಿಂದ ಮಾನ್ಯ ವೀರಣ್ಣ ಮತ್ತಿಕಟ್ಟಿಯವರಿಗೆ ಸಮಾಧಾನವಾಯಿತು ಎಂದು ತಿಳಿದುಕೊಂಡಿದ್ದೇನೆ. ಈಗ ನಾನು ಪ್ರಸ್ತಾಪ ಮಾಡುತ್ತಿರುವಂಥದ್ದು ಆ ವಿಷಯವನ್ನಲ್ಲ, ಅದು ಮುಗಿದು ಹೋಗಿರುವ ವಿಷಯ. ಇದು ಎರಡನೇ ವಿಷಯ. 2014ನೇ ಇಸವಿಯಲ್ಲಿ ಇಲ್ಲಿ ಚರ್ಚೆ ಆಯಿತು. ಹೆಚ್ಚು ಕಡಿಮೆ ಒಂದು ವರ್ಷವಾಯಿತು. ಆದಷ್ಟು ಬೇಗ ಮಾಡುತ್ತೇವೆಂದು ಹೇಳಿದರು, ಆದರೆ ಮಾಡಲಿಲ್ಲ. ಮಾಡಲಿಲ್ಲವೆಂದೇ ನಿನ್ನೆ ದಿವಸ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದೆ. ಆ ಛೀಮಾರಿ ಹಾಕಿದ್ದರ ಜೊತೆಗೆ ಏಪ್ರಿಲ್ 24ರ ಒಳಗೆ ನೀವು ಇದಕ್ಕೆ ಉತ್ತರ ಕೊಡಬೇಕೆಂದು ಸುಪ್ರೀಂ ಕೋರ್ಟು ಕೇಳಿದೆ. ಆದಕಾರಣ ನಾನು ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೋ ಎಂದು ಕೇಳಿದ್ದೇನೆ ಅಷ್ಟೆ. ಸುಪ್ರೀಂ ಕೋರ್ಟ್ ಈ ರೀತಿಯಾದಂತಹ ಗಣಿಗಳು ಇನ್ನು ಎಷ್ಟಿವೆ, ಅದರ ವಿವರವನ್ನು ಏಕೆ ತಿಳಿಸಿಲ್ಲವೆಂದು ಕರ್ನಾಟಕ ಸರ್ಕಾರವನ್ನು ಸುಪ್ರೀಂಕೋರ್ಟ್ ತರಾಟೆ ತೆಗೆದುಕೊಂಡಿದೆ ಎಂದು ಪತ್ರಿಕೆಯಲ್ಲಿ ಬಂದಿದೆ. ಆದಕಾರಣ ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ, ರಾಜ್ಯದ ಮಾನ ಮರ್ಯಾದೆ ಹೋಗುತ್ತಿದೆ ಎಂಬ ದೃಷ್ಟಿಯಲ್ಲಿ ನಾನು ಇಲ್ಲಿ...

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಇನ್ನು ನೀವು ಜೈಲಿನಲ್ಲಿಯೇ ಇದ್ದೀರಿ, ಜೈಲಿನಿಂದ ಹೊರಗಡೆ ಬಂದಿಲ್ಲ, ಮಾನ ಮರ್ಯಾದೆ ಬಗ್ಗೆ ಮಾತನಾಡುವುದಕ್ಕೆ ನಿಮಗೆ ನೈತಿಕತೆಯೇ ಇಲ್ಲ. ಮಾನ, ಮರ್ಯಾದೆ ಎಂಬ ಎರಡು ಪದಗಳು ನಿಮ್ಮ dictionary ಯಲ್ಲಿಯೇ ಇಲ್ಲ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ.ಅವರು ಮುಗಿಸಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲವೆಂದರೆ ಹೇಗೆ ಮಾತನಾಡಲಿ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಮಗೆ ಎಂಥಾ ಸ್ಥಿತಿ ಬಂದಿದೆ ನೋಡಿ, ಇವರಿಂದ ನಾವು ಮಾನ, ಮರ್ಯಾದೆ ಬಗ್ಗೆ ಹೇಳಿಸಿಕೊಳ್ಳುವಂತಹ ಪರಿಸ್ಥಿತಿ ಬಂತಲ್ಲ. ಎಂಥ ದುರ್ದೈವ ನೋಡಿ.

**(ಗೊಂದಲ)**

**ಸಭಾಪತಿಯವರು:–** ಸಾಕು ಕುಳಿತುಕೊಳ್ಳಿ. ಅವರು ಮುಗಿಸಲಿ. ನಾನು ಇನ್ನೂ ತೀರ್ಮಾನ ಮಾಡಿಲ್ಲ, ನಾನು ತೀರ್ಮಾನ ಮಾಡುವುದಕ್ಕೆ ಮುಂಚೆಯೇ ಈ ರೀತಿ ಮಾಡಿದರೆ ಹೇಗೆ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಗಣಿ ಭಾಗದ ಪ್ರದೇಶಗಳಾದ ಬಳ್ಳಾರಿ, ತುಮಕೂರು, ಚಿತ್ರದುರ್ಗ ಅಲ್ಲಾ ಒಂದು ಪೈಸೆ ಕೂಡ ಖರ್ಚು ಮಾಡಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, 3 ಕೋಟಿ ರೂಪಾಯಿ ಅದಿರು ಇತ್ತಲ್ಲ ಅದನ್ನು ನೀವು ಏಕೆ ತೆಗೆಯುತ್ತಿಲ್ಲವೆಂದು ಸುಪ್ರೀಂ ಕೋರ್ಟ್ ಕೇಳಿದೆ. ಇದಕ್ಕೆ ಇವರು ಏನು ಉತ್ತರ ಕೊಡುತ್ತಾರೆ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಸುಪ್ರೀಂ ಕೋರ್ಟ್ ನಿನ್ನೆ ದಿವಸ ಸರ್ಕಾರಕ್ಕೆ ಆದೇಶ ಕೊಟ್ಟಿದೆ, ಇದನ್ನು ಸರ್ಕಾರ ಇಂಪ್ಲಿಮೆಂಟ್ ಮಾಡುತ್ತದೆಯೋ ಇಲ್ಲವೋ ತಿಳಿಸಬೇಕು. ಈ ವಿಷಯವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೊರಟಿದ್ದೇನೆಯೇ ವಿನಃ ಬೇರೆ ವಿಷಯವನ್ನಲ್ಲ.

(ಗೊಂದಲ)

**ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ. Ultimate ಆಗಿ ನಾನು ತಾನೆ ಹೇಳಬೇಕಾಗಿರುವುದು, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಅವರು ಮುಗಿಸಲಿ, ಏಕೆ allow ಮಾಡಬೇಕೆಂದು ಅವರು ಹೇಳುತ್ತಿದ್ದಾರೆ; ಏಕೆ allow ಮಾಡಬಾರದೆಂದು ನೀವು ಹೇಳಿದ್ದೀರಿ, ಅಂತಿಮ ನಿರ್ಣಯವನ್ನು ನಾನು ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, whether it is tenable or not ಎಂದು ಹೇಳಿದರೆ ಮುಗಿದೇ ಹೋಯಿತು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಈ ಸರ್ಕಾರ ಕರ್ನಾಟಕ ರಾಜ್ಯದ ಮಾನ, ಮರ್ಯಾದೆಯನ್ನು ಹರಾಜು ಹಾಕಿದೆ.

(ಗೊಂದಲ)

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಒಳಗೊಂಡಂತೆ ಬಿ.ಜೆ.ಪಿ. ಪಕ್ಷದ ಮಾನ್ಯ ಎಲ್ಲಾ ಸದಸ್ಯರು ಸಭಾತ್ಯಾಗ ಮಾಡಿ ಸದನದಿಂದ ಹೊರ ನಡೆದರು)**

(ಗೊಂದಲ)

**Sri S.R. PATIL:-** Shame, shame. ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಮಾನ–ಮರ್ಯಾದೆ ಬಗ್ಗೆ ಮಾತನಾಡಿ ಹೊರಗೆ ಹೋದರು.

**ಶ್ರೀ ಆರ್.ವಿ. ವೆಂಕಟೇಶ್:–** ಅವರೆಲ್ಲರೂ ಕೇವಲ ಪ್ರಚಾರ ಪ್ರಿಯರು.

**ಸಭಾಪತಿಯವರು:–** ಈಗ ನಿಲುವಳಿ ಸೂಚನೆಯ ನೋಟೀಸ್ ಏನು ಕೊಟ್ಟಿದ್ದರು, ಆ ನಿಲುವಳಿ ಸೂಚನೆಯ ನೋಟೀಸ್‌ನ ಬಗ್ಗೆ ನಾನು ನಿರ್ಣಯ ಕೊಡುವುದಕ್ಕಿಂತ ಮುಂಚೆ ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದ ಹಿನ್ನೆಲೆಯಲ್ಲಿ ಆ ನಿಲುವಳಿ ಸೂಚನೆಯ ಬಗ್ಗೆ ನನ್ನ ನಿರ್ಣಯದ ಅವಕಾಶವಿಲ್ಲ; ಆ ನಿಲುವಳಿ ಸೂಚನೆಯ ಬಗ್ಗೆ ಯಾವುದೇ ಚರ್ಚೆಗೆ ನಾನು ಅವಕಾಶ ಕೊಡುವುದಿಲ್ಲ. It

becomes in-fructuous. ಆದುದರಿಂದ ಅದರ ಬಗ್ಗೆ ಯಾವುದೇ ಚರ್ಚೆಗೆ ಅವಕಾಶವಿಲ್ಲ. ಈಗ ನಾವು ಅಜೆಂಡಾ ಪ್ರಕಾರ ಮುಂದಕ್ಕೆ ಹೋಗೋಣ. ಅದಕ್ಕೆ ಅವಕಾಶ ಕೊಡಿ.

ಶ್ರೀ ವಿ.ಎಸ್. ಉಗ್ರಪ್ಪ:– ಅವರಿಗೆ ಮಾತ್ರ ನೀವು ಅವಕಾಶ ಕೊಡುತ್ತೀರಿ...

**Mr.CHAIRMAN:-** That Adjournment Motion is null and void. It's gone.

**Sri V.S. UGRAPPA:-** It's our right.

**Mr. CHAIRMAN:-** It's gone.

**ಶ್ರೀ ಹೆಚ್.ಎಂ. ರೇವಣ್ಣ:–** ಅವರು ಹೇಳಿದ್ದನ್ನು ಕೇಳುವುದಕ್ಕೆ ಆಗುತ್ತದೆಯೇ?

**ಸಭಾಪತಿಯವರು:–** ಈಗ ಏನು ಮಾಡಬೇಕೆಂದು ನೀವು ಹೇಳುತ್ತಿರುವುದು?

**ಶ್ರೀ ಆರ್.ವಿ. ವೆಂಕಟೇಶ್:–** ಏನು ಮಾಡಬೇಕೆಂದರೆ, ನಮಗೂ ಅವಕಾಶ ಕೊಡಬೇಕು.

**ಸಭಾಪತಿಯವರು:–** ನಾಲ್ಕು–ನಾಲ್ಕು ಜನ ಒಟ್ಟಿಗೆ ಮಾತನಾಡಿ, ಎಲ್ಲರೂ ಮಾತನಾಡಿ. All of you can talk. All the four can talk. ನಿಂತುಕೊಳ್ಳಿ, ಮಾತನಾಡಿ ನಾನು ಕೇಳುತ್ತೇನೆ. You can talk.

(ಗೊಂದಲ)

**ಸಭಾಪತಿಯವರು:–** ಏನು ಬೇಕಾದರು ಮಾತನಾಡಬಹುದು. Nothing will go on record. ನಾನು ಹೇಳುವವರೆಗೂ ಯಾವುದೂ ರೆಕಾರ್ಡ್‌ಗೆ ಹೋಗುವುದು ಬೇಡ. ಮಾಧ್ಯಮ ಮಿತ್ರರು ಕೂಡ ಇದನ್ನು ರೆಕಾರ್ಡ್ ಮಾಡಬಾರದು. This is not an official recording. ಯಾವುದೂ ಕಡತಕ್ಕೆ ಹೋಗುವುದಿಲ್ಲ.

**(ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಈ ಹಂತದಲ್ಲಿ ಯಾವುದೇ ನಡವಳಿಕೆಗಳನ್ನು ದಾಖಲಿಸಿರುವುದಿಲ್ಲ)**

## 2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ ಕ.ವಿ.ಡ.:–** ತಮ್ಮ ಅನುಮತಿಯೊಂದಿಗೆ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

## 3. ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

**(ಅ) ಕರ್ನಾಟಕ ಪಂಚಾಯತ್ ರಾಜ್(ತಿದ್ದುಪಡಿ) ವಿಧೇಯಕ, 2015**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2015ರ ಕರ್ನಾಟಕ ಪಂಚಾಯತ್ ರಾಜ್(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಪಂಚಾಯತ್ ರಾಜ್ಯ(ತಿದ್ದುಪಡಿ) ವಿಧೇಯಕ, 2015ಕ್ಕೆ ತಿದ್ದುಪಡಿ ತರುವುದಕ್ಕೆ ಈ ಸದನದ ಚರ್ಚೆಯೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ತಮಗೆಲ್ಲರಿಗೂ ತಿಳಿದಿರುವಂತೆ ನಾನು ಕರ್ನಾಟಕ ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಸಣ್ಣ ವಿಧೇಯಕವನ್ನು, ಗ್ರಾಮ ಸಭೆಗಳನ್ನು ಶಕ್ತಿಶಾಲಿ ಮಾಡಬೇಕೆನ್ನುವ ಉದ್ದೇಶದಿಂದ ಮಂಡನೆ ಮಾಡಿದ್ದೇನೆ. ಆ ಸಂದರ್ಭದಲ್ಲಿ ವಿಧಾನಸಭೆಯಿಂದ ಊರ್ಜಿತವಾಗಿದ್ದರೂ ಸಹ ಚರ್ಚೆಯ ಕಾಲಕ್ಕೆ ಹತ್ತು ಹಲವಾರು ಸಲಹೆ–ಸೂಚನೆಗಳು ನಮ್ಮ ಪಕ್ಷದ ಶಾಸಕರಿಂದ ಮತ್ತು ವಿರೋಧ ಪಕ್ಷದ ಹಲವಾರು ಅನುಭವಸ್ಥ ಶಾಸಕರಿಂದ ಬಂದ ಸಂದರ್ಭದಲ್ಲಿ ಜಂಟಿ ಸಮಿತಿಗೆ ಒಪ್ಪಿಸಬೇಕೆನ್ನುವ ಸಲಹೆಯನ್ನು ಈ ಸದನ ಮಾಡುವುದರ ಜೊತೆಗೆ ಸಮಗ್ರವಾಗಿರುವ ತಿದ್ದುಪಡಿಯ ಬಗ್ಗೆ ವಿಚಾರ ಮಾಡಲಾಯಿತು. ಈಗಾಗಲೇ ಕಳೆದು ಹೋಗಿರುವ 20

ವರ್ಷಗಳ ಅನುಭವದ ಹಿನ್ನೆಲೆಯಲ್ಲಿ ನಾವು ಈ ವಿಧೇಯಕವನ್ನು ನೋಡಬೇಕು ಎನ್ನುವ ಮಾತನ್ನು ಹಿಂದೆ ಮಾನ್ಯ ಸದಸ್ಯರು ಹೇಳಿದ್ದರು. ನಮ್ಮ ಕರ್ನಾಟಕ ರಾಜ್ಯ, ಪಂಚಾಯತ್ ರಾಜ್ ವ್ಯವಸ್ಥೆಗೆ ದೇಶದಲ್ಲಿಯೇ ಮಹತ್ತರವಾದ ಕೊಡುಗೆಯನ್ನು ಕೊಟ್ಟಿದೆ. ಈ ದೇಶದ ಇತಿಹಾಸದೊಳಗೆ ಪಂಚಾಯತ್‌ರಾಜ್ ವ್ಯವಸ್ಥೆ ಬೆಸೆದುಕೊಂಡಿದೆ. ಇವತ್ತು ನಿನ್ನೆಯಿಂದ ಅಲ್ಲ, ನಾಗರಿಕತೆ ಬೆಳೆದಂತೆ ಸಂಘ ಜೀವಿಗಳಾದ ನಾವು ಎಲ್ಲಿ ವಾಸಿಸುತ್ತೇವೆಯೋ ಅಲ್ಲಿಯೇ ಸ್ಥಳೀಯವಾಗಿರುವ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದಕ್ಕೆ ನಾವೆಲ್ಲರೂ ಪ್ರಯತ್ನಿಸುತ್ತಿರುತ್ತೇವೆ.

ಸನ್ಮಾನ್ಯ ಸಭಾಪತಿಯವರೇ, 'ಪಂಚಾಯತ್' ಎನ್ನುವ ಹೆಸರು ಹೇಗೆ ಬಂದಿತು ಎನ್ನುವುದರ ಬಗ್ಗೆ ಹೇಳುವುದಾದರೆ, ಹಿಂದಿ ಭಾಷೆಯಲ್ಲಿ 'ಪಂಚ್ ಕೆ ಮುಖ್ ಸೇ ಪರಮೇಶ್ವರ್ ಬೋಲ್‌ತಾ ಹೈ' ಎನ್ನುವ ಮಾತು ಪ್ರಚಲಿತವಾಗಿದೆ. ನಮ್ಮ ಗ್ರಾಮೀಣ ವ್ಯವಸ್ಥೆಯಲ್ಲಿ ಪಂಚಾಯತಿಯ ನಿರ್ಣಯವನ್ನು ಅಂತಿಮ ನಿರ್ಣಯ ಮತ್ತು ಅದು ದೈವದ ತೀರ್ಪು ಎನ್ನುವ ರೀತಿಯಲ್ಲಿ ಭಾವಿಸುತ್ತಾರೆ. ನಮ್ಮ ಕರ್ನಾಟಕ ರಾಜ್ಯ ಹಿಂದೆ 20 ಭಾಗವಾಗಿ ವಿಂಗಡಣೆಯಾಗಿತ್ತು. ಅದರಲ್ಲಿ ಮುಂಬೈ–ಕರ್ನಾಟಕ, ಹಳೆಯ ಮೈಸೂರು, ಹೈದ್ರಾಬಾದ್–ಕರ್ನಾಟಕ, ಮದ್ರಾಸ್ ಪ್ರಾಂತ್ಯ ಮತ್ತು ಸಣ್ಣ ಸಣ್ಣ ರಾಜರ ಸಂಸ್ಥಾನಗಳು ಇದ್ದವು. ಇವೆಲ್ಲವುಗಳೂ ತಮ್ಮದೇ ಆಗಿರುವ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಹೊಂದಿದ್ದವು. ಮುಂಬೈ–ಕರ್ನಾಟಕದಲ್ಲಿ 1970ರಲ್ಲಿ ಲಾರ್ಡ್ ರಿಪ್ಪನ್ ತಂದಿರುವ ನಿಯಮಗಳು ಮತ್ತು ಕಾಯಿದೆಗಳು ಸ್ಥಳೀಯ ಸಂಸ್ಥೆಯ ಆಡಳಿತ ವ್ಯವಸ್ಥೆಯನ್ನು ಹುಟ್ಟು ಹಾಕಿರುವುದು ಅಷ್ಟೇ ಅಲ್ಲ, ಇಡೀ ರಾಷ್ಟ್ರದಲ್ಲಿ Magna carta of Local Democracy in India ಎಂದು ಕರೆಯುತ್ತಿದ್ದರು. ನಮ್ಮ ಹಳೆಯ ಮೈಸೂರು ಭಾಗದಲ್ಲಿ Mysore Local Boards Regulation 1902, Mysore Local Board and Village Panchayat Regulation 4, Mysore Village Panchayat Regulation 2, Mysore District Boards Regulation, Mysore Village Panchayats and District Boards 1952, ಬಾಂಬೆ ಕರ್ನಾಟಕದಲ್ಲಿ Bombay District Local Board Act 1923, Bombay Village Panchayat Act 1923, Madras Village Panchayat Act 1950, Hyderabad Village Panchayat Act 1951, Hyderabad Boards Act 1956, Coorg Panchayat Act 1956, ಹೀಗೆ ಎಲ್ಲ ಕಾನೂನುಗಳ ಮೂಲಕ ನಮ್ಮ ಪಂಚಾಯತ್ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿತ್ತು. ನಂತರ ರಾಜ್ಯಗಳ ಏಕೀಕರಣವಾದಂತಹ ಸಂದರ್ಭದಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ 1959ರಲ್ಲಿ Mysore Village Panchayats and District Boards Act ನ್ನು ಜಾರಿಗೊಳಿಸಲಾಗಿತ್ತು. ಅದರ ನಂತರದ ಮಹತ್ವದ

ಬದಲಾವಣೆ ಮತ್ತು ಬೆಳವಣಿಗೆಯೆಂದರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ಸನ್ಮಾನ್ಯ ನಜೀರ್ ಸಾಹೇಬರು ಪಂಚಾಯತ್ ರಾಜ್ ವ್ಯವಸ್ಥೆಯ ಸಚಿವರಾಗಿದ್ದಾಗ, ಬಹಳ ದೊಡ್ಡ ಬದಲಾವಣೆಗೆ ಕೈ ಹಾಕಿದ್ದರು. ಈ ದಿಸೆಯಲ್ಲಿ ಅವತ್ತಿನ ಸದನಗಳು ಬಹಳಷ್ಟು ಮಾರ್ಗದರ್ಶನ ಮಾಡಿದ್ದವು. ಪಂಚಾಯತ್ ವ್ಯವಸ್ಥೆ ಒಂದು ರೀತಿಯಲ್ಲಿ ತನ್ನದೇ ಆಗಿರುವ ಮಹತ್ವದ ಸ್ವರೂಪವನ್ನು ತಾಳಿ, 1985ರ ಆಗಸ್ಟ್‌ನಲ್ಲಿ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯತಿ ಕಮಿಟಿ, ಮಂಡಲ ಪಂಚಾಯತಿ, ನ್ಯಾಯ ಪಂಚಾಯತ್ ಕಾನೂನು ಜಾರಿಗೆ ಬಂದವು. ಈ ಪ್ರಯೋಗ ನಮ್ಮ ದೇಶದಲ್ಲಿ ಬಹಳಷ್ಟು ಜನರನ್ನು ಆಕರ್ಷಿಸಿತ್ತು. ಸನ್ಮಾನ್ಯ ರಾಜೀವ್‌ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ, ನಮ್ಮ ಕರ್ನಾಟಕ ರಾಜ್ಯದ ಪ್ರಯೋಗವನ್ನು ಮನದಲ್ಲಿಟ್ಟುಕೊಂಡು ಸ್ಥಳೀಯ ಸಂಸ್ಥೆಗಳಿಗೆ ಸಾಕಷ್ಟು ಶಕ್ತಿಯನ್ನು ತುಂಬಬೇಕೆನ್ನುವ ಪರಿಕಲ್ಪನೆಯಿಂದ ಇದಕ್ಕೆ ಸಂವಿಧಾನಾತ್ಮಕವಾದ ಅಂತಸ್ತು ಕೊಡುವುದಕ್ಕೆ ತಮ್ಮದೇ ಆದ ಪ್ರಯತ್ನಗಳನ್ನು ಮಾಡಿದ್ದರು. ಈಗ ನಾವುಗಳು ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿರುತ್ತೇವೆ. ಬಹಳ ಹಿಂದೆ ಮಾನ್ಯ ರಾಜೀವ್‌ಗಾಂಧಿಯವರು ಲೋಕಸಭೆಯಲ್ಲಿ 'ನಾವು ಗ್ರಾಮಗಳಿಗಾಗಿ ಏನು ಹಣ ಬಿಡುಗಡೆ ಮಾಡುತ್ತೇವೆ ಅದು ಗ್ರಾಮಗಳಿಗೆ ಹೋಗಿ ಮುಟ್ಟುತ್ತಿಲ್ಲ. ನಾವು ಒಂದು ಗ್ರಾಮಕ್ಕಾಗಿ ಒಂದು ರೂಪಾಯಿಯನ್ನು ದೆಹಲಿಯಿಂದ ಬಿಡುಗಡೆ ಮಾಡಿದರೆ, ಅದು ಆ ಗ್ರಾಮಕ್ಕೆ ಹೋಗಿ ಮುಟ್ಟುವುದರೊಳಗಾಗಿ ಕೊರಗಿ ಸೊರಗಿ ಅಲ್ಲಿರುವ ಆಡಳಿತಾರೂಢ ಜನರ ಕೈಗೆ ಸಿಕ್ಕಿ, ಮಧ್ಯವರ್ತಿಗಳ ಕೈಯಲ್ಲಿ ಸಿಕ್ಕಿಕೊಂಡು, ರಾಜಕಾರಣಿಗಳು ಮತ್ತು ಗುತ್ತಿಗೆದಾರರ ಕೈಯಲ್ಲಿ ಸಿಕ್ಕಿ ಆ ಊರು ಮುಟ್ಟುವುದರೊಳಗೆ ಒಂದು ರೂಪಾಯಿ 16 ಪೈಸೆ ಆಗಿರುತ್ತದೆ. That means, 84% of the money is leaked. There is leakage as well there is unnecessary administrative cost ಎನ್ನುವ ಹೇಳಿಕೆಯನ್ನು ನೀಡಿದ್ದರು. ಅಂದರೆ, ಅನವಶ್ಯಕವಾಗಿರುವ ವೆಚ್ಚ ಮತ್ತು ಸೋರುವಿಕೆಯ ಕಾರಣದಿಂದ ಸುಮಾರು ಶೇಕಡಾ 84ರಷ್ಟು ಹಣ ಗ್ರಾಮಗಳಿಗೆ ಮುಟ್ಟುತ್ತಿಲ್ಲ. ಆ ಕಾರಣಕ್ಕಾಗಿ ಸ್ಥಳೀಯ ಸಂಸ್ಥೆಗಳನ್ನು ಬಲಗೊಳಿಸಬೇಕು ಎನ್ನುವ ಉದ್ದೇಶದಿಂದ ಇಂತಹ ಒಂದು ದೊಡ್ಡ ಕೆಲಸಕ್ಕೆ ಕೈ ಹಾಕಲಾಯಿತು.

**ಶ್ರೀ ರಾಮಚಂದ್ರಗೌಡ:–** ಸನ್ಮಾನ್ಯ ಸಭಾಪತಿಯವರೇ, ಅದಕ್ಕೆ ಗೌರವವಾದ ಪದ percolation.

**Mr. CHAIRMAN:-** Percolation ಎನ್ನುವುದಕ್ಕಿಂತ pilferage ಎನ್ನುವುದು ಒಳ್ಳೆಯ ಪದವಾಗಿದೆ.

**ಶ್ರೀ ಹೆಚ್.ಕೆ. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿ ಮಾನ್ಯ ರಾಜೀವ್‌ಗಾಂಧಿಯವರು ಸ್ಥಳೀಯ ಸಂಸ್ಥೆಗಳನ್ನು ಸ್ಥಳೀಯ ಸರ್ಕಾರಗಳೆಂದು ಕರೆಯುವ ಮೂಲಕ ಅವುಗಳಿಗೆ ಹೆಚ್ಚು ಶಕ್ತಿ ಕೊಡಬೇಕೆಂದು ಸಂವಿಧಾನಕ್ಕೆ 73 ಮತ್ತು 74ನೇ ತಿದ್ದುಪಡಿಯನ್ನು ಮಾಡುವುದಕ್ಕೆ ಕೈ ಹಾಕಿದರು. ಲೋಕಸಭೆಯಲ್ಲಿ ಅದಕ್ಕೆ ಅಂಗೀಕಾರ ದೊರೆಯಿತು. ರಾಜ್ಯ ಸಭೆಯಲ್ಲಿ ಆ ದಿನ ಒಂದು ಮತದ ಅಂತರದಲ್ಲಿ ಅದಕ್ಕೆ ಅಂಗೀಕಾರ ದೊರೆಯಲಿಲ್ಲ. ಅನಂತರ ಪ್ರಧಾನಮಂತ್ರಿಗಳಾದ ಮಾನ್ಯ ಪಿ.ವಿ. ನರಸಿಂಹರಾಯರು ಸಂವಿಧಾನಾತ್ಮಕವಾಗಿ ಯಾವ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕಾಗಿತ್ತು, ಅವುಗಳನ್ನು ಮಾಡುವುದರ ಮೂಲಕ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿದ್ದರು. ಇದರಿಂದಾಗಿ ನಮ್ಮ ದೇಶದಲ್ಲಿ ಮೊಟ್ಟ ಮೊದಲಿಗೆ ಪಂಚಾಯತ್‌ರಾಜ್ ವ್ಯವಸ್ಥೆಗೆ ಸಂವಿಧಾನಾತ್ಮಕವಾದ ಅಂತಸ್ತು ದೊರಕಿತು. ಈ ಸಂವಿಧಾನಾತ್ಮಕವಾದ ಬಲವನ್ನು ಹೆಚ್ಚು ಆಸಕ್ತಿಯಿಂದ ಉಪಯೋಗ ಮಾಡಿಕೊಂಡು, ಅದಕ್ಕೆ ಬೇಕಾಗಿರುವ ಕರ್ನಾಟಕ ಪಂಚಾಯತ್ ರಾಜ್ ಕಾನೂನನ್ನು ಸಂವಿಧಾನಾತ್ಮಕವಾದ ಸದಾಶಯಗಳನ್ನು ಈಡೇರಿಸಿರುವುದಕ್ಕಾಗಿ ಮಾನ್ಯ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಎಂ.ವೈ. ಘೋರ್ಪಡೆಯವರು ಪಂಚಾಯತ್‌ರಾಜ್ ಮಂತ್ರಿಗಳಾಗಿದ್ದಾಗ, ಬಹಳ ದೊಡ್ಡ ಬದಲಾವಣೆ ತರುವುದಕ್ಕೆ ಕಾನೂನು ಮಾಡಿದರು. ಆ ಕಾನೂನು ಬಹಳ ಸಮರ್ಪಕವಾಗಿ ಮೂರು ಹಂತಗಳಲ್ಲಿ ಅಂದರೆ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಾಗಿ ಅನುಷ್ಠಾನಗೊಳ್ಳುವುದಕ್ಕೆ ಪ್ರಾರಂಭವಾಯಿತು. ನಂತರ ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ, ಪುನ: ಮಾನ್ಯ ಎಂ.ವೈ. ಘೋರ್ಪಡೆಯವರು ಪಂಚಾಯತ್ ರಾಜ್ ಸಚಿವರಾಗಿದ್ದಾಗ, ಬೇಲೂರು ಘೋಷಣೆಯನ್ನು ನಮ್ಮ ರಾಜ್ಯದಲ್ಲಿ ಮಾಡಿದರು. ಆಗ ಮಾನ್ಯ ಕೆ.ಬಿ. ಕೋಳಿವಾಡರವರು ರಾಜ್ಯ ಸಚಿವರಾಗಿದ್ದರು. ಆ ಸಂದರ್ಭದಲ್ಲಿ ಸುಮಾರು 29 ಇಲಾಖೆಗಳ ಜವಾಬ್ದಾರಿಯನ್ನು ಪಂಚಾಯತಿ ವ್ಯವಸ್ಥೆಗೆ ವರ್ಗಾಯಿಸುವ ಬಹು ದೊಡ್ಡ ಘೋಷಣೆಯನ್ನು ಮಾಡುವ ಮೂಲಕ ನಮ್ಮ ರಾಜ್ಯದಲ್ಲಿ ಯಾರಿಗೂ ಕಡಿಮೆ ಇಲ್ಲದಂತೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಗೊಳಿಸುವಂತಹ ಮತ್ತು ಗಟ್ಟಿಗೊಳಿಸುವಂತಹ ಕೆಲಸವಾಯಿತು. ಅದರ ನಂತರ ಈ 20 ವರ್ಷಗಳ ಅವಧಿಯಲ್ಲಿ ಈ ವ್ಯವಸ್ಥೆಯಲ್ಲಿ ಒಳ್ಳೆದಾಗಿರುವುದನ್ನು ನೋಡಿದ್ದೇವೆ; ಸೋರಿಕೆ ಆಗುವುದನ್ನೂ ನೋಡಿದ್ದೇವೆ. ಅವರ ಹೆಸರಿನಲ್ಲಿ ದೊಡ್ಡವರು ಏನೇನು ಮಾಡುತ್ತಿದ್ದಾರೆ ಎಂಬುದನ್ನು ಸಹ ಗಮನಿಸಿದ್ದೇವೆ. ಈ ಎಲ್ಲಾ ಹಿನ್ನೆಲೆಯಲ್ಲಿ ಈ ಸದನದಲ್ಲಿ ಸಮಗ್ರವಾದ ತಿದ್ದುಪಡಿ ಆಗಬೇಕು ಮತ್ತು ಆ ದಿನದ ಚರ್ಚೆ ಮತ್ತು ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಪಂಚಾಯತ್ ವ್ಯವಸ್ಥೆಯನ್ನು ಸ್ವಚ್ಛ ಮಾಡುವುದರ ಜೊತೆಗೆ ಬಲಯುತಗೊಳಿಸಬೇಕೆಂಬ ರಾಜಕೀಯ ಇಚ್ಛಾ ಶಕ್ತಿಯನ್ನು ಹತ್ತು–ಹಲವು

ವೇದಿಕೆಗಳಲ್ಲಿ ವ್ಯಕ್ತ ಮಾಡಿರುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಆ ಹಿನ್ನೆಲೆಯಲ್ಲಿ ನಮ್ಮ ರಾಜ್ಯ ಸರ್ಕಾರ ಶ್ರೀಯುತ ರಮೇಶ್ ಕುಮಾರ್‌ರವರ ನಾಯಕತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿತ್ತು. ಅದರಲ್ಲಿ ಯಾರ್‍ಯಾರನ್ನು ಸದಸ್ಯರನ್ನಾಗಿ ಮಾಡಿದ್ದೇವೆ? ಮಾನ್ಯ ನಾರಾಯಣಸ್ವಾಮಿಯವರನ್ನು ಸದಸ್ಯರನ್ನಾಗಿ ಮಾಡಿದ್ದು, Sri Narayanaswamy is one personality, who was invited by Sri Rajiv Gandhi to give his suggestions, to give his advise and to interact with him. He was not in our Party at that time. ಇವತ್ತು ನಮ್ಮ ಪಕ್ಷದ ಸದಸ್ಯರಾಗಿದ್ದಾರೆ. ಅಂದು ಈ ಭಾಗದ ಜಿಲ್ಲಾ ಪಂಚಾಯತಿ ಸದಸ್ಯರಾಗಿದ್ದರು. ಅವರನ್ನು ಮಾಡಿದ್ದಲ್ಲದೇ, ಮಾನ್ಯ ಡಿ.ಆರ್. ಪಾಟೀಲರು ಧಾರವಾಡ ಜಿಲ್ಲೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಅನುಭವ ಹೊಂದಿದವರು ಮತ್ತು ಶಾಸಕರಾಗಿದ್ದವರಾಗಿದ್ದಾರೆ. ಅವರು ಸಹಕಾರಿ ಕ್ಷೇತ್ರದಲ್ಲಿ ಹಾಗೂ ರಚನಾತ್ಮಕ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರಾಗಿದ್ದಾರೆ. ಶ್ರೀ ಎಫ್.ಎ. ಜಗ್ಗಪ್ಪನವರು ಅಂಬೇಡ್ಕರ್ ಫೌಂಡೇಷನ್‌ನ ಎಕ್ಸಿಕ್ಯೂಟಿವ್ ವೈಸ್ ಪ್ರೆಸಿಡೆಂಟ್ ಆಗಿ ಕೆಲಸ ಮಾಡಿದವರು. ಇವರು ಶೋಷಿತ ಧ್ವನಿಗಳಿಗೆ ಇಂಬು ಕೊಡುವ ಒಬ್ಬ ನಾಯಕರಾಗಿದ್ದಾರೆ. ಶ್ರೀಯುತ ಘೋರ್ಪಡೆಯವರು ಬಳ್ಳಾರಿ ಜಿಲ್ಲೆಯ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಾಗಿ ಅತ್ಯಂತ ಮಾಡೆಲ್ ಪ್ರೆಸಿಡೆಂಟ್ ಎಂದು ಅಂದಿನ ಕಾಲಕ್ಕೆ ಹೆಸರು ಮಾಡಿದವರು. ಈ ರೀತಿ ಸುಮಾರು 16 ಜನರನ್ನು ಹೊಂದಿರುವ ಆ ಸಮಿತಿ ಬಹಳಷ್ಟು ಕೆಲಸ ಮಾಡಿ, 88 ಶಿಫಾರಸ್ಸುಗಳನ್ನು ಮಾಡಿದೆ. ಇವುಗಳಲ್ಲಿ ಬಹಳಷ್ಟು consequence ಇವೆ. It is not just a small recommendation, where we accept or we don’t accept. ಆದ್ದರಿಂದ ಆರ್ಥಿಕ ಭಾರ ಆಗುವವು ಇವೆ. ಆಡಳಿತಾತ್ಮಕವಾಗಿ ಬಹಳಷ್ಟು ಬದಲಾವಣೆ ಮಾಡುವವು ಇವೆ. ಕೇವಲ ಒಂದು ಇಲಾಖೆ ಅಲ್ಲದೇ intra-Departments ಗಳಲ್ಲಿ ಬರುತ್ತದೆ. ಬಹಳ ಇಲಾಖೆಗಳ ಜವಾಬ್ದಾರಿಯನ್ನು ಪಂಚಾಯಿತಿಗಳಿಗೆ ವಹಿಸಿಕೊಡಬೇಕಾದ ಸಂದರ್ಭದಲ್ಲಿ ಆಯಾ ಇಲಾಖೆಗೆ ಇರುವ ಸಿಬ್ಬಂದಿ, ಅಲ್ಲಿರುವ ಆರ್ಥಿಕ ಕೊರತೆಗಳು, ಏನಾಗುತ್ತದೆ, ಏನು ಬಿಡುತ್ತದೆ ಎಂಬ ಹತ್ತು–ಹಲವು ಮಜಲು ಮತ್ತು ಮುಖಗಳನ್ನು ಗಮನಿಸಿ ಮಾಡಬೇಕಾಗಿರುವುದರಿಂದ ಬಹುತೇಕ 88 ಶಿಫಾರಸ್ಸುಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಹತ್ತನ್ನೆರಡರಲ್ಲಿ ಪುನ: ಚರ್ಚೆ ಮಾಡುವ ಅವಶ್ಯಕತೆ ಇದೆ. ಆದಷ್ಟು ಬೇಗ ಮಾನ್ಯ ರಮೇಶ್ ಕುಮಾರ್‌ರವರ ವರದಿಯ ಮೇಲೆ ನಮ್ಮ ಮುಖ್ಯಮಂತ್ರಿಗಳು, ನಮ್ಮ ಸಚಿವ ಸಂಪುಟ ಒಂದು ಉಪ ಸಮಿತಿಯನ್ನು ನೇಮಿಸಲಾಗಿದ್ದು, ನನ್ನನ್ನು ಅದರ ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಇದರಲ್ಲಿ ಕಾನೂನು ಸಚಿವರಾದ ಮಾನ್ಯ ಜಯಚಂದ್ರರವರು, ಹಿಂದಿನ ಪಂಚಾಯತ್ ರಾಜ್ ಸಚಿವರಾದ ಮಾನ್ಯ ಮಹದೇವಪ್ಪನವರೆಲ್ಲರೂ ಸಮಿತಿಯಲ್ಲಿ ಇದ್ದು, ಸಾಕಷ್ಟು ಮಾರ್ಗದರ್ಶನ ಮಾಡುತ್ತಿದ್ದೇನೆ. ಸಮಗ್ರವಾಗಿ ಒಮ್ಮೆಗೆ ಇದನ್ನು ಜಾರಿಗೆ ತರಬೇಕೆಂಬ ಇಚ್ಛೆ ಇದ್ದರೂ, ಮೇ

ತಿಂಗಳಲ್ಲಿ ಚುನಾವಣೆಗಳನ್ನು ಮಾಡಲೇಬೇಕು ಎಂಬುದು ನಮ್ಮ ಸರ್ಕಾರದ ಬಲವಾದ ಇಚ್ಛೆ ಮತ್ತು ಛಲವಾಗಿದೆ. ಏಕೆಂದರೆ ಮೇ ತಿಂಗಳಲ್ಲಿ ಚುನಾವಣೆ ಮಾಡದಿದ್ದರೆ ಚುನಾವಣೆಯಿಂದ ವಿಮುಖರಾದೆವು ಎಂದಾಗುತ್ತದೆ. ಈಗಿನ ಸದ್ಯದ ಕಾನೂನನ್ನು ತಪ್ಪಿಸಲು ನಮ್ಮ ಯಾವುದೇ ಆಸಕ್ತಿ ಇಲ್ಲ. ಚುನಾವಣೆ ಆಗಬೇಕು ಮತ್ತು ಚುನಾವಣೆಗೆ ಸಂಬಂಧಪಟ್ಟ ಹಲವು ಮಾರ್ಪಾಡುಗಳಿದ್ದು, ಅವುಗಳನ್ನು ಈಗ ಮಾಡದೇ ಮತ್ತೆ 5 ವರ್ಷದ ನಂತರ ಮಾಡಿದರೆ ಈಗಿನ 5 ವರ್ಷಗಳಲ್ಲಿ ನಾವು ಅನುಷ್ಠಾನ ಮಾಡಬೇಕೆಂದಿರುವ ಹಾಗೂ ವ್ಯವಸ್ಥೆಗಳನ್ನು ಸುಧಾರಣೆ ಮಾಡುವ ಕೆಲಸ ತಪ್ಪಿಹೋಗಬಾರದೆಂಬ ದೃಷ್ಟಿಯಿಂದ ಚುನಾವಣೆಗೆ ಸಂಬಂಧಿತವಾದ ಸುಮಾರು 5 ಅಂಶಗಳನ್ನು ಒಳಗೊಂಡ ವಿಧೇಯಕವನ್ನು ತಂದಿದ್ದೇವೆ. ಈಗ ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯತಿಗಳಲ್ಲಿ ಅಧ್ಯಕ್ಷರನ್ನು ನೇಮಿಸಿದಾಗ ಅವರ ಅಧಿಕೃತ ಅಧಿಕಾರ ಅವಧಿ 20 ತಿಂಗಳುಗಳಾಗಿರುತ್ತವೆ. ಗ್ರಾಮ ಪಂಚಾಯತಿಗಳಲ್ಲಿ ಮಾತ್ರ 30 ತಿಂಗಳು ಇರುತ್ತದೆ. ಈ 30 ತಿಂಗಳೊಳಗೆ ಕೆಲವು ಮಂದಿ ಚಾಪೆ ಬುಡದಲ್ಲಿ ಹಾದು ಹೋಗುತ್ತಾರೆ, ರಂಗೋಲಿ ಕೆಳಗೆ ಹೋಗುತ್ತಾರೆ ಎನ್ನುವಂತೆ 10–10 ತಿಂಗಳು ಮಾಡಿಕೊಂಡಿರುವ ಉದಾಹರಣೆಗಳು ಸಹ ಇವೆ.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಯವರೇ, ಕೆಲವು ಕಡೆ 2–2 ತಿಂಗಳು ಮಾಡಿಕೊಂಡಿದ್ದಾರೆ.

**ಶ್ರೀ ಹೆಚ್.ಕೆ. ಪಾಟೀಲ್:–** ಬೆಂಗಳೂರು ಸಮೀಪ ಇರುವುದರಿಂದ ಮಾಡಿಕೊಂಡಿದ್ದಾರೆ. ನಮ್ಮಲ್ಲಿ ಪಂಚಾಯಿತಿಗಳಿಗೆ ಚುನಾವಣೆ ಆದಾಗ ಒಂದು ಬಸ್ ಮತ್ತು ವ್ಯಾನ್ ಮಾಡಿಕೊಂಡು ಧರ್ಮಸ್ಥಳ, ಹೊರನಾಡು, ತಿರುಪತಿ, ಶ್ರೀಶೈಲ ಸೇರಿದಂತೆ ಎಲ್ಲಾ ಕಡೆ ಹೋಗುತ್ತಾರೆ. ಕೆಲವರು ಗೋವಾಕ್ಕೆ ಹೋಗುತ್ತಾರೆ. ಕೆಲವರು ತ್ರಿವೇಂಡ್ರಂಗೆ ಹೋಗುತ್ತಾರೆ.

**ಶ್ರೀ ದಯಾನಂದ:–** ಇದು ಬಹಳ ಹಳೆಯದಾಗಿದ್ದು, ಈಗ ಮಲೇಷಿಯಾ, ಸಿಂಗಾಪೂರ್‌ಗಳಿಗೆ ಹೋಗುತ್ತಾರೆ.

**ಶ್ರೀ ಹೆಚ್.ಕೆ. ಪಾಟೀಲ್:–** ನೋಡಿ, ಬೆಂಗಳೂರಿನ ಸಮೀಪ ಇರುವವರು ಸಿಂಗಾಪೂರ್, ಮಲೇಷಿಯಾಗಳಿಗೆ ಹೋಗುತ್ತಾರೆ ಎಂಬುದು ಅವ್ಯವಹಾರ ನಡೆದಿದೆ ಅಥವಾ ನಮ್ಮ ಕಾನೂನಿನ ಉದ್ದೇಶವನ್ನು ತಿರುಚುತ್ತಿದ್ದಾರೆ ಎಂದು ತೋರಿಸುತ್ತದೆ. ನಾವು ಅಲ್ಲಿ ಲಗಾಮನ್ನು ಹಾಕಬೇಕು. ಅದಕ್ಕಾಗಿ ಬದಲಾವಣೆ ಮಾಡುವುದನ್ನು ಬಿಟ್ಟು 5 ವರ್ಷದ ಅವಧಿ ಕೊಟ್ಟರೆ ನಾಯಕತ್ವ ಬೆಳೆಯುತ್ತದೆ. ಗ್ರಾಮೀಣ ನಾಯಕತ್ವ ರೂಪುಗೊಳ್ಳುತ್ತದೆ, ಅದು ರೂಪುಗೊಳ್ಳಬೇಕು; ಗಟ್ಟಿಯಾಗಬೇಕು. ಯಾವುದೇ ವರ್ಗದ ನಾಯಕ

ಪಂಚಾಯಿತಿ ಅಧ್ಯಕ್ಷನಾದವನಿಗೆ ಒಂದು ರೀತಿ ಸಂಪೂರ್ಣ ಅನುಭವ, ಧೈರ್ಯ, ಸ್ಥೈರ್ಯ ಮತ್ತು ಆಡಳಿತಾತ್ಮಕ ಚಾಣಾಕ್ಷತನ ಬರಬೇಕೆಂಬ ದೃಷ್ಟಿಯಿಂದ 5 ವರ್ಷಗಳ ಅವಧಿ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಇದರ ಜೊತೆಗೆ ಮೀಸಲಾತಿಯಲ್ಲಿ ಈ ಬಾರಿ ಆಯ್ಕೆಯಾದವನಿಗೆ ಮುಂದಿನ ಬಾರಿ ಮೀಸಲಾತಿ ಇರುವುದಿಲ್ಲ. He will not take any interest in the Constituency. ಜನರ ಸೇವೆಯಲ್ಲಿ ಆಸಕ್ತಿಯನ್ನು ಕಡಿಮೆ ಮಾಡಿಕೊಳ್ಳುತ್ತಾನೆ ಎಂಬ ಉದ್ದೇಶದಿಂದ ಮೀಸಲಾತಿಯನ್ನು 10 ವರ್ಷಗಳಿಗೆ ಮಾಡಿದ್ದೇವೆ. ಇನ್ನೂ 2 ಅವಧಿಗೆ ಹೆಚ್ಚು ಮಾಡಿದ್ದೇವೆ. ಮಹಿಳೆಯರಿಗೆ already fifty percent of seats are reserved. ಆದರೆ, 'not less than fifty perecent' ಇದ್ದಿದ್ದನ್ನು ತಾಂತ್ರಿಕ ಕಾರಣಗಳಿಂದ ....... ಕೆಲವು ಕಡೆ ಅದರಲ್ಲೂ ಶೋಷಿತ ವರ್ಗದ ಮೀಸಲಾತಿ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕೊಡಬೇಕೆಂಬ ಸಂದರ್ಭಗಳಲ್ಲಿ ಬಹಳ ಪಂಚಾಯತಿಗಳಲ್ಲಿ ಪುರುಷರು ಬರಲು ಅವಕಾಶವೇ ಆಗುತ್ತಿರಲಿಲ್ಲ. ಆ ರೀತಿ ಅನ್ಯಾಯವು ಮಹಿಳೆ ಮತ್ತು ಪುರುಷರಿಗೂ ಆಗಬಾರದೆಂಬ ಉದ್ದೇಶದಿಂದ ಒಂದು ತಿದ್ದುಪಡಿ ತಂದಿದ್ದೇವೆ. ನಮ್ಮ ಸಚಿವ ಸಂಪುಟದ ಉಪ ಸಮಿತಿಯ ಹಿರಿಯರೆಲ್ಲರೂ ಚರ್ಚೆ ಮಾಡಿದ್ದೇವೆ. ಅಲ್ಲಿನ ಮಾರ್ಗದರ್ಶನದಂತೆ ಪಂಚಾಯಿತಿ ಚುನಾವಣೆಗಳು ಅಂದರೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಗಳು ಇರಬಹುದು, ಈ ಚುನಾವಣೆಗಳನ್ನು ಅತ್ಯಂತ ಯಶಸ್ವಿಯಾಗಿ ಮಾಡಬೇಕೆಂದರೆ ಪಾಲ್ಗೊಳ್ಳುವಿಕೆ ಸಂಪೂರ್ಣ ಆಗಿರಬೇಕು. There should be hundred per cent participation of people. ಇಲ್ಲದಿದ್ದರೆ 30 ಪರ್ಸೆಂಟ್, 40 ಪರ್ಸೆಂಟ್ ಅಥವಾ ನನಗೆ ಬೇಕಾಗಿರುವ ಒಂದು ಗುಂಪು ಹೋಗಿ ಓಟು ಹಾಕಿ ಆಯ್ಕೆ ಮಾಡಿದರೆ ನಡೆಯುವುದಿಲ್ಲ. ನಾವುಗಳು ಬಹಳ ಕಡೆ ನೋಡಿರುವಂತೆ ಹಳ್ಳಿಗಳಲ್ಲಿ ಅತ್ಯಂತ ಬಡ ವರ್ಗ ಇರುವಲ್ಲಿ ಅಂಜಿ ನಡೆಯುವ ವಾತಾವರಣ ಇರುತ್ತದೆ. ಅಂತಹ ಕಡೆ ಯಾರೋ ಒಬ್ಬ ಪುಡಾರಿ 'ನಾನು ಬರುವವರೆಗೂ ನಿಮ್ಮ ಓಣಿಯವರ್‍ಯಾರೂ ಓಟು ಹಾಕುವುದಕ್ಕೆ ಬರಬೇಡಿ' ಎಂದಿಷ್ಟು ಹೇಳಿ ಬಂದರೆ ಆ ಓಣಿಯವರು ಬರುವುದಕ್ಕೆ ಕಠಿಣವಾಗಿ ಅಲ್ಲಿಯೇ ಕುಳಿತಿರುತ್ತಾರೆ. ಅವನ ಲೆಕ್ಕಾಚಾರಕ್ಕೆ ಸರಿಯಾದರೆ ಆ ಓಣಿಯವರನ್ನು ಕರೆದುಕೊಂಡು ಬರುತ್ತಾನೆ. ಇಲ್ಲದಿದ್ದರೆ ತಪ್ಪಿಹೋಗುವುದನ್ನು ಬಹಳಷ್ಟು ಗ್ರಾಮಗಳಲ್ಲಿ ನಾವು ನೋಡುತ್ತಿದ್ದೇವೆ. ಇದು ತಪ್ಪಬೇಕು. ಅತ್ಯಂತ ಅಶಕ್ತರಿದ್ದವರಿಗೆ ಓಟಿಂಗ್ ಅನ್ನು ತಪ್ಪಿಸುವ ಕೆಲಸ ಆಗಬಾರದು. ನಮ್ಮ ಜೊತೆಗೆ ಇನ್ನೊಂದು ವರ್ಗ ಇದ್ದು, ಅವರಿಗೆ ಸಾಕಷ್ಟು ದೇಶ, ರಾಜ್ಯ ಮತ್ತು ಪಂಚಾಯಿತಿಗಳ ಬಗ್ಗೆ ಕಲ್ಪನೆ ಇದ್ದರೂ ಪಾಲ್ಗೊಳ್ಳುವುದಿಲ್ಲ. They don't get involved in this true democracy. ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾರೆ. ಸನ್ಮಾನ್ಯ ಸಭಾಪತಿಯವರೇ, ಚುನಾವಣೆ ನಡೆಯುವ ಸಂದರ್ಭದಲ್ಲಿ ಪಿಕ್‌ನಿಕ್‌ಗೆ ಹೋಗುವ ಬಹಳಷ್ಟು ಜನರನ್ನು

ನಾವೆಲ್ಲರೂ ನೋಡುತ್ತಿದ್ದೇವೆ. ಆ ರೀತಿ ಆಗಬಾರದು. ಕಡ್ಡಾಯವಾಗಿ ಮತದಾನ ಮಾಡಿ ಎಂದು ಹೇಳಿದರೆ, 'ಎಲ್ಲಿ ಅದು ಕಡ್ಡಾಯವಾಗಿಲ್ಲ' ಎಂದು ಕೇಳುವವರು ಇದ್ದಾರೆ. ಇಡೀ ಜಗತ್ತಿನಲ್ಲಿ 22 ರಾಷ್ಟ್ರಗಳಲ್ಲಿ ಮತದಾನ ಕಡ್ಡಾಯವಾಗಿದೆ. ಕಡ್ಡಾಯ ಮತದಾನವನ್ನು ತಪ್ಪಿಸಿಕೊಂಡರೆ ದಂಡವನ್ನು ವಿಧಿಸುವಂತಹ ವ್ಯವಸ್ಥೆ 10 ರಾಷ್ಟ್ರಗಳಲ್ಲಿದೆ. ಕಡ್ಡಾಯ ಮತದಾನದ ಬಗ್ಗೆ ಜಾಗೃತಿಯನ್ನುಂಟು ಮಾಡುವುದರ ಜೊತೆಗೆ ನಮ್ಮ ದೇಶದ ಜನರನ್ನು ಚುನಾವಣಾ ಪ್ರಕ್ರಿಯೆಯಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವ ದೊಡ್ಡ ಹೆಜ್ಜೆ ಈ ತಿದ್ದುಪಡಿ ವಿಧೇಯಕವಾಗಿದೆ. ಇವತ್ತಿನ ಪತ್ರಿಕೆಯಲ್ಲಿ ಕಾನೂನು ಆಯೋಗದವರು ಒಂದು ಅಭಿಪ್ರಾಯವನ್ನು ನೀಡಿದ್ದಾರೆ. ಯು.ಪಿ.ಎ. ಸರ್ಕಾರದವರು ಮಾನ್ಯ ವೀರಪ್ಪ ಮೊಯ್ಲಿ ಅವರ ಮೂಲಕ ಕಡ್ಡಾಯ ಮತದಾನವನ್ನು ಪ್ರತಿಪಾದಿಸಿದರು. ನಂತರ ಮಾನ್ಯ ಎಲ್.ಕೆ. ಅಡ್ವಾನಿಯವರು ಇದನ್ನು ಪ್ರತಿಪಾದಿಸಿದರು. ಈಗಿನ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಸಹ ಇದನ್ನು ಪ್ರತಿಪಾದಿಸಿದ್ದಾರೆ. ಹೀಗೆ ಯಾವುದೇ ಪಕ್ಷದ ನಾಯಕರನ್ನು ತೆಗೆದುಕೊಂಡರೂ ಕಡ್ಡಾಯ ಮತದಾನದ ಬಗ್ಗೆ ತಮ್ಮ ಸಹಮತವನ್ನು ಹೊಂದಿದ್ದಾರೆ. ನಂತರ ಸುಪ್ರಿಂ ಕೋರ್ಟ್‌ನವರು 'ನೋಟಾ' ವನ್ನು ಪರಿಚಯಿಸಿದ್ದಾರೆ. ಅಂತಹ ಒಂದು ಸಂದೇಶವನ್ನು ನ್ಯಾಯಾಂಗ ಕೊಟ್ಟಿದೆ. ಈ ಹಿನ್ನೆಲೆಯಲ್ಲಿ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಅನುಭವಸ್ಥರಾಗಿರುವವರ ಮುಂದೆ ಈ ತಿದ್ದುಪಡಿ ವಿಧೇಯಕವನ್ನು ತರಲಾಗಿದೆ. ಅದಕ್ಕೆ ಅನುಮತಿಯನ್ನು ನೀಡಬೇಕೆಂದು ವಿನಂತಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಉಪಸ್ಥಿತರಿರುವುದರಿಂದ ನಾನು ಇದನ್ನು ಮತ್ತೊಮ್ಮೆ ಪುನರುಚ್ಚರಿಸುತ್ತಿದ್ದೇನೆ, ನಾವು ಪಾಂಡವಪುರಕ್ಕೆ ಹೋಗುತ್ತಿರುವ ಸಂದರ್ಭದಲ್ಲಿ ಸನ್ಮಾನ್ಯ ಮಹದೇವಪ್ಪನವರು ಯಾವುದೋ ಒಂದು ಗಹನವಾಗಿರುವ ಚಿಂತನೆಯಲ್ಲಿ ತೊಡಗಿದವರು 'ಪಾಟೀಲರೇ, ಚುನಾವಣೆಯನ್ನು ಸರಿಯಾಗಿ ಆಗುವಂತೆ ಮಾಡಬೇಕಲ್ಲ,' ಎನ್ನುವ ಮಾತನ್ನು ಕೇಳಿದರು. ನನಗೆ ತಕ್ಷಣ ಉತ್ತರ ಹೇಳುವುದಕ್ಕೆ ಆಗಲಿಲ್ಲ. ಅವರಿಗೆ ನಾನು 'ನಾನು ಘನೀಕರಿಸಿಕೊಂಡು ಮತ್ತೊಮ್ಮೆ ತಮ್ಮ ಜೊತೆಗೆ ಚರ್ಚೆ ಮಾಡುತ್ತೇನೆ' ಎಂದು ಹೇಳಿದೆ. ಕೆಲವು ನಿಮಿಷಗಳ ಕಾಲ ನಾನು ಅವರೊಂದಿಗೆ ಈ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇನೆ. ಚುನಾವಣೆಗಳ ಸುಧಾರಣೆಗಳನ್ನು ಮಾಡಬೇಕೆನ್ನುವುದು ಅವರ ಮತ್ತು ನಮ್ಮ ಸರ್ಕಾರದ ಉದ್ದೇಶವಾಗಿದೆ. ಚುನಾವಣಾ ಸುಧಾರಣೆ ಮಾಡುವ ನಿಟ್ಟಿನಲ್ಲಿ ಇದು ಒಂದು ದಾಪುಗಾಲು ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತೇನೆ. ಇದನ್ನು ಬಹಳ ಮುಂದಕ್ಕೆ ಹಾಕುವ ಕಾರಣ ಇರಲಿಲ್ಲ. ಮಾನ್ಯ ರಮೇಶ್ ಕುಮಾರ್‌ರವರು ಕೊಟ್ಟಿರುವ ವರದಿಯಲ್ಲಿನ ಎಲ್ಲ ಶಿಫಾರಸ್ಸುಗಳ ಬಗ್ಗೆಯೂ ನಾವು ಚರ್ಚೆ ಮಾಡುತ್ತಿದ್ದೇವೆ. ಆ ಚರ್ಚೆಯನ್ನು ಸಂಪೂರ್ಣಗೊಳಿಸಿಕೊಂಡು ಆದಷ್ಟು ಬೇಗ; ಎಷ್ಟು ಬೇಗ

ಎಂದರೆ, ಹೊಸ ಪಂಚಾಯತಿ ಚುನಾವಣೆಗಳು ನಡೆದು ಹೊಸ ಟೀಮ್ ಬಂದು ಅವರು ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡುವುದರೊಳಗಾಗಿ ಈ ಮಸೂದೆಯನ್ನು ಸದನದಲ್ಲಿ ಮಂಡನೆ ಮಾಡುವುದಕ್ಕೆ ಎಲ್ಲ ರೀತಿಯ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ ಎನ್ನುವ ಮಾತನ್ನು ಹೇಳುವುದರ ಜೊತೆಗೆ ನಾವು ಯಾವ ಕಾನೂನು ಮಾಡುತ್ತೇವೆ, ಆ ಕಾನೂನು ಅನುಷ್ಠಾನಗೊಳ್ಳಬೇಕು ಎನ್ನುವ ಮಾತನ್ನು ಸಹ ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ಕಾನೂನಿನಲ್ಲಿ ಕೆಲವಾರು ಪ್ರಾವಿಷನ್ ಇವೆ. ಕಾರಣ ಯಾವುದೇ ಇರಲಿ. ಆ ರೀತಿ ಆಗಬಾರದು ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಬಹಳ ಸೂಕ್ಷ್ಮವಾಗಿ ಅಧ್ಯಯನ ಮಾಡಿ, ಈ ತಿದ್ದುಪಡಿ ವಿಧೇಯಕದ ಮೇಲಿನ ಚರ್ಚೆಯನ್ನು ಸಂಪೂರ್ಣ ಮಾಡಿಕೊಂಡು ಮಾನ್ಯ ರಮೇಶ್‌ಕುಮಾರ್ ಅವರ ವರದಿಯ ಹಿನ್ನೆಲೆಯಲ್ಲಿ ನಾವೇನು ತಿದ್ದುಪಡಿಗಳನ್ನು ತರಬೇಕು ಎನ್ನುವುದರ ಜೊತೆಗೆ ಈ ಸದನದಲ್ಲಿರುವ ಸಾಕಷ್ಟು ಜನ ಹಿರಿಯ ಸದಸ್ಯರು ತಮ್ಮದೇ ಆದ ಅನುಭವದ ಹಿನ್ನೆಲೆಯಲ್ಲಿ ನಮಗೆ ಏನು ಮಾರ್ಗದರ್ಶನವನ್ನು ಮಾಡುತ್ತಿದ್ದಾರೆ ಮತ್ತು ಸಲಹೆ ಸೂಚನೆಗಳನ್ನು ಕೊಡುತ್ತಿದ್ದಾರೆ ಅವುಗಳನ್ನು ಸಹ ಸೇರಿಸಿಕೊಂಡು ಆ ಮಸೂದೆಯನ್ನು ಬೇಗನೇ ಜಾರಿಗೆ ತರುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತಾ, ಕರ್ನಾಟಕ ಪಂಚಾಯತ್ ರಾಜ್(ತಿದ್ದುಪಡಿ) ವಿಧೇಯಕಕ್ಕೆ ಅನುಮತಿಯನ್ನು ನೀಡುವುದರ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಚುನಾವಣೆಗಳು ಯಶಸ್ವಿಯಾಗುವುದಕ್ಕೆ ಮತ್ತು ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಲು ಮತ್ತು ಮುಂದೆ ಬರುವ ಚುನಾವಣೆಯಲ್ಲಿ ಭ್ರಷ್ಟಾಚಾರ ಕಡಿಮೆಯಾಗುವಂತೆ ಮಾಡಲು ಅನುಕೂಲ ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಬಹಳ ಪ್ರಮುಖವಾಗಿರುವ ವಿಷಯವನ್ನು ಸದನದ ಮುಂದೆ ತಂದಿದ್ದಾರೆ. ಈ ವಿಧೇಯಕದ ಮೇಲಿನ ಚರ್ಚೆಯಲ್ಲಿ ಎಲ್ಲ ಸದಸ್ಯರು ಭಾಗವಹಿಸಬೇಕೆನ್ನುವುದು ನನ್ನ ಆಸೆಯಾಗಿದೆ. ಆದರೆ, ಪಂಚಾಯತ್ ರಾಜ್ ವ್ಯವಸ್ಥೆಯಿಂದ ಚುನಾಯಿತರಾಗಿರುವ ಸದಸ್ಯರ ಸಂಖ್ಯೆ ನಮ್ಮ ಸದನದಲ್ಲಿ ಮೂರನೇ ಒಂದು ಭಾಗದಷ್ಟು ಇದೆ. ಸದನದ ಒಟ್ಟು ಸದಸ್ಯರ ಸಂಖ್ಯೆ 75 ಆಗಿದ್ದರೆ, 25 ಜನ ಸದಸ್ಯರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾಗಿ ಬಂದಿದ್ದಾರೆ. ಆದ್ದರಿಂದ ಮೊದಲ ಆದ್ಯತೆ ಈ ಕ್ಷೇತ್ರದಿಂದ ಚುನಾಯಿತರಾದವರಿಗೆ ನೀಡಲಾಗುತ್ತದೆ. ಬೇರೆ ಕ್ಷೇತ್ರದಿಂದ ಬಂದ ಸದಸ್ಯರಿಗೆ ನಾನು ಅವಕಾಶ ಕೊಡುವುದಿಲ್ಲವೆಂದು ಹೇಳುವುದಿಲ್ಲ. ಎಷ್ಟು ಜನ ಸದಸ್ಯರು ಮಾತನಾಡುವುದಕ್ಕೆ ಸಾಧ್ಯವಿದೆ ಅಷ್ಟು ಜನ ಸದಸ್ಯರು ಮಾತನಾಡಬೇಕು. ಮಾತನಾಡುವ ಸದಸ್ಯರು ಸದನದ ಸಮಯವನ್ನು ಗಮನದಲ್ಲಿಟ್ಟುಕೊಂಡು ಮಾತನಾಡಬೇಕಾಗುತ್ತದೆ. ಈ ವಿಧೇಯಕದಲ್ಲಿ ತಂದಿರುವ 5 ತಿದ್ದುಪಡಿಗಳ ಬಗ್ಗೆ ಮತ್ತು ಪ್ರಾಸಂಗಿಕವಾಗಿ ಒಂದೆರಡು ಮಾತುಗಳನ್ನು ಹೆಚ್ಚಾಗಿ ಆಡಬಹುದೇ ಹೊರತು

ಉದ್ದಕ್ಕೆ ಮಾತನಾಡುತ್ತಾ ಹೋದರೆ ಚರ್ಚೆ ಮುಗಿಯುವುದಿಲ್ಲ. ಆದ್ದರಿಂದ ಯಾರೇ ಸದಸ್ಯರು ಮಾತನಾಡುತ್ತಿರಲಿ, 8–10 ನಿಮಿಷ ಆದ ಮೇಲೆ ನಾನು ಸಮಯ ಆಯಿತು ಎಂದು ಹೇಳುತ್ತೇನೆ. ಆಗ ಮಾನ್ಯ ಸದಸ್ಯರು ತಮ್ಮ ಮಾತುಗಳನ್ನು ಮುಗಿಸಬೇಕಾಗುತ್ತದೆ. ಹಿರಿಯ ಸದಸ್ಯರಾಗಿರುವ ಮಾನ್ಯ ರಾಮಚಂದ್ರಗೌಡರು ಮಾತನಾಡಲು ಎದ್ದು ನಿಂತಿರುವುದರಿಂದ ಅವರಿಂದಲೇ ಚರ್ಚೆಯನ್ನು ಪ್ರಾರಂಭ ಮಾಡಲಾಗುತ್ತದೆ. ನಂತರ ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರಿಗೆ ಆದ್ಯತೆಯನ್ನು ನೀಡಲಾಗುತ್ತದೆ. ಅನಂತರ ಸಮಯದ ಅವಕಾಶ ಎಷ್ಟು ಸಿಗುತ್ತದೆ ಅದರ ಆಧಾರದ ಮೇಲೆ ಬೇರೆಯವರಿಗೆ ಅವಕಾಶ ನೀಡಲಾಗುತ್ತದೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ಕೆಳ ಮನೆಯಲ್ಲಿ ಈ ಬಿಲ್‌ಗಾಗಿ ಕಾಯುತ್ತಿದ್ದಾರೆ. ಇದು ಬಹಳ ಸರಳವಾಗಿರುವ ತಿದ್ದುಪಡಿಯಾಗಿರುವುದರಿಂದ ಮಾತನಾಡುವ ಸದಸ್ಯರು ಕಟ್‌ಶಾರ್ಟ್ ಮಾಡಿ ಮಾತನಾಡಿದರೆ ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ವೇಗ ಅಂದರೆ, 2–3 ನಿಮಿಷಗಳಲ್ಲಿ ಮುಗಿಸಿದರೆ ಒಳ್ಳೆಯದು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಸದಸ್ಯರು ತಮ್ಮ ಮಾತುಗಳನ್ನು ಬೇಗನೇ ಮುಗಿಸಬೇಕಾಗಿದೆ. ಯಾರಿಗೂ ಅವಕಾಶ ಕೊಡುವುದಿಲ್ಲವೆಂದು ಹೇಳುವುದಿಲ್ಲ. ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಇಡೀ ರಾಷ್ಟ್ರಕ್ಕೆ ಮಾದರಿಯಾಗಿರುವ ಪಂಚಾಯತ್ ರಾಜ್ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಚಾಲನೆಯಲ್ಲಿದೆ. ಮಹಾರಾಜರ ಕಾಲದಲ್ಲಿಯೇ ಅಂದರೆ 1902ನೇ ಇಸವಿಯಲ್ಲಿಯೇ ನಮ್ಮ ರಾಜ್ಯದಲ್ಲಿ ಪಂಚಾಯತ್ ವ್ಯವಸ್ಥೆ ಜಾರಿಯಲ್ಲಿ ಇತ್ತು ಎನ್ನುವ ಅಂಶವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದ್ದಾರೆ. ನಮ್ಮ ವಿಧಾನ ಪರಿಷತ್ತಿಗೂ ಸಹ 112 ವರ್ಷಗಳಾಗಿವೆ. ಇದು ಸಹ ಮೈಸೂರು ಮಹಾರಾಜರ ಕಾಲದಿಂದ ಜಾರಿಯಲ್ಲಿದೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಯೋಗ್ಯವಾದ ಮಂತ್ರಿಗಳನ್ನು ಈ ಇಲಾಖೆಗೆ ನೇಮಕ ಮಾಡಿದ್ದಾರೆ ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಬಹಳಷ್ಟು ಅನುಭವಿಗಳು, ಕ್ರಿಯಾಶೀಲರು ಮತ್ತು ಸಜ್ಜನರಾಗಿದ್ದಾರೆ. ಇದರ ಜೊತೆಗೆ ಶಿಸ್ತಿನಿಂದ ಕೆಲಸ ಮಾಡುವ ಮಂತ್ರಿಗಳಲ್ಲಿ ಇವರೂ ಒಬ್ಬರಾಗಿದ್ದಾರೆ. ನಾನು ಈ ಮನೆಗೆ ಬಂದಾಗಿನಿಂದಲೂ ಅವರ ಪರಿಚಯ ನನಗಿದೆ. ಅವರ ತಂದೆಯವರ ಕಾಲದಿಂದಲೂ ಅವರನ್ನು ನಾನು ಬಲ್ಲೆ. ಶ್ರೀಯುತರುಗಳಾದ

ರಮೇಶ್‌ಕುಮಾರ್ ಮತ್ತು ನಾರಾಯಣಸ್ವಾಮಿಯವರ ಬಗ್ಗೆ ಹೇಳಬೇಕಾದರೆ, ಶ್ರೀ ನಾರಾಯಣಸ್ವಾಮಿಯವರು ಬೆಂಗಳೂರು ಮಹಾನಗರದ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿದ್ದವರು. ಅವರಿಗೆ ಬಹಳಷ್ಟು ಅನುಭವವಿದೆ. ಅವರು ಮತ್ತು ಮಾನ್ಯ ರಮೇಶ್‌ಕುಮಾರ್‌ರವರು ಸೇರಿಕೊಂಡು ಒಂದು ಒಳ್ಳೆಯ ವರದಿಯನ್ನು ಸಕಾಲದಲ್ಲಿ ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ತಿದ್ದುಪಡಿ ವಿಧೇಯಕವನ್ನು ರದ್ದುಗೊಳಿಸಿ ಅವರು ಕೊಟ್ಟಿರುವ ವರದಿಯನ್ನೇ ಸಂಪೂರ್ಣವಾಗಿ ಸದನದ ಮುಂದಿಡಬಹುದಾಗಿತ್ತು. ಆ ವರದಿಯನ್ನು ಇಟ್ಟಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ನಾನದನ್ನು ಓದಿದ್ದೇನೆ. ಹಿಂದೆ ಇದ್ದುದ್ದನ್ನು ಸಂಪೂರ್ಣವಾಗಿ repeal ಮಾಡಿ ಅದೇ ವರದಿಯನ್ನು ಮಾಡಿ ಇಟ್ಟಿದ್ದರೆ ತಿದ್ದುಪಡಿಯೇ ಬೇಕಾಗಿರಲಿಲ್ಲ. ಅದನ್ನು ನಮ್ಮ ಮುಂದೆ ಇಡಬಹುದಾಗಿತ್ತು. ಯಾವುದೋ ಕಾರಣಕ್ಕಾಗಿ ಅದನ್ನು ಇಡಲಿಲ್ಲ. ಆದರೂ ಸಹ ನಾನಿದನ್ನು ಸ್ವಾಗತ ಮಾಡುತ್ತೇನೆ. ಬಹಳಷ್ಟು ಉತ್ತಮ ಅಂಶಗಳಿದ್ದು ಮುಂದೆ ಏನಾದರೂ ಬಿಟ್ಟಿರುವ ಅಂಶಗಳನ್ನು ಸೇರಿಸುತ್ತಾರೆ ಎನ್ನುವಂಥ ನಂಬಿಕೆಯೂ ಸಹ ನಮಗೆ ಸರ್ಕಾರದ ಮೇಲಿದೆ. ಇದು ಮೊಟ್ಟಮೊದಲ ಬಾರಿಗೆ ಬಿಜೆಪಿ ಯವರ ಬೆಂಬಲದಿಂದ ಆಗಿರುವಂಥ, ಮುಖ್ಯಮಂತ್ರಿಗಳಾಗಿದ್ದಂಥ ಶ್ರೀ ರಾಮಕೃಷ್ಣ ಹೆಗಡೆಯವರು, ಅವರ ಜಿಲ್ಲೆಯವರೇ ಆದಂಥ ನಜ಼ೀರ್ ಸಾಹೇಬರ ಕಾಲದಲ್ಲಿ ಇದು ಆಯಿತು. ನಜ಼ೀರ್ ಸಾಹೇಬರು 'ನೀರು ಸಾಬ್' ಎಂದೇ ಪ್ರಸಿದ್ಧರಾಗಿದ್ದರು. ಆವತ್ತು ಮೊಟ್ಟ ಮೊದಲ ಬಾರಿಗೆ ಇಡೀ ರಾಜ್ಯದಲ್ಲಿ ಬೋರ್‌ವೆಲ್‌ಗಳನ್ನು ಹಾಕುವುದಕ್ಕೆ ಪ್ರಾರಂಭ ಮಾಡಿದರು. 1987ರಲ್ಲಿ ಆಗಿದ್ದು ಎಂದು ಸಚಿವರಾದ ಡಾ॥ ಹೆಚ್.ಸಿ. ಮಹದೇವಪ್ಪನವರು ಹೇಳುತ್ತಿದ್ದಾರೆ. ಆದರೆ ಆ ಚಿಂತನೆ ನಜ಼ೀರ್ ಸಾಹೇಬರ ಕಾಲದಲ್ಲಿಯೇ ಆಯಿತು ಎಂದು ಈಗ ತಾನೆ ಹೇಳಿದರು. ನಜ಼ೀರ್ ಸಾಹೇಬರ್ ಕಾಲದಲ್ಲಿ ಆಯಿತು, ಆಗ ಬಿಜೆಪಿಯ 18 ಜನ ಶಾಸಕರ ಬೆಂಬಲವಿತ್ತು, ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು ಮತ್ತು ಆ ಮಂತ್ರಿಮಂಡಲದಲ್ಲಿ ಮಾನ್ಯ ಸಿದ್ದರಾಮಯ್ಯನವರು ಸಹ ಮಂತ್ರಿಗಳಾಗಿದ್ದರು ಎನ್ನುವುದು ನನ್ನ ಭಾವನೆ. ಇವತ್ತು ಈ ಒಂದು ತಿದ್ದುಪಡಿಗೆ ಒಂದು ಷರತ್ತಿನ ಮೇಲೆ ನಾವು ಬೆಂಬಲವನ್ನು ಕೊಡುತ್ತೇವೆ. ಇದರಲ್ಲಿ ಬಿಟ್ಟು ಹೋಗಿರತಕ್ಕಂಥ ಅನೇಕ ಅಂಶಗಳಿವೆ. ಮುಂದಿನ ಅಧಿವೇಶನದಲ್ಲಿ ಅದನ್ನು ತೆಗೆದುಕೊಂಡು ಬರುತ್ತಾರೆಂಬ ಭರವಸೆಯನ್ನು ಸರ್ಕಾರ ಕೊಟ್ಟರೆ, ನಾವು ಈ ವಿಧೇಯಕಕ್ಕೆ ಬೆಂಬಲವನ್ನು ಕೊಡುವುದಕ್ಕೆ ತಯಾರಿದ್ದೇವೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2015 ನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮಂಡಿಸಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಹೇಳುತ್ತೇನೆ. ಏಕೆಂದರೆ ಮೊನ್ನೆಯ ದಿವಸ ಬಜೆಟ್ ಬಗ್ಗೆ ಮಾತನಾಡುವಾಗ ನಾವು ಹೇಳಿದೆವು. ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ, ಆಸಕ್ತಿ ಇದ್ದರೆ, ಇದೇ ಅಧಿವೇಶನದಲ್ಲಿ ಇದನ್ನು ಮಂಡಿಸಬೇಕು ಎನ್ನುವಂಥ ಮಾತನ್ನು ಹೇಳಿದೆವು. ಸರ್ಕಾರ ಅದನ್ನು ಸವಾಲಾಗಿ ತೆಗೆದುಕೊಂಡಿದೆ ಎಂದು ನಾವೆಲ್ಲಾ ಭಾವಿಸುತ್ತೇವೆ ಮತ್ತು ಈ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2015 ನ್ನು ಮಂಡಿಸಿದ್ದಕ್ಕಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ನಮಗೆ ಇರುವಂಥ ಒಂದು ಆತಂಕವೇನೆಂದರೆ, ಶ್ರೀಯುತ ರಮೇಶ್ ಕುಮಾರ್ ಅವರ ವರದಿಯನ್ನು ತಿದ್ದುಪಡಿಯಾಗಿ ನಾವು ಮಂಡಿಸುತ್ತೇವೆ ಎನ್ನುವಂಥ ಮಾತನ್ನು ಸರ್ಕಾರ ಹೇಳಿತ್ತು, ಆ ವರದಿಯನ್ನು ಯಥಾವತ್ತಾಗಿ ಸದನದಲ್ಲಿ ಮಂಡಿಸುತ್ತೇವೆಂದು ಸರ್ಕಾರ ಹೇಳಿತ್ತು. ಆದರೆ ರಮೇಶ್ ಕುಮಾರ್ ವರದಿಯ ಎಷ್ಟು ಅಂಶಗಳನ್ನು ವಿಧೇಯಕದಲ್ಲಿ ಅಳವಡಿಸಲಾಗಿದೆ ಎಂಬುದು ಚರ್ಚೆಗೆ ಬರಬಹುದು ಎಂದು ನಾನು ಅಂದುಕೊಂಡಿದ್ದೇನೆ. ಸರ್ಕಾರವೇ ಹೇಳಿರುವಂತೆ ಮತ್ತು ರಮೇಶ್ ಕುಮಾರ್ ವರದಿಯನ್ನು ನಾವೆಲ್ಲರೂ ಅಧ್ಯಯನ ಮಾಡಿರುವಂತೆ ಸುಮಾರು 88 ಕ್ಕೂ ಹೆಚ್ಚು ವಿಷಯಗಳನ್ನು ಶಿಫಾರಸ್ಸು ಮಾಡಿದ್ದಾರೆ. ಶ್ರೀ ರಮೇಶ್ ಕುಮಾರ್ ವರದಿಯನ್ನು ನಾವೆಲ್ಲರೂ ಮೆಚ್ಚುವುದು ಏಕೆಂದರೆ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಎಲ್ಲಾ 178 ತಾಲ್ಲೂಕುಗಳಿಗೆ ಭೇಟಿ ಕೊಟ್ಟು, ಎಲ್ಲಾ 30 ಜಿಲ್ಲೆಗಳಿಗೆ ಭೇಟಿಯನ್ನು ಕೊಟ್ಟು ಸಮಾಜದ ಕೊನೆಯ ಮನುಷ್ಯರನ್ನು ಮಾತನಾಡಿಸಿ; ಗ್ರಾಮ ಪಂಚಾಯ್ತಿ ಸದಸ್ಯರು, ಜಿಲ್ಲಾ ಪಂಚಾಯತ್ ಸದಸ್ಯರ ಜೊತೆಗೆ ಚರ್ಚೆ ಮಾಡಿ, ಆ ಎಲ್ಲಾ ರಾಜಕೀಯ ಪಕ್ಷದವರ ಜೊತೆಗೆ ಚರ್ಚೆ ಮಾಡಿ ಅತ್ಯಂತ ಅರ್ಥಪೂರ್ಣವಾಗಿ, ಅಧ್ಯಯನಪೂರ್ಣವಾಗಿ ಒಂದು ಅವಿಶ್ವಾಸ ಗೊತ್ತುವಳಿ ವಿಷಯಕ್ಕೆ ಸಂಬಂಧಪಟ್ಟಂತೆ ಮೂರು ದಿವಸಗಳ ಕಾಲ ಚರ್ಚೆ ಮಾಡಿ ಒಂದು ತಾರ್ಕಿಕ ರೂಪವನ್ನು ಕೊಟ್ಟು ಮಾಡಿರುವಂಥ ಅಪರೂಪದ ವರದಿ ಎನ್ನುವಂಥ ಕಾರಣಕ್ಕಾಗಿ ನಾವು ರಮೇಶ್ ಕುಮಾರ ವರದಿಯನ್ನು ನೀವು ಯಥಾವತ್ತಾಗಿ ಜಾರಿಗೆ ತರಬೇಕೆಂದು ಮತ್ತು ಅದು ತಿದ್ದುಪಡಿಯಾಗಿ ರೂಪುಗೊಳ್ಳಬೇಕೆಂದು ವಿಪಕ್ಷದಲ್ಲಿದ್ದರೂ ಸಹ ನಾವು ಒತ್ತಾಯವನ್ನು ಮಾಡುತ್ತಿದ್ದೇವೆ. ಆದರೆ 88 ವಿಷಯಗಳನ್ನು ಉಲ್ಲೇಖ ಮಾಡಿ ಶಿಫಾರಸ್ಸು ಮಾಡಿರುವಂಥ ರಮೇಶ್ ಕುಮಾರ್ ವರದಿಯಲ್ಲಿ ಸರ್ಕಾರ ತಂದಿರುವಂಥಾದ್ದು ಕೇವಲ 4 ವಿಚಾರಗಳು ಮಾತ್ರ. ಸರ್ಕಾರದವರು 5 ವಿಚಾರವೆಂದು ಹೇಳುತ್ತಿದ್ದಾರೆ, ಅದನ್ನು ನೋಡುತ್ತೇನೆ. ಆದರೆ

ಈ 5 ವಿಚಾರಗಳಿಗೋಸ್ಕರ ಶ್ರೀ ರಮೇಶ್ ಕುಮಾರ್ ವರದಿಯನ್ನು ಯಥಾವತ್ತಾಗಿ ತಂದಿದ್ದೇವೆ ಎನ್ನುವಂಥ ತಿದ್ದುಪಡಿಯನ್ನು ಸರ್ಕಾರ ಮಂಡಿಸಬೇಕಾಗಿತ್ತಾ ಎನ್ನುವುದು ನಮಗಿರುವಂಥ ಪ್ರಶ್ನೆ.

**ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೆ, ತಪ್ಪು ಸಂದೇಶ ಅನುಭವಸ್ಥರಾದ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ತಿಳಿವಳಿಕೆ ಇರುವಂಥ ಮಾನ್ಯ ಸದಸ್ಯರಿಂದ ಹೋಗಬಾರದು ಎನ್ನುವುದಕ್ಕೆ ನಾನು ಮಧ್ಯದಲ್ಲಿ ಮಾತನಾಡುತ್ತಿದ್ದೇನೆ. ಮಾನ್ಯ ರಮೇಶ್ ಕುಮಾರ್ ವರದಿಯಲ್ಲಿರುವಂಥ ಅಂಶವೂ ಸಹ ಇದರಲ್ಲಿದೆ. ನಾನು ಇದನ್ನು ನನ್ನ ಮಾತಿನಲ್ಲಿಯೇ ಸ್ಪಷ್ಟ ಮಾಡಿದೆ. ಸನ್ಮಾನ್ಯ ಟಿ.ಬಿ. ಜಯಚಂದ್ರರವರು, ಸನ್ಮಾನ್ಯ ಮಹದೇವಪ್ಪನವರು, ನಮ್ಮ ಸಬ್–ಕಮಿಟಿ ಫಾರ್ಮೇಶನ್ ಆಗಿದ್ದು, ಸಬ್–ಕಮಿಟಿಯಲ್ಲಿ ಏನು ಅನುಭವಸ್ಥರಿದ್ದಾರೆ ಅವರು ಕಡ್ಡಾಯ ಮತದಾನದ ಬಗ್ಗೆ ಪ್ರಸ್ತಾಪ ಮಾಡಿದರು. NOTA evolution ಬಗ್ಗೆ ಪ್ರಸ್ತಾಪವನ್ನು ಮಾಡಿದರು. ಆದ್ದರಿಂದ ನಮ್ಮ participatory democracy ಏನಿದೆ, ಅದನ್ನು ಯಶಸ್ವಿ ಮಾಡುವುದಕ್ಕೆ ನಮ್ಮ ಸಬ್–ಕಮಿಟಿಯಲ್ಲಿ ಚರ್ಚೆ ಮಾಡಿದ್ದರು. ಇದೆಲ್ಲವನ್ನು ನಾನು ಪ್ರಸ್ತಾಪ ಮಾಡಿದೆ. ಈ ಬಗ್ಗೆ ಅವರು ಮೊದಲನೆಯ ಪ್ಯಾರಾವನ್ನು ಓದಬಹುದು. ಆದ್ದರಿಂದ ರಮೇಶ್ ಕುಮಾರ್ ವರದಿ ಪ್ರಕಾರವೇ ಮಾಡಿದ್ದೇವೆಂದು ನಾವು ಎಲ್ಲಿಯೂ ಸಹ ಹೇಳಿಲ್ಲ ಮತ್ತು ಸರ್ಕಾರ ಆ ರೀತಿ ಹೇಳುವುದು ಇಲ್ಲ. ಅವರು ಹೇಳಿದ್ದನ್ನು ಗಂಭೀರವಾಗಿ ಗಮನಿಸಿಕೊಂಡು ಆ ಅಂಶಗಳನ್ನು ಸಹ ತೆಗೆದುಕೊಂಡಿದ್ದೇವೆ. ಅವರು ಕೊಟ್ಟಿರತಕ್ಕಂಥ ವರದಿಯನ್ನು ನಾವು ಮತ್ತೆ ಇನ್ನೇನು ಸಮಗ್ರವಾದ ವರದಿಯಲ್ಲಿ ತರಬೇಕಾಗಿದೆ, ಆ ಸಂದರ್ಭದಲ್ಲಿ ಅದನ್ನು ತರುತ್ತೇವೆ. ಆದರೆ ಅದಲ್ಲದೇ ಬೇರೆ ವಿಷಯಗಳು ಸಹ ಇವೆ. ಕಡ್ಡಾಯ ಮತದಾನದಂಥ ವಿಚಾರಗಳು ಇರುವುದುನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಗೌರವಾನ್ವಿತ ಮಂತ್ರಿಗಳು ತುಂಬಾ ಅಧ್ಯಯನ್ನು ಮಾಡಿದವರು. ನಾನು ಅತ್ಯಂತ ಪ್ರೀತಿಸುವ, ಗೌರವಿಸುವ ಮತ್ತು ನಾನೇ ಈ ಸದನದಲ್ಲಿ ಹೇಳಿದಂತೆ ಈಗಿರುವ ಮಂತ್ರಿ ಮಂಡಲದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗೆ ಎಚ್.ಕೆ. ಪಾಟೀಲರಿಗಿಂತ ಹೆಚ್ಚು ಸಮರ್ಥರು ಕರ್ನಾಟಕದಲ್ಲಿ ಇಲ್ಲವೆಂದು ಹೇಳಿದ್ದೆ. ಹಾಗಾಗಿ ಮಧ್ಯದಲ್ಲಿ ಇದನ್ನು ಏಕೆ ತಪ್ಪು ತಿಳಿದುಕೊಳ್ಳುತ್ತಾರೋ ನನಗೆ ಗೊತ್ತಿಲ್ಲ. ನನ್ನ ಉಲ್ಲೇಖ ಇರುವುದು ಏನೆಂದರೆ, ಪಂಚಾಯತ್ ರಾಜ್ ಕಾಯ್ದೆ ತಿದ್ದುಪಡಿಗೆ ಸಂಬಂಧಪಟ್ಟಂತೆ ರಮೇಶ್ ಕುಮಾರ್‌ರವರ ವರದಿಯಲ್ಲಿರುವಂಥ ವಿಷಯಗಳು ಅಳವಡಿಕೆಯಾಗಿದೆ ಎಂಬ ವಿಚಾರದಲ್ಲಿ, 88 ಶಿಫಾರಸ್ಸುಗಳಲ್ಲಿ ಕೇವಲ 4 ವಿಚಾರಗಳನ್ನು ಮಾತ್ರ

ಮಾಡಿದ್ದಾರೆ. ಕಡ್ಡಾಯ ಮತದಾನ ಎನ್ನುವುದು ಇವರು ಸೇರಿಸಿರುವಂಥಾದ್ದು. ನಾನು ಇಲ್ಲವೆಂದು ಹೇಳಿಲ್ಲ. ಕೇವಲ 4 ವಿಷಯಗಳಿಗೆ ಸೀಮಿತಗೊಳಿಸಿ, ಈ ಪಂಚಾಯತ್ ರಾಜ್ ವಿಧೇಯಕವನ್ನು ಮಾಡುವುದಕ್ಕಿಂತ ರಮೇಶ್ ಕುಮಾರ್‌ರವರ ವರದಿಯನ್ನು ಯಥಾವತ್ತಾಗಿ ಮಂಡನೆ ಮಾಡಲಿಕ್ಕೆ ಸರ್ಕಾರಕ್ಕೆ ಇರುವಂಥ ತೊಡಕುಗಳೇನು? ಮಾನ್ಯ ಸಚಿವರು ಕಡ್ಡಾಯ ಮತದಾನದ ಬಗ್ಗೆ ಹೇಳಿದರು. ಪ್ರಜಾಪ್ರಭುತ್ವದಲ್ಲಿ ಅನೇಕ ಬಾರಿ ಕೂಲಿ ಮಾಡುವವರ ಕತೆ ಬಿಡಿ, ಪತ್ರಿಕೆಯನ್ನು ಓದುವವರು, ಬಹಳ ಬುದ್ಧಿಜೀವಿಗಳೆಲ್ಲಾ ದೇಶದಲ್ಲಿ ಇಂತಹವರು ಪ್ರಧಾನ ಮಂತ್ರಿಯಾಗಬೇಕು, ಇಂತಹವರು ಮುಖ್ಯಮಂತ್ರಿಯಾಗಬೇಕು, ಇಂತಿಂಥ ಕಾಯ್ದೆ–ಕಾನೂನು ಜಾರಿಗೆ ಬರಬೇಕೆಂದು ಹೇಳಿ, ಚುನಾವಣೆಯ ದಿವಸ ಯಾವುದೋ ಊಟಕ್ಕೆ ಹೋಗಿಬಿಡುತ್ತಾರೆ. ಅವರಿಗೂ ಸಹ ಪ್ರಜಾಪ್ರಭುತ್ವದ ಬಗ್ಗೆ ಜಾಗೃತಿ ಬೇಕಲ್ಲಾ.

ಕಡ್ಡಾಯ ಮತದಾನದ ಬಗ್ಗೆ ಹೇಳುವುದಾದರೆ, ಪರ ಮತ್ತು ವಿರೋಧ ಎನ್ನುವುದಕ್ಕಿಂತ ನನ್ನದು ಸಹಮತವಿದೆ. ಅದನ್ನು ನಾನು ಒಪ್ಪಿಕೊಂಡೆ, ಅದರಲ್ಲಿ ಏನೂ ತೊಂದರೆಯಿಲ್ಲ. ಇನ್ನುಳಿದಂತೆ 4 ವಿಚಾರಗಳನ್ನು ರಮೇಶ್ ಕುಮಾರ್‌ರವರ ವರದಿಯಲ್ಲಿದ್ದಂಥಾದ್ದನ್ನು ಅಳವಡಿಕೆ ಮಾಡಿದ್ದಾರೆ. ಮೊದಲನೆಯದಾಗಿ ಮೀಸಲಾತಿಯನ್ನು ಎರಡು ಅವಧಿಗೆ ಮಂಡಿಸಬೇಕು. ಇದು ಸರಿ ಇದೆ. ನಾವು ಯಾವಾಗಲೂ ಚರ್ಚೆ ಮಾಡುತ್ತಿದ್ದೆವು. ರಮೇಶ್ ಕುಮಾರ್‌ರವರ ವರದಿಯಲ್ಲಿರುವ ಕೆಲವು ವಿಚಾರಗಳು ಅಳವಡಿಕೆಯಾಯಿತು ಎನ್ನುವುದು ಬಿಟ್ಟರೆ ಈ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಂಬಿಕೆ ಇರುವವರೆಲ್ಲರೂ ಹೇಳುತ್ತಿದ್ದರು. ಜಿಲ್ಲಾ ಪಂಚಾಯತ್‌ಗೆ ಒಬ್ಬ ಚುನಾವಣೆಗೆ ನಿಲ್ಲುತ್ತಾನೆ, ಬರುವ ಸಾರಿ ಮೀಸಲಾತಿ ಬದಲಾಗುವುದರಿಂದ ಅವನಿಗೆ ಅಲ್ಲಿ ಚುನಾವಣೆಗೆ ನಿಲ್ಲಬೇಕೆಂಬ ಆಶಯವಿಲ್ಲ. ಹಾಗಾಗಿ ಅವನು ಜವಾಬ್ದಾರಿಯಿಂದ ಕೆಲಸವನ್ನು ಮಾಡುತ್ತಿಲ್ಲ. ಅದಕ್ಕೋಸ್ಕರ ಎರಡು ಬಾರಿ ಮೀಸಲಾತಿಯನ್ನು ತರಬೇಕೆಂಬುದನ್ನು ರಮೇಶ್ ಕುಮಾರ್ ವರದಿ ಹೊರತಾಗಿ ಅನೇಕರು ಹೇಳುವಂಥಾದ್ದು. ಅಧಿಕಾರಿ ವರ್ಗದಲ್ಲಿಯೂ ಸಹ ಇದು ಚರ್ಚೆಗೆ ಬರುತ್ತದೆ. ಇನ್ನು ಅಧ್ಯಕ್ಷರ ಅವಧಿ 5 ವರ್ಷಗಳು. ಅಧ್ಯಕ್ಷರ ಹುದ್ದೆ ಎನ್ನುವಂಥಾದ್ದನ್ನು ನಾಳೆಯ ದಿವಸ ಅಧ್ಯಕ್ಷರ ಚುನಾವಣೆ ಎಂದರೆ ಇವತ್ತು ಒಂದಷ್ಟು ಜನ ಸೇರುತ್ತಾರೆ. ಅವರಲ್ಲಿ ಒಬ್ಬ ಈ ಗೊಂದಲ ಏನೂ ಇಲ್ಲ, ನನ್ನ ಹೆಂಡತಿಯನ್ನು ಅಧ್ಯಕ್ಷರನ್ನಾಗಿ ಮಾಡುವುದಾದರೆ ಎಲ್ಲರಿಗೂ ಇಂತಿಷ್ಟು ಎಂದು ಕೊಡುತ್ತೇನೆ ಅಥವಾ ಬೇರೆಯವರು ಅಧ್ಯಕ್ಷರಾಗುವುದಾದರೆ ಅದಕ್ಕಿಂತ ಜಾಸ್ತಿ ಕೊಡುವುದಾದರೆ ಮತವನ್ನು ಹಾಕುತ್ತೇನೆಂದು ಹೇಳುತ್ತಾರೆ. ಆ ಮಟ್ಟಕ್ಕೆ ಈ ಒಂದು ಚುನಾವಣೆ ಬಂದು ಬಿಟ್ಟಿದೆ. ನಾನು ಯಾವುದೇ ಒಂದು ರಾಜಕೀಯ ಪಕ್ಷದ ಬಗ್ಗೆ ಹೇಳುತ್ತಿಲ್ಲ. ಮೊಟ್ಟಮೊದಲನೆಯದಾಗಿ ಇದನ್ನು ನಿಯಂತ್ರಣ ಮಾಡಲೇಬೇಕಾಗಿದೆ. ಅಧ್ಯಕ್ಷರ ಅವಧಿಯನ್ನು 5 ವರ್ಷಗಳಿಗೆ

ಸೀಮಿತಗೊಳಿಸುವಂಥಾದ್ದು ಸರಿ ಇದೆ. ಅದರಲ್ಲಿರುವಂಥ ಚರ್ಚೆಗಳು ಬೇರೆ. ಮಹಿಳೆಯರಿಗೆ ಶೇಕಡಾ 50ರಷ್ಟು ಮತ್ತು ಅವಿಶ್ವಾಸ ಗೊತ್ತುವಳಿಗೆ ಒಂದಷ್ಟು ಸೂತ್ರಗಳನ್ನು ಅಳವಡಿಕೆ ಮಾಡಲಾಗಿದೆ. ಈ ನಾಲ್ಕನ್ನು ಬಿಟ್ಟು ಅತ್ಯಂತ ಕ್ರಾಂತಿಕಾರಿಯಾದಂಥ, ಪಂಚಾಯತ್ ರಾಜ್ ವ್ಯವಸ್ಥೆಗೆ ಅತ್ಯಂತ ಪೂರಕವಾದಂಥ ಸಮಾಜದ ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಡುವಂಥ ಯಾವುದಾದರೂ ಒಂದು ವಿಚಾರವು ಸಹ ರಮೇಶ್ ಕುಮಾರ್‌ರವರ ವರದಿಯಲ್ಲಿ ಇರಲಿಲ್ಲವೇ? ಸರ್ಕಾರವು ಗಮನಿಸಿರುವ ಹಾಗೆ ಅದರಲ್ಲಿ 88 ವಿಷಯಗಳಿವೆ. ಈಗ ರಮೇಶ್ ಕುಮಾರ್‌ರವರ ವರದಿಯನ್ನು ಅನುಷ್ಠಾನಕ್ಕೆ ತರಲು ಸಮಯದ ತೊಂದರೆ ಇದೆ ಎನ್ನುತ್ತಾರೆ.

ರಮೇಶ್ ಕುಮಾರ್ ವರದಿಯನ್ನು ಮಂಡನೆ ಮಾಡಿ ಸುಮಾರು 6 ತಿಂಗಳಿಗೂ ಹೆಚ್ಚು ಸಮಯವಾಗಿದೆ ಎಂದು ನಿಮಗೆ ಅನ್ನಿಸುವುದಿಲ್ಲವೇ? ರಮೇಶ್ ಕುಮಾರ್‌ರವರ ವರದಿ ಹೆಸರಿನ ಮೇಲೆ ಇವತ್ತು ಮಂಡಿಸುತ್ತಿರುವ ಈ ಪಂಚಾಯತ್ ರಾಜ್ ವಿಧೇಯಕ ಇದೆಯಲ್ಲಾ, ಇದು ಒಂದು ರೀತಿ 'ಎಲುಬಿಲ್ಲದ ಅದ್ಭುತ' ಅಥವಾ 'ಹಲ್ಲಿಲ್ಲದ ಹಾವು' ಎಂದು ಕರೆಯುತ್ತೇವಲ್ಲಾ ಅದಕ್ಕೆ ಇದು ಸಮನಾಗಿರುತ್ತದೆ. ಇದನ್ನು ನಾವು ಟೀಕೆಗೋಸ್ಕರ ಹೇಳಿದ್ದಲ್ಲ. 'ಇದು ಸರಿ' ಎಂದು ಅವರು ಹೇಳಿದರೆ, ಹೌದು ಎಂದಾದರೆ ನಾನದನ್ನು ಒಪ್ಪಿಕೊಳ್ಳುತ್ತೇನೆ. ವಾಸ್ತವಿಕವಾಗಿ ನಮ್ಮೆಲ್ಲರ ನಿರೀಕ್ಷೆ ಏನಾಗಿತ್ತು, ಕರ್ನಾಟಕ ರಾಜ್ಯದಲ್ಲಿರುವಂಥ 93,000 ಜನ ಗ್ರಾಮ ಪಂಚಾಯ್ತಿ ಸದಸ್ಯರು, 178 ತಾಲ್ಲೂಕು ಪಂಚಾಯ್ತಿಗಳು, 30 ಜಿಲ್ಲಾ ಪಂಚಾಯ್ತಿಗಳು ಸಹಿತ ಸುಮಾರು ಒಂದು ಲಕ್ಷ ಜನಪ್ರತಿನಿಧಿಗಳು ಅವರು ಯಾವುದೇ ಪಕ್ಷದಲ್ಲಿರಲಿ, ಅವರೆಲ್ಲರ ನಿರೀಕ್ಷೆ ಏನಾಗಿತ್ತು ಎಂದರೆ, ಕ್ರಾಂತಿಕಾರಿ ರಮೇಶ್ ಕುಮಾರ್‌ರವರ ವರದಿ ಜಾರಿಗೆ ತರುವಂಥ ಸರ್ಕಾರ ಎಂದಿತ್ತು. ಆದರೆ ಇವತ್ತು ಏನಾಗಿದೆ, ಕೇವಲ ಈ ನಾಲ್ಕು ವಿಚಾರಗಳನ್ನು ಬಿಟ್ಟು ಯಾವುದೇ ವಿಚಾರಗಳಿಗೆ, ಯಾವುದೇ ವಿಚಾರಗಳನ್ನು ತಂದಿಲ್ಲ. ಪ್ರತಿ ಗ್ರಾಮ ಪಂಚಾಯ್ತಿಗಳಲ್ಲಿಯೂ ಸಹ ಪೂರ್ಣ ಪ್ರಮಾಣದಲ್ಲಿ ಶೌಚಾಲಯಗಳನ್ನು ಮಾಡಬೇಕೆಂದು ಆದೇಶವನ್ನು ಕೊಟ್ಟರು. 3,000–5,000–6,000 ಇದ್ದುದನ್ನು ಒಂದು ಶೌಚಾಲಯಕ್ಕೆ 12,000 ರೂಪಾಯಿ ಕೊಡುತ್ತೇವೆಂದು ಹೇಳಿ, ಕಡ್ಡಾಯವಾಗಿ ಶೌಚಾಲಯಗಳನ್ನು ನಿರ್ಮಿಸಬೇಕೆಂದು ಆದೇಶವನ್ನು ಕೊಟ್ಟರು. ಇದನ್ನು ನೋಡಿದಾಗ ನಮಗೆ ಅದ್ಭುತ ಎನಿಸಿಬಿಟ್ಟಿತು. ಅನೇಕ ಕಡೆಗಳಲ್ಲಿ ಸ್ವಯಂಪ್ರೇರಿತರಾಗಿ ಜನ ಶೌಚಾಲಯಗಳನ್ನು ನಿರ್ಮಾಣ ಮಾಡಿದರು. ರಮೇಶ್ ಕುಮಾರ್ ವರದಿ ಏನನ್ನು ಹೇಳುತ್ತದೆ ಎಂದರೆ, ಕರ್ನಾಟಕ ರಾಜ್ಯದ ಒಟ್ಟು ಬಜೆಟ್‌ನ ಶೇಕಡಾ 30ರಷ್ಟು ಹಣವನ್ನು ಪಂಚಾಯತ್ ರಾಜ್ ಸಮಿತಿಗಳಿಗೆ ಮೀಸಲಿಡಬೇಕೆಂದು ಹೇಳುತ್ತದೆ. ಸ್ವಲ್ಪ ಹೆಚ್ಚು–ಕಡಿಮೆ ಇರಬಹುದು. ಹಾಗೊಂದು ವೇಳೆ ಆಗಿದ್ದರೆ, ಇವತ್ತು ಶೌಚಾಲಯಗಳಿಗೆ ಸರ್ಕಾರದ ಎದುರು ಭಿಕ್ಷೆ ಬೇಡುವಂಥ ಪರಿಸ್ಥಿತಿ ಹೋಗುತ್ತಿತ್ತಲ್ಲ; ಆ ಗ್ರಾಮ ಪಂಚಾಯ್ತಿಯಲ್ಲಿ ತಕ್ಷಣವೇ ಚೆಕ್‌ನ್ನು ವಿತರಿಸುತ್ತಿದ್ದರಲ್ಲಾ. ಇನ್ನು ಈ 73ನೇ

ತಿದ್ದುಪಡಿಯಾದ ನಂತರವೂ ಸಹ ಶೌಚಾಲಯದ ಚೆಕ್‌ನ್ನು ಮಾನ್ಯ ಮಂತ್ರಿಗಳೇ ಕೊಡಬೇಕೆಂದು ಸರ್ಕಾರಕ್ಕೆ ಅನ್ನಿಸುತ್ತದೆಯೇ? ಶೌಚಾಲಯದ ಚೆಕ್‌ನ್ನು ಶಾಸಕರೇ ಕೊಡಬೇಕೆಂದು ಅನ್ನಿಸುತ್ತದೆಯೇ? ಅದನ್ನು ನಮ್ಮ ಗ್ರಾಮ ಪಂಚಾಯ್ತಿ ಅಧ್ಯಕ್ಷರು ಕೊಡಬಾರದಾ; ಹಾಗಿದ್ದರೆ ಅವನಿಗೆ ಹಣ ಹರಿದು ಹೋಗಬಾರದಾ? ಇವತ್ತಿನ ಸ್ಥಿತಿ ಏನು? ಗ್ರಾಮ ಪಂಚಾಯ್ತಿಗಳು, ತಾಲ್ಲೂಕು ಪಂಚಾಯ್ತಿಗಳು ಮತ್ತು ಜಿಲ್ಲಾ ಪಂಚಾಯ್ತಿಗಳು ಭಿಕ್ಷಾ ಕೇಂದ್ರಗಳಾಗಿವೆ ಎಂದು ಸತ್ಯ ಗೊತ್ತಿದ್ದವರಿಗೆ ಅನ್ನಿಸುವುದಿಲ್ಲವೇ? ಎಲ್ಲರೂ ಅದರಲ್ಲಿ ಭಾಗಿಗಳಾಗಿರಬಹುದು. ಒಂದು ಗ್ರಾಮ ಪಂಚಾಯ್ತಿಗೆ 12 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಈ ಸರ್ಕಾರ 2 ಲಕ್ಷ ರೂಪಾಯಿಯನ್ನು ಹೆಚ್ಚು ಮಾಡಿದರು. ನಮ್ಮ ಸರ್ಕಾರವಿದ್ದಾಗ 10 ಲಕ್ಷ ರೂಪಾಯಿಗಳನ್ನು ಕೊಡುತ್ತಿತ್ತು. ಶೇಕಡಾ 40ರಷ್ಟು ಸಿಬ್ಬಂದಿಗಳಿಗೆ ಮತ್ತು ಶೇಕಡಾ 60ರಷ್ಟು ವಿದ್ಯುತ್ ಬಿಲ್‌ಗೆ ಕೊಡಿ ಎಂದು ಸರ್ಕಾರದ ಸುತ್ತೋಲೆ ಇದೆ. ಈ ಹಣವನ್ನು ಯಾರು ಖರ್ಚು ಮಾಡಬೇಕು? ಹಾಗಿದ್ದರೆ ರಮೇಶ್ ಕುಮಾರ್ ವರದಿಯ ಪ್ರಕಾರ ಬಜೆಟ್‌ನ ಹಣ ನೇರವಾಗಿ ಗ್ರಾಮ ಪಂಚಾಯ್ತಿಗೆ ಹರಿದು ಬಂದಿದ್ದು ಇದ್ದರೆ, ಸ್ವಂತ ಸರ್ಕಾರದಿಂದ ಕೆಲಸ ಮಾಡಲಿಕ್ಕೆ ಸಾಧ್ಯವಿತ್ತು ಅಲ್ಲವೇ? ಇದು ಏಕೆ ಆಗಲಿಲ್ಲ? ಮಾನ್ಯ ಹೆಚ್.ಕೆ. ಪಾಟೀಲರೇ ನನಗೆ ನಿಮ್ಮ ಬಗ್ಗೆ ಅನುಕಂಪ ಇದೆ; ಎಷ್ಟು ಗೌರವ ಇದೆಯೋ ಅಷ್ಟೇ ಅನುಕಂಪ ಇದೆ. ಬಹುಶಃ ಶಬ್ದ ಹೆಚ್ಚು-ಕಡಿಮೆಯಾದರೆ ಕ್ಷಮಿಸಬೇಕು. ಗೌರವ ಇದೆ ಎಂದು ಹೇಳುವುದು ನನ್ನ ಹಕ್ಕು, ಇದರ ಬಗ್ಗೆ ಅವರಿಗೆ ಆಕ್ಷೇಪ ಇರುವುದಿಲ್ಲ. ಅನುಕಂಪ ಇದೆ ಎಂದು ಏಕೆ ಹೇಳಿದಿರಿ ಎಂದು ಕೇಳುವುದು ಅವರ ಹಕ್ಕು. ಅದಕ್ಕೆ ನಾನು ಉತ್ತರ ಕೊಡಬೇಕಲ್ಲವೇ? ರಮೇಶ್‌ಕುಮಾರ್ ವರದಿಯನ್ನು ಯಥಾವತ್ತಾಗಿ ಜಾರಿಗೆ ತರಬೇಕು ಎಂದು ಹೇಳುವಂತಹ ವ್ಯಕ್ತಿ; ಅಂತಹ ಮನಸ್ಸು ಇರುವಂತಹ ವ್ಯಕ್ತಿ ಇಡೀ ಕರ್ನಾಟಕದಲ್ಲಿ ಯಾರಾದರೂ ಒಬ್ಬರು ಇದ್ದಾರೆ ಎಂದರೆ, ಅದು ಮಾನ್ಯ ಹೆಚ್.ಕೆ. ಪಾಟೀಲರು ಎಂದು ನಾನು ತಿಳಿದುಕೊಂಡಿದ್ದೇನೆ. ನಿಮಗೆ ಗೊತ್ತಿರಬೇಕು. ನಾವು ಸಣ್ಣವರಿದ್ದಾಗ ಮಾನ್ಯ ಘೋರ್ಪಡೆಯವರು ಪಂಚಾಯತ್ ಕಾಯಿದೆಯ ಅಡಿ 93ನೇ ಕರ್ನಾಟಕ ಪಂಚಾಯುತ್ ರಾಜ್ ಕಾಯಿದೆಯನ್ನು ತಂದಾಗ ಚುನಾವಣೆಯನ್ನು ಮುಂದೂಡುತ್ತೇವೆ ಎಂದು ಆಗಿನ ಸಚಿವ ಸಂಪುಟ ಹೇಳಿತು. ಆಗ ಘೋರ್ಪಡೆಯವರು ಕಣ್ಣಲ್ಲಿ ನೀರು ಸುರಿಸುತ್ತಾ, ಮುಖವನ್ನು ಕೆಂಪಗೆ ಮಾಡಿಕೊಂಡು ಸಚಿವ ಸಂಪುಟದಿಂದ ಹೊರನಡೆದರು ಎಂದು ಪತ್ರಿಕೆಯಲ್ಲಿ ಓದಿದ್ದೆವು. ಅವರು ಮಾನಸಿಕವಾಗಿ ಅಷ್ಟೊಂದು ನೊಂದಿದ್ದರು. ಆ ನೋವನ್ನು ಬಹುಶಃ ನೀವೂ ಅನುಭವಿಸಿದ್ದಿರೇನೋ ಎಂದೆನಿಸುತ್ತಿದೆ. ಹಾಗಾಗಿ ನಿಮ್ಮ ಬಗ್ಗೆ ನನಗೆ ಅನುಕಂಪ ಇದೆ. 'ಇಲ್ಲ' ಎಂದು ಹೇಳುವುದಾದರೆ ಅದಕ್ಕೆ ನನ್ನ ಆಕ್ಷೇಪ ಇಲ್ಲ.

**ಶ್ರೀ ಹೆಚ್.ಕೆ. ಪಾಟೀಲ್:-** ನೀವು 'ಅನುಕಂಪ' ಎಂದು ಹೇಳಿದಿರಿ, ಅದಕ್ಕೆ ಅವರು ಉತ್ತರ ಕೇಳಿದರು, ನೀವು ಉತ್ತರ ಕೊಟ್ಟಿರಿ. ಆವತ್ತಿನ ಸಂದರ್ಭಗಳು ನನಗೆ ಗೊತ್ತಿಲ್ಲ, ನಾನು ಅದನ್ನು ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ನಮ್ಮ ಮುಖ್ಯಮಂತ್ರಿಗಳು, ನಮ್ಮ ಶಾಸಕಾಂಗ ಪಕ್ಷ ಗಟ್ಟಿಯಾಗಿ, ಚುನಾವಣೆಗಳನ್ನು ಸರಿಯಾದ ಸಮಯಕ್ಕೆ ಮಾಡಿ ಎಂದು ಹೇಳಿತು. ಅದಕ್ಕೆ ನೀವು ಖುಷಿ ಪಡಬೇಕು. ಈ ಹಿನ್ನೆಲೆಯಲ್ಲಿ ನನ್ನ ಬಗ್ಗೆ ನಿಮಗೆ 'ಗರ್ವ' ಬರಬೇಕಾಗಿತ್ತು. 'ಅನುಕಂಪ' ಏಕೆ ಬಂತು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಗರ್ವ ಏಕೆ ಬರಬೇಕೋ ಗೊತ್ತಿಲ್ಲ, ಆದರೆ ಗೌರವ ಬಂದಿತ್ತು ಎಂದು ಹೇಳಿದೆ. ಅನುಕಂಪ ಏಕೆಂದರೆ, ಅವರ ಚಡಪಡಿಕೆ, ಅವರ ಸಂಕಟ, ಅವರ ನೋವು ನನಗೆ ಅರ್ಥವಾಗಿದೆ ಎಂದುಕೊಂಡೆ. ನನಗೆ ಅವರ ಬಗ್ಗೆ ಪ್ರೀತಿ-ಅನುಕಂಪ ಇದೆ, ಅವರ ಚಡಪಡಿಕೆ ನನಗೆ ಅರ್ಥವಾಗಿದೆ ಎಂದು ಹೇಳಿದೆ. ಇದರ ಬಗ್ಗೆ ನಾನು ವಾದ ಮಾಡುತ್ತಿಲ್ಲ. ನನಗೆ ಹಾಗೆ ಅನಿಸಿತ್ತು. ಅದು ಹಾಗಲ್ಲ ಎನ್ನುವುದಾದರೆ ಆ ಕುರಿತು ವಾದ ಮಾಡುವುದಿಲ್ಲ.

ಮಾನ್ಯ ಸಭಾಪತಿಗಳೆ, 88 ವಿಚಾರಗಳ ಪೈಕಿ 4ನ್ನು ತಂದಿದ್ದೀರಿ, 84 ವಿಚಾರಗಳು ಬಾಕಿ ಉಳಿದಿವೆ. ಅದರಲ್ಲಿ ಕೆಲವು ಕ್ರಾಂತಿಕಾರಕವಾದಂತಹ ವಿಚಾರಗಳನ್ನು ಮಂಡನೆ ಮಾಡಿದ್ದಾರೆ ಎನ್ನುವ ಮಾತನ್ನು ನಾನು ಹೇಳಿದೆ. ಅದರಲ್ಲಿ, "ಏಕಸದಸ್ಯ ಕ್ಷೇತ್ರ" ಒಂದು. 400-600 ಮತದಾರರಿರುವ ಕಡೆ ಒಂದು ಏಕ ಸದಸ್ಯರ ಕ್ಷೇತ್ರ ಮಾಡುತ್ತೇವೆ, ಆ ಮೂಲಕ ಒಬ್ಬ ವ್ಯಕ್ತಿ ಒಂದು ಕ್ಷೇತ್ರಕ್ಕೆ, ಈ ಗೊಂದಲವನ್ನು ಮುಕ್ತಾಯ ಮಾಡುತ್ತೇವೆ ಎಂದು ಹೇಳಿ ಮಾನ್ಯ ರಮೇಶ್‌ಕುಮಾರ್‌ರವರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿದ್ದಾರೆ. ಇದನ್ನು ತರುವುದಕ್ಕೆ ಏನು ತೊಂದರೆ ಇದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಆರ್ಥಿಕ ತೊಂದರೆಯೇ? ಇಲ್ಲಿ ಇಚ್ಛಾಶಕ್ತಿಯ ತೊಂದರೆ ಇದೆ.

"ನಕಾಶೆ ಚಟುವಟಿಕೆ" ಬಗ್ಗೆ ಹೇಳುವುದಾದರೆ 29 ವಿಷಯಗಳಿಗೆ ಸಂಬಂಧಪಟ್ಟಂತೆ ನಕಾಶೆ ಚಟುವಟಿಕೆ ಎಂದು ಏನು ಕರೆಯುತ್ತಿದ್ದೇವೆಯೋ ಅದನ್ನು 'ಜವಾಬ್ದಾ ರಿಚಟುವಟಿಕೆ' ಎಂದು ಹಾಕಬೇಕು. ಜವಾಬ್ದಾರಿ, ಹೊಣೆಗಾರಿಕೆ, ಕರ್ತವ್ಯ ಎಂದು ರಮೇಶ್‌ಕುಮಾರ್ ವರದಿ ಹೇಳಿತ್ತು. 29 ವಿಷಯಗಳಿಗೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವ ವಿಚಾರ ಮಾನ್ಯ ಹೆಚ್.ಕೆ. ಪಾಟೀಲರಿಗೆ ಗೊತ್ತಿರುವ ಹಾಗೆ ಈ ಸದನದಲ್ಲಿ ಬೇರೆ ಯಾರಿಗೂ ಗೊತ್ತಿಲ್ಲ. ಆದರೆ ಇವತ್ತು ಏನಾಗಿದೆ? ನಮ್ಮ ಗ್ರಾಮಪಂಚಾಯಿತಿಗೆ ಕೊಟ್ಟಿರುವ ಎಲ್ಲಾ ಅಧಿಕಾರಗಳನ್ನು ಪೂರ್ಣ ಪ್ರಮಾಣದಲ್ಲಿ ಕಸಿದುಕೊಳ್ಳಲಾಗಿದೆ. ನಾನು ಇದರ ಬಗ್ಗೆ ಯಾವಾಗಲೂ ವಾದ

ಮಾಡುತ್ತಿದ್ದೆ. ನಮ್ಮ ಅಂಗನವಾಡಿಗಳು ಗ್ರಾಮ ಪಂಚಾಯಿತಿಯಲ್ಲಿತ್ತು, ಅದನ್ನು ತೆಗೆದಿದ್ದೀರಿ. ನೀವು ತೆಗೆದದ್ದು ಅಲ್ಲ, ಹಿಂದಿನ ಸರ್ಕಾರ ತೆಗೆದಿತ್ತು, ಅಂದರೆ ನಮ್ಮ ಸರ್ಕಾರ ಇದ್ದಾಗಲ್ಲ, ಅದರ ಹಿಂದಿನ ಸರ್ಕಾರ ತೆಗೆದಿತ್ತು. ಗ್ರಾಮ ಗ್ರಂಥಾಲಯದ ಹಕ್ಕುಗಳು, ಶಾಲಾ ಅಭಿವೃದ್ಧಿ ಸಮಿತಿಗಳು ಗ್ರಾಮ ಪಂಚಾಯಿತಿಯಿಂದ ಹೊರಗೆ ಹೋಯಿತು. ಪಂಚಾಯತ್ ರಾಜ್ ವ್ಯವಸ್ಥೆಯ ತಳಗಟ್ಟಿನ ಒಂದೊಂದೇ ಕಲ್ಲುಗಳು ಕುಸಿದು ಬೀಳುವಂತಹ ಸಂದರ್ಭದಲ್ಲಿ ನಮಗಿರುವ ಆಶಯ ಏನೆಂದರೆ, ರಮೇಶ್‌ಕುಮಾರ್ ವರದಿಯಿಂದ ಶಕ್ತಿ ಬರುತ್ತದೆ ಎನ್ನುವುದು. ಇದು ಏನಾಯಿತು? ಇದಕ್ಕೆ ನೀವೇನಾದರೂ ಶಕ್ತಿ ಕೊಟ್ಟಂತೆ ಆಯಿತೇ? ಆ ಚಟುವಟಿಕೆಯ ನಕ್ಷೆಗಳು, ಜವಾಬ್ದಾರಿಗಳು, ಹೊಣೆಗಾರಿಕೆಗಳು, ಯಾವುದೂ ಕೂಡ ಗ್ರಾಮ ಪಂಚಾಯಿತಿಗೆ ಇಲ್ಲದೇ ಇರುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಿದ್ದನ್ನು ಪುನರಪಿ ನೀವು ಸೃಷ್ಟಿ ಮಾಡುತ್ತೀರಿ ಎಂದರೆ, ಅದು ಎಲುಬಿಲ್ಲದ ಅದ್ಭುತವಾಗುತ್ತದೆ ಎಂದು ಹೇಳಿದೆ. ಈ ತಿದ್ದುಪಡಿಯಲ್ಲಿ ಯಾವುದೇ ಕನಸುಗಳಿಲ್ಲ. ಹಿಂದಿನದನ್ನು ಯಥಾವತ್ತಾಗಿ ತಂದಿರುವುದು ಬಿಟ್ಟರೆ ರಮೇಶ್‌ಕುಮಾರ್ ವರದಿಯ ಹೆಸರನ್ನು ಹೇಳುವ ಹಕ್ಕು ಈ ತಿದ್ದುಪಡಿಗೆ ಇದೆ ಎಂದು ನನಗನ್ನಿಸುವುದಿಲ್ಲ.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಪೂಜಾರಿಯವರೇ ತಮ್ಮ ಮಾತಿನಿಂದ ಮುಂದಿನ ಭಾಷಣಕಾರರು ತಪ್ಪು ಭಾವಿಸಿಕೊಳ್ಳಬಾರದು. ಕರ್ನಾಟಕ ಪಂಚಾಯತ್ ರಾಜ್ 1993 (5)ನ್ನು ತಾವು ಗಮನಿಸಬೇಕು. "ಪಂಚಾಯತ್ ಪ್ರದೇಶದ ಜನಸಂಖ್ಯೆ ಪ್ರತಿ 400 ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಂತೆ ಕಾಲ ಕಾಲಕ್ಕೆ ಅಧಿಸೂಚಿಸಬಹುದಾದಂಥ ಸಂಖ್ಯೆಯು ಚುನಾಯಿತ ಸದಸ್ಯರನ್ನು ಗ್ರಾಮ ಪಂಚಾಯಿತಿ ಹೊಂದಿರತಕ್ಕದ್ದು" ಎಂದಿದೆ. ಇದು ಈಗಾಗಲೇ ಕಾನೂನಿನಲ್ಲಿದೆ. ಆದರೆ ಇದಕ್ಕೆ ಬಂದಿರತಕ್ಕಂಥ ತಾಂತ್ರಿಕ ತೊಂದರೆ; ಭೌಗೋಳಿಕವಾಗಿ ನಮ್ಮಲ್ಲಿ ಹೇಗಿದೆ ಎಂದರೆ, ಒಂದು ಕಡೆ ಒಂದು ನೂರು ಜನರ ವಸತಿ ಇರುತ್ತದೆ, ಇನ್ನೊಂದು ಕಡೆ, 3 ಕಿ.ಮೀ ಬಿಟ್ಟು ದೂರ ಇರುತ್ತದೆ. ಇವೆಲ್ಲ ಏನು ಸಮಸ್ಯೆಗಳಿವೆ ಆ ಹಿನ್ನೆಲೆಯಲ್ಲಿ ಈಗಾಗಲೇ ಚುನಾವಣಾ ಆಯೋಗದವರು ಒಂದು ವಿವರವಾದ ಸುತ್ತೋಲೆಯನ್ನು ಹೊರಡಿಸಿದ್ದಾರೆ. ಅದನ್ನೂ ತಮಗೆ ಕಳುಹಿಸಿ ಕೊಡುತ್ತೇನೆ. ಈ ಒಂದು ಪ್ರಾವಿಷನ್ ಈಗಾಗಲೇ ಇರುವುದರಿಂದ ತಿದ್ದುಪಡಿಯ ಅವಶ್ಯತೆ ಇರಲಿಲ್ಲ. ಈ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಈಗಾಗಲೇ ಆಪ್ತ ಸಹಾಯಕರನ್ನು ಕೊಟ್ಟಿದ್ದಾರೆ. ಆದರೆ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ, ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಆಪ್ತ ಸಹಾಯಕರನ್ನು ಕೊಡಬೇಕೆಂದು ರಮೇಶ್ ಕುಮಾರ್ ವರದಿಯಲ್ಲಿ ಶಿಫಾರಸ್ಸು ಇದೆ. ಸಮಾಜದ ಕಟ್ಟಕಡೆಯ ಮನುಷ್ಯ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಒಬ್ಬ ಅನಕ್ಷರಸ್ಥ ಮಹಿಳೆ; ಇದು ನೀವೇ ಕೊಟ್ಟಿರುವ ಮಾಹಿತಿ ಆಗಿದೆ. 90 ಸಾವಿರ ಗ್ರಾಮ ಪಂಚಾಯಿತಿ ಸದಸ್ಯರಲ್ಲಿ 33 ಸಾವಿರ ಜನ ಮಹಿಳೆಯರು ಮೊನ್ನೆಯವರೆಗಿದ್ದರು. 25 ಸಾವಿರ ಜನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಪೈಕಿ 18 ಸಾವಿರಕ್ಕೂ ಹೆಚ್ಚು ಅನಕ್ಷರಸ್ಥರಿದ್ದಾರೆ. ಇಂತಹ ಅನಕ್ಷರಸ್ಥರು ಅಧ್ಯಕ್ಷರಾದರೆ, ಅವರ ವಿವೇಚನೆ ಮೇರೆಗೆ, ಅವರ ಆಸಕ್ತಿ ಮೇರೆಗೆ ಸಲಹೆ–ಸೂಚನೆ ಕೊಡುವುದಕ್ಕೆ ಒಬ್ಬ ಆಪ್ತ ಸಹಾಯಕಿ ಅಥವಾ ಆಪ್ತ ಸಹಾಯಕನನ್ನು ತೆಗೆದುಕೊಳ್ಳದೇ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು ರಮೇಶ್‌ಕುಮಾರ್ ತಮ್ಮ ವರದಿಯಲ್ಲಿ ಹೇಳಿದ್ದಾರೆ. ಇದರ ಕಡೆಯೂ ತಾವು ಗಮನ ಕೊಟ್ಟಿಲ್ಲ ಎಂಬ ನೋವು ನನಗಿದೆ. ರಮೇಶ್‌ಕುಮಾರ್ ವರದಿಯಲ್ಲಿ ಉಲ್ಲೇಖ ಮಾಡುತ್ತಾ, ಹಣ ಬಲ ಇದ್ದವರನ್ನು ನಿಯಂತ್ರಣ ಮಾಡಬೇಕು, ಜಾತಿ ಬಲದ ಹೆಸರಿನಲ್ಲಿ ಗೊಂದಲ ಮಾಡುವವರನ್ನು ಕಟ್ಟಿ ಹಾಕಬೇಕು, ಚುನಾವಣೆಯಲ್ಲಿ ಹೆಂಡ ಹಂಚುವುದನ್ನು ನಿಯಂತ್ರಣ ಮಾಡಬೇಕು ಎಂದು ಹೇಳಿ, ಗ್ರಾಮ ಪಂಚಾಯಿತಿ ಅಧ್ಯಕ್ಷ/ಸದಸ್ಯರ ಅಥವಾ ಪಂಚಾಯತ್ ವ್ಯವಸ್ಥೆಯಲ್ಲಿ ಚುನಾವಣೆಗೆ ನಿಲ್ಲುವಂತಹ ಅಭ್ಯರ್ಥಿಗಳ ಖರ್ಚು–ವೆಚ್ಚಗಳನ್ನು ಸರ್ಕಾರ ನೋಡಿಕೊಳ್ಳಬೇಕು ಎಂದು ಹೇಳಲಾಗಿದೆ. ಈ ದಿಸೆಯಲ್ಲಿ ನಿಯಮಗಳನ್ನು ರೂಪಿಸಲು ಒಂದಿಷ್ಟು ಸೂತ್ರಗಳನ್ನು ಮಾಡಿದೆ. ಇದರ ಬಗ್ಗೆಯೂ ಉಲ್ಲೇಖ ಮಾಡಿಲ್ಲ. ಕರ್ನಾಟಕ ಪಂಚಾಯತ್ ರಾಜ್ ಆಡಳಿತ ಸೇವಾ ಮಂಡಳಿಯನ್ನು ರಚನೆ ಮಾಡಬೇಕು, ಅದಕ್ಕೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಬೇಕು, ಅದಕ್ಕೆ ಶಕ್ತಿ ಕೊಡಬೇಕು, ಅದಕ್ಕೆ ಸಾಮರ್ಥ್ಯ ಕೊಡಬೇಕು ಎನ್ನುವುದು ನಮ್ಮೆಲ್ಲರ ನಿರೀಕ್ಷೆಯಾಗಿದೆ. ಆದರೆ ಇದರ ಬಗ್ಗೆಯೂ ಉಲ್ಲೇಖ ಮಾಡಿಲ್ಲ. ಮಾನ್ಯ ಸಭಾಪತಿಗಳೆ, ನಾವು ಈ ಸದನದಲ್ಲಿ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿರುವಂತಹ ಪಂಚಾಯತ್ ರಾಜ್ ಸಮಿತಿಯಲ್ಲಿ, ಪಂಚಾಯತ್ ರಾಜ್ ವ್ಯವಸ್ಥೆಗೆ ಒಂದು ನಿರ್ದೇಶನಾಲಯ ಮತ್ತು ಸಚಿವಾಲಯದ ಅವಶ್ಯತೆ ಇದೆ ಎಂದು ಹೇಳುತ್ತಿದ್ದೆವು.

ರಮೇಶ್‌ಕುಮಾರ್ ವರದಿಯಲ್ಲಿ ಪೂರ್ಣ ಪ್ರಮಾಣದಲ್ಲಿ ರಾಜ್ಯ ಮಟ್ಟದಲ್ಲಿ ಒಂದು ನಿರ್ದೇಶನಾಲಯ, ಒಂದು ಸಚಿವಾಲಯ ಮಾಡಬೇಕು ಎಂದು ಶಿಫಾರಸ್ಸು ಮಾಡಿದ್ದಾರೆ. ಆದರೆ ಈ ವಿಚಾರವಾಗಿ ಒಂದು ಸಣ್ಣ ತಿದ್ದುಪಡಿಯನ್ನು ಈ ವಿಧೇಯಕದಲ್ಲಿ ಪ್ರಸ್ತಾಪ ಮಾಡಿಲ್ಲ. ಗ್ರಾಮ ಪಂಚಾಯಿತಿ ಸದಸ್ಯರು ಆಯ್ಕೆಯಾಗಿ 5 ವರ್ಷಗಳ ಕಾಲ ಇರುತ್ತಾರೆ. ನಾಲ್ಕು–ನಾಲ್ಕುವರೆ ವರ್ಷವಾದ ಮೇಲೆ ಅವರಿಗೆ

ತರಬೇತಿ ನೀಡುವಂತಹ ಕೆಲಸ ಮಾಡಿ ಗೊಂದಲ ಉಂಟು ಮಾಡುವಂಥದ್ದು ಇದೆ. ಆ ತರಬೇತಿ ಪಡೆಯದೇ ಇದ್ದರೆ ಗ್ರಾಮ ಪಂಚಾಯಿತಿಯಲ್ಲಿ ಹೇಗೆ ಕೆಲಸ ಮಾಡಬೇಕು ಎನ್ನುವುದು ಗೊತ್ತಾಗುವುದಿಲ್ಲ. ಹೇಗೆ ವಿಷಯಗಳನ್ನು ಮಂಡನೆ ಮಾಡಬೇಕು ಎನ್ನುವುದು ಗೊತ್ತಿರುವುದಿಲ್ಲ, ಯಾವರೀತಿ ನಿರ್ಣಯ ಕೈಗೊಳ್ಳಬೇಕು ಎನ್ನುವುದು ಗೊತ್ತಿರುವುದಿಲ್ಲ. ಅನಕ್ಷರಸ್ಥರು, ಅವಿದ್ಯಾವಂತರು, ಸಮಾಜದ ಕೊನೆಯ ಹಂತದಲ್ಲಿರುವ ಮನುಷ್ಯರು ಮುಖ್ಯವಾಹಿನಿಯಲ್ಲಿ ಅಧಿಕಾರಕ್ಕೆ ಬಂದಾಗ ನಿಭಾವಣೆ ಮಾಡಲು ಬೇಕಾದ ಸಾಮರ್ಥ್ಯದ ಬಗ್ಗೆ ರಮೇಶ್ ಕುಮಾರ್‌ರವರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿದರು. ಆದರೆ ಆ ಬಗ್ಗೆ ನೀವು ಚರ್ಚೆಯನ್ನೇ ಮಾಡಿಲ್ಲ, ಉಲ್ಲೇಖವನ್ನೇ ಮಾಡಿಲ್ಲ. 29 ವಿಷಯಗಳ ಬಗ್ಗೆ ನಾನು ಮತ್ತೊಮ್ಮೆ ಉಲ್ಲೇಖ ಮಾಡುವ ಅವಶ್ಯಕತೆ ಇಲ್ಲ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಗಳಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂದು ಏನು ಕರೆಯುತ್ತೇವೆಯೋ ಅದನ್ನು ಮುಖ್ಯ ಕಾರ್ಯದರ್ಶಿ ಹುದ್ದೆಯಾಗಿ ಬಲಪಡಿಸಬೇಕು ಎಂದು ಪ್ರಸ್ತಾಪ ಮಾಡಿದ್ದರು. ಇದರಿಂದ ಆಡಳಿತದಲ್ಲಿ ಅದ್ಭುತವಾದ ಶಕ್ತಿ ವೃದ್ಧಿಯಾಗುತ್ತದೆ ಎಂದು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಂಬಿಕೆ ಇರುವವರೆಲ್ಲರೂ ಹೇಳಿದರು. ಆದರೆ ಇಲ್ಲಿಯವರೆಗೆ ಇದರ ಬಗ್ಗೆ ಏನೂ ಮಾಡಿಲ್ಲ ಎನ್ನುವುದನ್ನು ಗಮನಿಸಬೇಕು.

ಮಾನ್ಯ ಸಭಾಪತಿಗಳೆ, ರಮೇಶ್‌ಕುಮಾರ್‌ರವರ ಬಗ್ಗೆ ನಮ್ಮದೇನೂ ಗೊಂದಲದ ಹೇಳಿಕೆ ಇಲ್ಲ. ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿ ಆಗಿರುವಾಗ, ರಮೇಶ್ ಕುಮಾರ್ ನೇತೃತ್ವದಲ್ಲಿರುವಂತಹ ಇಂತಹ ಕ್ರಾಂತಿಕಾರಕ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅತ್ಯಂತ ಅರ್ಥಗರ್ಭಿತವಾಗಿ ತರುತ್ತಾರೆ ಎಂದು ನಮಗನಿಸಿತ್ತು. ನಾವು ವಿರೋಧ ಪಕ್ಷದಲ್ಲಿದ್ದರೂ ಕೆಲವು ಸಲ ಮಾನ್ಯ ಸಿದ್ಧರಾಮಯ್ಯನವರ ಹೇಳಿಕೆಗಳಿಗೆ ಸ್ಪಂದಿಸುತ್ತಿದ್ದೆವು. ನಿನ್ನೆ ಕೆಳಮನೆಯಲ್ಲಿ ಒಂದು ಚರ್ಚೆ ಆಯಿತು. ಆ ಚರ್ಚೆಯಲ್ಲಿ, ಒಂದು ರೂಪಾಯಿಗೆ ಒಂದು ಕೆ.ಜಿ ಅಕ್ಕಿ ಕೊಟ್ಟರಿ, ಉಚಿತವಾಗಿ ಅಕ್ಕಿ ಕೊಟ್ಟರಿ, ಇದರಿಂದಾಗಿ ಬಡವರು ಕೆಲಸ ಮಾಡುವುದಕ್ಕೆ ಬರುತ್ತಿಲ್ಲ ಎಂದು ಒಬ್ಬ ಶಾಸಕರು ಹೇಳಿದರು. ಇದು ಅವರ ವಿವೇಚನೆಗೆ ಬಿಟ್ಟಿದ್ದು, ಅದರ ಬಗ್ಗೆ ನಮ್ಮ ವಾದ ಇಲ್ಲ. ಮಾನ್ಯ ಸಿದ್ಧರಾಮಯ್ಯನವರು ಆಗ, 'ಹೋಗಲ್ರಿ, ಅವನಿಗೆ ಕೆಲಸ ಮಾಡಲು ಮನಸ್ಸು ಇಲ್ಲದಿದ್ರೆ ಬಿಡಲಿ, ಇಲ್ಲಿಯವರೆಗೂ ಬೆವರು ಸುರಿಸಿದ್ದಾನೆ, ಸ್ವಲ್ಪ ದಿವಸ ಅವನು ವಿಶ್ರಾಂತಿ ತೆಗೆದುಕೊಳ್ಳಲಿ' ಎಂಬ ಮಾತನ್ನು ಹೇಳಿದರು. ಇಲ್ಲಿ ಸರಿ–ತಪ್ಪುಗಳ ಚರ್ಚೆ ಬರುವುದಿಲ್ಲ. ಇದರಲ್ಲಿ ನಾವು ಗ್ರಹಿಸಿದ್ದು ಏನೆಂದರೆ, ಕಡುಬಡವನೊಬ್ಬ ತನ್ನ ಜೀವನದುದ್ದಕ್ಕೂ ಬೆವರು ಸುರಿಸುತ್ತಾನೆ, ನನ್ನ ಅಕ್ಕಿ ತಿಂದು, ಸ್ವಲ್ಪ ಕಾಲ ಅಕ್ಕಿ ತಿಂದು ನೆಮ್ಮದಿಯಾಗಿರಲಿ ಎಂದು ಹೇಳುವುದರ ಹಿಂದೆ ಒಂದು ರೀತಿಯ ತಾರ್ಕಿಕ ಮನೋಭಾವ ಇರಬಹುದು ಎನ್ನುವುದು. ಅಂದರೆ ಮಾನ್ಯ ಸಿದ್ಧರಾಮಯ್ಯನವರಿಗೆ ಇಚ್ಛಾಶಕ್ತಿ ಇದೆ ಎಂದು ತಿಳಿದುಕೊಂಡಿದ್ದೆ. ನಮ್ಮ

ಸರ್ಕಾರ ಇರುವಾಗ ಕಡುಬಡವ ಬದುಕಲಿ, ಇಲ್ಲಿಯವರೆಗೆ ಬೆವರು ಸುರಿಸಿದ್ದಾನೆ ಎಂದು ಅವರು ಆಡಿದ ಮಾತುಗಳು ಏನಿವೆ ಅದನ್ನು ನಾನು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು; ಆದರೂ ನನಗದು ಹೌದು ಎನಿಸಿಬಿಟ್ಟಿತು. ಹೀಗಿರುವಾಗ, ಪಂಚಾಯತ್ ರಾಜ್ ಕಾಯಿದೆಯನ್ನು ರಮೇಶ್ ಕುಮಾರ್ ಕ್ರಾಂತಿಕಾರಿ ವರದಿಯಾಗಿ ತಂದಾಗ ಎಂತಹ ಸಮಸ್ಯೆಗಳೇ ಬರಲಿ, ಎಂತಹ ಆರ್ಥಿಕ ನಿಭಾವಣೆಯೇ ಬರಲಿ, ಯಾರೇ ಅಡ್ಡ ಬರಲಿ, . . 'ಯಾರೇ ಅಡ್ಡ ಬರಲಿ' ಎಂದರೆ ಅದು ಯಾರು ಎನ್ನುವುದು ನಿಮಗೆ ಗೊತ್ತಾಯಿತಲ್ಲವೇ? ಈ ವ್ಯವಸ್ಥೆಯಲ್ಲಿ ಶೌಚಾಲಯ ಉದ್ಘಾಟನೆಯನ್ನೂ ಸಹ ನಾನು ಮಾಡಬೇಕು, ನಾನು ಮಾಡಬೇಕು ಎಂದು ಹೇಳುವವರಿದ್ದಾರೆ. ಬರುವಂತಹ ಎಲ್ಲಾ ಅಡ್ಡಿಗಳನ್ನು ನಿವಾರಿಸುತ್ತೇನೆ, 1973ನೇ ತಿದ್ದುಪಡಿ ತಂದಿದ್ದಕ್ಕೆ ಮಾನ್ಯ ರಾಜೀವ್‌ಗಾಂಧಿಯವರನ್ನು ಗೌರವಿಸುತ್ತೇವೆ, ಮಾನ್ಯ ಘೋರ್ಪಡೆಯವರ ನಿಲುವನ್ನು ಎತ್ತಿ ಹಿಡಿಯುತ್ತೇವೆ ಎಂದು ಹೇಳಬಹುದು ಎಂದುಕೊಂಡಿದ್ದೆವು. ಶ್ರೀಯುತ ಮಣಿಶಂಕರ್ ಅಯ್ಯರ್‌ರವರ ಮಾತುಗಳನ್ನು ನಾವೆಲ್ಲಾ ಒಪ್ಪದೆ ಇರಬಹುದು. ಆದರೆ, ಕಾಂಗ್ರೆಸ್‌ನವರಿಗೆ ಪಂಚಾಯಿತಿ ವ್ಯವಸ್ಥೆಯಲ್ಲಿ ಅವರು ಹೇಳಿರುವುದು ವೇದ. ನಾವು ಕೂಡ ಅದನ್ನು ಗೌರವಿಸುತ್ತೇವೆ. ಇಂತಹ ಪಂಚಾಯತ್ ರಾಜ್ ವ್ಯವಸ್ಥೆಗೆ ಒತ್ತು ಕೊಡುವುದಕ್ಕೆ ನನ್ನ ಸರ್ಕಾರ ಬದ್ಧವಿದೆ, ಏನೇ ವಿರೋಧವಿದ್ದರೂ ಅದನ್ನು ಲೆಕ್ಕಿಸದೆ ತರುತ್ತೇನೆಂದು ಮಾನ್ಯ ಸಿದ್ದರಾಮಯ್ಯನವರು ಘೋಷಣೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದರೆ, ನನ್ನ ಊರಿನ ಜ್ಞಾನಪೀಠ ಪ್ರಶಸ್ತಿ ಪಡೆದುಕೊಂಡಂಥ ಶಿವರಾಮ ಕಾರಂತರವರು ಪತ್ರಿಕೆಯಲ್ಲಿ ಒಂದು ವರದಿಯನ್ನು ಬರೆದರು. ಅದನ್ನು ಓದಿದಂಥ ನಿಟ್ಟೂರು ಶ್ರೀನಿವಾಸರಾಯರು ಅವರಿಗೆ ಉತ್ತರ ಬರೆದರಂತೆ. 'ನಿನ್ನ ವರದಿ ಸುತ್ತಲೂ ಲತ್ತೆ ಹೊಡೆಯುವ ಕತ್ತೆಯಂತೆ ಇದೆ' ಎಂದು ಹೇಳಿದರಂತೆ. ನಾನು ರಮೇಶ್ ಕುಮಾರ್ ವರದಿಯಲ್ಲಿ ತಿಳಿದುಕೊಂಡಿರುವಂಥದ್ದೇನೆಂದರೆ, ಸಾಮಾಜಿಕ ನ್ಯಾಯಕ್ಕೆ ಬದ್ಧವಾದಂತಹ, ಎಲ್ಲರಿಗೂ ನ್ಯಾಯ ಕೊಡಬೇಕೆಂದು ಬದ್ಧವಾಗಿರುವಂತಹ ಅಧಿಕಾರ ವಿಕೇಂದ್ರೀಕರಣದ ಕತ್ತು ಹಿಸುಕುವುದಕ್ಕೆ ಸಿದ್ಧವಾಗಿರುವಂತಹ ಆಡಳಿತ ವ್ಯವಸ್ಥೆಯ ವಿರುದ್ಧ ಸುತ್ತಲು ಲತ್ತೆ ಹೊಡೆಯುವ ಕತ್ತೆಯಂತೆ ಇದೆ ರಮೇಶ್‌ಕುಮಾರ್‌ರವರ ವರದಿ ಎಂದು ನಾನು ತಿಳಿದುಕೊಂಡು ಮಾನ್ಯ ಸಿದ್ದರಾಮಯ್ಯನವರು ಬೇಷರತ್ತಾಗಿ ವಿಧೇಯಕವನ್ನು ತರುತ್ತಾರೆಂದು ನಾನು ತಿಳಿದುಕೊಂಡರೆ ಸಿದ್ದರಾಮಯ್ಯನವರು ಅಸಹಾಯಕರಾಗಿ ಶಸ್ತ್ರ ಸಂನ್ಯಾಸ ಮಾಡಿದಂತಹ ಒಬ್ಬ ಧೀಮಂತ ಯೋಧನಂತೆ ನಿಂತಿದ್ದು ನೋಡಿ ನನಗೆ ನೋವಾಗಿದೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್:–** ನೀವು ಏನು ಹೇಳಿದರೂ ರಮೇಶ್‌ಕುಮಾರ್‌ರವರು ನಿಮ್ಮ ಕಡೆಗೆ ತಿರುಗಿ ನೋಡುವುದಿಲ್ಲ. ಅವರು ತಪ್ಪು ಅಭಿಪ್ರಾಯದಲ್ಲಿದ್ದಾರೆ. ತಮ್ಮ ಭಾಷಣದಲ್ಲಿ ಮಾತನಾಡುವ ಉದ್ದಕ್ಕೂ ರಮೇಶ್ ಕುಮಾರ್ ವರದಿ ಎಂದು ಹೇಳುತ್ತಿದ್ದರೆ, ನೀವು ಏನು ಹೇಳಿದರು ಅದು ಆಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ರಮೇಶ್ ಕುಮಾರ್‌ರವರು ನನ್ನತ್ತ ತಿರುಗಿ ನೋಡಲಿಲ್ಲ ಎನ್ನುವ ನೋವು ನನಗಿಲ್ಲ. ಅವರಿಗೆ ಮುಖ ತಿರುವಿದ್ದಾರೆ ಎನ್ನುವ ನೋವು ನನಗೆ. ನಿನ್ನೆ ಅವರು ಬಹಳ ನೋವಿನಿಂದ, ತುಂಬಾ ಬೇಸರದಿಂದ, ತುಂಬಾ ಯಾತನೆಯಿಂದ ಸೀದಾ ಶಾಸಕಾಂಗ ಸಭೆಯಿಂದ ಅತ್ಯಂತ ನೋವಿನಿಂದ ಮುಖ ತಿರುವಿ ವಾಪಸ್ ಹೋದರು ಎಂದು ಪತ್ರಿಕೆಯಲ್ಲಿ ಬಂದಿದೆ.

**ಶ್ರೀ ಎಚ್.ಕೆ. ಪಾಟೀಲ್:–** ಪಂಚಾಯತ್ ರಾಜ್ ನಿಂದ ಈಗ ನೀವು ರಾಜಕೀಯಕ್ಕೆ ಬಂದ ಹಾಗೆ ಆಯಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಸರ್ಕಾರಕ್ಕೆ ಆಗ್ರಹಪಡಿಸುತ್ತೇನೆ. ಗೌರವಾನ್ವಿತ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಇದು ಇಲ್ಲಿಗೆ ಮುಗಿದು ಹೋಗಲಿಲ್ಲ. ಈಗಲೂ ಕೂಡ ಮುಖ್ಯಮಂತ್ರಿಗಳು ಹೇಳಬಹುದು. ರಮೇಶ್‌ಕುಮಾರ್‌ರವರ ವರದಿಯನ್ನು ಯಥಾವತ್ತಾಗಿ ಜಾರಿಗೆ ತರುವುದಕ್ಕೆ ಸರ್ಕಾರ ಬದ್ಧವಾಗಿದೆ ಮತ್ತು ಅದನ್ನು ಪೂರ್ಣವಾಗಿ ಜಾರಿಗೆ ತರುತ್ತೇವೆ ಎನ್ನುವ ಭರವಸೆ ನೀಡಬೇಕಂದು ಆಗ್ರಹಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್ ಎಂದು ಹೇಳುವುದಕ್ಕೆ ಬರುವುದಿಲ್ಲ. ಏಕೆಂದರೆ, ಒಂದು ಟೆಕ್ನಿಕಲ್ ಅಬ್ಜೆಕ್ಷನ್ ಇದೆ. ನಮ್ಮ ಈ ಹಿಂದಿನ ಅಧಿವೇಶನದಲ್ಲಿ ಇದೇ ಪಂಚಾಯತ್ ರಾಜ್‌ಗೆ ಒಂದು ತಿದ್ದುಪಡಿ ವಿಧೇಯಕ ಬಂದು ಕೆಳಗಿನ ಮನೆಯಲ್ಲಿ ಪಾಸ್ ಆಗಿ ಬಂದಂಥದ್ದು ನಮ್ಮ ಮನೆಯಲ್ಲಿ ಕುಳಿತುಕೊಂಡುಬಿಟ್ಟಿದೆ. ಇಲ್ಲಿ ನಾವು ಜಂಟಿ ಸದನ ಸಮಿತಿಯನ್ನು ಮಾಡಿದೆವು. ಆ ಜಂಟಿ ಸದನ ಸಮಿತಿಗೆ ತಾವೇ ಮೊನ್ನೆ ಅದಕ್ಕೆ ಇನ್ನು ಮೂರು ತಿಂಗಳ ಕಾಲಾವಕಾಶವನ್ನು ವಿಸ್ತರಣೆ ಮಾಡಿದ್ದೀರಿ. ಅದರ ಮಧ್ಯದಲ್ಲೇ ಮತ್ತೊಂದು ವಿಧೇಯಕ ಪಾಸ್ ಆಗುತ್ತಿರುವುದು ನೋಡಿದರೆ ಅದರ ಕತೆ ಏನಾಯಿತು, ಇದರ ಕತೆ ಏನಾಯಿತು, ಈ ರೀತಿ ಗೊಂದಲ ಇದೆಯಲ್ಲಾ? ಅದು ಇನ್ನು ನಮ್ಮ ಸದನದಲ್ಲೇ ಇದೆ. ಹಾಗಾದರೆ ಈ ಸದನದಲ್ಲಿ ಅದನ್ನು ಪಾಸ್ ಮಾಡಿಕೊಡಬೇಕಲ್ಲವೆ? ಹಾಗಾದರೆ ಅದರ ಕತೆ ಏನಾಯಿತು? ಅದು ಸತ್ತು ಹೋಯಿತು ಎಂದು

ಹೇಳೋಣವೆ? ಅದನ್ನು ಸರ್ಕಾರ ವಾಪಸ್ ತೆಗೆದುಕೊಳ್ಳುತ್ತದೆ ಎಂದು ಹೇಳೋಣವೆ? ಅದನ್ನು ವಾಪಸ್ ತೆಗೆದುಕೊಳ್ಳುತ್ತೇವೆಂದರೆ ನಾವು ಇದನ್ನು ಪಾಸ್ ಮಾಡಿಕೊಡಬಹುದು.

**ಶ್ರೀ ಎಚ್.ಕೆ. ಪಾಟೀಲ್:–** ಮಾನ್ಯ ಮಧುಸೂದನ್‌ರವರೇ, 'ಇದನ್ನು ನೀವೇನೂ ಕೇಳಬೇಕಲ್ಲ' ಎಂದು ಕೇಳಿದ್ದೀರಿ. ಏಕೆಂದರೆ ತಾವು ಅನುಭವಸ್ಥರು, ಇದಕ್ಕೆ ತಮಗೆ ಉತ್ತರ ಗೊತ್ತಿಲ್ಲದ್ದೇನೂ ಇಲ್ಲ. ಆದರೂ ಜಂಟಿ ಸಮಿತಿಯಲ್ಲಿ ಈ ವಿಷಯಗಳನ್ನು ಮಾತನಾಡಿದ್ದೇವೆ. ಸಮಗ್ರ ವರದಿಯನ್ನು ತರುತ್ತೇವೆಯಲ್ಲಾ ಆ ಸಂದರ್ಭದಲ್ಲಿ ಈ ವಿಷಯಕ್ಕೂ ಸಂಬಂಧ ಇದ್ದ ಹಾಗೆ ಯಾವುದು ಪ್ರಸ್ತಾಪವಾಗುತ್ತದೆ ಆ ಒಂದು ಸನ್ನಿವೇಶದಲ್ಲಿ ಜಂಟಿ ಸಮಿತಿ ಚರ್ಚೆಯ ವಿವರಗಳನ್ನು ಹಾಗೂ ಏನು ಮಾಡಬೇಕು ಎನ್ನುವುದನ್ನು ಸರ್ಕಾರದಿಂದ ಮಾನ್ಯ ಛೇರ್ಮನ್‌ರವರಿಗೆ ನಮ್ಮ ಪ್ರಸ್ತಾವನೆಯನ್ನು ಕೊಡುತ್ತೇವೆ.

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2015. ಇದರಲ್ಲಿ ಐದು ತಿದ್ದುಪಡಿಗಳನ್ನು ತಂದಿದ್ದಾರೆ. ಸುದೀರ್ಘವಾಗಿ ನಮ್ಮ ಮಾನ್ಯ ಎಚ್.ಕೆ. ಪಾಟೀಲ್‌ರವರು ವಿವರಣೆ ನೀಡಿದ್ದಾರೆ. ಕೊನೆಯಲ್ಲಿ ರಮೇಶ್‌ಕುಮಾರ್‌ರವರ ವರದಿ ಮೇರೆಗೆ ಎನ್ನುವುದನ್ನು ನಾನು ಇಷ್ಟಪಡುತ್ತಿಲ್ಲ. ಮಾನ್ಯ ಎಚ್.ಕೆ. ಪಾಟೀಲ್‌ರವರು ಮಾತನಾಡುತ್ತಾ ಹತ್ತು ಬಾರಿ ಹೇಳಿದರು. ಚುನಾವಣೆ ಹತ್ತಿರ ಇರುವುದರಿಂದ ತುರ್ತಾಗಿ ಈ ತಿದ್ದುಪಡಿ ತರಬೇಕೆಂಬ ಉದ್ದೇಶದಿಂದ ತಂದಿದ್ದೇವೆಂದು ಹೇಳಿದರು. ರಮೇಶ್‌ಕುಮಾರ್‌ರವರ ಇಚ್ಛಾಶಕ್ತಿ ಇದ್ದದ್ದು 88 ವಿಷಯಗಳ ಬಗ್ಗೆ ಪ್ರಸ್ತಾಪ ಆಗಿತ್ತು. ಇದು ಚುನಾವಣೆ ಸಲುವಾಗಿ ಐದು ತಿದ್ದುಪಡಿಗಳನ್ನು ಮಾಡಿ ರಮೇಶ್‌ಕುಮಾರ್‌ರವರ ಹೆಸರನ್ನು ಸೇರಿಸುವುದು, ಉಲ್ಲೇಖ ಮಾಡುವುದು ಸರಿಯಿಲ್ಲ ಎನ್ನುವುದು ನನ್ನ ಭಾವನೆ. ರಮೇಶ್‌ಕುಮಾರ್‌ರವರ ಭಾವನೆಗಳು ಇದರಲ್ಲಿ ನಗಣ್ಯ. ಚುನಾವಣಾ ತಿದ್ದುಪಡಿ ಏನಿದೆ ಇದು ನಗಣ್ಯವಾಗಿತ್ತು. ನಮ್ಮ ಎಚ್.ಕೆ. ಪಾಟೀಲ್‌ರವರು ತಮ್ಮ ಅನಿಸಿಕೆಗಳನ್ನು ಹೇಳಿದರು. 1985 ರಲ್ಲಿ ತಿದ್ದುಪಡಿಯಾದಾಗ ಮಾನ್ಯ ನಾರಾಯಣಸ್ವಾಮಿಯವರು ಸದಸ್ಯರಾಗಿದ್ದರು. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಏಕೆ ಬಲಪಡಿಸಬೇಕು, ಯಾವ ಮುಖೇನಾ ನೇರವಾಗಿ ಗ್ರಾಮೀಣ ಭಾಗದ ದಡ ತಲುಪಬೇಕೆನ್ನುವ ಚಿಂತನೆಯನ್ನು ಇಟ್ಟುಕೊಂಡು ಮಾನ್ಯ ನಾರಾಯಣಸ್ವಾಮಿಯವರನ್ನು ಕರೆಯಿಸಿ ಮಾತನಾಡಿದಂತಹ ವಿಷಯವನ್ನು ಪ್ರಸ್ತಾಪ ಮಾಡಿದರು. ಅದು 1987–88ರ ಸಮಯ ಇರಬಹುದು. ಆಗ ನಾರಾಯಣಸ್ವಾಮಿಯವರು 16 ಪರ್ಸೆಂಟ್ ಮಾತ್ರ ತಲುಪುತ್ತಿದೆ, 84 ಪರ್ಸೆಂಟ್ ಆಡಳಿತದ ವ್ಯವಸ್ಥೆಯಲ್ಲಿ ಕುಸಿದು ಹೋಗುತ್ತಿದೆ, ಇದಕ್ಕೆ ತಿದ್ದುಪಡಿ

ತರಬೇಕೆಂದು ಮಾಡಿದಾಗ ಅಷ್ಟರಲ್ಲಿ ರಾಜೀವ್‌ಗಾಂಧಿಯವರು ಕಾಲವಾದರು. ಪಂಚಾಯತ್ ರಾಜ್‌ಗಳನ್ನು ಸದೃಢವಾಗಿ ಬಲಪಡಿಸಬೇಕೆನ್ನುವುದು ಅವರ ಅನಿಸಿಕೆ ಆಗಿತ್ತು. ಅದನ್ನು ಬಲಪಡಿಸುವುದಕ್ಕೆ ಹಿಂದೆ 1985ರಲ್ಲಿ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು, ನಜೀರ್‌ಸಾಬ್‌ರವರು ಮಾಡಿದಂತಹ ಮಂಡಲ ಪಂಚಾಯಿತಿ, ಜಿಲ್ಲಾ ಪರಿಷತ್ತು ವ್ಯವಸ್ಥೆ ಏನಿತ್ತು ಅದು ಲೋಕಲ್ ಬಾಡಿಯ ಸರ್ಕಾರಗಳಾಗಿ ಕೆಲಸ ಮಾಡುತ್ತಿತ್ತು. ಕೇವಲ ನಮ್ಮಲ್ಲಿ ಅದು ವರ್ಗಿಕರಣ ಮಾಡುವುದು ಚೆನ್ನಾಗಿಲ್ಲ, ಶಾಸಕರಿಗೆ ಅಧಿಕಾರ ಇಲ್ಲ ಎನ್ನುವ ಒಂದು ಲಾಭಿ ಪ್ರಾರಂಭವಾಯಿತು. ಮಾನ್ಯ ಎಚ್.ಕೆ. ಪಾಟೀಲ್‌ರವರು ಹೇಳಬೇಕಾದರೆ ಮಾನ್ಯ ಎಸ್.ಎಂ. ಕೃಷ್ಣರವರು ಎಂದು ಹೇಳಿದರು. ಆಗ ಸನ್ಮಾನ್ಯ ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ಎಂ.ವೈ. ಘೋರ್ಪಡೆಯವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. 1993ರಲ್ಲಿ three tier system ಎಂದು ಮಾಡಿ ಈ ಮೂರು ಪಂಚಾಯಿತಿಗಳನ್ನು ಶಕ್ತಿಹೀನವನ್ನಾಗಿ ಮಾಡುವ ಪ್ರಯತ್ನವನ್ನು ಅಂದಿನ ಸರ್ಕಾರ ಮಾಡಿತು ಎಂದು ಹೇಳಿದರೆ ತಪ್ಪಾಗಲಾರದು.

**ಶ್ರೀ ಎಚ್.ಕೆ. ಪಾಟೀಲ್:–** ನಾನು ಅದನ್ನೂ ಹೇಳಿದ್ದೇನೆ. ನೀವು ಅದನ್ನು ಕೇಳಿಸಿಕೊಂಡಿದ್ದೀರಿ. ನಾನು ವೀರಪ್ಪಮೊಯ್ಲಿಯವರು ಇದ್ದಾಗಿನಿಂದಲೂ ಎಂದು ಹೇಳಿದ್ದೇನೆ. ನಂತರ ಸನ್ಮಾನ್ಯ ಎಸ್.ಎಂ. ಕೃಷ್ಣರವರು ಇದ್ದಾಗ ಬೇಲೂರು ಘೋಷಣೆಯನ್ನು ಮಾಡಿದ್ದೇವೆ. ಆಗಲೂ ಮಾನ್ಯ ಎಂ.ವೈ. ಘೋರ್ಪಡೆಯವರು ಪಂಚಾಯತ್ ರಾಜ್ ಸಚಿವರಾಗಿದ್ದರು. ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದರು. ಸನ್ಮಾನ್ಯ ಕೆ.ಬಿ. ಕೋಳಿವಾಡ್‌ರವರು ಗ್ರಾಮೀಣಾಭಿವೃದ್ಧಿ ಕುಡಿಯುವ ನೀರಿನ ಮಂತ್ರಿಗಳಾಗಿದ್ದರು. ನಾನು ಅದನ್ನು ಹೇಳಿದ್ದೇನೆ.

**ಸಭಾಪತಿಯವರು:–** ಈಗ ಆ ವಿಷಯ ಆಯಿತು. ತಿದ್ದುಪಡಿಯ ಬಗ್ಗೆ ಮಾತನಾಡಿ.

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 1993 ರಿಂದ ಈಗಿನವರೆಗೆ ಕಳೆದ 22–23 ವರ್ಷಗಳಿಂದ ಅದು ಎಲ್ಲಾ ವ್ಯವಸ್ಥೆಗಳಿಂದ ಶಕ್ತಿಹೀನವಾಗಿಯೇ ಬಂತು. ನಾವು ಇಲ್ಲಿ ರಮೇಶ್‌ಕುಮಾರ್‌ರವರ ಬಗ್ಗೆ ಸಾಕಷ್ಟು ಮಾತನಾಡುತ್ತಿದ್ದೇವೆ. ಕೆಲವರು ಹೇಳುತ್ತಿದ್ದಾರೆ, ರಮೇಶ್‌ಕುಮಾರ್‌ರವರು ಯಾರ ಕಡೆಗೆ ಬರಬೇಕು ಎಂದು ಆ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿಲ್ಲ. ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ನಮ್ಮನ್ನು ಸಹ 2–3 ಸಭೆಗಳಲ್ಲಿ ಕರೆದು ಮಾತನಾಡಿ ಇದನ್ನು ಯಾವ ರೀತಿಯಲ್ಲಿ ಮಾಡಬೇಕೆಂದಾಗ, ಅವರ 2–3 ಅನಿಸಿಕೆಗಳಲ್ಲಿ ಅಧ್ಯಕ್ಷರ ಚುನಾವಣೆ 10–10 ತಿಂಗಳಿಗೆ ಆಗುತ್ತಿದೆ, ಕನಿಷ್ಟ 30 ತಿಂಗಳು ಇರಬೇಕೆನ್ನುವುದು ಅವರ ಚಿಂತನೆಯಲ್ಲಿ ಇದೆ. ಆದರೆ ಅವರ ಚಿಂತನೆಗಳು

ಸೋರಿಕೆ 84 ಪರ್ಸೆಂಟ್ ಇದೆಯಲ್ಲಾ, ಆ 84 ಪರ್ಸೆಂಟ್ ಸೋರಿಕೆಯನ್ನು ತಡೆಗಟ್ಟಬೇಕು; ಅಲ್ಲಿನ ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು, ಜಿಲ್ಲಾ ಪಂಚಾಯಿತಿಗಳು ಶಕ್ತಿಯುತವಾಗಬೇಕೆನ್ನುವುದು ಅವರ ಚಿಂತನೆ. ನಾನು ಎಲ್ಲಾ ಸಭೆಗಳಲ್ಲೂ ಸುಮಾರು 2–3 ಗಂಟೆಗಳ ಸಮಯ ಸಭೆಯನ್ನು ಮಾಡಿದ ಮೇಲೆ ನಾನು ಅವರಿಗೆ ಚಾಲೆಂಜ್ ಮಾಡಿದೆ. 'ಸರ್, ಈಗ ನಮ್ಮ ಅನಿಸಿಕೆಗಳನ್ನೆಲ್ಲಾ ನೀವು ತೆಗೆದುಕೊಂಡಿದ್ದೀರಿ, ಖಂಡಿತವಾಗಿಯೂ ಇದನ್ನು ಇಂಪ್ಲಿಮೆಂಟ್ ಮಾಡುತ್ತೀರ?' ಎಂದು ನಾನು ಕೇಳಿದೆ. ನಾನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದರು.

ಅವರ 88 ವಿಷಯಗಳು ಬೇಡ. ಶೇಕಡಾ 50 ರಷ್ಟನ್ನು ಇವರು ಇಂಪ್ಲಿಮೆಂಟ್ ಮಾಡಿಬಿಟ್ಟರೆ ನಿಜಕ್ಕೂ ನಮ್ಮ ರಾಜ್ಯ ರಾಮರಾಜ್ಯ ಆಗುವುದರಲ್ಲಿ ತಪ್ಪಾಗಲಾರದು ಎನ್ನುವುದು ನನ್ನ ಅನಿಸಿಕೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ನಮ್ಮ ಕೋಟ ಶ್ರೀನಿವಾಸ ಪೂಜಾರಿಯವರು ಹೇಳಿದರು, ಒಂದು ಶೌಚಾಲಯವನ್ನು ಉದ್ಘಾಟನೆ ಮಾಡಬೇಕಾದರೆ ಇಂಥವರೇ ಬರಬೇಕೆಂದು ಅಡ್ಡ ಹಾಕುತ್ತಾರೆ. ಯಾರು ಗ್ರಾಮ ಪಂಚಾಯಿತಿ, ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಅಧ್ಯಕ್ಷರುಗಳಿರುತ್ತಾರೆ ಅವರಿಗೆ ಕವಡೆ ಕಾಸಿನಷ್ಟು ಬೆಲೆ ಇರುವುದಿಲ್ಲ. ಏಕೆಂದರೆ, ಅಧಿಕಾರಿಗಳು ಅವರು ಬಂದರೆ ಮಾತ್ರ ಬರುತ್ತಾರೆ, ಒಬ್ಬ ಪಂಚಾಯಿತಿ ಅಧ್ಯಕ್ಷ ಅವರು ಯಾರೇ ಇರಬಹುದು, ಅವರಿಗೆ ಯಾವುದೇ ರೀತಿಯ ಗೌರವವಿಲ್ಲ. ಏಕೆಂದರೆ, ನೇರವಾಗಿ ಅಧಿಕಾರ ಚಲಾಯಿಸುವ ಹಕ್ಕು ನಮ್ಮ ಕಾನೂನಿನಲ್ಲಿ ಅವರಿಗೆ ಏನೇನೂ ಅವಕಾಶ ಕೊಟ್ಟಿಲ್ಲ. ಈ ಚಿಂತನೆಗಳನ್ನೆಲ್ಲಾ ಸಾಕಷ್ಟು ಚರ್ಚೆ ಮಾಡಿ ಎಲ್ಲೆಲ್ಲಿ ಅದರ ಲೋಪದೋಷಗಳನ್ನು ಸರಿಪಡಿಸಬೇಕೆಂದು ರಮೇಶ್ ಕುಮಾರ್‌ರವರು 88 ಮಾನದಂಡಗಳನ್ನು ಮಾಡಿದರು. ಅದರಲ್ಲಿ ಈಗ ಚುನಾವಣೆ ಸಲುವಾಗಿ ಮಾಡಿದ್ದರೆ ಇದಕ್ಕೆ ನಮ್ಮ ಒಪ್ಪಿಗೆ ಇದೆ. ನಮ್ಮ ಅನಿಸಿಕೆ ಏನೆಂದರೆ, ರಮೇಶ್ ಕುಮಾರ್ ವರದಿ ಎನ್ನುವುದನ್ನು ತೆಗೆದು ಹಾಕಬೇಕು. ರಮೇಶ್‌ಕುಮಾರ್‌ರವರ ಅನಿಸಿಕೆಗಳೇನಿವೆ ಅದರಲ್ಲಿ ಶೇಕಡಾ 50 ರಷ್ಟಾದರೂ ಅದಕ್ಕೆ ಸೇರಿಸಿದರೆ, ಬೇಡ, ಶೇಕಡಾ 25 ರಷ್ಟಾದರೂ ಅದಕ್ಕೆ ಸೇರಿಸಿದರೆ ಖಂಡಿತವಾಗಿಯೂ ಅದು ರಮೇಶ್ ಕುಮಾರ್‌ರವರ ವರದಿ ಎಂದು ಹೇಳಬಹುದು. ಗ್ರಾಮ ಪಂಚಾಯಿತಿ ಇವತ್ತು ಯಾವ ಮಟ್ಟಕ್ಕೆ ಇದೆ ಎಂದರೆ, ಗ್ರಾಮ ಪಂಚಾಯಿತಿಗೆ ಏನು ಹಕ್ಕು ಕೊಟ್ಟಿಲ್ಲ ಎನ್ನುವುದರ ಬಗ್ಗೆ 2–3 ವಿಚಾರಗಳನ್ನು ಹೇಳುತ್ತೇನೆ. ಇವತ್ತು ರೇಷನ್ ಕಾರ್ಡ್‌ಗಳ ಸೋರಿಕೆ ಇಷ್ಟೊಂದು ಆಗುತ್ತಿವೆ. ನೀವು ತಾಲ್ಲೂಕು ಕಚೇರಿಗೆ ಹೋಗಿ ಆಯಾಯ ತಾಲ್ಲೂಕು ಕಛೇರಿಗಳಲ್ಲಿ 5,000 ರೂಪಾಯಿ ಬೆಳಗ್ಗೆ ಕೊಟ್ಟರೆ ಮೂರು ಗಂಟೆಗೆ ಕೊಡುತ್ತಾರೆ. 4,000 ರೂಪಾಯಿ ಕೊಟ್ಟರೆ 6 ಗಂಟೆಗೆ ಕೊಡುತ್ತಾರೆ. ಇನ್ನು 2,000 ಜಾಸ್ತಿ ಕೊಟ್ಟರೆ ಎರಡು ಗಂಟೆಯೊಳಗೆ ರೇಷನ್ ಕಾರ್ಡ್ ಕೊಡುತ್ತಾರೆ.

(12–30 ಗಂಟೆ)

ಗ್ರಾಮ ಪಂಚಾಯಿತಿ ಕೆಲಸ ಏನೆಂದರೆ, ಗ್ರಾಮದಲ್ಲಿ ಮನೆಯ ಮುಂದಿನ ಚರಂಡಿಯಲ್ಲಿ ನೀರು ಮುಂದಕ್ಕೆ ಹೋಗದೇ ಅಲ್ಲಿಯೇ ನಿಂತಿರುತ್ತದೆ. ಆಗ ಆ ಬೋಳಿ ಮಗ ಹೋಗುತ್ತಿದ್ದಾನೆ, ಚರಂಡಿಯನ್ನು ಕ್ಲೀನ್ ಮಾಡಿಸಿಲ್ಲ ಎಂದು ಹೇಳುತ್ತಾರೆ. ದೀಪ ಬೆಳಗದಿದ್ದರೆ ಆ ಗ್ರಾಮ ಪಂಚಾಯಿತಿ ಸದಸ್ಯರನ್ನು ಬೋಳಿ ಮಗ, ಸೂಳೆಮಗ ಎಂದು ಬೈಯುತ್ತಾರೆ. ಆದರೆ, ಅವನಿಗೆ ವೃದ್ಧಾಪ್ಯ ವೇತನವಾಗಲಿ, ವಿಧವಾ ವೇತನವನ್ನು ಕೊಡಿಸುವಂತಹ ಶಕ್ತಿ ಇರುವುದಿಲ್ಲ. ತಾಲ್ಲೂಕು ಕಛೇರಿಯಲ್ಲಿ ಯಾವುದೋ ಒಂದು ಪತ್ರದ ಮೇಲೆ ವಿಧವಾ ವೇತನವನ್ನು ಮತ್ತು ವೃದ್ಧಾಪ್ಯ ವೇತನವನ್ನು ಕೊಡುತ್ತಾರೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಆ ರೀತಿಯ ಪದಗಳು ಕಡತದಲ್ಲಿ ಹೋಗುವುದು ಅಷ್ಟು ಸರಿಯಾಗಿ ಕಾಣುವುದಿಲ್ಲ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಈ ರೀತಿಯ ಪದಗಳನ್ನು ಉಪಯೋಗಿಸಿ ಜನರು ಬೈಯುವುದು ಸತ್ಯವಾಗಿದೆ. ಬೇಕಾದರೆ ಬಂದು ನೋಡಿ. ರೆಕಾರ್ಡ್‌ಗೆ ಹೋಗಬಾರದೆಂದರೆ ಜನ ಈ ರೀತಿಯಾಗಿ ಬೈಯುತ್ತಿರುವುದನ್ನು ಬೇರೆಯವರು ಕೂಡ ನೋಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಕೃಷ್ಣಪ್ಪನವರೆ ನಿಮ್ಮ ಸಮಯ ಮುಗಿಯುತ್ತಿದೆ. ಬೇಗ ಏನು ಹೇಳಬೇಕೆಂದು ಇದ್ದೀರಿ, ಅದನ್ನು ಹೇಳಿ ಮುಗಿಸಿ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಸರ್ಕಾರಕ್ಕೆ ನಿಜವಾದ ಇಚ್ಛಾಶಕ್ತಿ ಇದ್ದರೆ; ಒಂದು ಲಕ್ಷ ಜನ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯಲ್ಲಿ ಆಡಳಿತವನ್ನು ಮಾಡುತ್ತಾರೆ. ನಾವು ಕೇವಲ 230 ಜನ ಒಂದು ಲಕ್ಷ ಜನರು ಮಾಡುವ ಅಧಿಕಾರವನ್ನು ಕಿತ್ತುಕೊಂಡು ಅದನ್ನು ನಾವು ನಡೆಸಬೇಕೆಂದರೆ, ಈ ದೇಶದಲ್ಲಿ ಇಂತಹ ಸಾವಿರ ತಿದ್ದುಪಡಿಯನ್ನು ತೆಗೆದುಕೊಂಡು ಬಂದರೂ ಕೂಡ ಈ ರಾಜ್ಯದಲ್ಲಿ ವ್ಯವಸ್ಥೆ ಹೀಗೆಯೇ ಮುಂದುವರಿದುಕೊಂಡು ಹೋಗುತ್ತದೆ. ನಮ್ಮ ಮುಖ್ಯಮಂತ್ರಿಗಳು ಸಾಕಷ್ಟು ಹಿಂದುಳಿದವರ ಬಗ್ಗೆ, ದಲಿತರ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ, ರಾಜ್ಯದ ಬಗ್ಗೆ, ಕಡು ಬಡವರ ಬಗ್ಗೆ ಸಾಕಷ್ಟು ಹೇಳುತ್ತಾರೆ. ಆ ಶಕ್ತಿಯನ್ನು ಅವರಿಗೆ ಅಕ್ಕಿಯನ್ನು ಕೊಡುವುದರಿಂದ ಅಲ್ಲ; ಅವರುಗಳಿಗೆ ಅಧಿಕಾರವನ್ನು ಕೊಡುವುದರಿಂದ, ಸಾಮಾಜಿಕ ನ್ಯಾಯವನ್ನು ಕೊಡುವುದರಿಂದ ಆಯಾಯ ಗ್ರಾಮ ಪಂಚಾಯಿತಿಗಳ

ಗ್ರಾಮಗಳಿಗೆ ಶಕ್ತಿ ತುಂಬುವಂತಹ ಕೆಲಸವನ್ನು ನಮ್ಮ ಮುಖ್ಯಮಂತ್ರಿಗಳು ಮಾಡಿಯೇ ಮಾಡುತ್ತಾರೆ, ಶ್ರೀ ರಮೇಶ್ ಕುಮಾರ್‌ರವರ ವರದಿಯನ್ನು ಪಂಚಾಯತ್ ರಾಜ್ ಸಚಿವರು ಮತ್ತು ಇಲ್ಲಿ ಈಗ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸಹ ಇದ್ದಾರೆ. ಮಾನ್ಯ ರಮೇಶ್ ಕುಮಾರ್‌ರವರು ಕೊಟ್ಟಿರುವಂತಹ ಈ ವರದಿಯ ಬಗ್ಗೆ ಇನ್ನು 10 ಬಾರಿ ಚರ್ಚೆಯನ್ನು ಮಾಡಿ. ನಮ್ಮ ಸ್ವಾರ್ಥವನ್ನು ಬಿಟ್ಟರೆ ನಿಜಕ್ಕೂ ನಮ್ಮ ರಾಜ್ಯವನ್ನು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ರಾಮ ರಾಜ್ಯವನ್ನಾಗಿ ಮಾಡಬಹುದು, ದಿವಂಗತ ಶ್ರೀ ರಾಜೀವ್ ಗಾಂಧಿಯವರ ಕನಸನ್ನು ನೀವು ಕಾಂಗ್ರೆಸ್‌ನವರಾಗಿದ್ದರೆ; ಅವರ ಆತ್ಮಕ್ಕೆ ಶಾಂತಿ ಸಿಗಬೇಕೆಂದರೆ, ನೀವು ಶ್ರೀ ರಮೇಶ್ ಕುಮಾರ್‌ರವರ ವರದಿಯನ್ನು ಸಂಪೂರ್ಣವಾಗಿ ಜಾರಿಗೆ ತೆಗೆದುಕೊಂಡು ಬನ್ನಿ. ಶ್ರೀ ರಮೇಶ್ ಕುಮಾರ್‌ರವರು ಯಾವ ಪಕ್ಷದವರು ಎನ್ನುವುದು ಬೇಡ. ಅವರ ಚಿಂತನೆಯನ್ನು ಮತ್ತು ಶ್ರೀ ರಾಜೀವ್ ಗಾಂಧಿಯವರ ಒಂದು ಬಯಕೆಯನ್ನು, ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಒಂದು ಕನಸನ್ನು ತಾವು ಸಹಕಾರಗೊಳಿಸುತ್ತೀರಿ ಎನ್ನುವುದು ನನಗೆ ಪ್ರಾಮಾಣಿಕವಾಗಿ ಗೊತ್ತಾಗುತ್ತದೆ. ಈ ತಿದ್ದುಪಡಿಗೆ ನಮ್ಮದು ಏನೂ ಅಭ್ಯಂತರವಿಲ್ಲ. ಅದಕ್ಕೆ ಚುನಾವಣೆಗೆ ಮೊದಲು ಶ್ರೀ ರಮೇಶ್ ಕುಮಾರ್‌ರವರ ವರದಿಯನ್ನು ತರಿಸಿಕೊಂಡು ಅದರಲ್ಲಿ ಪೂರ್ಣವಾಗಿ ಅಲ್ಲದಿದ್ದರೂ ಶೇಕಡಾ 50 ರಷ್ಟನ್ನು ನಿಜವಾಗಿಯೂ ಸರ್ಕಾರ ಅನುಷ್ಠಾನಗೊಳಿಸುವುದಾದರೆ ನಿಮ್ಮ ಪರವಾಗಿ ನಮ್ಮ ಜೈ ಘೋಷಣೆ ಇರಲಿ. ನಿಮಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡುತ್ತೇನೆ. ದಯವಿಟ್ಟು ಆ ಒಂದು ಕಾರ್ಯವನ್ನು ಸರ್ಕಾರದವರು ಮಾಡುತ್ತಾರೆಂದು ಹೇಳಿ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಎಲ್ಲರಿಗೂ ಕೂಡ ವಿಧೇಯಕಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಸಾಮಾನ್ಯವಾಗಿ ವಿರೋಧ ಪಕ್ಷದ ಸದಸ್ಯರಿಗೆ ವಿಧೇಯಕದ ಬಗ್ಗೆ ಮಾತನಾಡಲು ಆದ್ಯತೆಯನ್ನು ಕೊಡುತ್ತೇನೆ. ಆಡಳಿತ ಪಕ್ಷದವರಿಗೆ ತದನಂತರ ಅವಕಾಶ ಕೊಡುತ್ತೇನೆ. ಒಬ್ಬೊಬ್ಬ ಸದಸ್ಯರಿಗೆ ವಿಧೇಯಕದ ಮೇಲೆ 2–3 ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಆದರೆ 10 ನಿಮಿಷಗಳ ಕಾಲ ಮಾತನಾಡುತ್ತೇನೆಂದರೆ, ನನ್ನ ಹತ್ತಿರ ಟೈಮ್ ಇಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಕೆಲವರಿಗೆ ಹೆಚ್ಚು ಸಮಯವನ್ನು ಕೊಡುತ್ತೀರಿ.

**ಸಭಾಪತಿಯವರು:–** ಕೆಲವು ಸದಸ್ಯರಿಗೆ ಕೊಡಬೇಕಾಗುತ್ತದೆ. ಕಂಡೀಷನ್ ಆಗಿ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ವಿಷಯಗಳಿಗೂ ಮಾನ್ಯ ವಿ.ಎಸ್. ಉಗ್ರಪ್ಪನವರು ಹಾಗೆಯೇ ಮಾತನಾಡಿದರೆ ನಾನೇನು ಮಾಡಲಿ. ಕೆಲವು ಸಂದರ್ಭಗಳಲ್ಲಿ ಹೆಚ್ಚು ಸಮಯವನ್ನು, ಕೆಲವೊಂದು ಸಂದರ್ಭಗಳಲ್ಲಿ ಕಡಿಮೆ ಸಮಯವನ್ನು ಅವಕಾಶ ಕೊಡಬೇಕಾಗುತ್ತದೆ. ಇನ್ನು ಕೆಲವರಿಗೆ ಮಾತನಾಡುವುದಕ್ಕೆ ಸಮಯ ಇಲ್ಲದೇ ಇದ್ದಾಗ ಅವರಿಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಈ ರೀತಿ ಎಲ್ಲಾ ನಡೆಯುತ್ತದೆ. ಸಭೆಯನ್ನು ನಡೆಸುವಾಗ ಇದೆಲ್ಲಾ ಆಗಿರುತ್ತದೆ. ಪ್ರತಿಯೊಂದಕ್ಕೂ ಅಬ್ಜಕ್ಷನ್ ಮಾಡಿದರೆ ನನಗೂ ಇಕ್ಕಟ್ಟು ಆಗುತ್ತದೆ. ಡಾ: ಹುಲಿನಾಯ್ಕರ್‌ರವರೆ, ತಾವು ಆದಷ್ಟು ಬೇಗ ಮಾತನಾಡಿ ಮುಗಿಸಿ.

**ಡಾ॥ ಎಂ.ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ತಿದ್ದುಪಡಿ ವಿಧೇಯಕವನ್ನು ಸ್ವಾಗತಿಸುತ್ತೇನೆ. ಇದರಲ್ಲಿ ನಾಲ್ಕು ಭಾಗಗಳಿವೆ. ಒಂದು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಅರ್ಧದಷ್ಟು ಮೀಸಲಾತಿ ತೆಗೆದುಕೊಂಡು ಬರುತ್ತಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ಅದೇ ರೀತಿಯಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು 10 ವರ್ಷಗಳ ವರೆಗೆ ಮಾಡಿರುವುದು ಸ್ವಾಗತಾರ್ಹ. ಒಟ್ಟಾರೆಯಾಗಿ ಶ್ರೀ ರಮೇಶ್‌ರವರ ವರದಿಯನ್ನು ಜಾರಿಗೆ ತೆಗೆದುಕೊಂಡು ಬಂದಿದ್ದರೆ ಒಳ್ಳೆಯದಿತ್ತು ಎನ್ನುವುದು ನಮ್ಮಗಳ ಭಾವನೆಯಾಗಿದೆ. ಒಂದು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರುಗಳ ಅವಧಿಯನ್ನು 30 ತಿಂಗಳುಗಳಿಂದ ಐದು ವರ್ಷಗಳ ವರೆಗೆ ಎಂದು ಏನು ಎಕ್ಸ್‌ಟೆಂಡ್ ಮಾಡಲಾಗುತ್ತಿದೆ ಇದನ್ನು ನಾವು ಸ್ವಾಗತಿಸುತ್ತೇವೆ. ಈ 3 Tier system ಅನ್ನು ಅಳವಡಿಸಿದಾಗ ಅಂದಿನ ನಮ್ಮ ಹಿರಿಯರಿಗೆ ಏನು ಅಭಿಪ್ರಾಯ ಇತ್ತೆಂದರೆ, ಅಧಿಕಾರದಲ್ಲಿ ಎಲ್ಲಾ ಜನರು ಭಾಗವಹಿಸಬೇಕು ಎನ್ನುವುದು. ಕೇವಲ ಗ್ರಾಮ ಪಂಚಾಯಿತಿ, ಗ್ರಾಮದ ಅಭಿವೃದ್ಧಿಯ ಜೊತೆ–ಜೊತೆಯಲ್ಲಿ ಈ ವರ್ಗದ ಜನರನ್ನು ನಮ್ಮ ಆಡಳಿತದಲ್ಲಿ ಅವರಿಗೆ ಭಾಗವಹಿಸುವಂತೆ ಮಾಡಬೇಕೆನ್ನುವುದು. ಅಂದರೆ ಒಂದು ಪಂಚಾಯಿತಿ ಸದಸ್ಯನಾಗಿ ಒಬ್ಬ ಅಧ್ಯಕ್ಷನಾಗಿ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷನಾಗಿ, ಜಿಲ್ಲಾ ಪಂಚಾಯಿತಿ ಅಧ್ಯಕ್ಷನಾಗಿ ಕೆಲಸವನ್ನು ಮಾಡಬೇಕೆಂದು. ಅವನು ಅನಕ್ಷರಸ್ಥನಾಗಿರಬಹುದು ಅಥವಾ ಸಮಾಜದಲ್ಲಿ ಅವನು ಕೆಳಮಟ್ಟದಲ್ಲಿರಬಹುದು, ಒಂದು ಸಲ ಅವನು ಅಧಿಕಾರವನ್ನು ಪಡೆದುಕೊಂಡಾಗ ಅವರುಗಳು ಪಡೆದುಕೊಳ್ಳುವ ಅನುಭವಗಳೇನಿವೆ, ಅದು ಖಂಡಿತವಾಗಿಯೂ ಆಡಳಿತವನ್ನು ನಡೆಸುವುದಕ್ಕೆ ಸಹಜವಾದಂತಹ ಧೈರ್ಯವನ್ನು ಮತ್ತು ಶಕ್ತಿಯನ್ನು ತುಂಬುತ್ತಿದೆ.

1970–80ರ ದಶಕದಲ್ಲಿ ಅನೇಕ ರಾಜಕೀಯ ಪಕ್ಷಗಳು ಒಂದು ಶಾಸಕ ಸ್ಥಾನಕ್ಕೆ ಪ್ರತಿನಿಧಿಯಾಗಿ ಮಾಡುವುದಕ್ಕೆ ಜನರನ್ನು ಹುಡುಕುವಂತಹ ಪರಿಸ್ಥಿತಿ ಕೆಲವು ಜಾತಿ ಪಂಗಡಗಳಲ್ಲಿತ್ತು. ಏಕೆಂದರೆ, ಅವರಿಗೆ ಯಾವುದೇ ಆಡಳಿತದ ಅನುಭವ ಇಲ್ಲದೇ ಇರುವ ಕಾರಣಕ್ಕಾಗಿ ಆ ಮಟ್ಟದಲ್ಲಿ ರಾಜಕೀಯ ಪಕ್ಷಗಳಿಂದ ಸ್ಪರ್ಧಿಸುವುದಕ್ಕೆ ಹಿಂಜರಿದಂತಹ ಪರಿಸ್ಥಿತಿ ಅವರಲ್ಲಿ ನಿರ್ಮಾಣವಾಗಿತ್ತು. ಆದರೆ, ಕಳೆದ 1984ನೇ ಇಸವಿಯ ನಂತರದಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ, ತಾಲ್ಲೂಕು ಪಂಚಾಯಿತಿಗಳಲ್ಲಿ, ಜಿಲ್ಲಾ ಪಂಚಾಯಿತಿಗಳಲ್ಲಿ ಒಬ್ಬ ಸದಸ್ಯನಾಗಿಯೋ, ಉಪಾಧ್ಯಕ್ಷನಾಗಿಯೋ, ಅಧ್ಯಕ್ಷನಾಗಿಯೋ, ಪಡೆದುಕೊಂಡಂತಹ ಅನುಭವದ ಆಧಾರದ ಮೇಲೆ ಇಂದು ಪ್ರತಿ ಜಾತಿ–ಪಂಗಡಗಳಲ್ಲಿಯೂ ಸಹಿತ ನಾವು ಜನ ಪ್ರತಿನಿಧಿಗಳಾಗಬೇಕು, ಕೆಲಸ ಮಾಡಬೇಕು ಎನ್ನುವಂತಹ ಒಂದು ಸ್ಪರ್ಧಾತ್ಮಕವಾದ ಮನೋಭಾವ ಜನರಲ್ಲಿ ಮೂಡುತ್ತಿದೆ. ಅವನು ಅನಕ್ಷರಸ್ಥನಾಗಿದ್ದರೂ ಸಹಿತ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದರೂ ಸಹಿತ, ರಾಜಕೀಯದಲ್ಲಿ ಮುಂಬರುವ ಈ ತುಡಿತ ಏನಿದೆ, ಅದು ಬಹಳಷ್ಟು ಜಾಸ್ತಿ ಇದೆ.

**ಸಭಾಪತಿಯವರು:–** ಡಾ: ಹುಲಿನಾಯ್ಕರ್‌ರವರೆ, ನೀವು ಈ ತಿದ್ದುಪಡಿ ವಿಧೇಯಕದ ಮೇಲೆ ಮಾತ್ರ ಮಾತನಾಡಿ. ಪೀಠಿಕೆ ಬೇಡವೆಂದು ನಾನು ಮೊದಲೇ ಹೇಳಿದ್ದೇನೆ.

**ಡಾ: ಎಂ.ಆರ್. ಹುಲಿನಾಯ್ಕರ್:–** ಮಾನ್ಯ ಸಭಾಪತಿಯವರೇ, ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಧಿ 30 ತಿಂಗಳು ಇದ್ದುದ್ದೇ ಆದರೆ, ಬಹಳಷ್ಟು ಜನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗುತ್ತಿದ್ದರು. ಬಹಳಷ್ಟು ಜನರಿಗೆ ಅಧಿಕಾರದ ಅನುಭವ ಬರುತ್ತದೆ. ಈಗ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಧಿಯನ್ನು ಐದು ವರ್ಷಗಳು ಎಂದು ಮಾಡುವುದರಿಂದ ಕೆಳ ವರ್ಗದ ಜನರಿಗೆ ಅವಕಾಶಗಳು ಬಹಳ ಕಡಿಮೆಯಾಗುತ್ತದೆ ಎನ್ನುವುದು ಒಂದು ಭಾವನೆ. ಎರಡನೆಯದಾಗಿ, 30 ತಿಂಗಳುಗಳಿಂದ ಐದು ವರ್ಷಗಳೆಂದು ಮಾಡಿದರು ಕೂಡ ಅವರಲ್ಲಿ ಒಳ ಒಡಂಬಡಿಕೆಗಳು ಆಗಿಯೇ ಆಗುತ್ತದೆ. ಅವರುಗಳು ಐದು ವರ್ಷಗಳ ಕಾಲ ಅಧ್ಯಕ್ಷರ ಮತ್ತು ಉಪಾಧ್ಯಕ್ಷ ಸ್ಥಾನ ಬೇಡವೆಂದು ರಾಜೀನಾಮೆಯನ್ನು ಕೊಟ್ಟರೆ ಏನು ಮಾಡುತ್ತೀರಿ? 20 ತಿಂಗಳಿಗೆ ಅಥವಾ 30 ತಿಂಗಳಿಗೆ, ಆರು ತಿಂಗಳುಗಳಿಗೆ ರಾಜೀನಾಮೆಯನ್ನು ಕೊಟ್ಟಿರುವಂತಹ ಉದಾಹರಣೆಗಳಿವೆ. ಇದರಲ್ಲಿ ಜನರ ಮನೋಭಾವನೆ ಬದಲಾವಣೆಯಾಗಬೇಕು. ಕೇವಲ ತಿಂಗಳುಗಳನ್ನು ಹೆಚ್ಚು ಮಾಡುವುದರಿಂದ ದೊಡ್ಡ ಅನುಕೂಲವಾಗುತ್ತದೆಂದು ನಾನು ಭಾವಿಸುವುದಿಲ್ಲ. ಮತ್ತು ಈ ಅವಕಾಶಗಳು ಕಡಿಮೆ ಜನರಿಗೆ ಸಿಗುವಂಥದ್ದು ಆಗಬಹುದು. ಅದಕ್ಕಾಗಿ ಸರ್ಕಾರ ಮುಂದಿನ ದಿನಗಳಲ್ಲಿ ಏನು ವಿಚಾರ

ಮಾಡುತ್ತದೆ, ಮಾಡಲಿ. ಇನ್ನಷ್ಟು ವಿಚಾರಗಳನ್ನು ಸರ್ಕಾರ ಮಾಡಲಿ ಎಂಬುದು ನನ್ನ ಭಾವನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ಒಂದು ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿಯನ್ನು ತರುವಂಥದ್ದನ್ನು ಪಂಚಾಯತ್ ರಾಜ್ ಸಚಿವರು ಪ್ರಸ್ತಾಪ ಮಾಡುತ್ತಾ, ಇದು ಚುನಾವಣೆಗೆ ಸಂಬಂಧಪಟ್ಟಂತೆ ಕೆಲವೇ ಕೆಲವು ತಿದ್ದುಪಡಿಗಳನ್ನು ಮಾತ್ರ ಇಲ್ಲಿ ಮಂಡನೆ ಮಾಡಿದ್ದೇವೆ ಎನ್ನುವಂತಹ ವಿಚಾರವನ್ನು ಹೇಳಿದ್ದಾರೆ. ಶ್ರೀ ರಮೇಶ್ ಕುಮಾರ್‌ರವರು ಈ ಒಂದು ಸಮಿತಿ ಸಭೆಗಳನ್ನು ನಡೆಸುವಾಗ ಎಲ್ಲರ ಸಲಹೆಗಳನ್ನು ತೆಗೆದುಕೊಂಡಿದ್ದರು. ನಾವುಗಳು ಕೂಡ ಕೆಲವು ಸಲಹೆಗಳನ್ನು ಕೊಟ್ಟಿದ್ದೆವು. ಏನು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಧಿಯನ್ನು ಐದು ವರ್ಷಗಳೆಂದು ನಿಗದಿ ಮಾಡಿದರೆ, ಈ ಒಂದು ವ್ಯವಸ್ಥೆಗೆ ಹೆಚ್ಚು ಶಕ್ತಿಯನ್ನು ಕೊಡಬೇಕು ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದರು. ನಮ್ಮ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಪ್ರಸ್ತಾವಿಕವಾಗಿ ಹೇಳಿದರು. ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ಉಪಸ್ಥಿತರಿದ್ದರು. 1989ನೇ ಇಸವಿಯಲ್ಲಿ ಜಾರಿಯಾದಂತಹ ಒಂದು ಐತಿಹಾಸಿಕವಾದಂತಹ ಕಾಯ್ದೆ. ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಶ್ರೀ ನಸೀರ್ ಸಾಬ್‌ರವರು, ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಶ್ರೀ ಸಿದ್ದರಾಮಯ್ಯನವರು ಕೂಡ ಆ ಸಂಪುಟದಲ್ಲಿ ಮಂತ್ರಿಯಾಗಿದ್ದರು. ಇಲ್ಲಿ ಶ್ರೀ ಹೆಚ್.ಡಿ. ದೇವೇಗೌಡರವರು, ಶ್ರೀ ಜೆ.ಹೆಚ್. ಪಟೇಲ್‌ರವರು, ಶ್ರೀ ಬೊಮ್ಮಾಯಿಯವರು, ಶ್ರೀ ಮಹದೇವಪ್ಪನವರು ಇವರೆಲ್ಲರೂ ಕೂಡ ಸಂಪುಟದಲ್ಲಿದ್ದಾಗ ತೆಗೆದುಕೊಂಡು ಬಂದಂತಹ ಕಾಯ್ದೆ 1983 ರಲ್ಲಿ ಪ್ರಾರಂಭವಾಗಿ 1985ರಲ್ಲಿ ಅಸ್ತಿತ್ವಕ್ಕೆ ಬಂದು, 1987ರಲ್ಲಿ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿ ಅದರ ಮಧ್ಯದಲ್ಲಿ ತಾಲ್ಲೂಕು ಪಂಚಾಯಿತಿಯನ್ನು ನಿರ್ಮಾಣ ಮಾಡಲಾಯಿತು. ಅದೊಂದು ಐತಿಹಾಸಿಕ ಕಾಯ್ದೆ ಎನ್ನುವಂತಹ ವಿಚಾರವನ್ನು ನಮ್ಮ ಶ್ರೀ ಹೆಚ್.ಕೆ. ಪಾಟೀಲ್‌ರವರು ಹೇಳಿದರು. ತಾಲ್ಲೂಕು ಪಂಚಾಯಿತಿಗೆ ಮಧ್ಯೆ ಶಾಸಕರು ಅಧ್ಯಕ್ಷರಾಗಿದ್ದರು ಪ್ರಧಾನರು ಸದಸ್ಯರಾಗಿರುತ್ತಿದ್ದರು. ಮಧ್ಯೆ ಅದೊಂದು ಸಮಿತಿ ಎಂದು ನೇಮಕ ಮಾಡಿದ್ದರು. ಆದರೆ, ಅವತ್ತಿನ ದಿವಸ ಕೊಟ್ಟಂತಹ ಅಧಿಕಾರ ಏನು? ಒಬ್ಬ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷ ರಾಜ್ಯ ಮಂತ್ರಿ ಸ್ಥಾನಮಾನವನ್ನು ಪಡೆದಿದ್ದರು. ಉಪಾಧ್ಯಕ್ಷರು ಉಪ ಸಚಿವರ ಸ್ಥಾನಮಾನಗಳನ್ನು ಪಡೆದುಕೊಂಡಿದ್ದರು. ಮಂಡಲ ಪಂಚಾಯತಿಯ ಪ್ರಧಾನರಿಗೆ ತನ್ನದೇ ಆದ ಅಧಿಕಾರವನ್ನು ಮಾಡತಕ್ಕಂತಹ ಅವಕಾಶ ಇತ್ತು. 1993ರಲ್ಲಿ ಬದಲಾವಣೆಯಾದ ಕಾಯಿದೆಯಲ್ಲಿ ಎಲ್ಲಾ ಅಧಿಕಾರವನ್ನು ಮೊಟಕುಗೊಳಿಸಲಾಯಿತು. ಕ್ರಮೇಣ ಅದಕ್ಕೆ ಹೆಚ್ಚು ಶಕ್ತಿಯನ್ನು ಕೊಡುತ್ತೀರಿ ಎಂದು ನಾನು ಭಾವಿಸಿದ್ದೆನು. ಇವರಿಗೆ ಯಾವ ಅಧಿಕಾರವನ್ನು ಕೊಟ್ಟಿದ್ದೀರಿ ಎಂದು ಪ್ರಸ್ತಾಪ ಮಾಡಿಲ್ಲ. ಚುನಾಯಿತ

ಪ್ರತಿನಿಧಿಗಳಿಗೆ ದಯವಿಟ್ಟು ಹೆಚ್ಚಿನ ಅಧಿಕಾರವನ್ನು ನೀಡಬೇಕು. ನಾನೂ ಕೂಡ ಈ ಒಂದು ವ್ಯವಸ್ಥೆಯಲ್ಲಿ ಕೆಲಸ ಮಾಡಿ ಬಂದಿದ್ದೇನೆ. ನಮ್ಮ ಈಗಿನ ಮುಖ್ಯಮಂತ್ರಿಗಳೂ ಕೂಡ ಇದರಲ್ಲಿ ಭಾಗಿಯಾಗಿದ್ದರು. ಅದಕ್ಕಾಗಿ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮ ಸ್ನೇಹಿತರಾದ ಹಾಲಪ್ಪ ಬಸಪ್ಪನವರು ನಾವೆಲ್ಲರೂ ಕೂಡ ಅಲ್ಲಿಗೆ ಹೋಗಿದ್ದೆವು. 5 ವರ್ಷದ ಅವಧಿಗೆ ನೀವು ಮಾಡುವುದಾದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ನೇರವಾಗಿ ಚುನಾವಣೆ ಮಾಡುವ ಬಗ್ಗೆ ನಿಯಮವನ್ನು ಮಾಡಿದ್ದೇ ಆದರೆ 6 ತಿಂಗಳಿಗೆ ಮೂರು ತಿಂಗಳಿಗೆ ಇಳಿಸತಕ್ಕಂಥಾದ್ದು ತಪ್ಪುತ್ತದೆ. ಆದರೆ ನೀವು ಆ ರೀತಿಯ 5 ವರ್ಷದ ನಿಯಮವನ್ನು ಮಾಡಿದರೂ ಕೂಡ ಅವರು ತಮ್ಮಲ್ಲಿ ಒಪ್ಪಂದವನ್ನು ಮಾಡಿಕೊಂಡು 10–20 ತಿಂಗಳಿಗೋ ಈಗಲೂ ಕೂಡ ಬದಲಾವಣೆ ಮಾಡತಕ್ಕಂಥಾದ್ದು ಆಗುತ್ತದೆ. ಪೂರ್ಣ ಪ್ರಮಾಣದ ಅಧಿಕಾರವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಆದರೂ ಕೂಡ, ನೇರವಾಗಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ಮಾಡಬೇಕೆಂಬ ಸಲಹೆಯನ್ನು ನಾನು ನೀಡಬಯಸುತ್ತೇನೆ. ಪಂಚಾಯತಿ ಚುನಾವಣೆಗೆ ಮಾತ್ರ ಸೀಮಿತವಾದಂತಹ ತಿದ್ದುಪಡಿಯನ್ನು ಇಲ್ಲಿ ಮಂಡನೆ ಮಾಡಿದ್ದೇವೆಂದು ಹೇಳುತ್ತಿದ್ದೀರಿ. 5 ವರ್ಷದ ಅವಧಿಗೆ ಇದು ಅನ್ವಯವಾಗತಕ್ಕಂಥಾದ್ದು ತಾತ್ಕಾಲಿಕವೆಂದು ಹೇಳಿದರೂ ಕೂಡ ಪಂಚಾಯತಿ ಚುನಾವಣೆಗೆ ಸಂಬಂಧಿಸಿದ್ದಾಗಿದೆ.

ಮೀಸಲಾತಿಯ ಬಗ್ಗೆ ಹೇಳುವುದಾದರೆ, ಒಂದು ಅವಧಿಗೆ ಮಾಡಿದರೆ ಆ ಸದಸ್ಯರುಗಳು ಉದಾಸೀನದಿಂದ ಇರುತ್ತಾರೆ, ಇದರಿಂದಾಗಿ ಯಾವುದೇ ಕೆಲಸವನ್ನು ಮಾಡುವುದಿಲ್ಲ. ಇದರ ಬದಲಿಗೆ ಈ ಮೀಸಲಾತಿಯನ್ನು ಎರಡು ಅವಧಿಗೆ ಮಾಡಿದ್ದೇ ಆದರೆ ಸ್ವಲ್ಪ ಜವಾಬ್ದಾರಿಯಿಂದ ಕೆಲಸವನ್ನು ಮಾಡುತ್ತಾರೆ. ಅದನ್ನು ಮಾಡುತ್ತೇವೆ ಎಂಬ ಬಗ್ಗೆ ಇಲ್ಲಿ ಅನುಬಂಧದಲ್ಲಿ ಸೂಚನೆ ಮಾಡಿದ್ದೀರಿ. ಅದನ್ನು ಮಾಡತಕ್ಕಂಥಾದ್ದು ಬಹಳ ಒಳ್ಳೆಯ ವಿಚಾರವಾಗಿದೆ. ಸರ್ಕಾರ ಈ ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರ ನೀಡುವ ಕೆಲಸವನ್ನು ಮಾಡಬೇಕು.

**ಸಭಾಪತಿಯವರು:–** ಸಾಕು ನಾನು ಎರಡು ನಿಮಿಷವೆಂದು ಹೇಳಿದ್ದೆನು, 4 ನಿಮಿಷವಾಯಿತು. ನೀವು ಇದಕ್ಕೆ ಬೆಂಬಲ ಸೂಚಿಸುತ್ತೀರೋ ಇಲ್ಲವೋ ಎಂಬುದನ್ನು ಹೇಳಿಬಿಡಿ ಸಾಕು.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಚಿವರು ಗ್ರಾಮೀಣಾಭಿವೃದ್ಧಿ ವ್ಯವಸ್ಥೆಗೆ ಹೆಚ್ಚಿನ ಒತ್ತನ್ನು ನೀಡಬೇಕೆಂದು ಹೇಳಿದ್ದಾರೆ. ಅದಕ್ಕೆ ನಾವೂ ಕೂಡ ಕೆಲವು ಸಲಹೆಗಳನ್ನು ನೀಡಿದ್ದೇವೆ. ಆ ದಿಕ್ಕಿನಲ್ಲಿ ಕೆಲಸ ಮಾಡಿ ಗ್ರಾಮ ಸಭೆಗಳು ಕೂಡ ಚೆನ್ನಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದಾಗಿದೆ. ಎಲ್ಲರ ಮೇಲೂ ಕೂಡ ಇದರ ಜವಾಬ್ದಾರಿ ಇದೆ. ಈ ಚುನಾಯಿತ ಪ್ರತಿನಿಧಿಗಳಿಗೆ ನೀಡುತ್ತಿರುವ ಗೌರವಧನದ ಪ್ರಮಾಣ ಬಹಳ ಕಡಿಮೆ ಇದೆ, ಇದನ್ನು ಸಹ ಸರ್ಕಾರ ಹೆಚ್ಚು ಮಾಡಬೇಕು.

**ಸಭಾಪತಿಯವರು:–** ಮಾನ್ಯ ಪಟೇಲ್ ಶಿವರಾಂ ಅವರೇ, ಫುಲ್ ಬಿಲ್ ತರುತ್ತಾರಲ್ಲಾ ಆಗ ಮಾತನಾಡುವಿರಂತೆ, ಈಗ ಸಾಕು.

**ಶ್ರೀ ಪಟೇಲ್ ಶಿವರಾಂ:–** ಒಂದು ಸಂವಿಧಾನಬದ್ಧವಾಗಿ ಶೇಕಡಾ 50 ಭಾಗವನ್ನು ಮೀರಬಾರದೆಂದು ಇದೆ. ಆದರೆ ಕೆಲವು ಸಂದರ್ಭದಲ್ಲಿ ಇದು ಹಿಂದೆ ಮುಂದೆ ಆಗತಕ್ಕಂತಾದ್ದು ಇದೆ. ಅದನ್ನು ಸರಿಯಾದ ರೀತಿಯಲ್ಲಿ ಪಾಲನೆ ಮಾಡಬೇಕು. ಮಾನ್ಯ ರಮೇಶ್‌ಕುಮಾರ್ ಅವರ ಈ ಒಂದು ತಿದ್ದುಪಡಿಯನ್ನು ಈ ಸದನದಲ್ಲಿ ಮಂಡಿಸಬೇಕೆಂಬ ವಿಚಾರವನ್ನು ಹೇಳಬಯಸುತ್ತಾ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಯವರಾಗಿರತಕ್ಕಂತಹ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಸರ್ಕಾರ ರಚನೆಯಾದ ಮೇಲೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿರತಕ್ಕಂತಹ ಮಾನ್ಯ ಹೆಚ್.ಕೆ. ಪಾಟೀಲ್ ಅವರು ಯಾವಾಗಲೂ ಕೂಡ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಗ್ರಾಮೀಣ ಪ್ರದೇಶದಲ್ಲಿರತಕ್ಕಂತಹ ಹಳ್ಳಿಗಾಡಿನ ಜನರ ಬಗ್ಗೆ ಬಹಳ ಅನುಕಂಪವನ್ನು ತೋರಿ ಆ ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸುವ ನಿಟ್ಟಿನಲ್ಲಿ ತಮಗೆ ಅಧಿಕಾರ ಇಲ್ಲದೇ ಇದ್ದರೂ ಕೂಡ ಅವರು ತಮ್ಮ ತಂದೆಯವರ ಹೆಸರಿನಲ್ಲಿ ಒಂದು ಟ್ರಸ್ಟ್ ಮಾಡಿ, ಆ ಮೂಲಕ ನೀರನ್ನು ಒದಗಿಸುವ ಕೆಲಸವನ್ನು ಮಾಡಿದಂತಹ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿದಂಥವರಾಗಿದ್ದಾರೆ. ನಮ್ಮ ಮಾನ್ಯ ಕೋಟ ಪೂಜಾರಿಯವರು ಹೇಳಿದ ಹಾಗೆ, ಗ್ರಾಮೀಣ ಪ್ರದೇಶದಲ್ಲಿರತಕ್ಕಂತಹ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ನಮ್ಮ ಗಾಂಧೀಜಿಯವರು ಏನು ಕನಸನ್ನು ಕಾಣುತ್ತಿದ್ದರು, ಆ ಕನಸನ್ನು ನನಸು ಮಾಡುವ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದಾರೆ. ಅವರ ನಂತರ ಇದೇ ರೀತಿಯ ಕನಸನ್ನು ಕಂಡಿರುವ ದಿವಂಗತ ರಾಮಕೃಷ್ಣ ಹೆಗಡೆಯವರು, ದಿವಂಗತ ರಾಜೀವ್ ಗಾಂಧಿಯವರು ಮತ್ತು ದಿವಂಗತ ಘೋರ್ಪಡೆಯವರು, ಮಾನ್ಯ

ವೀರಪ್ಪ ಮೊಯ್ಲಿಯವರು ಎಲ್ಲ ತಿದ್ದುಪಡಿಗಳನ್ನು ತಂದಿರತಕ್ಕಂತಹ ರೀತಿಯಲ್ಲಿ 1993ರ ನಂತರ ಮತ್ತೊಮ್ಮೆ ಹೊಸ ಕ್ರಾಂತಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬರಬೇಕು ಮತ್ತು ಇದಕ್ಕೆ ಹೆಚ್ಚಿನ ಶಕ್ತಿಯನ್ನು ಒದಗಿಸಬೇಕು ಎನ್ನುವ ಉದ್ದೇಶದಿಂದ ಮಾನ್ಯ ರಮೇಶ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದರು. ಆ ಸಮಿತಿಯಲ್ಲಿ ಬಹಳ ಒಳ್ಳೊಳ್ಳೆಯ ಪರಿಣಿತರನ್ನು ಹಾಕಿದರು. ಅದರಲ್ಲಿ ನಾನೂ ಕೂಡ ಒಬ್ಬ ಸದಸ್ಯನಾಗಿ ಕೆಲಸ ಮಾಡುವ ಒಂದು ಅವಕಾಶವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ನನಗೆ ಒದಗಿಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಇಡೀ ಭಾರತ ದೇಶದಲ್ಲಿ ಇರತಕ್ಕಂತಹ ಎಲ್ಲಾ ರಾಜ್ಯಗಳಿಗೂ ಕೂಡ ಭೇಟಿ ಕೊಟ್ಟು ಎಲ್ಲಾ ಜಿಲ್ಲಾ, ತಾಲ್ಲೂಕು ಪಂಚಾಯತಿಗಳ ಮುಖಂಡರುಗಳನ್ನು ಭೇಟಿ ಮಾಡಿದ್ದೆವು. ಸಾರ್ವಜನಿಕರು ಮತ್ತು ಗ್ರಾಮೀಣಾಭಿವೃದ್ಧಿ ಅಧ್ಯಕ್ಷರುಗಳು, ಎಲ್ಲಾ ರಾಜಕೀಯ ಮುಖಂಡರುಗಳನ್ನೆಲ್ಲಾ ಭೇಟಿ ಮಾಡಿ ಅವರೆಲ್ಲರ ಅಭಿಪ್ರಾಯವನ್ನು ಕ್ರೊಢೀಕರಿಸಿ 88 ಅಂಶಗಳ ಪಂಚಾಯತ್ ರಾಜ್ ವ್ಯವಸ್ಥೆಗೆ ತಿದ್ದುಪಡಿಯನ್ನು ಒದಗಿಸಿದ್ದಾರೆ. ಅದರಲ್ಲಿ ಅವರು ಒಂದು ಹೇಳಿಕೆಯನ್ನು ಕೂಡ ಕೊಟ್ಟಿದ್ದಾರೆ. ಮುಂದೆ ಬರತಕ್ಕಂತಹ ದಿವಸಗಳಲ್ಲಿ ಅದನ್ನು ಯಥಾವತ್ತಾಗಿ ಜಾರಿಗೆ ತರತಕ್ಕಂತಹ ದಿಸೆಯಲ್ಲಿ ತಮ್ಮೆಲ್ಲರ ಒಪ್ಪಿಗೆಯನ್ನು ಪಡೆದುಕೊಂಡು ಜಾರಿಗೆ ತರುತ್ತೇವೆ ಎನ್ನುವ ದಿಟ್ಟ ನಿರ್ಧಾರವನ್ನು ಕೂಡ ಪ್ರಕಟಣೆ ಮಾಡಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ಪ್ರಸ್ತುತ 4–5 ವಿಷಯಗಳ ಮೇಲೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಆಗಲೇ ಈ ಮೀಸಲಾತಿಯನ್ನು ಏಕೆ ತರುತ್ತಿದ್ದೇವೆಂದು ಹೇಳಿದರು. ಒಂದು ಸಲ ಮೀಸಲಾತಿ ಮಾಡಿದರೆ, ಯಾರೂ ನಮ್ಮ ಪಕ್ಷದ ಮುಖಂಡರು ಬರುತ್ತಿರಲಿಲ್ಲ. ಮುಂದೆ ನಾನು ಹೇಗಿದ್ದರೂ ಬರುವುದಿಲ್ಲ, ಈ ಮೀಸಲಾತಿ ಬದಲಾವಣೆಯಾಗುತ್ತದೆ ಎಂದು ಹೇಳುವುದೇ ಜಾಸ್ತಿಯಾಗುತ್ತಿತ್ತು; ಕೆಲಸ ಮಾಡುವುದು ಕಡಿಮೆಯಾಗುತ್ತಿತ್ತು. ಈ ಮೀಸಲಾತಿ ಎರಡು ಸಲ ಬರುವುದರಿಂದ ಒಬ್ಬ ಸ್ಪರ್ಧಿಸಿರತಕ್ಕಂತಹ ಮತ್ತು ಆರಿಸಿ ಬಂದಿರತಕ್ಕಂತಹ ವ್ಯಕ್ತಿ ಮುಂದೆ ಬರಬಹುದೆಂದು ಕೆಲಸ ಮಾಡುತ್ತಾನೆ. ಮತ್ತು ಸ್ಪರ್ಧಿಸಿರತಕ್ಕಂತಹ ವ್ಯಕ್ತಿ ತಾನು ಮುಂದೆ ಆರಿಸಿ ಬರಬೇಕೆಂಬ ಉದ್ದೇಶದಿಂದ ಅವನೂ ಕೂಡ leadership quality ಯನ್ನು ಬೆಳೆಸಿಕೊಳ್ಳುತ್ತಾನೆ. ಇಂತಹ ಒಂದು ಒಳ್ಳೆಯ ಅವಕಾಶ ಇದರಲ್ಲಿ ಇದೆ. ಮತ್ತು ಇದನ್ನು 5 ವರ್ಷಗಳಿಗೆ ಮಾಡಿರತಕ್ಕಂತಾದ್ದು ಏನು ಇದೆ, ಇದು ಬಹಳ ಸೂಕ್ತವಾದದ್ದಾಗಿದೆ.

ಈ ಹಿಂದೆ ಮಾನ್ಯ ಹೆಚ್.ಕೆ. ಪಾಟೀಲ್ ಅವರು ಹೇಳಿದ ಹಾಗೆ 6 ತಿಂಗಳಿಗೊಮ್ಮೆ ವರ್ಷಕ್ಕೊಮ್ಮೆ ತಿರುಪತಿ ವೆಂಕಟರಮಣ, ಮೈಸೂರು ಹೀಗೆ ಎಲ್ಲಾ ಕಡೆ ಹೋಗುವುದು ತಪ್ಪುತ್ತದೆ. ಮತ್ತು ಮುಂದೆ ರೂಲ್ಸ್‌ನಲ್ಲಿ ಏನು ಅಳವಡಿಸಿದ್ದಾರೆ, ಅದರಲ್ಲಿ ಬರುತ್ತದೆ. 30 ತಿಂಗಳ ನಂತರ ಅವರು ಚೆನ್ನಾಗಿ ಕೆಲಸ ಮಾಡದಿದ್ದರೆ ಅವರ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿ ಅಧಿಕಾರದಿಂದ ಇಳಿಸಬಹುದು ಎಂದು ಇದೆ. ಶೇಕಡಾ 75 ಪರ್ಸೆಂಟ್ ಗ್ರಾಮ ಸಭೆಯಲ್ಲಿ ನಿರ್ಣಯ ತೆಗೆದುಕೊಂಡರೆ ಅವರನ್ನು ವಾಪಸ್ ಕರೆಸಿಕೊಳ್ಳುವ ಅಂಶಗಳೂ ಕೂಡ ಇದೆ. ಇನ್ನು ಚುನಾವಣೆಯಲ್ಲಿ ಕೂಡ 10 ಯೋಜನೆಗಳನ್ನು ಕೊಟ್ಟಿದ್ದಾರೆ. ಅವೆಲ್ಲವೂ ಕೂಡ ಮುಂದೆ ಬರತಕ್ಕಂಥಾದ್ದಾಗುತ್ತದೆ. ದಯಮಾಡಿ ಈ 4–5 ಅಂಶಗಳು ಏನು ಇವೆ, ಅದರ ಬಗ್ಗೆ ಸರ್ಕಾರ ವಿಚಾರ ಮಾಡಬೇಕಾಗಿದೆ. ಪಂಚಾಯತಿಗಳಲ್ಲಿ ಕಡ್ಡಾಯ ಮತದಾನ, ಪಂಚಾಯತಿ ಚುನಾವಣೆಯನ್ನು ಕೂಡ ಸರ್ಕಾರವೇ ನಡೆಸತಕ್ಕಂತ ರೀತಿಯು ಆ ವರದಿಯಲ್ಲಿ ಇದೆ. ಪಂಚಾಯತಿ ಚುನಾವಣೆಗಳನ್ನು ನಡೆಸುವ ಸಂದರ್ಭದಲ್ಲಿ ಈ 10 ಯೋಜನೆಗಳನ್ನು ಜಾರಿಗೆ ತರುವ ಬಗ್ಗೆ ವಿಚಾರ ಮಾಡಬೇಕಾಗಿದೆ. ಪಂಚಾಯತ್ ರಾಜ್ ಚುನಾವಣೆ ಹತ್ತಿರ ಬಂದಿರುವ ಸಂದರ್ಭದಲ್ಲಿ ಈ 5 ಅಂಶಗಳ ಒಂದು ತಿದ್ದುಪಡಿಯನ್ನು ಏನು ತಂದಿದ್ದಾರೆ, ಇದನ್ನು ಎಲ್ಲರೂ ಕೂಡ ಸ್ವಾಗತಿಸಬೇಕು. ಮುಂದೆ ಬರತಕ್ಕಂತಹ ದಿನಗಳಲ್ಲಿ ಅವರೇ ನಿರ್ಣಯ ಮಾಡಿರತಕ್ಕಂತಹ ರೀತಿಯಲ್ಲಿ ಮಾನ್ಯ ರಮೇಶ್‌ಕುಮಾರ್ ಅವರ ವರದಿಯನ್ನು ಯಥಾವತ್ತಾಗಿ ಜಾರಿಗೆ ತರುತ್ತೇವೆ ಎಂದು ಹೇಳಿರುವುದರಿಂದ ಇದರ ಬಗ್ಗೆ ಈ ಸಂದರ್ಭದಲ್ಲಿ ಹೆಚ್ಚಿನ ಚರ್ಚೆ ಮಾಡುವುದು ಅನಾವಶ್ಯಕ. ದಯಮಾಡಿ ಸಭೆ ಇದಕ್ಕೆ ತನ್ನ ಒಪ್ಪಿಗೆಯನ್ನು ನೀಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ಸದನದಲ್ಲಿ ನಾನು 6ನೇ ವರ್ಷಕ್ಕೆ ಕಾಲಿಟ್ಟಿದ್ದೇನೆ. ಈ ಸದನದಲ್ಲಿ ಐದೂವರೆ ವರ್ಷಗಳಿಂದ ಸಾವಿರಾರು ವಿಧೇಯಕಗಳು ಪಾಸಾಗಿ ಹೋಗಿದೆ. ಆದರೆ ಅತಿ ತೃಪ್ತಿದಾಯಕವಾಗಿ, ಸಂತೋಷವಾಗಿ ಈ ವಿಧೇಯಕದ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ಈ ಮೊದಲನೇ ವಿಧೇಯಕ ನನಗೆ ಬಹಳ ತೃಪ್ತಿಯನ್ನು ತಂದಿದೆ. ಇದು ಶಾಸನ ರಚನೆ ಮಾಡುವಂತಹ ಒಂದು ಸದನ ಆದರೂ ಕೂಡ ತರಾತುರಿಯಲ್ಲಿ ಸದಸ್ಯರು ಸದನದ ಬಾವಿಯಲ್ಲಿದ್ದಾಗಲೂ ಕೂಡ ಪಾಸಾಗುವಂತಹ ಹತ್ತಾರು ವಿಧೇಯಕಗಳನ್ನು ನಾವು ನೋಡಿದ್ದೇವೆ. ನಮ್ಮ ಮುಖ್ಯಮಂತ್ರಿಗಳು ಕೂಡ ಸಾಕಷ್ಟು ಆಸಕ್ತಿಯನ್ನು ವಹಿಸಿದ್ದಾರೆ. ಅವರು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಮುಕ್ತ ಅವಕಾಶವನ್ನು ಕೊಟ್ಟು ಇದಕ್ಕೆ ಅಗತ್ಯವಾದ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಈ ಸಮಿತಿಯಲ್ಲಿ ಸಚಿವರೂ ಕೂಡ ಅದರಲ್ಲಿ ಸದಸ್ಯರಾಗಿದ್ದರು. ಎರಡು ವರ್ಷಗಳ ಕಾಲದಿಂದ ಈ

ವಿಚಾರದ ಬಗ್ಗೆ ಚರ್ಚೆ ಮಾಡಿದ್ದಾರೆ. ಈ ಒಂದು ಇಲಾಖೆಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳಿಂದ ಆರಿಸಿ ಬಂದಿರುವಂತಹ ಸದಸ್ಯರುಗಳನ್ನು ಕರೆದು ಹಲವಾರು ಬಾರಿ ಸಭೆಗಳನ್ನು ಮಾಡಿದ್ದಾರೆ. ಮತ್ತು ರಾಜ್ಯದಾದ್ಯಂತ ಎಲ್ಲಾ ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯತಿಗಳ ಸದಸ್ಯರುಗಳ, ಮತದಾರರ, ಜನ ಪ್ರತಿನಿಧಿಗಳ ಒಂದು ಅಭಿಪ್ರಾಯವನ್ನು ಪಡೆದು ಈ ಒಂದು ವಿಧೇಯಕವನ್ನು ಇಲ್ಲಿ ತರುತ್ತಿರತಕ್ಕಂಥಾದ್ದು ಸ್ವಾಗತಾರ್ಹ; ಪಂಚಾಯತ್ ರಾಜ್ ಕಾಯಿದೆಗೆ ಈ ಒಂದು ತಿದ್ದುಪಡಿಯನ್ನು ತರುತ್ತಿರತಕ್ಕಂಥಾದ್ದು ಬಹಳ ಸಂತೋಷವಾಗಿದೆ. ನಾನು ತುಂಬು ಹೃದಯದಿಂದ ಈ ವಿಧೇಯಕವನ್ನು ಸ್ವಾಗತಿಸುತ್ತೇನೆ. ಅಲ್ಲದೆ, ಮಾನ್ಯ ಮುಖ್ಯಮಂತ್ರಿಯವರನ್ನು ಹಾಗೂ ಮಾನ್ಯ ಪಂಚಾಯತ್ ರಾಜ್ ಸಚಿವರನ್ನು ಸಹ ಅಭಿನಂದಿಸುತ್ತೇನೆ. ದೇಶ ಉದ್ಧಾರ ಆಗಬೇಕೆಂದರೆ ಮೊದಲು ಗ್ರಾಮ ಉದ್ಧಾರ ಆಗಬೇಕು, ಗ್ರಾಮ ಸ್ವರಾಜ್ಯ ಬರಬೇಕು, ಗ್ರಾಮ ಸ್ವರಾಜ್ಯದ ಕನಸನ್ನು ಏನು ಗಾಂಧೀಜಿಯವರು ಕಂಡಿದ್ದರು ಅದು ನನಸಾಗುವ ಕಾಲ ಬಂದಿದೆ. ಇವೊತ್ತು ರಾಜ್ಯದಲ್ಲಿ ಅತೀ ಹೆಚ್ಚು ಜನ ಪ್ರತಿನಿಧಿಗಳು ಇರತಕ್ಕಂಥ ಸಂಸ್ಥೆ ಅಂದರೆ ಸ್ಥಳೀಯ ಸಂಸ್ಥೆಗಳು. ಒಂದು ಲಕ್ಷ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಂಥ ಈ ಪಂಚಾಯತ್ ರಾಜ್ ವ್ಯವಸ್ಥೆಗೆ ಸೂಕ್ತವಾದಂಥ ತಿದ್ದುಪಡಿಯನ್ನು ತಂದಿದ್ದಾರೆ. ವಿಶೇಷವಾಗಿ ಬೆಂಗಳೂರು ಜಿಲ್ಲೆಯಲ್ಲಂತು 2–3 ತಿಂಗಳಿಗೊಮ್ಮೆ ಅಧ್ಯಕ್ಷರನ್ನು, ಉಪಾಧ್ಯಕ್ಷರನ್ನು ಬದಲಾವಣೆ ಮಾಡಿರತಕ್ಕಂಥ ಹಲವಾರು ನಿದರ್ಶನಗಳಿವೆ. ಇವೊತ್ತು ಐದು ವರ್ಷಗಳ ಕಾಲ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತ್ತಿಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷರ ಅವಧಿಯನ್ನು ಮುಂದುವರೆಸುವಂಥ ಕಾನೂನಿಗೆ ತಿದ್ದುಪಡಿ ತಂದಿರುವಂಥದ್ದು ಬಹಳ ಸ್ವಾಗತಾರ್ಹ. ಹಲವಾರು ಸದಸ್ಯರುಗಳು ಗೊಂದಲವನ್ನು ವ್ಯಕ್ತ ಮಾಡುತ್ತಿದ್ದರು. ಆದರೆ ಇಲ್ಲಿ ಐದು ವರ್ಷಗಳು ಅಥವಾ ಅಧ್ಯಕ್ಷರ ಸದಸ್ಯತ್ವ ಅವಧಿ ಇರುವ ತನಕ ಎಂದು ಬಹಳ ಸ್ಪಷ್ಟವಾಗಿದೆ. ಆದ್ದರಿಂದ ಅವರ ಸದಸ್ಯತ್ವ ಇರುವ ತನಕ ಅವರನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಬಹಳ ಉತ್ತಮವಾದಂಥ ನಿರ್ಧಾರ. ಇವೊತ್ತು ಐದು ವರ್ಷಗಳ ಅವಧಿಯಿಂದ ಹತ್ತು ವರ್ಷಗಳ ಕಾಲ ಮೀಸಲಾತಿಯನ್ನು ನಿಗದಿಪಡಿಸಿರುವ ಕಾರಣ ಮೊದಲನೆಯ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿ ಕೂಡ ಮುಂದಿನ ಅವಧಿಗೆ ಮತ್ತೆ ನನಗೆ ಅವಕಾಶ ಸಿಗುತ್ತದೆ, ಅದೇ ಸೇಮ್ ಕ್ಯಾಟೆಗರಿ ಬರುತ್ತದೆಂದು ಹೇಳಿ ಆ ಒಂದು ಕ್ಷೇತ್ರದಲ್ಲಿ ಕೆಲಸ ಮಾಡುವಂಥ ಅವಕಾಶ ಇರುವುದರಿಂದ ಇಬ್ಬಿಬ್ಬರು ಸದಸ್ಯರು ಆ ಒಂದು ವಾರ್ಡ್ ಮಟ್ಟದಲ್ಲಿ ಜನರ ಸಮಸ್ಯೆಗಳನ್ನು ಆಲಿಸುವಂಥ ಪಂಚಾಯತ್ ವ್ಯವಸ್ಥೆ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವಂಥ ಕೆಲಸವನ್ನು ಮಾಡುವಂಥ ಅವಕಾಶವಾಗುತ್ತದೆ.

ಇವೊತ್ತೇನು ಕಡ್ಡಾಯ ಮತದಾನವನ್ನು ಮಾಡಿದ್ದಾರೆ ಇದು ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ತಂದಿರತಕ್ಕಂಥ ಕ್ರಾಂತಿದಾಯಕವಾದಂಥ ವಿಚಾರ. ಹಲವಾರು ಬಾರಿ ಹಲವಾರು ಪ್ರಯತ್ನಗಳಾಗಿದ್ದರು ಕೂಡ ಕಡ್ಡಾಯ ಮತದಾನವನ್ನು ತರಬೇಕೆಂದು ಹೇಳಿ ಇವೊತ್ತಿನ ವರೆಗೂ ಕೂಡ ಕಡ್ಡಾಯ ಮತದಾನವನ್ನು ತರಲಿಕ್ಕೆ ಸಾಧ್ಯವಾಗಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಈ ಸ್ಥಳೀಯ ಚುನಾವಣೆಗಳಲ್ಲಿ ಕಡ್ಡಾಯ ಮತದಾನ ಮಾಡಬೇಕು ಎನ್ನುವಂಥ ಕಾನೂನಿಗೆ ತಿದ್ದುಪಡಿ ತಂದಿರುವಂಥದ್ದು ಸ್ವಾಗತಾರ್ಹ. ನಮ್ಮ ಬೆಂಗಳೂರು ನಗರ ಜಿಲ್ಲೆಯಲ್ಲಿ ಕೈಗಾರಿಕಾ ಪ್ರದೇಶಗಳಲ್ಲಿ 25,000 ಮತದಾರರು ಇರುತ್ತಾರೆ, ಆದರೆ ಮತದಾನ ಆಗುವಂಥದ್ದು ಕೇವಲ ಐದಾರು ಸಾವಿರ ಮಾತ್ರ. ಅಲ್ಲಿ ಚುನಾವಣೆಯಾಗುವುದಕ್ಕಿಂತ 2-3 ತಿಂಗಳು ಮುಂಚೆ ಈ ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ಮಾಡುವಂಥ ಒಂದು ಕೆಲಸವನ್ನು ಕಡ್ಡಾಯವಾಗಿ ಮಾಡಬೇಕು. ಇಲ್ಲದಿದ್ದರೆ ಮತದಾನದಿಂದ ವಂಚಿತರಾಗುವವರು ಅಥವಾ ಮತದಾರರು ಅಲ್ಲಿದ್ದಾರೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಬೇಕು. ಅವರು ಇಲ್ಲದಿದ್ದರೆ ಕಡ್ಡಾಯ ಮತದಾನದ ಕಾನೂನಿನಲ್ಲಿ ಅವರ ಮೇಲೆ ಯಾವ ರೀತಿ ಕಾನೂನಿನ ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಅವರ ರೇಶನ್ ಕಾರ್ಡ್ ಅನ್ನು ವಜಾ ಮಾಡುತ್ತೀರಾ? ಅಥವಾ ಅವರ ಗ್ಯಾಸ್ ಕನೆಕ್ಷನ್ ತೆಗೆಯುತ್ತೀರಾ? ಅವರಿಗೆ ಯಾವ ರೀತಿ ಕಡ್ಡಾಯವಾಗಿ ಮತದಾನ ಮಾಡಬೇಕೆನ್ನುವಂಥ ಒಂದು ತಿಳುವಳಿಕೆ ಜನರಿಗೆ ಮುಟ್ಟಬೇಕು. ಆಗ ಮಾತ್ರ ಆ ಜನರು ಬಂದು ಕಡ್ಡಾಯವಾಗಿ ಮತದಾನ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇವೊತ್ತು ಈ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯ್ತಿಗಳಲ್ಲಿ 27 ಇಲಾಖೆಗಳ ಮೇಲೆ ಆ ಪಂಚಾಯ್ತಿಗಳಿಗೆ ನಿಯಂತ್ರಣ ಇರುವ ಕಾರಣ ಬಹಳ ಮಹತ್ವವಾದ ಅಧಿಕಾರವನ್ನು ಗ್ರಾಮಪಂಚಾಯ್ತಿ ಅಧ್ಯಕ್ಷರಿಗೆ ಕೊಡುವಂಥ ಕೆಲಸ ಆಗಿದೆ. ಆ ನಿಟ್ಟಿನಲ್ಲಿ ಇವೊತ್ತು ಈ ಬಿಲ್ ಅನ್ನು ಸ್ವಾಗತ ಮಾಡುತ್ತ ಮತ್ತೊಮ್ಮೆ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಪಂಚಾಯತ್ ರಾಜ್ ಸಚಿವರನ್ನು ಅಭಿನಂದಿಸಿ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಬಿಲ್ ಅನ್ನು ಸ್ವಾಗತ ಮಾಡುತ್ತೇನೆ. ಇದರಲ್ಲಿ ಮಾನ್ಯ ರಮೇಶ್ ಕುಮಾರ್ ಸಮಿತಿಯ ಶಿಫಾರಸ್ಸನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆನ್ನುವಂಥ ಒತ್ತಾಯವನ್ನು ಮಾಡುತ್ತೇನೆ. ಮಾನ್ಯ ಸಚಿವರು ಈಗಾಗಲೇ ಸದನದಲ್ಲಿ ಒಂದು ಹೇಳಿಕೆಯನ್ನು ಮಾಡಿದ್ದಾರೆ. ಮುಂಬರುವ ದಿನಗಳಲ್ಲಿ ಆದಷ್ಟು ಬೇಗ ಮಾನ್ಯ ರಮೇಶ್ ಕುಮಾರ್ ಸಮಿತಿಯ ವರದಿಯನ್ನು ಜಾರಿಗೆ ತರುತ್ತೇವೆ ಎನ್ನುವಂಥ ಒತ್ತಾಯವನ್ನು ಮತ್ತೊಮ್ಮೆ ಈ ಸಂದರ್ಭದಲ್ಲಿ ಮಾಡುತ್ತೇನೆ. ನಾಲ್ಕು ವಿಚಾರಗಳಿಗಾಗಿ ಅವರು ಈ ತಿದ್ದುಪಡಿಯನ್ನು ತರುತ್ತಿದ್ದಾರೆ.

ವಿಶೇಷವಾಗಿ ಕೇಂದ್ರ ಚುನಾವಣಾ ಆಯೋಗ ತಂದಿರತಕ್ಕಂಥ ನೋಟಾ ಮತ್ತು ಕಡ್ಡಾಯ ಮತದಾನವನ್ನು ಸ್ವಾಗತ ಮಾಡುತ್ತೇನೆ. ಅದರ ಜೊತೆಗೆ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಅಧ್ಯಕ್ಷರ ಅವಧಿ ಐದು ವರ್ಷಗಳಿಗಾಗಿ ಏನು ಮಾಡುತ್ತಿದ್ದಾರೆ, ಅದನ್ನು ಕೂಡ ಸ್ವಾಗತ ಮಾಡುತ್ತೇನೆ. ಆಡಳಿತದ ದೃಷ್ಟಿಯಿಂದ ಮತ್ತು ಭ್ರಷ್ಟಾಚಾರವನ್ನು ಕೊನೆಗಾಣಿಸಲಿಕ್ಕೆ ಏನು ಅವರು ತಿದ್ದುಪಡಿಯನ್ನು ತಂದಿದ್ದಾರೆ, ಅದು ಯಶಸ್ವಿಯಾಗುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದರ ಜೊತೆಗೆ ಹತ್ತು ವರ್ಷಗಳ ಅವಧಿಗಾಗಿ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಕ್ಷೇತ್ರವನ್ನು ಮೀಸಲಾತಿ ಮಾಡುವ ಮೂಲಕ, ಅಂದರೆ ಅವರು ಯಾವ ಕ್ಷೇತ್ರದಿಂದ ಆಯ್ಕೆಯಾಗಿರುತ್ತಾರೆ, ಅದನ್ನು ಹತ್ತು ವರ್ಷಗಳ ಅವಧಿಗಾಗಿ ಮಾಡುವುದು ಆ ಚುನಾಯಿತ ಪ್ರತಿನಿಧಿ ತಾನು ಆಯ್ಕೆಯಾದಂಥ ಕ್ಷೇತ್ರಕ್ಕೆ ನ್ಯಾಯವನ್ನು ಒದಗಿಸತಕ್ಕಂಥ ಮತ್ತು ಅಲ್ಲಿ ಅವರು ಅಭಿವೃದ್ಧಿ ಮಾಡತಕ್ಕಂಥ ದೃಷ್ಟಿಯಿಂದ ತಂದಿರತಕ್ಕಂಥ ಬದಲಾವಣೆ ಏನಿದೆ ಇದು ಸ್ವಾಗತಾರ್ಹವಾದ ವಿಷಯ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇವೊತ್ತು ಅಬ್ದುಲ್ ನಜೀರ್‌ಸಾಹೇಬರು ಇರಬಹುದು, ದಿವಂಗತ ರಾಜೀವ್ ಗಾಂಧಿಯವರು ಇರಬಹುದು, ಸ್ಥಳೀಯ ಆಡಳಿತ ಜನರ ಕೈಯಲ್ಲಿ ಇರಬೇಕೆನ್ನುವಂಥ ವಿಚಾರ ಏನಿದೆ, ಅದನ್ನು ಅನುಷ್ಠಾನಗೊಳಿಸುವಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿರತಕ್ಕಂಥ ಸನ್ಮಾನ್ಯ ಹೆಚ್.ಕೆ. ಪಾಟೀಲರು ಈ ಸದನದಲ್ಲಿ ಗ್ರಾಮಸಭೆಗಳು ಮತ್ತು ವಾರ್ಡ್ ಸಭೆಗಳು ನಡೆಯಬೇಕು ಎನ್ನುವಂಥ ಹಿನ್ನೆಲೆಯಲ್ಲಿ ಚರ್ಚೆಯಾದಂಥ ಸಂದರ್ಭದಲ್ಲಿ ಅವರು ಅದಕ್ಕೆ ಪೂರಕವಾಗಿ ಎಲ್ಲಾ ಸದಸ್ಯರ ವಿಶ್ವಾಸವನ್ನು ತೆಗೆದುಕೊಂಡು ಪಂಚಾಯತ್ ರಾಜ್ ಸಮಿತಿಯ ಸಂಪೂರ್ಣ ತಿದ್ದುಪಡಿಗೆ ಚಾಲನೆಯನ್ನು ಕೊಡುವುದರ ಮೂಲಕ ಅಮೂಲಾಗ್ರವಾಗಿರತಕ್ಕಂಥ ಬದಲಾವಣೆಗೆ ಹೊಸ ನಾಂದಿಯನ್ನು ಹಾಡಿದ್ದಾರೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಒಂದು ಸಮಿತಿ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಅನುಷ್ಠಾನ ಮಾಡಬೇಕೆನ್ನುವುದು ನಮ್ಮ ಒತ್ತಾಯ. ತಾವು ಅದರಲ್ಲಿನ ಕೇವಲ ನಾಲ್ಕು ಅಂಶಗಳಿಗೆ ತಿದ್ದುಪಡಿಯನ್ನು ತರುತ್ತಿದ್ದೀರಿ. ಚುನಾವಣೆ ಸಂದರ್ಭವಾಗಿ ಇನ್ನು ನಾಲ್ಕಾರು ವಿಚಾರಗಳಿಗಾಗಿ ಸಮಿತಿಯ ಶಿಫಾರಸ್ಸು ಇತ್ತು. ವಿಶೇಷವಾಗಿ ಚುನಾವಣಾ ಸಂದರ್ಭದಲ್ಲಿ ಹಣದ ಹೊಳೆ ಹರಿಯುವುದನ್ನು ತಡೆಯಲು ಪ್ರಚಾರ ಮತ್ತು ಕರಪತ್ರಗಳ ವೆಚ್ಚವನ್ನು ಸರ್ಕಾರ ವಹಿಸಿಕೊಳ್ಳಬೇಕೆನ್ನುವಂಥ ವಿಚಾರ ಇತ್ತು. ಇದನ್ನು ಜಾರಿಗೆ ತರತಕ್ಕಂಥ ಅವಕಾಶವಿತ್ತು. ಇದರ ಜೊತೆಗೆ ಚುನಾವಣೆ ಘೋಷಣೆಯಾದ ದಿನಾಂಕದಿಂದ ಚುನಾವಣೆ ಪ್ರಕ್ರಿಯೆ ಮುಗಿಯುವ ವರೆಗೆ ಮದ್ಯದ ಅಂಗಡಿಗಳನ್ನು ಬಂದ್ ಮಾಡಬೇಕು ಮತ್ತು ಮದ್ಯದ ಅಂಗಡಿಯ

ಕೀಲಿಯನ್ನು ಜಿಲ್ಲಾಧಿಕಾರಿಗಳ ಕೈಗೆ ಕೊಡಬೇಕೆನ್ನುವಂಥ ವಿಚಾರ ಪ್ರಸ್ತಾವನೆಯಾಗಿತ್ತು. ಅಲ್ಲದೆ ಚುನಾವಣೆ ಪ್ರಕ್ರಿಯೆ ಸಹಿತ ದೀರ್ಘವಾಗಿರಬಾರದು ಎನ್ನುವಂಥ ವಿಚಾರ ಅದರಲ್ಲಿತ್ತು. ಚುನಾವಣೆಯ ಸಮಯದಲ್ಲಿ ಕಟ್ಟುನಿಟ್ಟಿನ ಅನೇಕ ಬದಲಾವಣೆಗಳನ್ನು ಸರ್ಕಾರ ತರಬಹುದೆಂದು ನಮ್ಮ ನಿರೀಕ್ಷೆ ಇತ್ತು. ಆದರೂ ಸಹಿತ ಇದನ್ನು ಸ್ವಾಗತ ಮಾಡುತ್ತ, ಆದಷ್ಟು ಬೇಗ ಈ ಒಂದು ರಮೇಶ್ ಕುಮಾರ್ ಸಮಿತಿಯ ತಿದ್ದುಪಡಿಯನ್ನು ತಾವು ಸದನದಲ್ಲಿ ಮಂಡಿಸಬೇಕೆನ್ನುವಂಥ ವಿಷಯವನ್ನು ಹೇಳಬಯಸುತ್ತೇನೆ. ನಾವು ಇವೊತ್ತು ಚುನಾವಣೆಗೆ ಹೋಗುತ್ತಿದ್ದೇವೆ, ತಾವು ಗ್ರಾಮ ಪಂಚಾಯ್ತಿ ಸದಸ್ಯರ ಗೌರವ ಧನವನ್ನು ಹೆಚ್ಚು ಮಾಡಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಗೌರವ ಧನವನ್ನು ಗೌರವಯುತವಾಗಿ ಕೊಡಿ ಎಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಅವರು ಮೇ ತಿಂಗಳಿನಲ್ಲಿ ಚುನಾವಣೆಗೆ ಹೋಗುತ್ತಿದ್ದಾರೆ. ಆದರೆ ಗ್ರಾಮ ಪಂಚಾಯ್ತಿ ಸದಸ್ಯರ ಲಕ್ಷಾಂತರ ರೂಪಾಯಿ ಗೌರವಧನ ಸಂದಾಯವಾಗಿಲ್ಲ. ಅವರ ಅವಧಿ ಮುಗಿದು ಅವರು ಮನೆಗೆ ಹೋಗುವುದಕ್ಕಿಂತ ಮುಂಚೆ ಅವರಿಗೆ ಗೌರವಧನವನ್ನು ಕೊಡುತ್ತೇವೆ ಎನ್ನುವಂಥ ಸನ್ಮಾನ್ಯ ಸಚಿವರ ಹೇಳಿಕೆಯನ್ನು ನಾನು ಸದನದಲ್ಲಿ ಅಪೇಕ್ಷೆ ಮಾಡುತ್ತೇನೆ.

ಮಾನ್ಯ ನಂಜಯ್ಯನಮಠ ಸಮಿತಿ ಶಿಫಾರಸ್ಸಿನಲ್ಲಿ ದೊಡ್ಡ ಗ್ರಾಮ ಪಂಚಾಯ್ತಿಗಳನ್ನು ಪಟ್ಟಣ ಪಂಚಾಯ್ತಿಯಾಗಿ ಮಾಡಬೇಕೆನ್ನುವಂಥ ಘೋಷಣೆ ಏನಿದೆ, ಅದನ್ನು ಸಹಿತ ಸರ್ಕಾರ ಜಾರಿಗೆ ತರಬೇಕು. ಯಾವ ಗ್ರಾಮ ಪಂಚಾಯ್ತಿಯ ಜನಸಂಖ್ಯೆ 25,000 ಇದೆ, ಯಾವ ಗ್ರಾಮಪಂಚಾಯ್ತಿಗಳಲ್ಲಿ ಸದಸ್ಯರ ಸಂಖ್ಯೆ 60–70 ಇದೆ ಅವುಗಳನ್ನು ಪಟ್ಟಣ ಪಂಚಾಯ್ತಿಗಳನ್ನಾಗಿ ಈ ಚುನಾವಣೆಗೆ ಮುಂಚೆ ಘೋಷಣೆಯಾಗಬೇಕು. ಮತ್ತು ಅವುಗಳಿಗೆ ಪಟ್ಟಣ ಪಂಚಾಯ್ತಿಗಳಾಗಿ ಕಾರ್ಯರೂಪವನ್ನು ಪ್ರಾರಂಭ ಮಾಡಬೇಕೆನ್ನುವಂಥ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಬಯಸುತ್ತಿದ್ದೇನೆ. ನನಗೆ ತಿಳಿದ ಹಾಗೆ ಬೆಳಗಾವಿ ಜಿಲ್ಲೆಯಲ್ಲಿ ಸುಮಾರು ಹತ್ತು ಗ್ರಾಮಪಂಚಾಯ್ತಿಗಳನ್ನು ಪಟ್ಟಣ ಪಂಚಾಯ್ತಿಗಳನ್ನಾಗಿ ಮಾಡುತ್ತೇವೆ ಎನ್ನುವಂಥ ಸರ್ಕಾರದ ಪ್ರಸ್ತಾವನೆ ಇದೆ; ಪುರಸಭೆಗಳನ್ನಾಗಿ ಮಾಡುತ್ತೇವೆ ಎನ್ನುವಂಥ ಪ್ರಸ್ತಾವನೆ ಇದೆ. ಅವರಿಗೆ ಕೊಡತಕ್ಕಂಥ ಅನುದಾನ, 60 ಸದಸ್ಯರು ಇರತಕ್ಕಂಥ ಗ್ರಾಮ ಪಂಚಾಯ್ತಿಗೆ ಕೊಡತಕ್ಕಂಥ ಅನುದಾನ ಹತ್ತು ಲಕ್ಷ ರೂಪಾಯಿ, 10 ಸದಸ್ಯರು ಇರತಕ್ಕಂಥ ಗ್ರಾಮ ಪಂಚಾಯ್ತಿಗೆ ಕೊಡತಕ್ಕಂಥ ಅನುದಾನವೂ ಕೂಡ ಹತ್ತು ಲಕ್ಷ ರೂಪಾಯಿ. ನನ್ನ ಒತ್ತಾಯವೇನೆಂದರೆ ಇವತ್ತು ಗ್ರಾಮೀಣಾಭಿವೃದ್ಧಿ ಸಚಿವರು ಇರಬಹುದು, ನಗರಾಭಿವೃದ್ಧಿ ಸಚಿವರು ಇರಬಹುದು;

(ಗಂಟೆ – 1:00)

ಪಟ್ಟಣ ಪಂಚಾಯಿತಿಗಳನ್ನು ಮತ್ತು ಪುರಸಭೆಗಳನ್ನು ಯಾವ ಜನಸಂಖ್ಯೆ ಮತ್ತು ಸದಸ್ಯರ ಸಂಖ್ಯೆ ಹೆಚ್ಚಿಗೆ ಇದೆ, ಅವುಗಳನ್ನು ಸಹಿತ ಈ ಚುನಾವಣೆಗೆ ಮುಂಚಿತವಾಗಿ ಗ್ರಾಮ ಪಂಚಾಯಿತಿಗಳಿಂದ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳನ್ನಾಗಿ ಪರಿವರ್ತನೆ ಮಾಡುವ ಘೋಷಣೆಗಳನ್ನು ಸಚಿವರು ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯವನ್ನು ಮಾಡುತ್ತೇನೆ. ಜೊತೆಗೆ ಇವತ್ತು ಏನು ತಿದ್ದುಪಡಿ ವಿಧೇಯಕವನ್ನು ತೆಗೆದುಕೊಂಡು ಬಂದಿದ್ದಾರೆ ಅದನ್ನು ಸಹ ಸ್ವಾಗತ ಮಾಡುತ್ತಾ, ಶ್ರೀ ರಮೇಶ್‌ಕುಮಾರ್‌ರವರ ವರದಿಯನ್ನು ಪೂರ್ಣವಾಗಿ ಜಾರಿಗೆ ತರಬೇಕೆಂದು ತಮ್ಮ ಮುಖಾಂತರ ಒತ್ತಾಯವನ್ನು ಮಾಡುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪಂಚಾಯತ್ ರಾಜ್ ವಿಧೇಯಕದ ಬಗ್ಗೆ ನಾಲ್ಕು ತಿದ್ದುಪಡಿಗಳನ್ನು ತೆಗೆದುಕೊಂಡು ಬಂದಂತಹ ಸಂದರ್ಭದಲ್ಲಿ ಈ ಸರ್ಕಾರ ಅಧಿಕಾರವನ್ನು ವಹಿಸಿಕೊಂಡ ವರ್ಷದಲ್ಲಿ ಜನರು ಏನು ಆಸೆಯನ್ನು ಇಟ್ಟುಕೊಂಡಿದ್ದರು ಎಂದರೆ, ಈ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹೊಸ ಒಂದು ಬದಲಾವಣೆಯನ್ನು ಮಾಡಬೇಕು ಎನ್ನುವ ಕಾರಣಕ್ಕಾಗಿ ಸಮಿತಿಯನ್ನು ರಚನೆ ಮಾಡಿದರು. ಆ ಸಮಿತಿಯಿಂದ ಸಾಕಷ್ಟು ಸುಧಾರಣೆಯನ್ನು ಮಾಡಿ, ಹೆಚ್ಚು ಅಭಿವೃದ್ಧಿಯಲ್ಲಿ ಆ ಪಂಚಾಯಿತಿ ವ್ಯವಸ್ಥೆ ಬಲಗೊಳ್ಳಬೇಕು ಎನ್ನುವ ದೃಷ್ಟಿಯಿಂದ ಸಮಿತಿಯು 88 ಶಿಫಾರಸ್ಸುಗಳನ್ನು ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಇವತ್ತಿನ ದಿವಸ ಅವುಗಳನ್ನು ಕೂಡ ಹೊಸ ಚುನಾವಣೆಯ ನಂತರ ಆದಷ್ಟು ಬೇಗ ಅನುಷ್ಠಾನ ಮಾಡುವುದಕ್ಕೆ ವಿಧೇಯಕಗಳನ್ನು ತೆಗೆದುಕೊಂಡು ಬರುತ್ತೇವೆಂದು ಹೇಳಿದ್ದಾರೆ. ಆದರೆ ಅವುಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಬಂದಿರತಕ್ಕಂತಹ ನಾಲ್ಕು ತಿದ್ದುಪಡಿಗಳ ಬಗ್ಗೆ ಹೇಳುವುದಾದರೆ, ಒಂದನೆಯ ತಿದ್ದುಪಡಿ ಶ್ರೀ ರಮೇಶ್ ಕುಮಾರ್‌ರವರ ಸಮಿತಿಯು ಶಿಫಾರಸ್ಸು ಮಾಡಿದಂತೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಐದು ವರ್ಷಗಳ ಅವಧಿಯನ್ನು ನಿಗದಿಗೊಳಿಸಲಾಗಿದೆ. ಅಂದರೆ ಈಗಾಗಲೇ 30 ತಿಂಗಳುಗಳ ಅವಧಿ ಏನಿತ್ತು, ಅದರ ಬದಲು 60 ತಿಂಗಳುಗಳನ್ನಾಗಿ ಮಾಡಲಾಗಿದೆ. ಆದರೆ ಇದರಲ್ಲಿ ಹೊಸ ಬದಲಾವಣೆಯಾಗಿದೆ ಎಂದು ನನಗೇನು ಅನ್ನಿಸುವುದಿಲ್ಲ. ಏಕೆಂದರೆ ಈಗ ಇರುವಂತಹ ವಾಸ್ತವಿಕ ಸ್ಥಿತಿಯನ್ನು ನೋಡಿದಾಗ, ಆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯನ್ನು ನೋಡಿದಾಗ ಆ ಪಂಚಾಯಿತಿಗಳಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ಚುನಾವಣೆಗಳಾಗುತ್ತಿದೆ. ಇದಕ್ಕೆ ಏನಾದರು ಒಂದು ಬದಲಾವಣೆಯನ್ನು ಕೊಡುತ್ತಾರೆಯೇ ಎನ್ನುವ ಆಸೆ ನಮಗೆ ಇತ್ತು. ಆದರೆ ಇದರಲ್ಲಿ ಯಾವತ್ತು

ಚಿಂತನೆಯಾಗಿರಲಿಲ್ಲ. ಪ್ರಸ್ತುತ 30 ತಿಂಗಳುಗಳ ಕಾಲವಧಿಯನ್ನು 60 ತಿಂಗಳು ಎಂದು ತಿದ್ದುಪಡಿ ಮಾಡಿರುವುದರಿಂದ ಹೊಸ ಬದಲಾವಣೆಯನ್ನು ತರುವುದಕ್ಕಾಗುವುದಿಲ್ಲ ಎನ್ನುವುದನ್ನು ಕೂಡ ನಾನು ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಅಲ್ಲಿ ವಾಸ್ತವಿಕತೆಯನ್ನು ನೋಡಿದಾಗ ಇವತ್ತು ಯಾವುದೇ ಪಕ್ಷವನ್ನು ಸದಸ್ಯರು ಧಿಕ್ಕರಿಸಿ, ಅಲ್ಲಿ ಚುನಾವಣೆಯನ್ನು ಮಾಡತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ಇವತ್ತು ಪಕ್ಷದ ಅಡಿಯಲ್ಲಿ ಚುನಾವಣೆಗಳು ನಡೆದಾಗಿಯೂ ಸಹಿತ ಆ ಪಕ್ಷದ ಆದೇಶವನ್ನು ಕೂಡ ಧಿಕ್ಕರಿಸಿ ತಮ್ಮ ಇಚ್ಛಾನುಸಾರ ಭ್ರಷ್ಟಾಚಾರದ ಮೂಲಕ ಅಲ್ಲಿ ಪಂಚಾಯಿತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರುಗಳ ಚುನಾವಣೆ ಆಗುವಂಥದ್ದನ್ನು ನೋಡಿದ್ದೇವೆ. ಅದಕ್ಕೆ ಏನಾದರು ಒಂದು ಶಿಸ್ತಿನ ಬದಲಾವಣೆಯನ್ನು ತರಲಾಗುವುದೆಂದು ನಾವು ಆಸೆಯನ್ನು ಇಟ್ಟುಕೊಂಡಿದ್ದೆವು. ಆದರೆ ಅದು ಆಗಲಿಲ್ಲ. ದಯವಿಟ್ಟು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈಗಾಗಲೇ ಘೋಷಣೆಯನ್ನು ಮಾಡಿರುವಂತೆ ಮುಂದೆ ಬದಲಾವಣೆಯನ್ನು ತೆಗೆದುಕೊಂಡು ಬರುವ ಕಾಲದಲ್ಲಿ ಇದಕ್ಕೆ ಹೆಚ್ಚು ಒತ್ತನ್ನು ಕೊಟ್ಟು ಈ ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಮಾಡುವಂತಹ ಸಂದರ್ಭದಲ್ಲಿ ಒಂದು ಮಾನದಂಡವನ್ನು ಇಟ್ಟುಕೊಂಡು ಸರ್ಕಾರ ಆ ಮಾನದಂಡದ ಆಧಾರದ ಮೇಲೆ ಇವತ್ತು ಅವಿಶ್ವಾಸ ನಿರ್ಣಯವನ್ನು ತರಬೇಕಾಗುತ್ತದೆ. ಇಲ್ಲ ಎಂದರೆ ಸರಾಸಗಟಾಗಿ ಆರು ತಿಂಗಳಿಗೆ ಎಂದು ಒಪ್ಪಂದವನ್ನು ಮಾಡಿಕೊಂಡು ಮತ್ತೆ ಆರು ತಿಂಗಳ ನಂತರ ಹೊಸ ಒಪ್ಪಂದಕ್ಕೆ ಇವತ್ತು ಪಂಚಾಯಿತಿ ವ್ಯವಸ್ಥೆ ಏನು ಬಂದಿದೆ, ಅದನ್ನು ಏನಾದರೂ ಬದಲಾವಣೆ ಮಾಡುವ ಪೂರ್ವದಲ್ಲಿ ಅದಕ್ಕೆ ಏನಾದರು ಮಾನದಂಡವನ್ನು ಇಟ್ಟರೆ ಮಾತ್ರ. ಅದರಲ್ಲಿ ಸುಧಾರಣೆಯನ್ನು ತೆಗೆದುಕೊಂಡು ಬರಬಹುದೆಂದು ಹೇಳುತ್ತಿದ್ದೇನೆ.

ವಿಶೇಷವಾಗಿ ಏನು ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳಿಗೆ 5 ವರ್ಷಗಳ ಬದಲು 10 ವರ್ಷಗಳೆಂದು ಅವಧಿಯನ್ನು ಹೆಚ್ಚು ಮಾಡುತ್ತಿದ್ದೀರಿ. ಮುಂದೆ ಕೊಡುತ್ತಿರೋ ಅಥವಾ ಈಗ ಇರುವವರನ್ನು ಮುಂದುವರೆಸುತ್ತಿರೋ ಎನ್ನುವುದರ ಬಗ್ಗೆ ಈ ವಿಧೇಯಕದಲ್ಲಿ ಸ್ಪಷ್ಟತೆ ಇಲ್ಲ. ಕಡ್ಡಾಯವಾಗಿ ಇರಬೇಕು. ಆದರೆ ಕಡ್ಡಾಯವಾಗಿ ಮಾಡದೇ ಇರುವವರಿಗೆ ಏನು ಮಾಡಲಾಗುವುದು ಎನ್ನುವುದಿಲ್ಲ. ಇದರ ಬಗ್ಗೆ ಶಿಸ್ತನ್ನು ಮಾಡಲಿಲ್ಲ ಎಂದರೆ ಇದು ಕಡ್ಡಾಯ ಎಂದು ಮಾಡಿದರು ಕೂಡ ಇದಕ್ಕೆ ಯಾವುದೇ ರೀತಿಯಲ್ಲಿ ಅರ್ಥ ಬರುವುದಿಲ್ಲವೆಂದು ಹೇಳಬಯಸುತ್ತೇನೆ. ಬರುವಂತಹ ದಿನಗಳಲ್ಲಿ ಹೊಸ ಪಂಚಾಯಿತಿ ವ್ಯವಸ್ಥೆಯೊಳಗೆ ಮತ್ತೆ ಪೂರ್ಣ ಬದಲಾವಣೆಯನ್ನು ತರಲಾಗುವುದೆಂದು ಸಚಿವರು ಏನು ಹೇಳಿದ್ದಾರೆ, ಅದರ ಬಗ್ಗೆ ನಂಬಿಕೆಯನ್ನು ಇಟ್ಟು, ಮುಂದೆ ಮಾನ್ಯ ಸಚಿವರು ಪೂರ್ಣ ಬದಲಾವಣೆಯನ್ನು ತರುತ್ತಾರೆ

ಎಂದು ನಂಬುತ್ತೇನೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾತನಾಡಿದಂತಹ ಎಲ್ಲಾ ಸನ್ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿರುವಂಥದ್ದನ್ನು ನಾವು ಕೇಳಿದ್ದೇವೆ. ನನ್ನದು ಕೂಡ ಅದಕ್ಕೆ ಪೂರಕವಾಗಿರುವಂತಹ ಒಂದು ಸಹಮತವನ್ನು ಈ ಸಂದರ್ಭದಲ್ಲಿ ವ್ಯಕ್ತ ಮಾಡುತ್ತಿದ್ದೇನೆ. ಯಾವ ಉದ್ದೇಶದಿಂದ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಧಿಯನ್ನು 30 ತಿಂಗಳುಗಳಿಂದ 60 ತಿಂಗಳುಗಳೆಂದು ಮಾಡಲಾಗುತ್ತಿದೆಯೋ; ಬಹುಶಃ ಈ ತಿದ್ದುಪಡಿಯಿಂದ ಯಾವುದನ್ನು ತಡೆಯಬೇಕೆಂದು ನಾವು ಅಪೇಕ್ಷೆ ಮಾಡುತ್ತಿದ್ದೇವೆಯೋ, ಅದನ್ನು ತಡೆಯುವುದಕ್ಕೆ ಖಂಡಿತವಾಗಿಯೂ 100ಕ್ಕೆ 100ರಷ್ಟು ಸಾಧ್ಯವಿಲ್ಲದೇ ಇರುವಂಥದ್ದನ್ನು ಬಹಳ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಅದಕ್ಕೋಸ್ಕರವಾಗಿ ಶ್ರೀ ರಮೇಶ್ ಕುಮಾರ್‌ರವರ ಸಮಿತಿಯ ಮುಂದೆ ಇದನ್ನು ತಡೆಯುವಂಥದ್ದು ಆಗಬೇಕೆಂದು ನಾವು ಪ್ರತಿಪಾದನೆಯನ್ನು ಮಾಡಿದಂಥದ್ದು. ಆಡಳಿತದಲ್ಲಿ ಸುಧಾರಣೆಯಾಗಬೇಕು, ಆಡಳಿತ ಅಲ್ಲಿ ಘಟ್ಟಿಯಾಗಬೇಕು, ವಿಕೇಂದ್ರೀಕರಣಕ್ಕೆ ಒಂದು ಅರ್ಥ ಬರಬೇಕು ಎನ್ನುವುದಾದರೆ ಈ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಯ್ಕೆಯನ್ನು ಸದಸ್ಯರುಗಳಿಗೆ ಬಿಡದೇ ನೇರವಾಗಿ ಜನರಿಗೆ ಬಿಡುವಂಥದ್ದು ಬಹಳ ಸೂಕ್ತ ಎನ್ನುವುದನ್ನು ಹೇಳಿದೆ. ಶ್ರೀ ರಮೇಶ್ ಕುಮಾರ್‌ರವರ ಸಮಿತಿಯ ವರದಿಯಲ್ಲಿಯೂ ಕೂಡ ಆ ವಿಷಯ ಪ್ರಸ್ತಾಪವಾಗಲಿಲ್ಲ ಎನ್ನುವಂಥದ್ದು ಇದೆ. ಆದರೆ ದಯಮಾಡಿ ಸರ್ಕಾರ ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುವುದಾದರೆ ನಾವೇನಾದರು ವಿಕೇಂದ್ರಿಕರಣಕ್ಕೆ ಅರ್ಥ ಬರುವಂತಹ ರೀತಿಯಲ್ಲಿ ಅಲ್ಲಿ ಕೆಲಸ ನಡೆಯಬೇಕು ಎನ್ನುವುದಾದರೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಯ್ಕೆಯ ಹಕ್ಕನ್ನು ನೇರವಾಗಿ ಜನತೆಗೆ ಬಿಡತಕ್ಕಂಥದ್ದು, ನೇರವಾಗಿ ಜನರೇ ಆಯ್ಕೆ ಮಾಡತಕ್ಕಂಥದ್ದು ಅತ್ಯಂತ ಅವಶ್ಯಕವಾದುದಾಗಿದೆ.

ನಿಜ, ವಿಕೇಂದ್ರೀಕರಣದ ಬಗ್ಗೆ ಮಾತುಗಳನ್ನು ಕೇಳಬೇಕಾದರೆ ಕಿವಿಗೆ ಬಹಳ ಇಂಪು ಆಗುತ್ತದೆ. ಆದರೆ ಇವತ್ತಿನ ದಿನ ನಡೆಯುತ್ತಿರತಕ್ಕಂಥದ್ದು ಬೇರೆ. ನಾವೆಲ್ಲರೂ ಶಾಸಕರುಗಳಿದ್ದೇವೆ; ಶಾಸಕರಾಗಿ ನಾವು ಅಪೇಕ್ಷೆಯನ್ನು ಪಡೆಯತಕ್ಕಂಥದ್ದು ಏನೆಂದರೆ, ಆ ಎಲ್ಲಾ ಅಧಿಕಾರಗಳ ಕೇಂದ್ರೀಕರಣ ನಮ್ಮಲ್ಲಿಯೇ ಆಗಬೇಕೆಂದು ನಾವು ಅಪೇಕ್ಷೆ ಪಡುತ್ತೇವೆ. ಹಾಗಾಗಿ ಒಂದು ಕಡೆ ವಿಕೇಂದ್ರಿಕರಣದ ಬಗ್ಗೆ ಮಾತನಾಡತಕ್ಕಂಥದ್ದು, ಇನ್ನೊಂದು ಕಡೆ ಕೇಂದ್ರಿಕೃತವಾದಂತಹ ಒಂದು ವ್ಯವಸ್ಥೆಗೆ ಹೋಗತಕ್ಕಂಥದ್ದು ಇದೆರಡು ಕೂಡ ಎಲ್ಲಿಯೋ ಒಂದು ಕಡೆ ಈ ವಿಕೇಂದ್ರೀಕರಣದ ಬಗ್ಗೆ ಇರತಕ್ಕಂತಹ hypocrisy

ಎನ್ನುವಂಥದ್ದನ್ನು ಹೇಳಬೇಕಾಗುತ್ತದೆ. ಅದಕ್ಕೋಸ್ಕರವಾಗಿ ಈಗ ಸನ್ಮಾನ್ಯ ಮಂತ್ರಿಗಳಿಗೆ ಒಳ್ಳೆಯ ಅವಕಾಶ ಇವತ್ತು ಸಿಕ್ಕಿದೆ. ನಾನು ನಿರೀಕ್ಷೆ ಮಾಡಿದ್ದೆ, ಸಂಪೂರ್ಣವಾದಂತಹ ವರದಿಯನ್ನು ಸದನದಲ್ಲಿ ಮಂಡನೆ ಮಾಡಿ, ಅದರ ಬಗ್ಗೆ ಚರ್ಚೆಯಾಗಿ ಅದರ ಮುಖಾಂತರ ಕ್ಯಾಬಿನೆಟ್, ಕ್ಯಾಬಿನೆಟ್ ಉಪ ಸಮಿತಿ ಇದನ್ನು ಚರ್ಚೆ ಮಾಡುತ್ತದೆಂದು. ನಿಜ, ಈಗ ಅದು ಕ್ಯಾಬಿನೆಟ್ ಮುಂದೆ ಇದೆ ಎಂದು ಹೇಳಿದ್ದಾರೆ. ನನಗೂ ಮತ್ತು ಸದನಕ್ಕೂ ಕೂಡ ಮಾನ್ಯ ಸಚಿವರು ಭರವಸೆಯನ್ನು ಕೊಟ್ಟಿದ್ದಾರೆ. ಹೊಸ ಚುನಾವಣೆಯಾಗಿ, ಅಧ್ಯಕ್ಷರು ಅಧಿಕಾರವನ್ನು ವಹಿಸಿಕೊಳ್ಳುವುದಕ್ಕೆ ಮೊದಲು ಶ್ರೀ ರಮೇಶ್ ಕುಮಾರ್‌ರವರ ಸಮಿತಿಯ ವರದಿಯನ್ನು ಸದನದಲ್ಲಿ ಮಂಡನೆ ಮಾಡಿ, ಅದಕ್ಕೆ ಬೇಕಾಗಿರತಕ್ಕಂತಹ ತಿದ್ದುಪಡಿಯನ್ನು ತರತಕ್ಕಂತಹ ಅವರ ಒಂದು ಭರವಸೆಯ ಮೇಲೆ ವಿಶ್ವಾಸವನ್ನು ಇಟ್ಟು, ಈ ತಿದ್ದುಪಡಿಯನ್ನು ನಾನು ಸ್ವಾಗತ ಮಾಡುತ್ತಿದ್ದೇನೆ.

**ಶ್ರೀ ವಿ.ಎಸ್. ಉಗ್ರಪ್ಪ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇವತ್ತು ಏನು ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2015 ನ್ನು ಮಂಡನೆ ಮಾಡಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ.

**ಸಭಾಪತಿಯವರು:–** ಬರೀ ಸ್ವಾಗತ ಮಾಡಿದರೆ ಉಪಯೋಗವಿಲ್ಲ. ತಾವು ಕಾರಣಗಳನ್ನು ಸಹ ಹೇಳಬೇಕು.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಎರಡನೆಯದು ಬಹುಶಃ ಮಹಾತ್ಮಾ ಗಾಂಧಿಜೀಯವರು ಬಯಸಿದಂತಹ Local Self Government ಗೆ ಹೊಸ ಆಯಾಮವನ್ನು ಕೊಟ್ಟಂಥವರು ಇತಿಹಾಸದಲ್ಲಿ ಯಾರಾದರು ಇದ್ದರೆ, ಮೊದಲನೆಯದು ನಮ್ಮ ರಾಜ್ಯದಲ್ಲಿ ಶ್ರೀ ನಜೀರ್ ಸಾಬ್‌ರವರು ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರು. ರಾಷ್ಟ್ರ ಮಟ್ಟದಲ್ಲಿ Article 243 of the Constitution of India ಗೆ *Seventy-third* and *Seventy-fourth* amendment ತರುವುದರ ಮೂಲಕ ದಿವಂಗತ ರಾಜೀವ್ ಗಾಂಧಿಯವರು, ಶ್ರೀ ನರಸಿಂಹರಾವ್‌ರವರು ಹಾಗೂ ಮಾನ್ಯ ಸೀತಾರಾಮ್ ಕೇಸರಿಯವರು Article 243 ಗೆ ತಿದ್ದುಪಡಿಯನ್ನು ತಂದು ಸಂವಿಧಾನ ದತ್ತವಾಗಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ, Scheduled Castes, Scheduled Tribes, Backward Classes and women ಇವರಿಗೆ ಹಕ್ಕನ್ನು ಕೊಡತಕ್ಕಂತಹ ಪ್ರಯತ್ನ ನಡೆದಿರತಕ್ಕಂಥದ್ದನ್ನು ಇತಿಹಾಸದಲ್ಲಿ ಕಾಣಬಹುದು. ಮುಂದುವರೆದ ಭಾಗವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಈ ಸರ್ಕಾರ ಶ್ರೀ ಹೆಚ್.ಕೆ. ಪಾಟೀಲ್‌ರವರ ಮುಖಾಂತರ ಈ ಒಂದು ಆಯಾಮಕ್ಕೆ ಹೊಸ ಮನ್ವಂತರ ಬರೆಯುವಂಥದ್ದಕ್ಕೆ

ಏನು ಈ ತಿದ್ದುಪಡಿ ವಿಧೇಯಕವನ್ನು ತೆಗೆದುಕೊಂಡು ಬಂದಿದ್ದಾರೆ, ನಿಜಕ್ಕೂ ಸಹ ಸ್ವಾಗತಾರ್ಹವಾಗಿರುವಂತಹ ವಿಚಾರವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ತಿದ್ದುಪಡಿ ವಿಧೇಯಕದಲ್ಲಿ ಮೂರ್ನಾಲ್ಕು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಒಬ್ಬ ವಕೀಲನಾಗಿ 4–6 ವರ್ಷಗಳ ಕಾಲ ಸಂವಿಧಾನದ ಪಾಠವನ್ನು ಮಾಡಿರತಕ್ಕಂತಹ ಹಿನ್ನೆಲೆಯಲ್ಲಿ ಇಲ್ಲಿ ಐದು ವರ್ಷಕ್ಕೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಧಿಯನ್ನು ವಿಸ್ತರಣೆ ಮಾಡತಕ್ಕಂಥದ್ದು ಏನಿದೆ, ಬಹುಶಃ as far as my knowledge goes, Article 243 is like a *Bible*, it is like a *Bagavad Geetha* for the Local Self Government. ಇದರಲ್ಲಿ ಸ್ಪಷ್ಟ ಇದೆ. ಐದು ವರ್ಷಕ್ಕೆ ಎಲ್ಲಿಯೂ ಕಡಿಮೆ ಮಾಡಬೇಕೆಂದು Article 243 ನಲ್ಲಿ ಇಲ್ಲ. ಹಾಗಾಗಿ ಈ ತಿದ್ದುಪಡಿಯನ್ನೇನು ತಂದಿದ್ದಾರೆ, it is in conformity with the provisions of Article 243 of the Constitution. ಅದಕ್ಕಾಗಿ ನಾನು ಈ ವಿಧೇಯಕವನ್ನು ಸ್ವಾಗತಿಸುತ್ತೇನೆ. ಇನ್ನು ಎರಡನೆಯದಾಗಿ ಮೀಸಲಾತಿ ವಿಚಾರದ ಬಗ್ಗೆ Article 82 of the Constitution of India ಇದರಲ್ಲಿ ಅಸೆಂಬ್ಲಿ ಮತ್ತು ಪಾರ್ಲಿಮೆಂಟ್ ಮತಕ್ಷೇತ್ರಗಳೇನಿದ್ದವು, ಪ್ರತಿ 10 ವರ್ಷಕ್ಕೊಮ್ಮೆ delimitation ಮಾಡಬೇಕು ಎಂದಿತ್ತು. ಆದರೆ ಸರಿಯೋ, ತಪ್ಪೋ 2001 ಮತ್ತು 2002ರಲ್ಲಿ ಅಂದಿನ ಕೇಂದ್ರ ಸರ್ಕಾರ ಇದಕ್ಕೆ ಒಂದು ತಿದ್ದುಪಡಿಯನ್ನು ತಂದು 2025ರವರೆಗೂ ಯಾವುದೇ ಬದಲಾವಣೆ ಮಾಡಬಾರದು ಎಂಬುದನ್ನು ತಿಳಿಸಿದ್ದಾರೆ. ಅದು ಬೇರೆ ಪ್ರಶ್ನೆ. ಆದರೆ ನಾನಿಲ್ಲಿ 10 ವರ್ಷ ಎನ್ನುವುದಕ್ಕೆ ಬದಲಾಗಿ ಪ್ರತಿ 10 ವರ್ಷಕ್ಕೆ ನಡೆಯುವಂತಹ ಜನಗಣತಿಯ ಹಿನ್ನೆಲೆಯಲ್ಲಿ ಬಹುಶಃ ನನಗನಿಸುತ್ತದೆ Article 243 has to be read with Article 82 of the Constitution of India. ಹೇಗೆ ಅಲ್ಲಿ ಪಾರ್ಲಿಮೆಂಟ್ ಮತ್ತು ಅಸೆಂಬ್ಲಿ ಇದೆಯೋ ಅದೇ ರೀತಿ ಇಲ್ಲಿ ಪ್ರತಿ 10 ವರ್ಷಕ್ಕೆ ನಡೆಯುವಂತಹ ಜನಗಣತಿಯ ಆಧಾರದ ಹಿನ್ನೆಲೆಯಲ್ಲಿ ಈ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಇದರ ರಿಜರ್ವೇಶನನ್ನು ಮಾಡುವಂಥದ್ದು ಸೂಕ್ತವೆಂದು ನಾನು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ ಕಡ್ಡಾಯ ಮತದಾನದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಕಡ್ಡಾಯ ಮತದಾನದ ವಿಚಾರಕ್ಕೆ ಮೊದಲು ಈ ಮಹಿಳಾ ಮೀಸಲಾತಿಯ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ನಮ್ಮ ರಾಜ್ಯದಲ್ಲಿ ಈಗಾಗಲೇ as it is ಮಹಿಳೆಯರಿಗೆ 50% ಮೀಸಲಾತಿ ಇದೆ. ಈ ಮೀಸಲಾತಿಯ ಕಾರಣದಿಂದಾಗಿ ಇವತ್ತು ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ 10 ಕ್ಯಾಟಗರಿಗಳಿವೆ. ಅವುಗಳೆಂದರೆ: SC, SC (W), ST, ST(W), BCA ,BCA(W), BCB, BCB(W), General ಮತ್ತು

General (W). ಹೀಗಾಗಿ ಇಲ್ಲೇನಾಗಿದೆ ಎಂದರೆ, ಮಹಿಳಾ ಮೀಸಲು ಸ್ಥಾನ ಇರಬೇಕಾದರೆ ಬಹುಶಃ ಆ ಮೀಸಲಾತಿಗೆ ಸಂವಿಧಾನದ Article 243D ಎಂದು ಕಾಣುತ್ತದೆ; ಇಲ್ಲಿ 'on rotation' ಎಂದು ಇದೆ, ಆ 'on rotation' ವಿಚಾರದಲ್ಲಿ ಈಗ ಅಲ್ಲಿ ambiguity ಇದ್ದು, 'on rotation' ಎಷ್ಟು ವರ್ಷಕ್ಕೆ ಎನ್ನುವುದನ್ನು ಆರ್ಟಿಕಲ್ 243ಯಲ್ಲಿ ನಮೂದಿಸಿರುವುದಿಲ್ಲ. ಹಾಗಾಗಿ ನಾವು ಈಗ specify ಮಾಡುವುದರಿಂದ, ಅಂದರೆ ಆ ಜನಗಣತಿಯ ಹಿನ್ನೆಲೆಯಲ್ಲಿ ನಾವು ಇದನ್ನು ಮಾಡಿದ್ದೇವೆ. ರಾಜ್ಯದಲ್ಲಿ ಈಗಾಗಲೇ ಅಮೆಂಡ್‌ಮೆಂಟ್ ತಂದು ಈಗ ಮಹಿಳೆಯರಿಗೆ 50% ಮೀಸಲಾತಿಯನ್ನು ನೀಡಲಾಗುತ್ತಿದೆ. ಆದರೆ, ಕೇಂದ್ರದಲ್ಲಿ ಇಲ್ಲಿಯವರೆಗೂ ಸಹ ಈ ಮಹಿಳಾ ಮೀಸಲಾತಿ ಪ್ರಮಾಣ ಮೂರನೇ ಒಂದು ಭಾಗದಷ್ಟೇ ಇದೆ. ಹೀಗಾಗಿ ಸಂವಿಧಾನದ ರೀತ್ಯಾ ಇರತಕ್ಕಂಥದ್ದು ಮೂರನೇ ಒಂದು ಭಾಗ ಮಾತ್ರ. ಅಲ್ಲಿ ಕೂಡ ಮಹಿಳಾ ಮೀಸಲಾತಿಯ ಪ್ರಮಾಣವನ್ನು 50% ಮಾಡಬೇಕೆಂದು ಶ್ರೀಮತಿ ಸೋನಿಯಾಗಾಂಧಿಯವರು ಮತ್ತು ಡಾ॥ ಮನಮೋಹನ್ ಸಿಂಗ್‌ರವರು ಅನೇಕ ಬಾರಿ ಪ್ರಸ್ತಾವನೆಯನ್ನು ಸಲ್ಲಿಸಿ ಪ್ರತಿಪಾದನೆ ಮಾಡಿದರಾದರೂ, ಆ ಬಗ್ಗೆ ಸಂವಿಧಾನಾತ್ಮಕವಾಗಿ ಇನ್ನೂ ತಿದ್ದುಪಡಿ ಆಗಿರುವುದಿಲ್ಲ ಎನ್ನುವಂತಹ ಒಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಇಲ್ಲಿ ಒಂದು ದ್ವಂದ್ವ ಇರುವುದರಿಂದ ದಯಮಾಡಿ ಈ ಬಗ್ಗೆ ಸರ್ಕಾರ ಗಮನ ಹರಿಸಬೇಕಾಗುತ್ತದೆ. ಎಲ್ಲಿ ಮೀಸಲಾತಿ ಇದೆ ಆ ಬಗ್ಗೆ ಸಂವಿಧಾನದ ಆರ್ಟಿಕಲ್ 243ಯಲ್ಲಿ ಏನು ಹೇಳಲಾಗಿದೆ ಎಂದರೆ, Scheduled Castes and Scheduled Tribes, more particularly ಒಂದು ಸ್ಥಾನ ಇದ್ದರೆ, ಈಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸುಮಾರು 17,000 ಸದಸ್ಯರು ಈ ಪಂಚಾಯತಿ ವ್ಯವಸ್ಥೆಯಲ್ಲಿದ್ದಾರೆ. ನನ್ನ ಮಾಹಿತಿ ಪ್ರಕಾರ ಆ ಒಟ್ಟು 17,000 ಸದಸ್ಯರಲ್ಲಿ ಸುಮಾರು 12 ರಿಂದ 13 ಸಾವಿರ ಜನ ಸದಸ್ಯರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಹಿಳೆಯರೇ ಇದ್ದಾರೆ. ಏಕೆ ಈ ರೀತಿ ಆಗಿದೆ ಎಂದರೆ, 1 ಸ್ಥಾನ ಇದ್ದರೂ ಸಹ 50% ಎಂದು, it has to be reserved. ಆದರೆ ಸಂವಿಧಾನದಲ್ಲಿ ಇರುವುದು ಏನೆಂದರೆ, out of the seats reserved for Scheduled Castes or Scheduled Tribes as per clause (1) of Article 243D, one-third seats have to be reserved SC women or ST women ಎಂದು ಇದೆ, ಆದರೆ ಇವರು ಏನು ಮಾಡುತ್ತಾರೆ ಎಂದರೆ ಒಂದು ಸ್ಥಾನವಿದ್ದರೂ ಸಹ ಪರಿಶಿಷ್ಟ ಜಾತಿ ಮಹಿಳೆಗೆ ಆ ಸ್ಥಾನವನ್ನು ಮೀಸಲಿಡುತ್ತಾರೆ. ಈ ರೀತಿ ಮಾಡುವುದರಿಂದ ಅವರಿಗೆ 100% ಮೀಸಲಾತಿಯನ್ನು ನೀಡಿದಂತಾಗುತ್ತದೆ. 100% reservation is contrary to the provisions of the Constitution as well as the law laiddown by the Supreme Court of India. ದಯಮಾಡಿ ಎಲ್ಲಿ ಒಂದು ಸ್ಥಾನ ಮಾತ್ರ ಇರುತ್ತದೆ, let it be free for SC lady or ST lady. ಆ

ರೀತಿ ಮಾಡಿದಾಗ ನಾಯಕತ್ವವನ್ನು ಬೆಳೆಸುವುದಕ್ಕೆ ಸಾಧ್ಯತೆ ಇರುತ್ತದೆ, ಸಂವಿಧಾನವನ್ನು ಎತ್ತಿಹಿಡಿಯುವುದಕ್ಕೆ ಅವಕಾಶವಿರುತ್ತದೆ. ಈ ದಿಕ್ಕಿನಲ್ಲಿ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಅದರಿಂದ ಬಹುಶಃ ಆ ಭಾಗದ ಜನತೆಗೆ ಒಂದು ರೀತಿಯಲ್ಲಿ ನಾಯಕತ್ವಕ್ಕೆ ತೊಂದರೆ ಆಗುವಂತಹ ಸಾಧ್ಯತೆಗಳಿರುತ್ತವೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ನಾನು ಸಹ ಒಪ್ಪುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಸಹೋದರಿ ಮೋಟಮ್ಮನವರು ಸಹ ಈ ವಿಚಾರದಲ್ಲಿ ಬೆಂಬಲ ವ್ಯಕ್ತಪಡಿಸುತ್ತಿರುವುದರಿಂದ ಬಹುಶಃ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಇದರ ಬಗ್ಗೆ ಗಮನ ಹರಿಸುತ್ತಾರೆ ಎಂದು ನಾನು ಭಾವಿಸುತ್ತಿದ್ದೇನೆ. ಕೊನೆಯದಾಗಿ ಕಡ್ಡಾಯ ಮತದಾನದ ಬಗ್ಗೆ ಸಂವಿಧಾನದ ಆರ್ಟಿಕಲ್ 19ರಲ್ಲಿ ತಿಳಿಸಲಾಗಿದ್ದು, ಅದರಲ್ಲಿ ಅವನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ನೀಡಿರುವಂತಹ ಒಂದು ಮೂಲಭೂತ ಹಕ್ಕಾಗಿದೆ. ನಾನು ಇದನ್ನು ವಿಸ್ತರಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ 1991ರಲ್ಲಿ ಮಾನ್ಯ ಪಟೇಲ್ ಶಿವರಾಂ ಅವರ ಪಾರ್ಲಿಮೆಂಟ್ ಕ್ಷೇತ್ರದಲ್ಲಿ ಒಂದು ಘಟನೆ ಆಯಿತು. ಆ ಕ್ಷೇತ್ರದ 9 ಬೂತ್‌ಗಳಲ್ಲಿ ಶೇಕಡ 90ಕ್ಕೂ ಹೆಚ್ಚಿನ ಮತಗಳು ಪೋಲಾಗಿದ್ದವು. ಚುನಾವಣಾ ಆಯೋಗದ ಅಧಿಕಾರಿಯಾಗಿ ಶ್ರೀ ಟಿ.ಎನ್. ಸೇಷನ್ ಅವರಿದ್ದರು. ಇವತ್ತಿಗೂ ಸಹ ಪ್ರತಿ ಪಾರ್ಲಿಮೆಂಟ್ ಅಥವಾ ಅಸೆಂಬ್ಲಿ ಚುನಾವಣೆಯ ಸಂದರ್ಭದಲ್ಲಿ ಒಂದು ಸುತ್ತೋಲೆಯನ್ನು ಕಳುಹಿಸಿಕೊಡಲಾಗುತ್ತದೆ. ಅದೇನೆಂದರೆ: "Polling of Where there is a polling of more than 90% of votes in favour of a particular candidates, those votes have to be treated as 'set apart'." This is the stand of the Election Commission of India. ಹಾಗಾಗಿ ಒಂದು ಕಡೆ ಆರ್ಟಿಕಲ್ 19 ಇದ್ದು, ಇನ್ನೊಂದು ಕಡೆ ಚುನಾವಣಾ ಆಯೋಗದ ಮಾರ್ಗಸೂಚಿ ಅಥವಾ ಸುತ್ತೋಲೆಗಳಿರುವಾಗ ಬಹುಶಃ ನನಗನಿಸುವುದು, ತಮಗೆ ಬೇಕಾದ ಅಭ್ಯರ್ಥಿಗೆ ಮತದಾನ ಮಾಡುವ ಹಕ್ಕಿರುವಾಗ ಜನರು ಮತ ಚಲಾಯಿಸದಿದ್ದರೆ ಅವರು ಮತದಾನದಲ್ಲಿ ಭಾಗವಹಿಸದಂತಾಗುತ್ತದೆ. ಆದ್ದರಿಂದ ಈ ಕಡ್ಡಾಯ ಮತದಾನದ ಬಗ್ಗೆ ಈ ವಿಧೇಯಕದ ಸೆಕ್ಷನ್‌ಗಳಲ್ಲಿ ಏನಿದೆ ಎನ್ನುವುದನ್ನು ನಾನು ಗಮನಿಸಿದ್ದು, ಅದನ್ನೆಲ್ಲಾ ನಾನೀಗ ಉಲ್ಲೇಖಿಸುವುದಕ್ಕೆ ಹೋಗುವುದಿಲ್ಲ. ಆಯಿತು, ಜನ ಮತದಾನ ಮಾಡಲಿಲ್ಲ ಎಂದರೆ, ಅದರ ಅಂತಿಮ ಪರಿಣಾಮವೇನು? ಅವರನ್ನು ಜೈಲ್‌ಗೆ ಕಳುಹಿಸಲಾಗುತ್ತದೆಯೆ? Is there any provision to punish them? ಅದು ಈ ಆಕ್ಟ್‌ನಲ್ಲಿಯೂ ಇಲ್ಲ, ಇಂಡಿಯನ್ ಪೀನಲ್ ಕೋಡ್‌ನಲ್ಲಿಯೂ ಇಲ್ಲ, ಯಾವ ಆಕ್ಟ್‌ನಲ್ಲಿಯೂ ಇಲ್ಲ. what is the effect of this

provision? ಹಾಗಾಗಿ ನನ್ನ ಅನಿಸಿಕೆ ಏನೆಂದರೆ, so far as compulsory voting is concerned, it may required to be reexamined further. ನಿಜ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಸಹ ಮತದಾನದಲ್ಲಿ ಭಾಗಿಯಾಗಬೇಕೆನ್ನುವುದು ಚುನಾವಣೆಯ ಉದ್ದೇಶವಾಗಿದೆ. ಆಗ ಮಾತ್ರ ಅರ್ಥಪೂರ್ಣವಾದಂತಹ ಪ್ರಜಾಪ್ರಭುತ್ವ ವ್ಯವಸ್ಥೆಯಾಗುತ್ತದೆ. ಆದರೆ ಮತದಾರರನ್ನು ಆ ಮಟ್ಟಕ್ಕೆ ಜಾಗೃತಗೊಳಿಸಿದ್ದೇವೆಯೆ? ಇಲ್ಲ, ಆ ಮಟ್ಟಕ್ಕೆ ನಮ್ಮ ಮತದಾರರು ಜಾಗೃತರಾಗದಿರುವ ಹಿನ್ನೆಲೆಯಲ್ಲಿ ನಮ್ಮ ರಾಜ್ಯದಲ್ಲಿ ಅಥವಾ ನಮ್ಮ ದೇಶದಲ್ಲಿ ಶೇಕಡಾ 37ಕ್ಕೂ ಹೆಚ್ಚಿನ ಪ್ರಮಾಣದ ಅನಕ್ಷರತೆ ಇರುವಂತಹ ಹಿನ್ನೆಲೆಯಲ್ಲಿ ಆ ಅವಿದ್ಯಾವಂತ ಮತದಾರ ಇದರ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳದೆ ಇರುವಂತಹ ಈ ಸ್ಥಿತಿಯಲ್ಲಿ ಎಲ್ಲಿಯೋ ಒಂದು ಕಡೆ ಈ ಕಡ್ಡಾಯ ಮತದಾನ ಎನ್ನುವುದು ಒಂದು ಶಾಪವಾಗಿ ಪರಿಣಮಿಸುವುದಕ್ಕೆ ಸಾಧ್ಯತೆಗಳಿವೆ ಎನ್ನುವುದು ನನ್ನ ಅನಿಸಿಕೆಯಾಗಿದೆ. ಆದ್ದರಿಂದ ಬಹುಶಃ ಸರ್ಕಾರ ಇದರ ಬಗ್ಗೆ ಮತ್ತೊಮ್ಮೆ ಯೋಚನೆ ಮಾಡುವುದು ಬಹಳ ಅವಶ್ಯಕವಾಗಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇಷ್ಟೆಲ್ಲಾ ಆದರೂ ಸಹ ಈ ಒಂದು ವ್ಯವಸ್ಥೆಗೆ ಹೊಸ ಆಯಾಮವನ್ನು, ಹೊಸ ಮನ್ವಂತರವನ್ನು ಬರೆಯುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಇವತ್ತೇನು ಪ್ರಯತ್ನ ಮಾಡುತ್ತಿದೆ; ಅದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತಾ, ಈ ವಿಧೇಯಕಕ್ಕೆ ನನ್ನ ಪೂರ್ಣವಾದ ಸಹಕಾರ ಮತ್ತು ಬೆಂಬಲವನ್ನು ನೀಡುವುದಕ್ಕೆ ಬಯಸುತ್ತೇನೆ, ಧನ್ಯವಾದಗಳು.

**ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮೊಟ್ಟಮೊದಲನೆಯದಾಗಿ ನಮ್ಮ ಗೌರವಾನ್ವಿತ ಸದಸ್ಯರು ಏನು ಹಲವು ಸಲಹೆಗಳನ್ನು ನೀಡುವ ಮೂಲಕ ಸರ್ಕಾರಕ್ಕೆ ಮಾರ್ಗದರ್ಶನ ಮಾಡಿದ್ದಾರೆ, ಅವರೆಲ್ಲರಿಗೂ ನಾನು ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಹೇಳಬಯಸುತ್ತೇನೆ. ಸನ್ಮಾನ್ಯ ರಾಮಚಂದ್ರಗೌಡರು, ಶ್ರೀ ಕೋಟ ಶ್ರೀನಿವಾಸ ಪೂಜಾರ್‌ರವರು, ಶ್ರೀ ಇ. ಕೃಷ್ಣಪ್ಪನವರು, ಶ್ರೀ ಪಟೇಲ್ ಶಿವರಾಂ ಅವರು, ಶ್ರೀ ದಯಾನಂದ ಅವರು, ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ ಅವರು, ಶ್ರೀ ಆಚಾರ್ ಹಾಲಪ್ಪ ಬಸಪ್ಪನವರು, ಶ್ರೀ ಆರ್.ಕೆ. ಸಿದ್ದರಾಮಣ್ಣನವರು, ಸನ್ಮಾನ್ಯ ಅಲ್ಲಮಪ್ರಭು ಪಾಟೀಲ್‌ರವರು, ಶ್ರೀ ವಿ.ಎಸ್. ಉಗ್ರಪ್ಪನವರು ಎಲ್ಲರೂ ಸಹ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದರ ಜೊತೆಗೆ ಈ ವಿಧೇಯಕವನ್ನು ಸ್ವಾಗತ ಮಾಡಿದ್ದಾರೆ. ಅದಕ್ಕಾಗಿ ಮೊದಲಿಗೆ ತಮಗೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸರ್ಕಾರ

ನೇಮಿಸಿರುವಂತಹ ಮಾನ್ಯ ರಮೇಶ್‌ಕುಮಾರ್ ಸಮಿತಿಯು ನೀಡಿರುವಂತಹ ವರದಿಯಲ್ಲಿ ಯಾವ ಅಂಶಗಳನ್ನು ಮಸೂದೆ ರೂಪದಲ್ಲಿ ತರುವುದಕ್ಕೆ ಸರ್ಕಾರ ಒಪ್ಪುತ್ತದೆ ಅದನ್ನು ತರುವುದಕ್ಕೆ ಸರ್ಕಾರ ಆದಷ್ಟು ಬೇಗ ಸ್ಪಂದಿಸುತ್ತದೆಯೆಂದು ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಆದರೆ ತಾವು ಹೇಳಿರುವಂತಹ ಕೆಲವು ವಿಚಾರಗಳಲ್ಲಿ ನನಗೇನು ವ್ಯತ್ಯಾಸ ಕಾಣಲಿಲ್ಲ, ಆದರೆ ನೀವು ನಿಮ್ಮ ಗಂಭೀರವಾದಂತಹ ಅನಿಸಿಕೆಯನ್ನು ಹೇಳಿದ್ದೀರಿ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರಿಗೆ ನಾನು ಹೇಳುವುದೇನೆಂದರೆ, ನಮ್ಮ ಸರ್ಕಾರ ಯಾವ ಕಾರಣಕ್ಕೂ ಪಂಚಾಯತ್ ರಾಜ್ ವ್ಯವಸ್ಥೆಯನ್ನು dilute ಗೊಳಿಸುವುದಕ್ಕೆ ಹೋಗುವುದಿಲ್ಲ, ಅಷ್ಟೇ ಅಲ್ಲದೆ practically we can implement. ಅವುಗಳನ್ನು implement ಮಾಡುವುದಕ್ಕೆ ರಾಜಕೀಯ ಇಚ್ಛಾಶಕ್ತಿಯನ್ನು ಸಹ ತೋರಿಸುತ್ತೇವೆಂದು ತಿಳಿಸಲಿಚ್ಛಿಸುತ್ತೇನೆ. ಅದರಲ್ಲಿ ಕೆಲವೊಂದು ವಿಚಾರಗಳನ್ನು ನಾವು ಕೈ ಬಿಟ್ಟಿರುವುದು ಇದೆ. ಉದಾಹರಣೆಗೆ ಹೇಳಬೇಕೆಂದರೆ, ಚುನಾವಣೆಗೆ ಸಂಬಂಧಪಟ್ಟಂತೆ state funding ಇತ್ತು. ಈ ವಿಧೇಯಕದಲ್ಲಿ ಚುನಾವಣೆಗೆ ಸಂಬಂಧಪಟ್ಟಂತಹ ವಿಷಯಗಳು ಇರುತ್ತದೆಯೆಂದು ನಾನು ಈ ಮೊದಲೆ ಹೇಳಿದ್ದೆ. ಆದರೆ ಮಾನ್ಯ ಕೋಟ ಶ್ರೀನಿವಾಸ ಪೂಜಾರ್‌ರವರು ಬಹಳ ಬುದ್ಧಿವಂತರು. ಆದರೆ ಅವರು ಇದರ ಬಗ್ಗೆ ಏನನ್ನೂ ಹೇಳದೆ ಮೌನ ತಾಳಿದ್ದಾರೆ. ನಾನು ಈ ಸದನದಲ್ಲಿ ಅದರ ಬಗ್ಗೆ ಹೆಚ್ಚು ಅಭಿಪ್ರಾಯಗಳು ಬರುತ್ತವೆ, ಹೆಚ್ಚು ಸಲಹೆಗಳನ್ನು ಕೊಡುತ್ತೀರೆಂದು ಭಾವಿಸಿದ್ದೆ. ಆದರೆ ಏಕೋ ಏನೋ ತಾವು ಈ ವಿಷಯದ ಬಗ್ಗೆ ಮೌನ ತಾಳಿದ್ದೀರಿ. ಸರ್ಕಾರ ಸ್ಪಷ್ಟವಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಗಟ್ಟಿಗೊಳಿಸುವುದಕ್ಕೆ ಸಾಧ್ಯವಾಗುವಂಥದ್ದೆಲ್ಲವನ್ನೂ ಅಂದರೆ, ಏನೇನು ಮಾಡಬೇಕೋ ಅದೆಲ್ಲವನ್ನು ಮಾಡುತ್ತದೆ. ಅದರ ಬಗ್ಗೆ ಯಾರು ಸಂಶಯವನ್ನು ಹೊಂದಬೇಕಾಗಿಲ್ಲ.

ಎರಡನೆಯದಾಗಿ, ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಅವರು ನಮ್ಮ ಪಂಚಾಯಿತಿ ಸದಸ್ಯರ ಗೌರವ ಧನದ ಬಗ್ಗೆ ಪ್ರಸ್ತಾಪ ಮಾಡಿದರು. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಪೂರಕ ಅಂದಾಜನ್ನು ಮಂಡಿಸಿದ್ದಾರೆ. 14 ಕೋಟಿ ರೂಪಾಯಿಗೂ ಹೆಚ್ಚಿಗೆ ಹಣಕ್ಕೆ ತಾವು ಒಪ್ಪಿಗೆಯನ್ನು ಕೊಟ್ಟಿದ್ದೀರಿ. ನಮ್ಮ ಇಲಾಖಾ ಆದೇಶ ಏನಿದೆ ಅದೆಲ್ಲಾ ಗೌರವಧನ ಬಿಡುಗಡೆ ಮಾಡುವುದಕ್ಕೆ ಸೂಕ್ತವಾದಂತಹ ಸಂದೇಶದೊಂದಿಗೆ ಹೋಗಿವೆ. ಆದುದರಿಂದ ಆದಷ್ಟು ಬೇಗ ಅವರ ಬಾಕಿ ಹಣ ಏನಿದೆ, before end of their term, all honorarium that they are eligible for, ಏನು ಗೌರವಧನ ಅವರಿಗೆ ಮುಟ್ಟಬೇಕು ಅದೆಲ್ಲವೂ ಸಹ ಅವರಿಗೆ ತಲುಪುತ್ತದೆ ಎಂಬ ಭರವಸೆಯನ್ನು ಕೊಡುತ್ತೇನೆ. ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿ ಮಾಡುವುದಕ್ಕೆ, ಅದರ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಈಗಾಗಲೇ ಮಾನ್ಯ

ವಿನಯ್‌ಕುಮಾರ್ ಸೊರಕೆ ಅವರು ಸುಮಾರು 23 ಪಂಚಾಯಿತಿಗಳನ್ನು, ಪಟ್ಟಣ ಪಂಚಾಯತಿ ಮಟ್ಟಕ್ಕೆ ಏರಿಸಿದ್ದಾರೆ. ಇನ್ನು ಹಲವು ಗ್ರಾಮಗಳ ವಿಚಾರದಲ್ಲಿ ನಾವು ಮತ್ತು ಸನ್ಮಾನ್ಯ ಖಮರುಲ್ಲಾ ಇಸ್ಲಾಂರವರು ಮಾತನಾಡಿದ್ದೇವೆ. ಯಾವ ಯಾವ ಪಂಚಾಯಿತಿಗಳು ಎಲ್ಲಾ ಅರ್ಹತೆಗಳಿದ್ದು ಅದಕ್ಕೆ consent, no objection ಕೊಟ್ಟಿದ್ದಾರೆ ಅಂಥವುಗಳನ್ನು ಪರಿವರ್ತನೆ ಮಾಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ದೊಡ್ಡ ಪಂಚಾಯಿತಿ ಇದ್ದು, ನಗರಾಭಿವೃದ್ಧಿ ಇಲಾಖೆಯಲ್ಲಿ ಎಲಿಜಬಲ್ ಇರುವಂಥದ್ದನ್ನು ಸಹ ಪಟ್ಟಣ ಪಂಚಾಯಿತಿ ಮಾಡಬೇಕೆಂಬ ಒತ್ತಾಯವಿದೆ; ಇದನ್ನು ಚುನಾವಣೆಗೆ ಮೊದಲೇ ಮಾಡಬೇಕೆಂಬ ಒತ್ತಾಯವಿದೆ. ಏಕೆಂದರೆ ಒಮ್ಮೆ ಅದು ಗ್ರಾಮ ಪಂಚಾಯಿತಿಯಾಗಿ ಮುಂದುವರೆದರೆ they will continue for another five years.

**ಶ್ರೀ ಹೆಚ್.ಕೆ. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಅದರ ಜೊತೆಗೆ I am thankful to Mr. Ugrappa because he made some very important reference about 2-3 issues. ಮಹಿಳೆಯರ ಮೀಸಲಾತಿ ಬಗ್ಗೆ. ಹಾಗೂ ಪರಿಶಿಷ್ಟ ಜಾತಿ ಜನಾಂಗದವರ ಪುರುಷ ಪ್ರಾತಿನಿಧ್ಯಕ್ಕೆ ಏನು ಅಡ್ಡ ಬಂದಿತ್ತು ಎನ್ನುವುದರ ಬಗ್ಗೆ ವಿವರಣೆ ನೀಡಿ; ಚುನಾವಣಾ ಆಯುಕ್ತರ ಜೊತೆಗೆ ಚರ್ಚೆ ಮಾಡಿ, ನಮ್ಮ ಕಾನೂನು ಇಲಾಖೆಯವರೊಂದಿಗೂ ಚರ್ಚೆ ಮಾಡಿ, ನಾವು ಈ ಮೂಲಕ ಏನು ತೊಂದರೆ ಬಂದಿತ್ತು ಅದು ಬಗೆಹರಿಯುತ್ತದೆ ಎಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ.

ಮಾನ್ಯ ಸದಸ್ಯರು ಕಡ್ಡಾಯ ಮತದಾನದ ಬಗ್ಗೆ ಪ್ರಸ್ತಾಪ ಮಾಡಿದರು. ಕಡ್ಡಾಯ ಮತದಾನದಲ್ಲಿ ಒಂದು ವೇಳೆ ಶಿಕ್ಷೆ ಇಲ್ಲದಿದ್ದರೆ ಅದು ಅಷ್ಟೊಂದು ಸಮಂಜಸವಾಗುವುದಿಲ್ಲವೆಂಬ ಅನಿಸಿಕೆಯನ್ನು ವ್ಯಕ್ತ ಪಡಿಸಿದರು ಎಂದು ತಿಳಿದುಕೊಂಡಿದ್ದೇನೆ. 22 ರಾಷ್ಟ್ರಗಳಲ್ಲಿ ಕೇವಲ 10 ರಾಷ್ಟ್ರದಲ್ಲಿ ಮಾತ್ರ ಮತದಾನ ಮಾಡದವರಿಗೆ ಶಿಕ್ಷೆ ಇದೆ ಎಂದು ನಾನು ಮೊದಲೇ ಹೇಳಿದ್ದೇನೆ. ಕೆಲವು ಕಡೆ ಯಾವ ರೀತಿ ಶಿಕ್ಷೆ ಇದೆ ಎಂದರೆ, ಯಾರಾದರು ಎರಡು ಚುನಾವಣೆಗಳಲ್ಲಿ ಮತದಾನ ಮಾಡದಿದ್ದರೆ ಅವರ ದೇಶದಲ್ಲಿ ಅವರಿಗೆ ಪಾಸ್‌ಪೋರ್ಟ್ ಕೊಡುವುದಿಲ್ಲ. ಒಬ್ಬ ಸರ್ಕಾರಿ ನೌಕರ ಸತತವಾಗಿ ಮೂರು ಚುನಾವಣೆಗಳಲ್ಲಿ ಮತದಾನ ಮಾಡದೆ ಹೋದರೆ; ತನ್ನ ಅಧಿಕಾರವನ್ನು ಚಲಾಯಿಸದೆ ಹೋದರೆ ಅವನ increment ನ್ನು stop ಮಾಡುತ್ತಾರೆ. ಬಡ್ತಿ ನೀಡುವುದನ್ನು ನಿಲ್ಲಿಸುತ್ತಾರೆ. ಅಂದರೆ ಕೆಲವು ರಾಷ್ಟ್ರಗಳಲ್ಲಿ ಈ ರೀತಿಯಾದಂತಹ ಶಿಕ್ಷೆ ಇದೆ. ಇನ್ನು ಕೆಲವು ರಾಷ್ಟ್ರಗಳಲ್ಲಿ ಈ ರೀತಿ ಯಾವುದೇ ಶಿಕ್ಷೆ ಇಲ್ಲ. But they are coming nearer to 100%

voting. ಆದರೆ ನಮ್ಮ ದೇಶದಲ್ಲಿ ಏನಾದರು ಶಿಕ್ಷೆ ನೀಡುತ್ತೇವೆಂದು ಹೇಳಿದೆವು ಎಂದು ತಿಳಿದುಕೊಳ್ಳಿ, ಆಗ ಅದರ ಭಯದ ಮೇಲೆ ನಮಗೆ ಶೋಷಣೆ ಮಾಡುವುದಕ್ಕೆ ನಾವು ಅವಕಾಶ ಮಾಡಿಕೊಡುವುದಿಲ್ಲವೆಂಬ machinery ಸಧ್ಯಕ್ಕೆ ನಮ್ಮಲ್ಲಿ ಇಲ್ಲ. ಆದುದರಿಂದ ಆ ಹೆಸರಿನಲ್ಲಿ ಶೋಷಣೆ ಆಗಬಾರದು. This compulsory voting is not only for those who are poor, who are working. ನಮ್ಮ ಹಳ್ಳಿಯಲ್ಲಿ ಹೊಲದಲ್ಲಿ ಕೆಲಸ ಮಾಡುವವನು ಮುಂಜಾನೆ ಎದ್ದು ಪೂಜೆ ಮಾಡಿ 6 ಗಂಟೆ 45 ನಿಮಿಷಕ್ಕೆ ಮತಗಟ್ಟೆಯ ಬಳಿ ಹೋಗಿ ಅವನೇ ಮೊದಲು ಮತ ಹಾಕಲು ಸರದಿಯ ಸಾಲಿನಲ್ಲಿ ನಿಲ್ಲುತ್ತಾನೆ, not the one who will witness television for at least 4-8 hours. ಅದನ್ನು ನಾವು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಅವರಿಗೂ ಕಡ್ಡಾಯ ಮತದಾನ ಮಾಡಬೇಕು ಎನ್ನುವಂತೆ ಇತರರಿಗೂ ಕಡ್ಡಾಯ ಮತದಾನ ಮಾಡಬೇಕೆಂದು ಹೇಳಬೇಕು. ಇನ್ನೊಂದು ವಿಷಯವೇನೆಂದರೆ, ಕೆಲವು ಗ್ರಾಮಗಳಲ್ಲಿ ಮತದಾನ ಮಾಡದಂತೆ ತಡೆಹಿಡಿಯುತ್ತಾರೆ. If there is compulsory voting, if voting is a right given to them by law, the police or the machinery will act immediately. It will be the duty of the Returning Officer to see that they are facilitated to come and cast their vote. There are so many advantages which will flow from this compulsory voting law. ಈ ಕಾನೂನು ಏನು direct, indirect benefit ಕೊಡುತ್ತದೆ; ಪ್ರಜಾಪ್ರಭುತ್ವವನ್ನು ಸಧೃಡ ಮಾಡುತ್ತದೆ. Participatory democracy will be more effective. ಶೇಕಡಾ 100ಕ್ಕೆ 100ರಷ್ಟು ಮತದಾನ ಮಾಡುವುದಕ್ಕೆ ಅವಕಾಶ ಕೊಡಬೇಕೆಂಬ ಸದುದ್ದೇಶದಿಂದ ಈ ಒಂದು ಕಡ್ಡಾಯ ಮತದಾನವಾಗುತ್ತದೆ.

ಮಾನ್ಯ ಉಗ್ರಪ್ಪನವರು NOTA ವಿಷಯದಲ್ಲಿ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ನ್ನು ಏಕೆ ಓದಲಿಲ್ಲ ಎಂಬುದು ತಿಳಿಯುತ್ತಿಲ್ಲ. ನೀವು ಆಜಡ್ಜ್‌ಮೆಂಟ್‌ನ್ನು ಓದಿದ್ದರೆ ನಿಮ್ಮ ಮನಸ್ಸಿನಲ್ಲಿ ಏನು ಆತಂಕ ಮೂಡಿದೆ, ಆ ಆತಂಕ ಮೂಡುತ್ತಿರಲಿಲ್ಲ. ನಮ್ಮ Law Commissions ನಲ್ಲಿ compulsory voting ಆಗಲೇಬಾರದು ಎಂದು ಹೇಳುವ Law Commissions ಗಳೂ ಇವೆ. ಆದರೆ ನಮ್ಮ ರಾಜಕೀಯ ವ್ಯಕ್ತಿಗಳು ಯಾರಿದ್ದಾರೆ, those who are with the people, we are all for compulsory voting and we are all for 100% voting. ಅದು ನಮ್ಮ ಚುನಾವಣಾ malpractice ಅನ್ನು ಕಡಿಮೆ ಮಾಡುತ್ತದೆ, ನಮ್ಮ ಪ್ರಜಾಪ್ರಭುತ್ವವನ್ನು ಅರ್ಥಪೂರ್ಣವಾಗಿ ಮಾಡುತ್ತದೆ. ಆ ಎಲ್ಲಾ ಹಿನ್ನೆಲೆಯಲ್ಲಿ ಈ ಒಂದು ಕ್ರಾಂತಿಕಾರಕ ಹೆಜ್ಜೆಯನ್ನು ಇಡಬೇಕೆಂದು ಹೇಳಿ ನಾವು ಪ್ರಯತ್ನ ಮಾಡುತ್ತಿದ್ದೇವೆ, ಅದಕ್ಕೆ ತಾವೆಲ್ಲರೂ ಸಹಕಾರ ಕೊಟ್ಟಿದ್ದೀರಿ, ಅದಕ್ಕೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಡ್ಡಾಯ ಮತದಾನದ ಬಗ್ಗೆ ಮಾತನಾಡುತ್ತಾ, ಕೆಳಹಂತದಲ್ಲಿ ಕಡ್ಡಾಯ ಮತದಾನ ವ್ಯವಸ್ಥೆಯನ್ನು ತಂದಿದ್ದೀರಿ ನಿಜ, ಆದರೆ ಮುಂದಿನ ಹಂತದಲ್ಲಿ ಅಂದರೆ, ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಅನೇಕ ಸಲ ಕಡ್ಡಾಯ ಮತದಾನ ಆಗುತ್ತಿಲ್ಲ. 12 – 12 ಗೆದ್ದಿರುವ ಕಡೆಗೆ ಒಬ್ಬನನ್ನು ಎತ್ತಾಕಿಕೊಂಡು ಹೋಗಿ ಆತ ಮತದಾನ ಮಾಡದಂತೆಯೇ ನೋಡಿಕೊಳ್ಳುತ್ತಾರೆ. ಹಾಗಾಗಿ ಅಲ್ಲಿ ಕಡ್ಡಾಯ ಮತದಾನ ವ್ಯವಸ್ಥೆ ಮಾಡುವುದು ಅವಶ್ಯಕತೆ ಇದೆ.

(1–30 ಗಂಟೆ)

12–12 ಗೆದ್ದಿರುವ ಕಡೆಗಳಲ್ಲಿ ಒಬ್ಬರನ್ನು ಎತ್ತಿ ಹಾಕಿ ಕೊಂಡು ಹೋಗಿ, ಅವರು ಓಟು ಹಾಕದೇ ಇರುವ ರೀತಿಯಲ್ಲಿ ನೋಡಿಕೊಳ್ಳುತ್ತಾರೆ. ಅಲ್ಲಿ ಚುನಾವಣೆ ನಡೆದಾಗ ಕಡ್ಡಾಯ ಮತದಾನ ಮತ್ತು compulsory participation ಆಗಬೇಕಾದಂತಹ ಅವಶ್ಯಕತೆ ಇದೆ. ಒಬ್ಬನನ್ನು ತೀರ್ಥಯಾತ್ರೆಗೆ ಕಳುಹಿಸಿ ಬಿಡುತ್ತಾರೆ. ಆದ್ದರಿಂದ ಕಡ್ಡಾಯವಾಗಿ ಚುನಾವಣೆಯಲ್ಲಿ ಭಾಗವಹಿಸಬೇಕು ಎನ್ನುವುದಕ್ಕೆ ಯಾವ ಕಾನೂನು ಮಾಡಲಾಗುವುದು ಎನ್ನುವುದನ್ನು ಸಚಿವರು ಹೇಳಬೇಕು.

**ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಗಳೇ, ಆಗಾಗ್ಗೆ ಮಧುಸೂದನ್‌ರವರು ಒಳ್ಳೆಯ ಸಲಹೆಗಳನ್ನು ಕೊಡುತ್ತಿರುತ್ತಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿ, ಈ ಮಸೂದೆಯನ್ನು ಸ್ವಾಗತಿಸಿದ್ದಕ್ಕೆ ತಮ್ಮೆಲ್ಲರಿಗೂ ಸಹ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮತದಾನ ಕಡ್ಡಾಯ ಮಾಡಿದಲ್ಲಿ ಆರ್ಮಿಯಲ್ಲಿರುವ ಸೈನಿಕರು ಮತದಾನದಲ್ಲಿ ಭಾಗವಹಿಸಲು ಹೇಗೆ ಸಾಧ್ಯವಾಗುತ್ತದೆ? ಅವರಿಗೆ exemption ಕೊಡುವ provision ಇಲ್ಲ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಗಳೇ, ಒಬ್ಬೊಬ್ಬರು ಒಂದೊಂದು clarification ಕೇಳುತ್ತಿದ್ದರೆ ಹೇಗೆ, ಇನ್ನು ಒಂದು ವಾರ ಅಧಿವೇಶನ ಮುಂದಕ್ಕೆ ಹಾಕುವಿರಾ?

**ಸಭಾಪತಿಯವರು:–**ಎಲ್ಲರಿಗೂ irritate ಆಗಿದೆ, ಸಾಕು.

**ಶ್ರೀ ವಿ.ಎಸ್. ಉಗ್ರಪ್ಪ:–** It is my right. Malpractices ಅನ್ನು prevent ಮಾಡಲಿಕ್ಕೆ Section 171 of Indian Penal Code ಏನಿದೆ, ಈ ವಿಚಾರದ ಬಗ್ಗೆ ಸರ್ಕಾರ ಗಮನ ಹರಿಸಬೇಕು ಎಂದು ಹೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2015ರ ಕರ್ನಾಟಕ ಪಂಚಾಯತ್ ರಾಜ್(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.</u>

<u>ಖಂಡ 2 ರಿಂದ11ವರೆಗೆ</u>

**ಸಭಾಪತಿಯವರು:–** "ಖಂಡ 2ರಿಂದ 11ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

**(ಖಂಡ 2ರಿಂದ 11 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

<u>ಖಂಡ 1 ಇತ್ಯಾದಿ</u>

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

**ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2015ರ ಕರ್ನಾಟಕ ಪಂಚಾಯತ್ ರಾಜ್(ತಿದ್ದುಪಡಿ)ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "2015 ಕರ್ನಾಟಕ ಪಂಚಾಯತ್ ರಾಜ್(ತಿದ್ದುಪಡಿ)ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

**(ಆ) ಕನ್ನಡ ಭಾಷಾ ಕಲಿಕೆ ವಿಧೇಯಕ, 2015**

ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "2015 ರ ಕನ್ನಡ ಭಾಷಾ ಕಲಿಕೆ ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೆ, ಈ ಒಂದು ವಿಧೇಯಕ ಬಗ್ಗೆ ಕಡಿಮೆ ವಿಷಯಗಳೊಂದಿಗೆ ಪ್ರಸ್ತಾಪ ಮಾಡಬಯಸುತ್ತೇನೆ. 2009ರಲ್ಲಿ ತಂದಿರುವ ಕೇಂದ್ರದ ಶಾಸನ ಏನಿದೆ; ಉಚಿತ ಮತ್ತು ಕಡ್ಡಾಯ ಶಿಕ್ಷಣದ ಕಾಯಿದೆ ಏನಿದೆ ಅದಕ್ಕೆ ಪೂರಕವಾಗಿ ಕೆಲವು ಅಂಶಗಳನ್ನು ಸೆಕ್ಷನ್ 29ಎಫ್ ನಲ್ಲಿ ಒಂದು ತಿದ್ದುಪಡಿಯನ್ನು ಈ ಕಾಯಿದೆಯಲ್ಲಿ ನಾವು ತಂದಿದ್ದೇವೆ. ಕಾರಣ ಏನೆಂದರೆ 1994ರಲ್ಲಿ ಕರ್ನಾಟಕ ಸರ್ಕಾರ, ಒಂದು ನೋಟಿಫಿಕೇಷನ್ ಮೂಲಕ ಕರ್ನಾಟಕ ರಾಜ್ಯದ ಶಿಕ್ಷಣ ನೀತಿಯನ್ನು; ಒಂದು ಭಾಷಾ ನೀತಿಯನ್ನು ಜಾರಿಗೆ ತಂದಿದೆ. ಆ

ಭಾಷಾ ನೀತಿಯಲ್ಲಿ 1ನೇ ತರಗತಿಯಿಂದ 5ನೇ ತರಗತಿಯವರೆಗೆ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಮಕ್ಕಳು ಸಹ ಕಡ್ಡಾಯವಾಗಿ ಮಾತೃಭಾಷೆಯಲ್ಲಿಯೇ ಶಿಕ್ಷಣ ಪಡೆಯಬೇಕೆನ್ನುವ ಒಂದು ಕಾಯಿದೆಯನ್ನು ತರಲಾಗಿತ್ತು. ಅನಂತರದಲ್ಲಿ ಅದನ್ನು ಪ್ರಶ್ನೆ ಮಾಡಿ, ಖಾಸಗಿ ಶಿಕ್ಷಣ ಸಂಸ್ಥೆಗಳು ಉಚ್ಛ ನ್ಯಾಯಾಲಯಕ್ಕೆ ಹೋಗಿದ್ದರು, ಅದು ಮಕ್ಕಳ ಹಕ್ಕುಗಳನ್ನು ಕಿತ್ತುಕೊಂಡ ಹಾಗೆ ಆಗುತ್ತದೆ. The choice of rights; ಮಕ್ಕಳಿಗೆ ಯಾವ ಭಾಷೆಯಲ್ಲಿ ಶಿಕ್ಷಣ ಕಲಿಯಬಹುದೆನ್ನುವ ಆಯ್ಕೆಯ ಬಗ್ಗೆ ಸರ್ವೋಚ್ಛ ನ್ಯಾಯಾಲಯ ಒಂದು ತೀರ್ಪನ್ನು ನೀಡಿದೆ. ಮಾತೃ ಭಾಷೆ ಎನ್ನುವುದು it is the choice of the parents ಎಂದು ಸರ್ವೋಚ್ಛ ನ್ಯಾಯಾಲಯದ 5 ಜನ ನ್ಯಾಯಾಧೀಶರ ಪೀಠ ನೀಡಿರುವ ತೀರ್ಪನ್ನು ಆಧರಿಸಿ ಕರ್ನಾಟಕ ರಾಜ್ಯದಲ್ಲಿ ನಾವೇನು ಭಾಷಾ ನೀತಿಯನ್ನು ಅನುಸರಿಸುತ್ತಿದ್ದೇವೆ, ಅದನ್ನು ಕೈಬಿಟ್ಟು, ಅದನ್ನು ಅನುಷ್ಠಾನಗೊಳಿಸಬಾರದೆಂದು ತೀರ್ಪಿನಲ್ಲಿ ಹೇಳಿದೆ. ಅದರ ಆಧಾರದ ಮೇಲೆ 1994ರಿಂದ ಇಲ್ಲಿಯವರೆಗೆ ಅನುಷ್ಠಾನಗೊಳಿಸಿಕೊಂಡು ಬಂದಿರುವ ಭಾಷಾ ನೀತಿಯನ್ನು ತಿರಸ್ಕರಿಸಿದ ಕಾರಣ,

**(ಗೊಂದಲ)**

**(ಶ್ರೀ ಸಿ.ಹೆಚ್. ವಿಜಯ ಶಂಕರ್‌ರವರು ಈ ಹಂತದಲ್ಲಿ ಪೀಠವನ್ನು ಅಲಂಕರಿಸಿದರು.)**

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಲ್ಲಿಎರಡು ಗುಂಪುಗಳು ಮಾಡಿಕೊಂಡು, ಅವರವರೇ ಮಾತನಾಡುತ್ತಿದ್ದಾರೆ. ಇಂತಹ ಗಂಭೀರವಾದ ವಿಚಾರದ ಬಗ್ಗೆ ಯಾರಿಗೂ ಕಾಳಜಿ ಇಲ್ಲ.

**(ಗೊಂದಲ)**

**VICE-CHAIRMAN**: Running commentary ಬೇಡ.

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಇದು ಕನ್ನಡ ಭಾಷೆಗೆ ಸಂಬಂಧಪಟ್ಟಿರುವ ವಿಚಾರ ಆಗಿರುವುದರಿಂದ ಇದರಲ್ಲಿ ಪಕ್ಷಗಳ ಪ್ರಶ್ನೆ ಇಲ್ಲ. ನಾವೆಲ್ಲರೂ ಸಹ ಇದರಲ್ಲಿ ಆಸಕ್ತಿಯಿಂದ ಭಾಗವಹಿಸಬೇಕು. ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು, ಸಲಹೆಗಳನ್ನು ನೀಡಬೇಕೆಂದು ಎಲ್ಲರಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಸರ್ವೋಚ್ಚ ನ್ಯಾಯಾಲಯದ ತೀರ್ಪು ನಮ್ಮ ರಾಜ್ಯದ ನೀತಿಗೆ ವಿರೋಧ ಆಗಿರುವುದರಿಂದ. . .

ವಾಸ್ತವದಲ್ಲಿ ಭಾರತದಲ್ಲಿ 1956ರಲ್ಲಿ ಆದ ಭಾಷಾವಾರು ಪ್ರಾಂತ್ಯಗಳ ಪ್ರಕಾರ ರಾಜ್ಯಗಳ ರಚನೆ ಏನಿದೆ, ಅದರ ಮೂಲ ಉದ್ದೇಶವೇ ಆ ಪ್ರಾಂತ್ಯದಲ್ಲಿರತಕ್ಕ ಒಂದು ಭಾಷಿಗರ ವ್ಯವಹಾರ, ಶಿಕ್ಷಣ ಎಲ್ಲವನ್ನು ಕೂಡ ಆಡಳಿತಾತ್ಮಕವಾಗಿ ಮಾಡಬೇಕೆನ್ನುವ ಉದ್ದೇಶದಿಂದಲೇ ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಿರುವ ಉದ್ದೇಶ. ಇದರಲ್ಲಿ ಭಾಷೆ ಉಳಿಯಬೇಕೆನ್ನುವುದು ಸಹ ಬಹಳ ಮುಖ್ಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಕನ್ನಡವನ್ನು ಉಳಿಸುವ ಪ್ರಯತ್ನ ಮಾಡದಿದ್ದರೆ, ಬೇರೆ ಯಾವ ರಾಜ್ಯದಲ್ಲಿ ಮತ್ತು ದೇಶದಲ್ಲಿ ಕನ್ನಡವನ್ನು ಉಳಿಸುವ ಪ್ರಯತ್ನ ಮಾಡುವ ಅಗತ್ಯವಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಕೇವಲ ಅಧ್ಯಯನಕ್ಕಾಗಿ ಬಳಸಿಕೊಳ್ಳಬಹುದಾಗಿದೆ. ಆದರೆ, ಈ ಭಾಷೆಯನ್ನು ಉಳಿಸಿ ಬೆಳಸಬೇಕಾದ ಕೆಲಸ ಕರ್ನಾಟಕ ರಾಜ್ಯದಿಂದಲೇ ಆಗಬೇಕೆನ್ನುವ ಮೂಲ ಉದ್ದೇಶವನ್ನು ಇಟ್ಟುಕೊಂಡು ಈ ತಿದ್ದುಪಡಿಯನ್ನು ತರುವಂತಹ ಪ್ರಯತ್ನ ಮಾಡಿದ್ದೇವೆ ಮತ್ತು ಸಂವಿಧಾನದ ಅನುಚ್ಛೇಧ 21(ಎ) ಅನುಚ್ಛೇಧ 350(ಎ) ಅನುಚ್ಛೇಧ 41 ಮತ್ತು ಅನುಚ್ಛೇಧ 30 ಈ ನಾಲ್ಕು ಅನುಚ್ಛೇಧಗಳಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟಿರುವ ವಿಚಾರಗಳನ್ನು ಉಲ್ಲೇಖ ಮಾಡಲಾಗಿದೆ. ನಮ್ಮ ಸಂವಿಧಾನದ ಷೆಡ್ಯೂಲ್–7ರಲ್ಲಿ education included in the concurrent list. ಇದರಡಿಯಲ್ಲಿ ನಮಗಿರುವ ಅಧಿಕಾರವನ್ನು ಬಳಸಿಕೊಂಡು ಕೇಂದ್ರ ಸರ್ಕಾರ 2009ರಲ್ಲಿ ತಂದಿರುವ ಶಿಕ್ಷಣ ಹಕ್ಕು ಕಾಯಿದೆಗೆ ಒಂದು ತಿದ್ದುಪಡಿಯನ್ನು ತರುವ ಮೂಲಕ ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಮಾಧ್ಯಮವಾಗಿ ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಕಲಿಸುವ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಈ ವಿಚಾರವಾಗಿ ಸುಪ್ರಿಂ ಕೋರ್ಟಿನಲ್ಲಿಯೂ ಸಹ ನಮಗೆ ಪ್ರತಿಕೂಲವಾದ ತೀರ್ಪು ಹೊರಬಂದಿತು. 2008ರಿಂದ 2014ರವರೆಗೆ ನಡೆದಿರುವ ಎಲ್ಲ ಆಗುಹೋಗುಗಳನ್ನು ನೋಡಿದರೆ, ಈ ವಿಚಾರ ಕರ್ನಾಟಕದ ಉಚ್ಛ ನ್ಯಾಯಾಲಯದ ಮುಂದಿದ್ದಾಗ, ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರ ಅಧಿಕಾರದಲ್ಲಿತ್ತು. ಆಗ ಅವರೂ ಕೂಡ ಭಾಷಾ ಮಾಧ್ಯಮ ಕನ್ನಡವಾಗಿರಬೇಕು ಎನ್ನುವುದನ್ನೇ ಪ್ರತಿಪಾದಿಸಿಕೊಂಡು ಬಂದಿದ್ದರು. ಆದರೂ ಸಹ ಉಚ್ಛನ್ಯಾಯದಲ್ಲಿ ಸರ್ಕಾರದ ಆಶಯಗಳಿಗೆ ವಿರುದ್ಧವಾದ ತೀರ್ಮಾನ ಬಂದಾಗ ಸುಪ್ರೀಂ ಕೋರ್ಟಿಗೆ ಹೋಗಲಾಗಿದೆ. ಸುಪ್ರೀಂ ಕೋರ್ಟಿನಲ್ಲಿಯೂ ಸಹ ನಮ್ಮ ವಾದವನ್ನು ಅಂತಿಮ ಹಂತದವರೆಗೆ ಪ್ರತಿಪಾದನೆ ಮಾಡುತ್ತಲೇ ಬಂದಿದ್ದೆವು. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದ ಸಾಹಿತಿಗಳನ್ನು ಮತ್ತು ಬರಹಗಾರರನ್ನು ಕರೆದು ಅವರೊಡನೆ ಸುಮಾರು ನಾಲ್ಕು ಬಾರಿ ಚರ್ಚೆ ಮಾಡಿ ಈ ಒಂದು ತೀರ್ಮಾನಕ್ಕೆ ಬಂದಿದ್ದೇವೆ.

ಮಾನ್ಯ ಮುಖ್ಯಮಂತ್ರಿಗಳು ರಾಷ್ಟ್ರದ ಎಲ್ಲ ಮುಖ್ಯಮಂತ್ರಿಗಳಿಗೆ ಪತ್ರ ಬರೆದು 'ತಾವೆಲ್ಲರೂ ಇದರಲ್ಲಿ ಭಾಗವಹಿಸಬೇಕು. ಇದಕ್ಕೆ ಸಂವಿಧಾನದ ತಿದ್ದುಪಡಿಯ ಅಗತ್ಯವಿದೆ' ಎಂದು ತಿಳಿಸಿದ್ದಾರೆ. ಭಾರತದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರಿಗೂ ಸಹ ಈ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಭಾಷೆಯನ್ನು ಉಳಿಸುವುದಕ್ಕಾಗಿ ಸಂವಿಧಾನ ತಿದ್ದುಪಡಿ ಮಾಡಬೇಕಾಗಬಹುದು ಎನ್ನುವುದನ್ನು ಮತ್ತು ಈಗ ಆಗಿರುವ ಅನಾನುಕೂಲತೆಯನ್ನು ಸಹ ತಿಳಿಸಿದ್ದಾರೆ. ಇದಕ್ಕೆ ಪೂರಕವಾಗಿ ಈ ವಿಧೇಯಕವನ್ನು ಮಂಡಿಸಲಾಗುತ್ತಿದೆ. ವಿಧೇಯಕದ ಕಂಡಿಕೆ 29(ಎಫ್)ನಲ್ಲಿ ಸಂವಿಧಾನದ ಷೆಡ್ಯೂಲ್ 7ರಲ್ಲಿ ನಮಗೆ ಕೊಟ್ಟಿರುವ ಅಧಿಕಾರ ಮತ್ತು ಸಂವಿಧಾನದ ಅನುಚ್ಛೇಧ 21(ಎ) ಅನುಚ್ಛೇಧ 350(ಎ), ಅನುಚ್ಛೇಧ 41 ಮತ್ತು ಅನುಚ್ಛೇಧ 30 ರಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಉಲ್ಲೇಖ ಮಾಡಿರುವ ವಿಚಾರವನ್ನು ಬಳಸಿಕೊಂಡು ಈ ವಿಧೇಯಕಗಳನ್ನು ತಂದಿದ್ದೇವೆ. ಕನ್ನಡ ಭಾಷಾ ಕಲಿಕೆ ವಿಧೇಯಕ ಮತ್ತು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ವಿಧೇಯಕ ಈ ಎರಡೂ ವಿಧೇಯಕಗಳ ವಿಚಾರ ಒಂದೇ ಆಗಿರುವುದರಿಂದ ಒಟ್ಟಿಗೆ ಹೇಳುತ್ತಿದ್ದೇನೆ. ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ವಿಧೇಯಕದಲ್ಲಿ ಕನ್ನಡ ಮಾಧ್ಯಮವನ್ನು ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಕಡ್ಡಾಯ ಮಾಡುವುದಾಗಿದೆ.

ಎರಡನೆಯದಾಗಿ ಕನ್ನಡ ಭಾಷಾ ಕಲಿಕೆ ವಿಧೇಯಕದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕರ್ನಾಟಕದಲ್ಲಿ ಓದುವ ಎಲ್ಲ ಮಕ್ಕಳು ಕಡ್ಡಾಯವಾಗಿ ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕನ್ನಡ ಭಾಷೆಯನ್ನು ಕಲಿಯಬೇಕಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಸಮ್ಮತಿಯನ್ನಾಗಲೀ ಅಥವಾ ನ್ಯಾಯಾಲಯದ ಒಪ್ಪಿಗೆಯನ್ನಾಗಲೀ ಪಡೆಯಬೇಕಾಗಿಲ್ಲ. ಕಡ್ಡಾಯ ಶಿಕ್ಷಣ ವಿಧೇಯಕ ಎನ್ನುವುದು ಕೇಂದ್ರದ ನೀತಿಗೆ ನಾವು ತರುತ್ತಿರುವ ತಿದ್ದುಪಡಿಯಾಗಿರುವುದರಿಂದ ಇದಕ್ಕೆ ರಾಷ್ಟ್ರಪತಿಗಳ ಅನುಮೋದನೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ಸುಪ್ರೀಂ ಕೋರ್ಟಿನ ಸಂವಿಧಾನ ಪೀಠ ಕೊಟ್ಟಿರುವ ತೀರ್ಪು ಮತ್ತು ಕೇಂದ್ರದ ಕಾಯಿದೆಗೆ ಸಂವಿಧಾನದ ಷೆಡ್ಯೂಲ್–7ರ ಸಮವರ್ತಿ ಪಟ್ಟಿಯಲ್ಲಿ ಬರುವ ನಮ್ಮ ಅಧಿಕಾರವನ್ನು ಗಮನದಲ್ಲಿಟ್ಟುಕೊಂಡು ತಂದಿರುವ ತಿದ್ದುಪಡಿಯಾಗಿರುವುದರಿಂದ ರಾಷ್ಟ್ರದ ರಾಷ್ಟ್ರಪತಿಗಳಿಂದ ಇದಕ್ಕೆ ಒಪ್ಪಿಗೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಯಾವಾಗ ಒಪ್ಪಿಗೆ ಸಿಗುತ್ತದೆ ಅಥವಾ ಇಲ್ಲ ಎನ್ನುವುದನ್ನು ಈಗಲೇ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ಈ ವಿಚಾರ ರಾಷ್ಟ್ರಮಟ್ಟದಲ್ಲಿ ಅನಾವರಣವಾಗುತ್ತದೆ.

ಮಾತೃ ಭಾಷೆ ಎನ್ನುವುದಕ್ಕೆ ಸುಪ್ರೀಂ ಕೋರ್ಟ್ ಕೊಟ್ಟಿರುವ ವಿಶ್ಲೇಷಣೆ ಎಂದರೆ, choice of the mother ಎನ್ನುವುದಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಕರ್ನಾಟಕ ರಾಜ್ಯ ಅಥವಾ ಭಾಷಾವಾರು ರಾಜ್ಯಗಳ ರಚನೆ ಆಗುವಂತಹ ಸಂದರ್ಭದಲ್ಲಿ ಮಾತೃಭಾಷೆ ಎನ್ನುವುದಕ್ಕೆ ವಿಶ್ಲೇಷಣೆ ಯಾವುದೇ ರೀತಿಯಲ್ಲಿ ಇದ್ದರೂ ಸಹ ಆ ರಾಜ್ಯ ಭಾಷೆಯೇ ಪ್ರಮುಖ ಭಾಷೆ ಎನ್ನುವುದನ್ನು ಪರಿಗಣಿಸಬೇಕಾಗುತ್ತದೆ. ಶೇಕಡಾ 90 ರಿಂದ 95 ರಷ್ಟು ಜನರು ಯಾವ ಭಾಷೆಯನ್ನು ಬಳಸುತ್ತಿದ್ದಾರೆ, ಆ ಭಾಷೆಯನ್ನೇ ನಾವು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಅಂಶವನ್ನು ಬಳಸಿಕೊಂಡು ನಾವು ಈ ವಿಧೇಯಕವನ್ನು ತಂದಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರೆಲ್ಲರೂ ಒಪ್ಪಿಗೆ ಕೊಡಬೇಕೆನ್ನುವುದು ನನ್ನ ವಿನಂತಿಯಾಗಿದೆ. ನಾಳೆ ಈ ವಿಚಾರದ ಮೇಲೆ ಸುಪ್ರೀಂ ಕೋರ್ಟಿನಲ್ಲಿ ಏನಾಗುತ್ತದೆ ಎನ್ನುವುದು ಗೊತ್ತಿಲ್ಲ. ಕೆಳಮನೆಯಲ್ಲಿ ಈ ವಿಚಾರದ ಬಗ್ಗೆ ಚರ್ಚೆಯಾದ ಸಂದರ್ಭದಲ್ಲಿ ಇದು ಕೇವಲ ಕರ್ನಾಟಕ ರಾಜ್ಯದ ಸಮಸ್ಯೆಯಲ್ಲ, ಉತ್ತರ ಪ್ರದೇಶದ ಸಮಸ್ಯೆಯೂ ಇದೇ ಆಗಿದೆ. ನಾನು ಮಥುರಾಗೆ ಹೋಗಿದ್ದೆ. ಅಲ್ಲಿಯೂ ಸಹ ಇದೇ ಸಮಸ್ಯೆಯನ್ನು ಕಾಣಬಹುದಾಗಿದೆ. It is not a problem to the Karnataka State only, it is a problem to the entire India. ಪಂಜಾಬ್, ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿಯೂ ಈ ಸಮಸ್ಯೆಯನ್ನು ಕಾಣಬಹುದಾಗಿದೆ. ವಾಸ್ತವವಾಗಿ ಕೇರಳ ರಾಜ್ಯದಲ್ಲಿ ಭಾಷಾ ನೀತಿಯ ವ್ಯವಸ್ಥೆ ಮಾಡಿಲ್ಲ. ಅಲ್ಲಿ ಮಾತೃಭಾಷೆಯಾದ ಮಲೆಯಾಳಂ ಕಲಿಯದೆಯೇ ಎಂ.ಎ. ಪದವಿಯನ್ನು ಪಡೆದುಕೊಳ್ಳಬಹುದಾಗಿದೆ. ಇಂತಹ ಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ತಮಿಳುನಾಡಿಗೆ 7–8 ತಿಂಗಳುಗಳ ಹಿಂದೆ ನಿಯೋಗವನ್ನು ಕಳುಹಿಸಿಕೊಟ್ಟು ಮಾಹಿತಿಯನ್ನು ಸಂಗ್ರಹ ಮಾಡಿದ್ದೇವೆ.

ಎರಡನೆಯ ವಿಧೇಯಕದಲ್ಲಿ ಒಂದನೇ ತರಗತಿಯಿಂದ ಹತ್ತನೆಯ ತರಗತಿಯವರೆಗೆ ತಮಿಳುನಾಡಿನಲ್ಲಿರುವ ಭಾಷಾ ನೀತಿಯನ್ನು ಅನುಸರಿಸುತ್ತಿದ್ದೇವೆ. ಅದನ್ನು ಸಹ ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನೆ ಮಾಡಲಾಗಿತ್ತು. ಆದರೆ, ಸುಪ್ರೀಂ ಕೋರ್ಟಿನಲ್ಲಿ ತಮಿಳುನಾಡು ಯಾವ ಭಾಷಾ ನೀತಿಯನ್ನು ಅನುಸರಿಸಿದೆ that has been upheld in the Supreme Court. ಆದ್ದರಿಂದ ಎರಡನೆಯ ಕಾಯಿದೆಗೆ ಬೇರೆ ರೀತಿಯ ಸಮಸ್ಯೆ ಬರುವುದಿಲ್ಲ. ಆದರೆ, ಒಂದು ಸಮಸ್ಯೆ ನಮ್ಮ ಅರಿವಿನಲ್ಲಿದೆ. ಅದು ಏನೆಂದರೆ ಈಗಿನ ವ್ಯವಸ್ಥೆಯಲ್ಲಿ ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮವನ್ನು ಬೋಧಿಸುತ್ತಿರುವ ಶಾಲೆಗಳವರು ಶಾಲೆಗಳು ಸೆಂಟ್ರಲ್ ಬೋರ್ಡ್‌ನ ವ್ಯಾಪ್ತಿಗೆ ಬರುವುದರಿಂದ ಇದನ್ನು ಅಳವಡಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನಾಳೆ ಅವರು ಕೂಡ ಸುಪ್ರೀಂ ಕೋರ್ಟಿಗೆ ಹೋಗಬಹುದು ಎನ್ನುವ ಕಾರಣದ ಹಿನ್ನೆಲೆಯಲ್ಲಿ ಆ ಶಾಲೆಗಳನ್ನು ಈ ವ್ಯಾಪ್ತಿಯಿಂದ ಹೊರಗಿಟ್ಟಿದ್ದೇವೆ. ನಂತರದ ದಿನಗಳಲ್ಲಿ ಇದಕ್ಕೆ ಏನು ಮಾಡಬೇಕೆನ್ನುವುದನ್ನು ಪ್ರತ್ಯೇಕವಾಗಿ

ಯೋಚನೆ ಮಾಡಲಾಗುತ್ತದೆ ಅಥವಾ ಪ್ರತ್ಯೇಕ ಮಸೂದೆಯನ್ನು ತರುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದು. ಆದರೆ, ಈಗಿರುವ ವ್ಯವಸ್ಥೆಯಲ್ಲಿ ಹೇಳಬೇಕಾದರೆ ನಮ್ಮ ಇಲಾಖೆಗೆ ದೊರೆತಿರುವ ಮಾಹಿತಿಯ ಪ್ರಕಾರ ಅಧಿಕೃತವಾಗಿ ಸುಮಾರು 1700 ರಿಂದ 2000 ಶಿಕ್ಷಣ ಸಂಸ್ಥೆಗಳು ಸಿಬಿಎಸ್ಇ ಮತ್ತು ಐಸಿಎಸ್ಸಿ ಪಠ್ಯಕ್ರಮವನ್ನು ಬೋಧಿಸುತ್ತಿವೆ. ಅನಧಿಕೃತವಾಗಿ ಸಿಬಿಎಸ್ಇ ಮತ್ತು ಐಸಿಎಸ್ಇ ಎಂದು ಬೋರ್ಡ್ ಹಾಕಿಕೊಂಡು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವವರು ಇದ್ದಾರೆ. ಅದರ ಬಗ್ಗೆ ನಾನು ಇಲ್ಲಿ ಪ್ರಸ್ತಾವ ಮಾಡುವುದಿಲ್ಲ. ಅಧಿಕೃತವಾಗಿ ನಡೆಯುತ್ತಿರುವ ಸಿಬಿಎಸ್ಇ ಮತ್ತು ಐಸಿಎಸ್ಇ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಕಡಿಮೆ ಇವೆ, ಅವು ಸೆಂಟ್ರಲ್ ಬೋರ್ಡ್‌ಗೆ ಬರುವ ಹಿನ್ನೆಲೆಯಲ್ಲಿ ಅವುಗಳನ್ನು ಇದರ ವ್ಯಾಪ್ತಿಗೆ ತಂದಿಲ್ಲ. ಆದರೆ, ಉಳಿದ ಶಿಕ್ಷಣ ಸಂಸ್ಥೆಗಳಿಗೆ 2015–16ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭದಿಂದ ಒಂದನೇ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಡ್ಡಾಯವಾಗಿ ಕಲಿಸಬೇಕೆನ್ನುವ ವಿಚಾರವನ್ನು ಈ ವಿಧೇಯಕದಲ್ಲಿ ಅಳವಡಿಸುವ ಪ್ರಯತ್ನವನ್ನು ಮಾಡಲಾಗಿದೆ. ಬಹುಶಃ ನಾಳೆ ಸುಪ್ರೀಂ ಕೋರ್ಟ್‌ಗೆ ಶಿಕ್ಷಣ ಸಂಸ್ಥೆಗಳು ಹೋಗಬಹುದಾದ ಅವಕಾಶಗಳನ್ನು ಊಹಿಸಿ ಎರಡೂ ಕಾಯಿದೆಗಳನ್ನು ತರಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಎರಡೂ ವಿಧೇಯಕದ ಬಗ್ಗೆ ಚರ್ಚಿಸಬೇಕು ಮತ್ತು ಅವರುಗಳು ಏನು ಸಲಹೆಗಳನ್ನು ನೀಡುತ್ತಾರೆ. ಅದನ್ನು ಅಳವಡಿಸಿಕೊಳ್ಳುವಂತಹ ಪ್ರಯತ್ನವನ್ನು ಸರ್ಕಾರದಿಂದ ಮಾಡಲಾಗುತ್ತದೆ. ಈಗ ತಂದಿರುವಂತಹ ಎರಡು ಮಸೂದೆಗಳಲ್ಲಿ ಒಂದು ಮಸೂದೆ ಗೌರವಾನ್ವಿತ ರಾಷ್ಟ್ರಪತಿಗಳಿಗೆ ಹೋಗುತ್ತದೆ. ರಾಷ್ಟ್ರದಲ್ಲಿರುವ ಎಲ್ಲ ರಾಜ್ಯಗಳು ಈ ತೊಂದರೆಯನ್ನು ಎದುರಿಸುತ್ತಿವೆ. ಕೆಲವು ರಾಜ್ಯಗಳು ಮುಂದೆ ಬರುವಂತಹ ಸಮಸ್ಯೆಗಳ ಬಗ್ಗೆ ಯೋಚನೆ ಮಾಡದೇ ಇರಬಹುದು, ಈ ಮೂಲಕ ಇಡೀ ರಾಷ್ಟ್ರ ಮಟ್ಟದಲ್ಲಿ ಇದರ ಬಗ್ಗೆ ಚರ್ಚೆಯಾಗಲಿ ಎನ್ನುವುದು ನಮ್ಮ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರುಗಳು ಈ ವಿಧೇಯಕಗಳಿಗೆ ಸರ್ವಾನುಮತದ ಅಂಗೀಕಾರವನ್ನು ನೀಡಿ ಸಹಕರಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಕನ್ನಡ ಭಾಷಾ ಕಲಿಕಾ ವಿಧೇಯಕ, 2015 ಮತ್ತು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು (ಕರ್ನಾಟಕ ತಿದ್ದುಪಡಿ) ವಿಧೇಯಕ, 2015 ಈ ಎರಡು ವಿಧೇಯಕಗಳನ್ನು ಒಟ್ಟಿಗೆ ಮಂಡಿಸಿದ್ದಾರೆ. ಈ ಸಮಸ್ಯೆ ದೊಡ್ಡ–ದೊಡ್ಡ ಪಟ್ಟಣಗಳಲ್ಲಿ ಪ್ರಾರಂಭವಾಗಿದೆ. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕ ರಾಜ್ಯದಲ್ಲಿ 'ಇಂಗ್ಲೀಷ್ ಭಾಷೆ; 'ಇಂಗ್ಲೀಷ್ ಭಾಷೆ' ಎನ್ನುವ ಒತ್ತಡ ಬಂದ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ತರಲೇಬೇಕಾಗಿರುವ ವ್ಯವಸ್ಥೆಗೆ ಸಿಲುಕಿಕೊಂಡಿದ್ದೇವೆ. ಅದರಲ್ಲೂ

ಬೆಂಗಳೂರು ನಗರದಲ್ಲಿ ಸಣ್ಣ–ಪುಟ್ಟ ರಸ್ತೆಗಳಲ್ಲಿ ಇರುವಂತಹ ಶಾಲೆಗಳು ಇಂಗ್ಲೀಷ್ ಶಾಲೆಗಳಾಗಿವೆ. ಈ ಹೊಡೆತವನ್ನು ತಡೆದುಕೊಳ್ಳಲಾರದೇ ಬಿಲ್ ತರುವ ಪರಿಸ್ಥಿತಿ ಬಂದಿದೆ. ಜನರು ನೆಮ್ಮದಿಯಾಗಿ ಬದಲು ಮತ್ತು ಆಡಳಿತ ನೆಮ್ಮದಿಯಾಗಿ ಆಗಲಿ ಎಂಬ ದೃಷ್ಟಿಯಿಂದ ಭಾಷಾವಾರು ಪ್ರಾಂತ್ಯಗಳ ರಚನೆ ಆಯಿತು ಎಂದು ಅವರು ಹೇಳಿದರು. ಇದು ಆಗುವಾಗಲೇ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದಾಗಿತ್ತು. ಆದರೆ ನಾವು ತಡ ಮಾಡಿದೆವು. ಕನ್ನಡ ಭಾಷಾ ಕಲಿಕೆ ವಿಧೇಯಕ ಎಂದು ಇರುವಲ್ಲಿ bracket ನಲ್ಲಿ ಅಂದರೆ, ಕನ್ನಡ ಭಾಷಾ–ರಾಜ್ಯಭಾಷಾ ಎಂದು ನಮೂದು ಮಾಡಿದ್ದರೆ ಬೇರೆ ಎಲ್ಲಾ ರಾಜ್ಯದವರು ಒಪ್ಪಿಕೊಳ್ಳಬೇಕಾಗಿತ್ತು. ಏಕೆಂದರೆ ಕನ್ನಡ–ಕನ್ನಡ ಎಂದು ಸುಮ್ಮನೆ ಕೂಗಾಡುತ್ತಾರೆ ಎಂಬ ಭಾವನೆ ಹಲವರಲ್ಲಿ ಇದೆ. ಇಲ್ಲಿ ನಮಗೆ ರಾಜ್ಯ ಭಾಷೆ ಆಗಬೇಕು. ಇವತ್ತು ದೇಶದಲ್ಲಿ 14 ಭಾಷೆಗಳು ರಾಷ್ಟ್ರೀಯ ಭಾಷೆಗಳಾಗಿದ್ದು, ಹಿಂದಿಯನ್ನು common language ಎಂದು ತೆಗೆದುಕೊಂಡಿದ್ದಾರೆ.

ಕರ್ನಾಟಕದಲ್ಲೂ ಬೇಕಾದಷ್ಟು ಭಾಷೆಗಳನ್ನು ಜನರು ಮಾತನಾಡಬಹುದು, ಆದರೆ ಈ ರಾಜ್ಯದ ಭಾಷೆಯೇ ಪ್ರಮುಖವಾದ ಭಾಷೆ. ಈ ರಾಜ್ಯದಲ್ಲಿ ವಾಸ ಮಾಡುವ ಯಾರೇ ಆದರೂ ಕನ್ನಡವನ್ನು ಕಲಿಯಲೇಬೇಕು ಎಂದು ತಂದಿರುವ ತೀರ್ಮಾನವನ್ನು ನಾನು ಸ್ವಾಗತ ಮಾಡುತ್ತೇನೆ. ಕೇಂದ್ರೀಯ ಶಾಲೆಗಳಿಗೆ ಸ್ವಲ್ಪ ಸಮಸ್ಯೆಯಾಗುತ್ತಿದ್ದು, ಅದಕ್ಕೆ ಪ್ರತ್ಯೇಕ ವಿಧೇಯಕವನ್ನು ತರಬೇಕೆಂದು ಹೇಳಿದ್ದಾರೆ. ಇದನ್ನು ಮಾಡಿದ ಕೂಡಲೇ ಶಿಕ್ಷಕರ ಸಮಸ್ಯೆ ಬರುತ್ತದೆ. ಕನ್ನಡ ಪಾಠ ಮಾಡುವ ಶಿಕ್ಷಕರು ಸಿಗುತ್ತಿಲ್ಲ. ಕನ್ನಡದಲ್ಲಿ ಓದಿರುವವರೇ ಕನ್ನಡದಲ್ಲಿ ಪಾಠ ಮಾಡಲಾಗದ ಸ್ಥಿತಿಗೆ ಬಂದಿದ್ದಾರೆ. ಬೆಂಗಳೂರಿನಲ್ಲಿ ನನ್ನನ್ನೂ ಸೇರಿಸಿ ಇಂಗ್ಲೀಷ್ ಪದ ಬಿಟ್ಟು ಕನ್ನಡ ಮಾತನಾಡುವುದಕ್ಕೆ ಸಾಧ್ಯವಿಲ್ಲ ಎಂಬ ಸ್ಥಿತಿಗೆ ಕನ್ನಡ ಭಾಷೆ ಕೆಟ್ಟುಹೋಗಿದೆ, ಹೊಲಸು ಎಂದಿದ್ದೆ. ನಾವು ಇಂಗ್ಲೀಷ್‌ಗೆ ಗುಲಾಮರಾಗಿದ್ದು, ಅವರು ಹೋಗಿ ಎಷ್ಟೋ ವರ್ಷಗಳಾದರೂ ಇನ್ನೂ ಭಾಷಾ ಗುಲಾಮರಾಗಿ ಇದ್ದೇವೆ. ಇದು ಹೋಗಬೇಕಾದರೆ ಮತ್ತು ಪರಿಸ್ಥಿಯನ್ನು ಹದಗೊಳಿಸದಿದ್ದರೆ ನಾವು ಇನ್ನೂ ಕೆಟ್ಟುಹೋಗುತ್ತೇವೆ. ನಮ್ಮ ಮನೆಯಲ್ಲಿನ ಮಕ್ಕಳು–ಮೊಮ್ಮಕ್ಕಳು ನಮ್ಮ ಹತ್ತಿರ ಕನ್ನಡದಲ್ಲಿ ಮಾತನಾಡುವುದಿಲ್ಲ. ಸಮಸ್ಯೆಯೇ ಈ ರೀತಿ ಆಗಿದೆ. ಅವರು ಹೊರದೇಶದಲ್ಲಿದ್ದು ಬಂದಿದ್ದಾರೆ. ಕನ್ನಡದಲ್ಲಿ ಮಾತನಾಡುವುದಕ್ಕೆ ಹೋದಾಗ ಕನ್ನಡದಲ್ಲಿ ಮಾತನಾಡುವುದಿಲ್ಲ. ಅವರ ಹತ್ತಿರ ಕಷ್ಟ ಬಿದ್ದು, ಬೈದು ಹೊಡೆದು ಕನ್ನಡದಲ್ಲಿ ಮಾತನಾಡಿಸುವ ಸ್ಥಿತಿಗೆ ಬಂದುಬಿಟ್ಟಿದ್ದೇವೆ. ಈಗಲಾದರೂ ಸರ್ಕಾರವು ಮನಸ್ಸು ಮಾಡಿ ಒಂದು ವಿಧೇಯಕವನ್ನು ತಂದಿರುವುದಕ್ಕೆ ಸ್ವಾಗತ ಮಾಡುತ್ತೇವೆ. ಕನ್ನಡ ಭಾಷೆಯ ಕಲಿಕೆ ಎಂಬಲ್ಲಿ ರಾಜ್ಯ ಭಾಷೆ ಎಂಬುದನ್ನು ಸೇರಿಸಬೇಕು. ಆಗ ಸುಪ್ರೀಂಕೋರ್ಟ್‌ನವರಿಗೂ ಅರ್ಥವಾಗುತ್ತದೆ ಮತ್ತು ಎಲ್ಲರಿಗೂ ಅರ್ಥವಾಗುತ್ತದೆ. ಆಗ ಕನ್ನಡ ಎಂದು ಹೇಳುವುದಕ್ಕಾಗದೇ ನಮ್ಮ ರಾಜ್ಯಭಾಷೆ ಎಂದು

ಹೇಳಬಹುದು, ನಮ್ಮ ರಾಜ್ಯ ಭಾಷೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಹೇಳುತ್ತಿದ್ದೇವೆ ಎಂಬುದು ಅರ್ಥವಾಗುತ್ತದೆ. ಆ ದೃಷ್ಟಿಯಿಂದ ನಮ್ಮ ರಾಜ್ಯಭಾಷೆಯನ್ನು ಕಲಿಯಲೇಬೇಕು ಮತ್ತು ಓದಲೇಬೇಕು ಎಂದು ಹೇಳುವಾಗ ಈ ವಿಚಾರಗಳನ್ನು ಹೇಳಬೇಕು ಎಂದು ಹೇಳಿ ಇದನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಎರಡೂ ವಿಧೇಯಕಗಳನ್ನು ಸ್ವಾಗತಿಸಿ, 21(ಎ)ಗೆ ತಿದ್ದುಪಡಿ ತಂದಿರುವುದು ಬಹಳ ಪ್ರಮುಖವಾದುದು. ಅದು ಒಳ್ಳೆಯ ತಿದ್ದುಪಡಿ ಮತ್ತು ಕೆಲವು ಅಂಶಗಳನ್ನು ಬಿಡಬೇಕು ಎಂದು ಹೇಳಿರುವುದು ಸರಿಯಾಗಿದೆ.

**ಶ್ರೀ ಗೋ. ಮದುಸೂಧನ್ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎರಡೂ ವಿಧೇಯಕಗಳು ಸ್ವಾಗತಾರ್ಹವಾಗಿದ್ದು, ಕನ್ನಡ ಭಾಷೆಗೆ ಕರ್ನಾಟಕದಲ್ಲಿ ಇಂದಿನ ಆತಂಕಕಾರಿ ಸ್ಥಿತಿಯಲ್ಲಿ ಬಂದಿರುವ ಅನಿವಾರ್ಯ ವಿಧೇಯಕವಾಗಿದ್ದು, ಈ ಸಮಯದಲ್ಲಿ ಇದನ್ನು ಸ್ವಾಗತಿಸುತ್ತಾ ಒಂದು ಸಂಗತಿಯನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಇಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಡ್ಡಾಯ ಮಾಡುವ ವಿಧೇಯಕವನ್ನು ತಂದಿದ್ದು, ಇದಕ್ಕೆ ಸಂಸ್ಕೃತ ಭಾಷೆಯನ್ನು ಓದುವವರಿಗೆ ರಿಯಾಯಿತಿ ಕೊಡುವ ಅನಿವಾರ್ಯತೆ ಮತ್ತು ಅವಶ್ಯಕತೆ ಇದೆ ಎಂದು ನಾನು ಯೋಚನೆ ಮಾಡುತ್ತೇನೆ. ನಾವೆಲ್ಲ ಸಂಸ್ಕೃತ ಭಾಷೆಯನ್ನು ಓದುವಾಗ ಕನ್ನಡದಲ್ಲಿಯೇ ಬರೆಯುತ್ತಿದ್ದೆವು. ಇವತ್ತು ಆಂಗ್ಲ ಭಾಷೆಯನ್ನು ಎರಡನೆಯ ಭಾಷೆಯನ್ನಾಗಿ ಕಲಿಯುವ ಅನಿವಾರ್ಯತೆ, ಇದ್ದು, ಇದಕ್ಕೆ ಎಲ್ಲರಿಗೂ ಅವಕಾಶ ಇದೆ. ಅದೇ ರೀತಿ ಕನ್ನಡ ಅಥವಾ ಸಂಸ್ಕೃತಕ್ಕೆ 10 ಅಂಕಗಳು ಹಾಗೂ 100 ಅಂಕಗಳಿಗೆ ಇಂಗ್ಲೀಷ್ ಮತ್ತು ಮೂರನೆಯ ಭಾಷೆಯನ್ನಾಗಿ 50 ಅಂಕಗಳಿಗೆ ಓದುತ್ತಿದ್ದ ಪದ್ಧತಿ ಇತ್ತು. ಈ ಸಮಯದಲ್ಲಿ ಮೊದಲನೆಯ ಭಾಷೆಯಾಗಿ ಕನ್ನಡ ಅಥವಾ ಎರಡನೆಯ ಭಾಷೆಯನ್ನಾಗಿ ಕನ್ನಡ ಮಾಡುವುದಾದರೆ ಸಂಸ್ಕೃತ ತೆಗೆದುಕೊಂಡ ವ್ಯಕ್ತಿಗೂ ಎರಡನೆಯ ಭಾಷೆಯನ್ನು ಕನ್ನಡ ಎಂದು ಕಡ್ಡಾಯ ಮಾಡುವುದಾದರೆ 50 ಅಂಕಗಳಿಗೆ ಇಂಗ್ಲೀಷ್ ಭಾಷೆಯನ್ನು ಓದಬೇಕಾಗುತ್ತದೆ. ಆಗ ರಾಷ್ಟ್ರ ಭಾಷೆಯಾದ ಅಥವಾ ಸಂಪರ್ಕ ಭಾಷೆ ಎಂದುಕೊಂಡಿರುವ ಹಿಂದಿಯನ್ನು ಓದುವ ಅವಕಾಶವೇ ಸಿಗುವುದಿಲ್ಲ. ಆ ಕಾರಣದಿಂದ ಕನ್ನಡ ಅಥವಾ ಸಂಸ್ಕೃತ ಎಂಬ ಸೂತ್ರವನ್ನು ಅಳವಡಿಸಬೇಕು. ಈ ರೀತಿ ಬೇರೆ ಬೇರೆ ರಾಜ್ಯಗಳಲ್ಲಿ ಇರುವುದನ್ನು ನಾನು ಗಮನಿಸಿದ್ದೇನೆ. ನಾನು ಪಂಜಾಬ್‌ನಲ್ಲಿದ್ದುಕೊಂಡು ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಪಂಚಾಬಿ ಮೊದಲನೆ ಭಾಷೆಯನ್ನಾಗಿ ಓದಿದ್ದರೆ, ಅವನು ಆಕಸ್ಮಾತ್ ಸಂಸ್ಕೃತವನ್ನು ತೆಗೆದುಕೊಂಡಿದ್ದರೆ ಅವನಿಗೆ ಅದೇ ರಾಜ್ಯಭಾಷೆಯಾಗಿರುತ್ತದೆ. ಆಗ ಅವನು ಇಂಗ್ಲೀಷ್ ಎಂರಡನೆಯ ಭಾಷೆ ಮತ್ತು ಪಂಜಾಬಿಯನ್ನು ಮೂರನೆಯ ಭಾಷೆಯನ್ನಾಗಿ ಓದುತ್ತಾನೆ.

ನಮ್ಮ ರಾಜ್ಯದಲ್ಲಿ 1ನೇ ತರಗತಿಯಿಂದ 5ನೇ ತರಗತಿಯವರೆಗೂ ಬಾಲ್ಯದಲ್ಲಿ ಕನ್ನಡ ಮಾಧ್ಯಮವನ್ನೇ ಕಡ್ಡಾಯ ಮಾಡಿರುವ ಸಂದರ್ಭದಲ್ಲಿ ಮತ್ತು ಮಾತೃಭಾಷೆ ಕನ್ನಡ ಇರುವಾಗ ಸಂಸ್ಕೃತವೊಂದಕ್ಕೆ ವಿಶೇಷ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಈಗ ನಾವೇನು ಕನ್ನಡದ ಬಗ್ಗೆ ಮಾತನಾಡುತ್ತಿದ್ದೇವೆ; ಈಗ ಪ್ರಪಂಚದಲ್ಲಿ ಒಂದು ಕೂಗು ಎಂದ್ದಿದ್ದು, ಸಂಸ್ಕೃತದ ಬಗ್ಗೆ ಮಾತನಾಡಬೇಕಾದರೆ ಅನೇಕ ಜನ ಮೃತ ಭಾಷೆ, ಸಂಸ್ಕೃತ ಎನ್ನುವುದು ಭಾರಕ್ಕೆ ಸೇರಿದ ಭಾಷೆ ಅಲ್ಲವೇನೋ ಎಂಬ ಸ್ಥಿತಿ ನಿರ್ಮಾಣವಾಗುತ್ತಿದೆ. ಭಾರತದ ಎಲ್ಲಾ ಭಾಷೆಗಳ ತಾಯಿ ಭಾಷೆ ಸಂಸ್ಕೃತ. ಕನ್ನಡದಲ್ಲಿ ಇರುವ ವ್ಯಾಕರಣಗಳ ಸಂಧಿಗಳು. ಸಮಾಸಗಳು ಸೇರಿದಂತೆ ಪ್ರತಿಯೊಂದು ಸಂಸ್ಕೃತದ್ದೇ ಇದೆ. ಸಂಸ್ಕೃತದ ವ್ಯಾಕರಣ ಮತ್ತು ಶಬ್ದವನ್ನು ಬಿಟ್ಟರೆ ಕನ್ನಡ ಭಾಷೆ ಉಳಿಯುವುದಿಲ್ಲ. ಆ ಕಾರಣದಿಂದ ಸಂಸ್ಕೃತಕ್ಕೆ ವಿಶೇಷವಾದ ಪರಿಸ್ಥಿತಿ ಇರುವ ಸಮಯದಲ್ಲಿ ಸಂಸ್ಕೃತ ಅಥವಾ ಕನ್ನಡ ಎನ್ನುವುದನ್ನು ಮಾಡಿದರೆ ಕನ್ನಡದ ಮಾತೃ ಭಾಷೆಯಾದ ಸಂಸ್ಕೃತ ಭಾಷೆಯ ಉಳಿವು ಕನ್ನಡ ನಾಡಿನಲ್ಲಿ ಆಗುತ್ತದೆ ಎಂದು ಅನಿಸುತ್ತದೆ. ಇದು ತೀರಾ ಅವಶ್ಯಕವಾಗಿದ್ದು, ಇದನ್ನು ಎಲ್ಲರೂ ತೆಗೆದುಕೊಳ್ಳುತ್ತಾರೆ ಎಂದಿಲ್ಲ. ಸಂಸ್ಕೃತವನ್ನು ತೆಗೆದುಕೊಂಡು ಓದಬೇಕು ಎನ್ನುವವರಿಗಾದರೂ ಅವಕಾಶವಾಗುತ್ತದೆ. ಆಗ ಸಂಸ್ಕೃತ, ಹಿಂದಿ ಮತ್ತು ಇಂಗ್ಲೀಷ್ ಮೂರು ಭಾಷೆ ಓದಲು ಅವಕಾಶ ಸಿಗುತ್ತದೆ. ಅವರಿಗೆ ಹಿಂದಿ ಬೇಡ ಎಂದರೆ ಸಂಸ್ಕೃತ, ಇಂಗ್ಲೀಷ್ ಮತ್ತು ಕನ್ನಡವನ್ನು ಮೂರನೆಯ ಭಾಷೆಯನ್ನಾಗಿ ತೆಗೆದುಕೊಂಡು ಓದಬಹುದು. ಆದರೆ ಅವಕಾಶ ಸಿಗಬೇಕಾಗುತ್ತದೆ. ಸಂಸ್ಕೃತ ಭಾಷೆ ಓದುವವರಿಗೆ ಸರ್ಕಾರ ಆದ್ಯತೆ ಕೊಡಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಇ. ಕೃಷ್ಣಪ್ಪ:** ಸಂಸ್ಕೃತ ಇದ್ದರೆ ಹೊಟ್ಟೆ ತುಂಬಿಸುವುದಿಲ್ಲ, ಅವರ ಹೊಟ್ಟೆ ತುಂಬಿಸುತ್ತದೆ. ದೇವಸ್ಥಾನ......

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ಕನ್ನಡ ನಾಡು, ಕನ್ನಡ ಸಂಸ್ಕೃತಿ ಈ ಎರಡು ವಿಧೇಯಕಗಳನ್ನು ಕನ್ನಡ ನಾಡಿನ ಎಲ್ಲ ಜನರ ಆಶೋತ್ತರಗಳಿಗೆ ಪೂರಕವಾಗಿ ವಿಧೇಯಕ ಸಂಖ್ಯೆ 10 ಮತ್ತು 12ಗಳನ್ನು ಮಂಡನೆ ಮಾಡಿರುವುದಕ್ಕೆ ನಾನು ಸ್ವಾಗತವನ್ನು ಬಯಸುತ್ತೇನೆ. ನನ್ನ ಆತಂಕ ಏಕೆಂದರೆ ವಿಧೇಯಕ ಸಂಖ್ಯೆ 12ರಲ್ಲಿ ಕೇವಲ ಎರಡು ಶಬ್ದಗಳ ಬದಲಾವಣೆಗೆ ಅಪೇಕ್ಷೆ ಪಟ್ಟಿರುವುದಾಗಿದೆ. ಅದೇನೆಂದರೆ **'ಸಾಧ್ಯವಾಗಬಹುದಾದಷ್ಟು ಮಟ್ಟಿಗೆ'** ಎನ್ನುವ ಶಬ್ದವನ್ನು ತೆಗೆಯುತ್ತಿದ್ದು, ಬೇರೆ ಏನೂ ಬದಲಾವಣೆ ಇಲ್ಲ.

(ಗಂಟೆ 2:00)

ಸನ್ಮಾನ್ಯ ಸಭಾಪತಿಯವರೇ, ಅದರ ನಂತರ ಮಾನ್ಯ ಸಚಿವರು ಖಂಡ 350 'ಎ' ಭಾಷಾ ಅಲ್ಪ ಸಂಖ್ಯಾತರಿಗೆ ಮಾತ್ರ ಇರುವಂತಹ ಕಾನೂನಾಗಿದೆ. ಅದು ಏನು ಹೇಳುತ್ತದೆ ಎಂದರೆ;

> **"ಭಾಷಾ ಅಲ್ಪ ಸಂಖ್ಯಾತ ವರ್ಗಗಳಿಗೆ ಸೇರಿದ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣಕ್ಕಾಗಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಲು . . . ."**

ಎಂದು ಹೇಳಿದೆ. ಎರಡೂ ಖಂಡಗಳು ಬಹಳ ಸ್ಪಷ್ಟವಾಗಿವೆ. ಖಂಡ 21 'ಎ' ಪ್ರಕಾರ ರಾಜ್ಯ ತನ್ನ ನೀತಿಗಳನ್ನು ರೂಪಿಸಿಕೊಳ್ಳಬಹುದು. ಅದರಲ್ಲಿ ಭಾಷೆಯ ಬಗ್ಗೆ ಉಲ್ಲೇಖ ಮಾಡಿಲ್ಲ. ಖಂಡ 350 'ಎ' ಕೇವಲ ಭಾಷಾ ಅಲ್ಪಸಂಖ್ಯಾತರಿಗೆ ಮಾತ್ರ ಇರುವುದು. ಆದ್ದರಿಂದ ಮಕ್ಕಳ ಶಿಕ್ಷಣ ರಾಜ್ಯ ಭಾಷೆಯಲ್ಲಿ ಆಗುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಭಾಷೆಯ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಬಹಳಷ್ಟು ಚರ್ಚೆಗಳು ನಡೆದಿವೆ. ಅನಿವಾರ್ಯವಾಗಿ ಮಾನ್ಯ ಮಂತ್ರಿಗಳು ಒಂದು ಕಡೆ ಹೇಳಿಕೆಯನ್ನು ನೀಡಿದಂತೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ಕೊಡುತ್ತೇವೆಂದು ಬರೆದುಕೊಟ್ಟಂತಹ ಸುಮಾರು 1700ರಷ್ಟು ಶಾಲೆಗಳಲ್ಲಿ ಶೇಕಡಾ 99ರಷ್ಟು ಶಾಲೆಗಳು ಅದನ್ನು ಉಲ್ಲಂಘನೆ ಮಾಡಿರುವುದರಿಂದ ಮತ್ತು ಇಲಾಖೆಯು ಅನುಮತಿ ಕೊಟ್ಟಿರುವುದಕ್ಕೆ ವಿರುದ್ಧವಾಗಿ; ಅಂದರೆ, ಆಂಗ್ಲ ಮಾಧ್ಯಮದಲ್ಲಿ ಶಾಲೆಗಳನ್ನು ನಡೆಸುತ್ತಿರುವುದರಿಂದ ಮತ್ತು ಆ ಶೇಕಡಾ 99ರಷ್ಟು ಶಾಲೆಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳಲು ಮುಂದೆ ಬಂದಾಗ, ಆ ಶಾಲೆಗಳು ಕೋರ್ಟಿಗೆ ಹೋಗಿ ಕೋರ್ಟಿಂದ ತೀರ್ಮಾನ ತೆಗೆದುಕೊಂಡು ಬಂದ ಹಿನ್ನೆಲೆಯಲ್ಲಿ ಈ ಒಂದು ವಿಧೇಯಕವನ್ನು ತರಬೇಕಾಗಿರುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ; ರಾಜ್ಯದಲ್ಲಿ ಜನಸಾಮಾನ್ಯರ ಭಾವನೆ ಮತ್ತು ಕೆಲವು ಕನ್ನಡ ಪರವಾದ ಸಂಘಟನೆಗಳ ಹೋರಾಟ ಈ ಸಂಗತಿಗಳ ನಡುವೆ ಸರ್ಕಾರ ನಿರ್ಣಯ ತೆಗೆದುಕೊಳ್ಳಬೇಕಾದಂತಹ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನಲ್ಲಿ ಈ ಕೇಸ್‌ನ ಬಗ್ಗೆ ಅಧಿಕಾರಯುತವಾಗಿ ಸರ್ಕಾರ ಚರ್ಚೆಯನ್ನು ಮಂಡನೆ ಮಾಡದೇ ಇರುವುದರಿಂದ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟಿನ ತೀರ್ಮಾನಗಳು ಸರ್ಕಾರದ ವಿರುದ್ಧವಾಗಿ ಬಂದಿರುವ ವಿಚಾರವನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಸರ್ಕಾರ ಇವತ್ತು ತಂದಿರುವ ಕಾನೂನು ಕೇವಲ ಕೆಲವು ವರ್ಗವನ್ನು ಸಂತೃಪ್ತಿಪಡಿಸುವ ಕಾನೂನು ಆಗಬಾರದು. ಈ ರಾಜ್ಯದಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿ ಉಳಿಯಬೇಕು, ನಮ್ಮ ರಾಜ್ಯದಲ್ಲಿ ಶಿಕ್ಷಣವನ್ನು ಕನ್ನಡ ಭಾಷೆಯಲ್ಲಿಯೇ ನೀಡಬೇಕೆನ್ನುವ ಉದ್ದೇಶದ ಹಿನ್ನೆಲೆಯಲ್ಲಿ ಇನ್ನೂ ಹೆಚ್ಚು ಬಲಯುತವಾದ ಕಾನೂನು ಜಾರಿಗೆ ತರುವ ಅವಶ್ಯಕತೆ ಇದೆ. ಇಲ್ಲದಿದ್ದರೆ, ಈ

ವಿಧೇಯಕದಲ್ಲಿನ ವಿಚಾರಗಳನ್ನು ಆ ಶಾಲೆಗಳು ಖಂಡಿತವಾಗಿಯೂ ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನೆ ಮಾಡುತ್ತವೆ. ಈ ರೀತಿ ಆದರೆ, ಈ ವಿಧೇಯಕ ನೀತಿಯಾಗಿ ಮುಂದುವರೆಯುತ್ತದೆ ಎನ್ನುವ ಧೈರ್ಯ ನನಗಿಲ್ಲ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಈ ಸಮಸ್ಯೆ ಹೆಚ್ಚಾಗಿರುವುದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ನಾಯಕತ್ವವನ್ನು ವಹಿಸಿಕೊಂಡು ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕರೆದು 'ನಮ್ಮ ನಮ್ಮ ರಾಜ್ಯಗಳ ಭಾಷೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ನಮ್ಮ ರಾಜ್ಯಗಳಲ್ಲಿ ನಮ್ಮ ರಾಜ್ಯದ ಭಾಷೆಯಲ್ಲಿಯೇ ಶಿಕ್ಷಣ ಕೊಡುವುದಕ್ಕಾಗಿ ಯಾವ ರೀತಿಯಲ್ಲಿ ಕಾನೂನಿನ ಕ್ರಮ ತೆಗೆದುಕೊಳ್ಳಬಹುದು' ಎನ್ನುವುದರ ಬಗ್ಗೆ ಚರ್ಚಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಒಂದು ಸೂಕ್ತ ಕ್ರಮ ತೆಗೆದುಕೊಳ್ಳುವುದು ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ರಾಷ್ಟ್ರೀಯ ಭಾವೈಕ್ಯತಾ ಪರಿಷತ್ತಿನ ಸಭೆಯಲ್ಲಿ ಭಾವೈಕ್ಯತೆಯ ಬಗ್ಗೆ ಹೆಚ್ಚು ಒತ್ತು ಕೊಡುತ್ತೇವೆ. ಈ ಪರಿಷತ್ತಿನಲ್ಲಿ ನಮ್ಮ ನಮ್ಮ ರಾಜ್ಯಗಳ ಪ್ರಾದೇಶಿಕ ಭಾಷೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರಿಗೂ ಇರುವುದರಿಂದ ಮತ್ತು ಸಂವಿಧಾನಾತ್ಮಕವಾದ ಕರ್ತವ್ಯವೂ ಆಗಿರುವುದರಿಂದ ರಾಷ್ಟ್ರೀಯ ಭಾವೈಕ್ಯತಾ ಪರಿಷತ್ತಿನ ಸಭೆಯಲ್ಲಿ ಇದರ ಬಗ್ಗೆ ಉಲ್ಲೇಖ ಮಾಡಿ ನಮ್ಮ ರಾಜ್ಯದಲ್ಲಿ ಕನ್ನಡ ಭಾಷೆಯ ಬೆಳವಣಿಗೆಗಾಗಿ ಶಾಲಾ ಕಾಲೇಜುಗಳಲ್ಲಿ ಯಾವ ರೀತಿಯ ನಿಯಮಗಳನ್ನು ಅನುಸರಿಸಬೇಕು ಮತ್ತು ಅದಕ್ಕಾಗಿ ಏನೇನು ಕಾನೂನು ಮಾಡಬೇಕು ಮತ್ತು ಯಾವ ರೀತಿಯಲ್ಲಿ ಕೇಂದ್ರ ಸರ್ಕಾರದ ಸಹಾಯ ಪಡೆದುಕೊಳ್ಳಬೇಕು ಎನ್ನುವ ನಿಟ್ಟಿನಲ್ಲಿ ಕೂಡ ಪ್ರಯತ್ನಿಸಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ರಾಷ್ಟ್ರದಲ್ಲಿ ತ್ರಿಭಾಷಾ ಸೂತ್ರ ಜಾರಿಯಲ್ಲಿದೆ. ಇವತ್ತು ಸರ್ಕಾರ ತಂದಿರುವ ಕಾನೂನು ರಾಷ್ಟ್ರದ ತ್ರಿಭಾಷಾ ಸೂತ್ರದ ವಿರುದ್ಧವಾಗಿದೆಯೇ ಎನ್ನುವುದನ್ನು ಸಹ ವಿಮರ್ಶೆ ಮಾಡಬೇಕಾಗುತ್ತದೆ. ಸರ್ಕಾರ ಕನ್ನಡ ಭಾಷೆಯನ್ನು ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕಡ್ಡಾಯವಾಗಿ ಒಂದು ವಿಷಯವನ್ನಾಗಿ ಕಲಿಸಬೇಕೆನ್ನುವ ಆಲೋಚನೆ ಏನು ಮಾಡಿದೆ, ಅದನ್ನು ನಾನು ಸ್ವಾಗತಿಸುತ್ತಿದ್ದೇನೆ. ಇದು ಇನ್ನೂ ಹೆಚ್ಚು ಪರಿಣಾಮಕಾರಿಯಾಗಬೇಕಾದರೆ, ರಾಜ್ಯದಲ್ಲಿರುವ ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ಮಾಡುವ ಸಂದರ್ಭದಲ್ಲಿ ಕನ್ನಡ ಭಾಷೆಯನ್ನು ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕಡ್ಡಾಯವಾಗಿ ಒಂದು ವಿಷಯವನ್ನಾಗಿ ಕಲಿಯಬೇಕು ಎನ್ನುವುದನ್ನು ಕಡ್ಡಾಯ ಮಾಡಿದರೆ ಅದಕ್ಕೆ ಹೆಚ್ಚು ಪ್ರೋತ್ಸಾಹ ಸಿಗುತ್ತದೆ ಎಂದು ಹೇಳುತ್ತಾ, ಈ ಎರಡೂ ವಿಧೇಯಕಗಳನ್ನು ಸ್ವಾಗತಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಸಭಾಪತಿಯವರು:–** ಒಂದು ಪ್ರಮುಖವಾಗಿರುವ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಮಾಡಬೇಕೆನ್ನುವ ಕೋರಿಕೆಯನ್ನು ಮಾಡಿದ್ದಾರೆ. ಅವರು ಹೇಳಿಕೆ ಮಾಡಿದ ನಂತರ ಈ ವಿಧೇಯಕದ ಮೇಲಿನ ಚರ್ಚೆಯನ್ನು ಮುಂದುವರಿಸೋಣ.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಈ ಸಮಸ್ಯೆ ಕೇವಲ ನಮ್ಮ ರಾಜ್ಯಕ್ಕೆ ಮಾತ್ರ ಸಂಬಂಧಪಟ್ಟಿಲ್ಲ. ಇಡೀ ರಾಷ್ಟ್ರದ ಸಮಸ್ಯೆಯಾಗಿದೆ.

**ಸಭಾಪತಿಯವರು:–** ಈ ವಿಧೇಯಕದ ಮೇಲೆ ಅವರು ಹೇಳಿಕೆ ಮಾಡುತ್ತಿಲ್ಲ. ಬೇರೆ ಪ್ರಮುಖವಾಗಿರುವ ವಿಚಾರದ ಬಗ್ಗೆ ಹೇಳಿಕೆ ಮಾಡುತ್ತಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಪ್ರಮುಖವಾಗಿರುವ ವಿಚಾರದ ಬಗ್ಗೆ ಹೇಳಿಕೆ ಮಾಡಿ ಮಾನ್ಯ ಮುಖ್ಯಮಂತ್ರಿಗಳು ಈ ಸದನದಿಂದ ನಿರ್ಗಮಿಸದೇ, ಈ ವಿಧೇಯಕದ ಮೇಲೆ ಚರ್ಚೆ ಮುಗಿಯುವವರೆವಿಗೂ ಈ ಸದನದಲ್ಲಿಯೇ ಉಪಸ್ಥಿತರಿರಬೇಕೆನ್ನುವುದು ನನ್ನ ಮನವಿಯಾಗಿದೆ.

**ಸಭಾಪತಿಯವರು:–** ಖಂಡಿತವಾಗಿಯೂ ಈ ವಿಧೇಯಕದ ಮೇಲಿನ ಚರ್ಚೆ ಮುಗಿಯುವವರೆವಿಗೂ ಅವರು ಈ ಸದನದಲ್ಲಿಯೇ ಇರುತ್ತಾರೆ.

**4. ಮುಖ್ಯಮಂತ್ರಿಗಳ ಹೇಳಿಕೆ.**

**"ರಾಜ್ಯದ 'ಸಿ' ಕೆಟಗರಿ ಗಣಿ ಹರಾಜು ಪ್ರಕ್ರಿಯೆ ಬಗ್ಗೆ ಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ವರದಿಯಾಗಿರುವ ಅಂಶಗಳ ಬಗ್ಗೆ".**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯನ್ನು ಪಡೆದುಕೊಂಡು ಒಂದು suo moto ಹೇಳಿಕೆಯನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ. ಈ ದಿನ ಬೆಳಿಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು. . . . . .

**ಶ್ರೀ ಕೆ. ಅಭಯಚಂದ್ರ (ಯುವಜನ ಸೇವೆ ಮತ್ತು ಮೀನುಗಾರಿಕಾ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸದನದಲ್ಲಿ ಉಪಸ್ಥಿತರಿಲ್ಲ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಇರಲೇಬೇಕೆಂದು ಇಲ್ಲ. ನನಗೆ ಮಾನ್ಯ ಗೋ. ಮಧುಸೂದನ್ ಒಬ್ಬರೇ ಇದ್ದರೂ ಸಾಕು. ಅವರು ಎಲ್ಲರನ್ನು ಪ್ರತಿನಿಧಿಸುತ್ತಾರೆ. ನನಗೆ ಈಶ್ವರಪ್ಪನವರು ಇದ್ದರೂ ನಡೆಯುತ್ತದೆ. ನಾರಾಯಣಸ್ವಾಮಿ ಇದ್ದರೂ ನಡೆಯುತ್ತದೆ ಮಾನ್ಯ ಮಧುಸೂದನ್ ಇದ್ದರೂ ನಡೆಯುತ್ತದೆ. ಮಾನ್ಯ ರಾಮಚಂದ್ರಗೌಡರು ಯಾವಾಗಲೂ ಸದನದಲ್ಲಿ ಉಪಸ್ಥಿತರಿರುತ್ತಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಗೋ. ಮಧುಸೂದನ್ ಅವರನ್ನು 'ನನ್ನ ಶಿಷ್ಯ' ಎಂದು ಸದಾ ಹೇಳುತ್ತಿರುತ್ತಾರೆ. ಈಗ ಮಾನ್ಯ ಗೋ. ಮಧುಸೂದನ್ ಒಬ್ಬರೇ ಇದ್ದರೂ ಸಾಕು ಎಂದು ಹೇಳುತ್ತಿದ್ದಾರೆ. ನನಗೆ ಯಾಕೋ ಅನುಮಾನ ಬರುತ್ತಿದೆ. ಖಂಡಿತವಾಗಿಯೂ ಗೋ. ಮಧುಸೂದನ್‌ರವರು ಮಾನ್ಯ ಮುಖ್ಯಮಂತ್ರಿಗಳ ಶಿಷ್ಯರಿರಬಹುದು.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ನನಗೆ ಎಲ್ಲರ ಬಗ್ಗೆಯೂ ಸಮಾನವಾಗಿರುವ ಪ್ರೀತಿ ಮತ್ತು ಗೌರವ ಇದೆ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಯಾರನ್ನು ಬೇಕಾದರೂ **'ಶಿಷ್ಯ'** ಎಂದು ಸ್ವೀಕಾರ ಮಾಡಲಿ. ಆದರೆ, ಮಾನ್ಯ ಮಧುಸೂದನ್ ಅವರನ್ನು ಮಾತ್ರ **'ಶಿಷ್ಯ'** ಎಂದು ಸ್ವೀಕಾರ ಮಾಡುವುದು ಬೇಡ. ಅವರಿಗೆ ಕರ್ನಾಟಕದಲ್ಲಿ ಕನ್ನಡವೇ ಬೇಡವಂತೆ, ಸಂಸ್ಕೃತ ಬೇಕಂತೆ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಂದೇಶ್ ನಾಗರಾಜ್‌ರವರು ನನಗೆಷ್ಟು ಆತ್ಮೀಯರೋ, ಮಧುಸೂದನ್ ಸಹ ಅಷ್ಟೇ ಆತ್ಮೀಯ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೋ. ಮಧುಸೂದನ್ ಅವರು ಬಹಳ ಅಪಾಯಕಾರಿ ವ್ಯಕ್ತಿ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಯಾವಾಗಲೂ ಅಪಾಯಕಾರಿ ವ್ಯಕ್ತಿಯನ್ನು ಪಕ್ಕದಲ್ಲಿಯೇ ಇಟ್ಟುಕೊಳ್ಳಬೇಕು; ದೂರವಿಟ್ಟರೇ ಅಪಾಯ ಹೆಚ್ಚು!

**ಶ್ರೀ ರಾಮಚಂದ್ರಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಶ್ರೀಕೃಷ್ಣ ಪರಮಾತ್ಮ ಸ್ಥಿತಪ್ರಜ್ಞರ ಲಕ್ಷಣಗಳನ್ನು ವರ್ಣನೆ ಮಾಡಿದಂತೆ, ಅಚಲವಾಗಿ ನಿಂತು ಬಿಟ್ಟಿದ್ದಾರೆ; ಅವರು ಸ್ಥಿತಪ್ರಜ್ಞರಾಗಿದ್ದಾರೆ. ಆದ್ದರಿಂದ ಎಲ್ಲರನ್ನು ಸಮಾನರಾಗಿ ಕಾಣುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಎಲ್ಲರನ್ನು ಸಮಾನವಾಗಿ ಕಾಣುವುದು ನನ್ನ ಬದ್ಧತೆಯಾಗಿದೆ. ವಿರೋಧ ಪಕ್ಷದ ಸದಸ್ಯರು ಸಹ ಅದನ್ನೇ ಅನುಸರಿಸುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ಇಲ್ಲಿ ನನ್ನ ಮತ್ತು ಅವರ ನಡುವೆ ಯಾವುದೇ ವ್ಯತ್ಯಾಸವಿಲ್ಲ.

**ಶ್ರೀ ರಾಮಚಂದ್ರಗೌಡ:–** ಸನ್ಮಾನ್ಯ ಸಭಾಪತಿಯವರೇ, ಅವರು ಮುಖ್ಯಮಂತ್ರಿಗಳಾಗಿದ್ದಾರೆ. ನಾವು ಎಂ.ಎಲ್.ಸಿ., ಗಳಾಗಿದ್ದೇವೆ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಅಧಿಕಾರಗಳು ಬರುತ್ತವೆ, ಹೋಗುತ್ತವೆ. ಅದು ಬೇರೆ ವಿಚಾರ. ಆದರೆ, ಅಧಿಕಾರ ಶಾಶ್ವತವಲ್ಲ; ಮಾನವೀಯತೆ ಬಹಳ ಮುಖ್ಯ.

**ಶ್ರೀ ರಾಮಚಂದ್ರಗೌಡ:–** ಸನ್ಮಾನ್ಯ ಸಭಾಪತಿಯವರೇ, ನಾನು ಎನ್ನುವುದು ಶಾಶ್ವತ ಈ ದೇಹ ಶಾಶ್ವತವಲ್ಲ ಎನ್ನುವುದು ಉನ್ನತ ಮಟ್ಟದ ತತ್ವಜ್ಞಾನವಾಗಿದೆ. 'ನಾನು' ಎನ್ನುವುದಕ್ಕೆ ಕೋಟಿ ಕೋಟಿ ವರ್ಷಗಳಷ್ಟು ವಯಸ್ಸಾಗಿದೆ.

**ಶ್ರೀ ಹೆಚ್.ಎಂ. ರೇವಣ್ಣ:–** ಸನ್ಮಾನ್ಯ ಸಭಾಪತಿಯವರೇ, ಕನಕದಾಸರು 'ನಾನು ಹೋದರೆ ಹೋದೇನು' ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಅವರು ಬೇರೆ ಅರ್ಥದಲ್ಲಿ ಹೇಳಿದ್ದಾರೆ. 'ನಾನು ಹೋದರೆ ಹೋದೇನು' ಎಂದರೆ. ಇಲ್ಲಿ 'ನಾನು' ಎಂದರೆ 'ಅಹಂ' ಎಂದು ಅರ್ಥ. ಆ ಅಹಂ ಹೋದರೆ, ದೇವರ ಸಾನಿಧ್ಯಕ್ಕೆ ಹೋಗಬಹುದು ಎಂದು ಅವರು ಹೇಳಿದ್ದಾರೆ. ಮಾನ್ಯ ರೇವಣ್ಣನವರು ಅರ್ಥ ವ್ಯತ್ಯಾಸವನ್ನು ಸರಿಯಾಗಿ ಮಾಡಿಕೊಳ್ಳದೇ ಗೊಂದಲಕ್ಕೀಡಾಗಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಈ ದಿನ ಬೆಳಿಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳಿದ್ದಾರೆ. ಆದರೆ, ತಾವು ಅದಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಅದು ಸಂತೋಷದ ಸಂಗತಿಯಾಗಿದೆ. ಆದರೆ, ನಾನು ಆ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು suo moto ಹೇಳಿಕೆಯನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ರಾಮಚಂದ್ರಗೌಡ:–** ಅದಕ್ಕೆ ಅವಕಾಶವನ್ನು ಕೊಡದೇ ಇರುವುದರಿಂದ ಅದಕ್ಕೆ ರಿಪ್ಲೈ ಮಾಡುವುದಕ್ಕೆ ಬರುವುದಿಲ್ಲ.

**Mr. CHAIRMAN**:- It is not a reply.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ಅದು ಚರ್ಚೆಯೇ ಆಗಿಲ್ಲವಲ್ಲ. I am making a suo-moto statement. It is not a reply. ಮಾಧ್ಯಮದಲ್ಲಿ ಬಂದಿರುವುದರಿಂದ I am making a suo-moto statement and bringing it to the notice of the august House. ನಾನು ಅದನ್ನು ಸಹ ಮಾಡುವುದು ಬೇಡವೇ? Otherwise ಏನೇನೋ interpretation ಏನೇನೋ confusion ಎಲ್ಲಾ ಹೋಗಿಬಿಡುತ್ತದೆ. ಮಾನ್ಯ ಈಶ್ವರಪ್ಪನವರು ಹೇಗೆ ಗೊಂದಲಕ್ಕೀಡಾದರೋ, ಆ ರೀತಿ ಆಗಿಬಿಟ್ಟರೆ ಕಷ್ಟವಲ್ಲವೇ? ಹಾಗಾಗಬಾರದು ಎನ್ನುವ ಕಾರಣಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಬೆಳಿಗ್ಗೆ ಅವರು ಮಾಡಿದ್ದಾರೆ. ನ್ಯಾಯಾಲಯದಲ್ಲಿ ನಿನ್ನೆಯ ದಿವಸ ಏನು ಪ್ರೊಸೀಡಿಂಗ್ಸ್ ನಡೆದಿದೆ, ಅವೆಲ್ಲಾ ಪತ್ರಿಕೆಯಲ್ಲಿ ಬರುವುದಿಲ್ಲ. ಪತ್ರಿಕೆಯಲ್ಲಿ ಬಂದಿರತಕ್ಕಂಥಾದ್ದೇ ಬೇರೆ, ಅಲ್ಲಿ ನಡೆದಿರತಕ್ಕಂಥಾದ್ದೇ ಬೇರೆ. ಅದನ್ನು ತೆಗೆದುಕೊಂಡು "ಈ ಸರ್ಕಾರಕ್ಕೆ ನಾಚಿಕೆ ಇಲ್ಲ, ಅದಿಲ್ಲ, ಇದಿಲ್ಲ...." ಎಂದು ಹೇಳಿದರೆ ಇದನ್ನೆಲ್ಲಾ ನಾವು ಒಪ್ಪಿಕೊಳ್ಳಬೇಕೆ, ಸಹಿಸಿಕೊಳ್ಳಬೇಕೆ ಎನ್ನುವುದು ಬಹಳ ಮುಖ್ಯವಾದುದು.

**Sri RAMACHANDRA GOWDA:-** That again requires a reply.

**Sri SIDDARAMAIAH:-** It is not a reply at all.

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಮಾನ್ಯ ಸಭಾಪತಿಯವರೆ, ಅವರು ಪ್ರಸ್ತಾಪ ಮಾಡುತ್ತಿರುವುದು ರಿಪ್ಲೈ ಆಗುತ್ತಿದೆ.

**ಶ್ರೀ ಸಿದ್ದರಾಮಯ್ಯ:–** ನೀವು ಏನು ಹೇಳಿದರೂ ಅದನ್ನು ನಾವು ಕೇಳಿಕೊಂಡು ಹೋಗಬೇಕೆ, ಅದಕ್ಕಾಗಿಯೇ ನಾವಿಲ್ಲಿ ಇರುವುದು?

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಮಾನ್ಯ ಸಭಾಪತಿಯವರೆ, ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿಕೆಯನ್ನು ಮಾಡಲು ಅವಕಾಶವನ್ನು ಕೊಟ್ಟಿದ್ದೀರಿ. ಈಗ ಅದು ರಿಪ್ಲೈ ಆಗಲಿಲ್ಲವೇ?

**(ಗೊಂದಲ)**

**Sri SIDDARAMAIAH:-**It is not a reply. It is a suo-moto statement of the Government.

**Mr.CHAIRMAN:-** Suo-moto statement ಎಂದು ಹೇಳಿದ್ದಾರೆ. ಅವರು ಹೇಳಿಕೆಯನ್ನು ಮಾಡಲಿ.

**ಶ್ರೀ ಸಿದ್ದರಾಮಯ್ಯ:–** ಅವರು ಮಾತ್ರ ಏನು ಬೇಕಾದರೂ ಮಾತನಾಡಬಹುದೇ?

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅವರು suo-moto statement ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇವರು ಹೇಳಿಕೆಯನ್ನೇ ಮಾಡಬೇಡಿ ಎಂದರೆ ಹೇಗೆ?

**ಸಭಾಪತಿಯವರು:–** ಅವರು suo-moto statement ಎಂದು ಹೇಳಿದ್ದಾರೆ. ಅವರು suo-moto statement ಮಾಡುತ್ತಿದ್ದಾರೆ. It is not a reply to any debate.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಪತ್ರಿಕೆಯಲ್ಲಿ ಬಂದಿರುವ ವಿಚಾರಗಳನ್ನಿಟ್ಟುಕೊಂಡು ಸರ್ಕಾರ suo-moto ಹೇಳಿಕೆಯನ್ನು ಮಂಡಿಸುತ್ತಿದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇದು suo-moto statement. ನಿನ್ನೆಯ ದಿವಸ ನ್ಯಾಯಾಲಯದಲ್ಲಿ ಏನು ನಡೆಯಿತು ಎನ್ನುವುದಕ್ಕಷ್ಟೇ ಪೂರಕವಾಗಿದೆ. ನ್ಯಾಯಾಲಯದಲ್ಲಿ ಏನಾಯಿತು ಎಂಬುದನ್ನು ನಾನು ಹೇಳಬೇಕಲ್ಲವೇ? ನಿನ್ನೆಯ ದಿವಸ ಏನು ನಡೆಯಿತು ಎನ್ನುವುದು ಸದನಕ್ಕೆ ಗೊತ್ತಾಗಬೇಕಲ್ಲವೇ? ಜೊತೆಗೆ ಪತ್ರಿಕೆಯಲ್ಲಿ ಬಂದಿರತಕ್ಕಂಥಾದ್ದೆ ಸತ್ಯ ಎನ್ನುವ ಸಂದೇಶ ಜನಗಳಿಗೆ ಹೋಗಬಾರದಲ್ಲವೇ? ನಿನ್ನೆಯ ದಿವಸ ನಮ್ಮ ಅಡ್ವೋಕೇಟ್‌ರವರು ನ್ಯಾಯಾಲಯದಲ್ಲಿದ್ದರು. ಅಲ್ಲಿ ಏನು ನಡೆಯಿತು ಎನ್ನುವ ಬಗ್ಗೆ ಅವರು ನಮಗೆ ಒಂದು ಟಿಪ್ಪಣಿಯನ್ನು ಕಳುಹಿಸಿಕೊಟ್ಟಿದ್ದಾರೆ. It is to be made known to the House. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ....

**ಶ್ರೀ ಗೋ. ಮಧುಸೂದನ್:–** ಹೇಳಿಕೆಯ ಪ್ರತಿ.

**ಸಭಾಪತಿಯವರು:–** ಕೊಡುತ್ತಾರೆ. ಹೇಳಿಕೆಯನ್ನು ಮಾಡುವ ಬಗ್ಗೆ ಕಾನೂನು ಏನಿದೆ ಎಂಬುದನ್ನು ನಾನು ಹೇಳುತ್ತೇನೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಮಧುಸೂದನ್‌ರವರೆ, ತಾವು ನಾನು ಹೇಳುವುದನ್ನು ಸ್ವಲ್ಪಕೇಳಿ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದಕ್ಕೆ ಬಿಡಿ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಪ್ರತಿ ಪದಕ್ಕೂ, ಪ್ರತಿ ಮಾತಿಗೆ ಮಧ್ಯದಲ್ಲಿ ಮಾತನಾಡಿದರೆ ನನಗೆ ಸದನ ನಡೆಸುವುದು ಕಷ್ಟವಾಗುತ್ತದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಮ್ಮ ಕಡೆ ಒಂದು ಗಾದೆ ಮಾತಿದೆ. ಬಹಳ ಅತುರವಾಗಿರುವವರಿಗೆ ಹಳ್ಳಿ ಕಡೆ "ಏಳು ತಿಂಗಳಿಗೆ ಹುಟ್ಟಿದವನು" ಎಂದು ಕರೆಯುತ್ತಾರೆ. ಅವರ ಕಡೆಯೂ ಈ ಗಾದೆ ಮಾತಿದೆ ಎಂದು ಭಾವಿಸುತ್ತೇನೆ.

**ಶ್ರೀ ಪುಟ್ಟಣ್ಣ (ಉಪ ಸಭಾಪತಿಯವರು):–** "ಆತುರಗಾರನಿಗೆ ಬುದ್ಧಿ ಮಟ್ಟ" ಎನ್ನುತ್ತಾರೆ.

**ಶ್ರೀ ಸಿದ್ದರಾಮಯ್ಯ:–** "ಆತುರಗಾರನಿಗೆ ಬುದ್ಧಿ ಮಂಕು" ಎಂದು ಹೇಳುತ್ತಾರೆ, ಇದನ್ನು ಹೇಳುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ:–** ನಮ್ಮ ಕಡೆ "ಏಳರಾಗೇ ಹುಟ್ಟಿದವ" ಎನ್ನುತ್ತಾರೆ.

**ಶ್ರೀ ಪುಟ್ಟಣ್ಣ (ಉಪ ಸಭಾಪತಿಯವರು):–** ಮಾನ್ಯ ಸಭಾಪತಿಯವರೆ, ಮಧುಸೂದನ್‌ರವರನ್ನು ನೋಡಿದರೆ 7 ತಿಂಗಳಿಗೆ ಹುಟ್ಟಿದವರ ತರಹ ಇಲ್ಲ.

**ಶ್ರೀ ಸಿದ್ದರಾಮಯ್ಯ:–** ಅವರು ಆ ರೀತಿ ಇಲ್ಲವೇ? ನಾನು ಅವರಿಗೆ ಹೇಳಲಿಲ್ಲ!

**ಶ್ರೀ ಪುಟ್ಟಣ್ಣ (ಉಪ ಸಭಾಪತಿಯವರು):–** ನಾನು ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಹೇಳಿದೆ.

**ಶ್ರೀ ಸಿದ್ದರಾಮಯ್ಯ:–** ನಾನು ನಾಣ್ನುಡಿಯನ್ನು ಹೇಳಿದೆ. ಮಾನ್ಯ ಮಧುಸೂದನ್‌ರವರಿಗೆ ಹೇಳಲಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಮಧುಸೂದನ್‌ರವರು 11ನೇ ತಿಂಗಳಿನಲ್ಲಿ ಹುಟ್ಟಿದ್ದಾರೆ!

**ಶ್ರೀ ಎಸ್.ಆರ್. ಪಾಟೀಲ್:–** ಗರಿಷ್ಠ 10 ತಿಂಗಳು ಇರುತ್ತದೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):** ಮಾನ್ಯ ಸಭಾಪತಿಯವರೇ,

"ದಿನಾಂಕ 01.04.2015ರ ದಿನಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ 'ಸಿ' ವರ್ಗದ ಗಣಿಗಳ ಹರಾಜಿನ ಬಗ್ಗೆ ಬಿತ್ತರಗೊಂಡಿರುವ ಸುದ್ದಿಯ ಕುರಿತು ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಬಯಸಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಿನಾಂಕ: 31.03.2015ರಂದು 'ಸಿ' ವರ್ಗದ ಗಣಿಗುತ್ತಿಗೆಗಳನ್ನು ಹರಾಜು ಮೂಲಕ ವಿಲೇ ಮಾಡುವ ಪ್ರಕ್ರಿಯೆಗೆ ಅನಮೋದನೆ ನೀಡುವ ಕುರಿತು ವಿಚಾರಣೆ ನಡೆದಿರುತ್ತದೆ. ಸದರಿ ವಿಚಾರಣೆ ಸಮಯದಲ್ಲಿ ರಾಜ್ಯ ಸರ್ಕಾರದ ಪರವಾಗಿ ಹಿರಿಯ ನ್ಯಾಯವಾದಿಗಳಾದ ಶ್ರೀ ರಾಜು ರಾಮಚಂದ್ರನ್ ಮತ್ತು ನ್ಯಾಯವಾದಿಗಳಾದ ಶ್ರೀಮತಿ ಅನಿತಾ ಶಣೈ ರವರು ಹಾಜರಾಗಿರುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರತಿಯು ಈವರೆವಿಗೂ ಸರ್ಕಾರಕ್ಕೆ ತಲುಪಿರುವುದಿಲ್ಲ.

ಆದಾಗ್ಯೂ ಸರ್ಕಾರಿ ವಕೀಲರು ನೀಡಿರುವ ಟಿಪ್ಪಣಿಯಂತೆ ದಿನಾಂಕ: 31.03.2015ರಂದು ನಡೆದಿರುವ ವಿಚಾರಣೆಯಲ್ಲಿ ಬಂದಿರುವ ಅಂಶಗಳು ಈ ಕೆಳಗಿನಂತೆ ಇರುತ್ತವೆ.

(1) ವಿಚಾರಣೆಯಲ್ಲಿ ಸರ್ವೋಚ್ಚ ನ್ಯಾಯಾಲಯದ Amicus curie ಆದ ಶ್ರೀ ಶ್ಯಾಮ್ ದಿವಾನ್ ರವರು ತಮ್ಮ ಲಿಖಿತ ವರದಿಯನ್ನು ಹಾಗೂ ಸಿಇಸಿ ರವರು ಗಣಿಗುತ್ತಿಗೆ ಹರಾಜಿಗಾಗಿ ಕೆಲವು ಮಾರ್ಪಾಡುಗಳೊಂದಿಗೆ ಕರ್ನಾಟಕ ಸರ್ಕಾರದ 'ಸಿ' ಗಣಿಗುತ್ತಿಗೆ ಹರಾಜಿನ ಯೋಜನೆಯನ್ನು ಒಪ್ಪಿಕೊಂಡಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ. ವಿಚಾರಣೆಯಲ್ಲಿ ಸರ್ವೋಚ್ಚ ನ್ಯಾಯಾಲಯವು 15 ಗಣಿಗಳ ರಿಸರ್ವ್ ಎಷ್ಟು ಎಂದು ಕೇಳಿದ್ದಾಗ ಕರ್ನಾಟ ಸರ್ಕಾರದ ಪರವಾಗಿ ವಾದಿಸುತ್ತಿರುವ ಹಿರಿಯ ನ್ಯಾಯವಾದಿಗಳು ಶ್ರೀ ರಾಜು ರಾಮಚಂದ್ರನ್ ಸದರಿ ಕೆಲಸವನ್ನು ಕೇಂದ್ರ ಸರ್ಕಾರದ ತಾಂತ್ರಿಕ ಸಂಸ್ಥೆಯಾದ ಎಂಇಸಿಎಲ್ ಗೆ ವಹಿಸಲಾಗಿದೆ ಎಂದು ತಿಳಿಸಿ ಅವುಗಳಲ್ಲಿ 6 ಗಣಿಗಳ ಅದಿರಿನ ಅಂದಾಜು ಲಭ್ಯವಿರುವುದಾಗಿ ಮತ್ತು ಉಳಿದ 9 ಗಣಿಗಳ ಪೈಕಿ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಿನಲ್ಲಿ ತಲಾ 3 ಗಣಿಗಳ ಅಂದಾಜು ಬರಲಿದೆ ಎಂದು ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ. ನ್ಯಾಯಾಲಯವು 10ನೇ ಏಪ್ರಿಲ್‌ನೊಳಗೆ ಈ 9 ಗಣಿಗಳ ಅಂದಾಜನ್ನು ಅಫಿಡವಿಟ್ ಮೂಲಕ ಸರ್ಕಾರವು ಸಲ್ಲಿಸಬೇಕೆಂದು ಆದೇಶ ನೀಡಿರುತ್ತದೆ ಹಾಗೂ ಸದರಿ ವಿಚಾರಣೆಯಲ್ಲಿ ಬೇರೆ ಬೇರೆ ಪಕ್ಷಗಳ ಸುಮಾರು 44 ಮಧ್ಯಂತರ ಅರ್ಜಿಗಳನ್ನು ಬಾಕಿ ಇರುವುದರಿಂದ ಅವುಗಳನ್ನು ಆಲಿಸಿ ಯೋಜನೆಗಳನ್ನು ಅನುಮೋದನೆ ಮಾಡಬೇಕಾಗಿರುವುದರಿಂದ ಪ್ರಕರಣವು 21ನೇ ಏಪ್ರಿಲ್ 2015 ಮುಂದೂಡಲಾಗಿದೆ.

(2) ರಾಜ್ಯ ಸರ್ಕಾರವು 'ಸಿ' ವರ್ಗದ ಗಣಿಗುತ್ತಿಗೆಗಳನ್ನು ಹರಾಜು ಮೂಲಕ ವಿಲೇ ಮಾಡಲು ಯೋಜನೆಯೊಂದನ್ನು ಸಿದ್ದಪಡಿಸಿ ನವೆಂಬರ್ 2014ರಲ್ಲಿ ಪ್ರಮಾಣ ಪತ್ರದ ಮುಖಾಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅನುಮೋದನೆಗೆ ಸಲ್ಲಿಸಲಾಗಿರುತ್ತದೆ. ಕೇಂದ್ರ ಅಧಿಕಾರಸ್ಥ ಸಮಿತಿ (ಸಿಇಸಿ) ರವರು 18.11.2014 ರಂದು ರಾಜ್ಯ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಿ ಜನವರಿ 2015ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಕೆಲವು ಮಾರ್ಪಾಡುಗಳೊಂದಿಗೆ ವರದಿಯನ್ನು ಸಲ್ಲಿಸಿರುತ್ತಾರೆ.

(3) ರಾಜ್ಯ ಸರ್ಕಾರವು 6 ಗಣಿಗುತ್ತಿಗೆಗಳನ್ನು ಹರಾಜು ಮಾಡಲು ಡಿಸೆಂಬರ್ ತಿಂಗಳಿಂದ ಸಜ್ಜಾಗಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು 'ಸಿ' ಗಣಿಗುತ್ತಿಗೆ ಹರಾಜಿನ ಯೋಜನೆಯನ್ನು ಅನುಮೋದಿಸಿದಲ್ಲಿ ಅವುಗಳನ್ನು ತಕ್ಷಣ ಹರಾಜು ಮಾಡಲು ಕ್ರಮ ಕೈಗೊಳ್ಳುವುದು. ಉಳಿದು 9 ಗಣಿಗುತ್ತಿಗೆಗಳ ಹರಾಜಿಗಾಗಿ ಅಲ್ಲಿ ಇರುವ ಅದಿರಿನ ಪ್ರಮಾಣ ಹಾಗೂ ಗುಣವನ್ನು ಅಂದಾಜಿಸಲು ಎಂಇಸಿಎಲ್ ಗೆ ಕೆಲಸ ವಹಿಸಲಾಗಿದೆ. ಅವರು ಕೇಂದ್ರ ಸರ್ಕಾರದ ಅನುಮೋದಿತ ಒಂದೇ ಒಂದು ತಾಂತ್ರಿಕ ಸಂಸ್ಥೆಯಾಗಿರುವುದರಿಂದ, ಅವರಲ್ಲಿ ಇರುವ ಸಂಪನ್ಮೂಲಗಳಿಂದ ಈ ಕೆಲಸವನ್ನು ಜೂನ್ 2015ರೊಳಗೆ ಮುಗಿಸಲಿದ್ದಾರೆ. ಇದಕ್ಕಾಗಿ ಈಗಾಗಲೇ ಸುಮಾರು 60.00 ಕೋಟಿ ರೂಪಾಯಿಗಳ ಕಾರ್ಯಾದೇಶವನ್ನು ನೀಡಲಾಗಿದೆ.

(4) ಹಿಂದೆ ಗಣಿಗುತ್ತಿದಾರರು ಸರಾಸರಿ ಅದಿರಿನ ಅಂದಾಜಿನ ಮೇಲೆ ಐಬಿಎಂ ಯಿಂದ ಅನುಮೋದನೆ ಪಡೆಯುತ್ತಿದ್ದರು. ಈ 9 ಗಣಿಗಳ ವಿವರ ಹಳೆಯದು ಇರುವುದರಿಂದ ಅದನ್ನು ಆಧಾರದಲ್ಲಿ ಇಟ್ಟುಕೊಂಡು ಹರಾಜು ಮಾಡಲು ಬರುವುದಿಲ್ಲ. 2009ನೇ ಇಸವಿಯಿಂದ UNFC ಮಾರ್ಗಸೂಚಿ ಪ್ರಕಾರವೇ ಅದಿರು ಅಂದಾಜನ್ನು ಮಾಡಿ ಐಬಿಎಂ ನಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ. ಆದ್ದರಿಂದ ಪ್ರಸ್ತುತ ಹರಾಜಿಗೆ ಒಳಪಟ್ಟಿರುವ ಎಲ್ಲಾ ಗಣಿಗಳ ಅದಿರು ಅಂದಾಜನ್ನು UNFC ಮಾರ್ಗಸೂಚಿ ಪ್ರಕಾರವೇ ಮಾಡಬೇಕಾಗಿರುತ್ತದೆ. ಈ ಕೆಲಸವನ್ನು ಐಬಿಎಂ ರೊಂದಿಗೆ ಸಮಾಲೋಚಿಸಿ ಎಂಇಸಿಎಲ್ ರವರಿಗೆ ನೀಡಲಾಗಿರುತ್ತದೆ. ಕೇಂದ್ರ ಸರ್ಕಾರದ ಹೊಸ ಆಧ್ಯಾದೇಶದಲ್ಲಿಯೂ ಕೂಡ ಹರಾಜು ಮಾಡುವುದಕ್ಕಿಂತ ಮುಂಚೆ ಅದಿರಿನ ಪ್ರಮಾಣವನ್ನು ಅವರು ನಿರ್ದರಿಸಿರುವ ಗುಣಮಟ್ಟಕ್ಕೆ ಮಾಡಬೇಕೆಂದು ನಮೂದಾಗಿರುತ್ತದೆ. ಕರಡು ನಿಯಮಗಳಲ್ಲಿ ಕೇಂದ್ರ ಸರ್ಕಾರವು ಕರ್ನಾಟಕ ಸರ್ಕಾರ ಮಾಡುತ್ತಿರುವ ಅದಿರಿನ

ಪ್ರಮಾಣ ಅಂದಾಜಿಗೆ ನಿಗಧಿಪಡಿಸಿರುವ ಗುಣಮಟ್ಟವನ್ನೇ ಒತ್ತಿ ಹೇಳುತ್ತಿರುವುದರಿಂದ, ಕರ್ನಾಟಕ ಸರ್ಕಾರ ಮಾಡುತ್ತಿರುವ ಈ ಕ್ರಮಕ್ಕೆ ಬಲ ಸಿಕ್ಕಂತಾಗಿದೆ.

(5) ಯಾವುದೇ ತರಹ ವಿಳಂಬ ಮಾಡದೆ ರಾಜ್ಯ ಸರ್ಕಾರವು ಎಲ್ಲಾ ಕೆಲಸವನ್ನು ತೀವ್ರ ಗತಿಯಿಂದ ಮಾಡುತ್ತಿರುವುದರಿಂದ ಈ ವಿಷಯವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಗಮನಕ್ಕೆ ಸವಿಸ್ತಾರವಾಗಿ ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಲಾಗುವುದು."

ಈಗ ಜನವರಿಯಲ್ಲಿ ಒಂದು ತಿದ್ದುಪಡಿಯನ್ನು ಮಾಡಿದ್ದಾರೆ.

**ಸಭಾಪತಿಯವರು:–** ಸಂಸತ್ತಿನಲ್ಲಿ ಆ ಆಧ್ಯಾದೇಶ ಅನುಮೋದನೆಗೊಂಡಿದೆ.

**ಶ್ರೀ ಸಿದ್ದರಾಮಯ್ಯ:–** ಜನವರಿಯಲ್ಲಿ ಅನುಮೋದನೆಗೊಂಡ ಆಧ್ಯಾದೇಶ (Ordinance) ಈಗ ಕಾಯ್ದೆಯಾಗಿದೆ. ಅಲ್ಲಿಯೂ ಸಹ ಇದನ್ನು ಹೇಳಿದ್ದಾರೆ. ಜನವರಿಯಲ್ಲಿ ಆರ್ಡಿನೆನ್ಸ್ ಮಾಡಿದ್ದರು, ಈಗ ಆದು ಆ್ಯಕ್ಟ್ ಆಗಿದೆ. ಅಲ್ಲೂ ಕೂಡ ಇದನ್ನು ಹೇಳಿದ್ದಾರೆ. "ಕೇಂದ್ರ ಸರ್ಕಾರವು ಹೊಸ ಅಧ್ಯಾದೇಶದಲ್ಲೂ ಕೂಡ ಹರಾಜು ಮಾಡುವುದಕ್ಕೆ ಮುಂಚೆ ಅದಿರಿನ ಪ್ರಮಾಣವನ್ನು ನಿರ್ಧರಿಸಿರುವ ಗುಣಮಟ್ಟಕ್ಕೆ ಮಾಡಬೇಕೆಂದು ನಮೂದಾಗಿರುತ್ತದೆ. ಕರಡು ನಿಯಮಗಳಲ್ಲಿ ಕೇಂದ್ರ ಸರ್ಕಾರವು ಕರ್ನಾಟಕ ಸರ್ಕಾರ ಮಾಡುತ್ತಿರುವ ಅದಿರಿನ ಪ್ರಮಾಣ ಅಂದಾಜಿಗೆ ನಿಗದಿಪಡಿಸಿರುವ ಗುಣಮಟ್ಟವನ್ನೇ ಒತ್ತಿ ಹೇಳಿರುವುದರಿಂದ ಕರ್ನಾಟಕ ಸರ್ಕಾರ ಮಾಡುತ್ತಿರುವ ಈ ಕ್ರಮಕ್ಕೆ ಬಲ ಸಿಕ್ಕಂತೆ ಆಗಿದೆ. ಯಾವುದೇ ತರಹದ ವಿಳಂಬ ಮಾಡದೇ ರಾಜ್ಯ ಸರ್ಕಾರ ಎಲ್ಲಾ ಕೆಲಸಗಳನ್ನು ತೀವ್ರಗತಿಯಲ್ಲಿ ಮಾಡುತ್ತಿರುವುದರಿಂದ ಈ ವಿಷಯವನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಗಮನಕ್ಕೆ ಸವಿಸ್ತಾರವಾಗಿ ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಲಾಗಿದೆ".

ಮಾನ್ಯ ಸಭಾಪತಿಗಳೆ, ಇದು ಪತ್ರಿಕೆಯಲ್ಲಿ ಬಂದಾದ ಮೇಲೆ ನಾವು ನಮ್ಮ ಅಡ್ವೋಕೇಟ್ ಜೊತೆ ಮಾತನಾಡಿ ಒಂದು ಟಿಪ್ಪಣಿ ಕೂಡ ಪಡೆದುಕೊಂಡೆವು. ಪತ್ರಿಕೆಯಲ್ಲಿ, 'ಸುಪ್ರೀಂ ಕೋರ್ಟ್ ಛೀಮಾರಿ ಹಾಕಿತ್ತು' ಎಂದು ಬಂದಿತ್ತು, ಆ ರೀತಿ ಏನೂ ಆಗಿಲ್ಲ. ನಿಮ್ಮ ಹತ್ತಿರ ರಿಸರ್ವ್ ಎಷ್ಟಿದೆ, ಗುಣಮಟ್ಟ ಎಷ್ಟಿದೆ ಎನ್ನುವುದನ್ನು ಹೇಳಬೇಕು ಎಂದು ಕೇಳಿದ್ದಾರೆ. ನಾವು, ಈ ರೀತಿ **MECL** *(***Mineral Exploration Corporation Limited** *)* ಗೆ ಕೊಟ್ಟಿದ್ದೇವೆ, 6ಕ್ಕೆ ಬಂದಿದ್ದೆ 9ಕ್ಕೆ ಸಂಬಂಧಪಟ್ಟಂತೆ ಮಾರ್ಚ್, ಏಪ್ರಿಲ್ ಮತ್ತು ಜೂನ್‌ನಲ್ಲಿ ಮಾಡಿಕೊಡುತ್ತೇವೆ ಎಂದು ಹೇಳಿದ್ದೇವೆ. ರಿಸರ್ವ್ ಪತ್ತೆ ಹಚ್ಚುವುದಕ್ಕೆ, ಗುಣಮಟ್ಟ ಪತ್ತೆ

ಹಚ್ಚುವುದಕ್ಕೆ this is the only Company and this is a Government of India undertaking. ಇದನ್ನು ಮಾಡುವುದಕ್ಕೆ ಅವರಿಗೆ 60 ಕೋಟಿ ಕೊಟ್ಟಿದ್ದೇವೆ. ಏಕೆಂದರೆ, ಹರಾಜು ಹಾಕುವುದಕ್ಕೆ ಮುಂಚಿತವಾಗಿ ಎಲ್ಲಾ ಸರಿಯಾದ ರೀತಿಯಲ್ಲಿ ಇರಬೇಕು, ಸಂಪೂರ್ಣ ಮಾಹಿತಿ ಇರಬೇಕು ಎನ್ನುವ ಕಾರಣಕ್ಕೋಸ್ಕರವಾಗಿ ಇದನ್ನು ಮಾಡಿದ್ದೇವೆ. ಇದುಬಿಟ್ಟು, ಈ ಸರ್ಕಾರಕ್ಕೆ ಮರ್ಯಾದೆ ಇಲ್ಲ; ಈ ಸರ್ಕಾರಕ್ಕೆ ಅದಿಲ್ಲ, ಇದಿಲ್ಲ ಎಂದು ಹೇಳುವುದು ಸರಿಯಿಲ್ಲ. ಯಾವ ಸರ್ಕಾರಕ್ಕೆ ಮರ್ಯಾದೆ ಇರಲಿಲ್ಲ ಎನ್ನುವುದು ಜಗಜ್ಜಾಹಿರಾಗಿದೆ. ಅಕ್ರಮ ಗಣಿಗಾರಿಕೆಯಲ್ಲಿ ಯಾರಿಗೆ ಮರ್ಯಾದೆ ಹೋಯಿತು ಎನ್ನುವುದು ಗೊತ್ತಿಲ್ಲವೇ; ಯಾರು ಜೈಲಿಗೆ ಹೋದರು ಎನ್ನುವುದು ಗೊತ್ತಿಲ್ಲವೇ? ನಮ್ಮ ಸರ್ಕಾರದ ಮೇಲೆ ಏಕೆ ಸುಮ್ಮನೆ ಟೀಕೆ ಮಾಡುತ್ತೀರಿ? ಮಾನ-ಮರ್ಯಾದೆಯನ್ನು ಕಳೆದುಕೊಂಡರೂ, ಜೈಲಿಗೆ ಹೋದರೂ ಇನ್ನೂ ನಿಮಗೆ ಬುದ್ಧಿ ಬಂದಿಲ್ಲ ಎನ್ನುವುದು ನೋವಿನ ಸಂಗತಿಯಾಗಿದೆ. ಸುಮ್ಮನೆ ಪತ್ರಿಕೆಯಲ್ಲಿ ಬಂದಿದ್ದನ್ನೇ ದೊಡ್ಡದಾಗಿ ಮಾಡಿದ್ದಾರೆ. ಗೊತ್ತಿಲ್ಲ ಎಂದರೆ ಪೂರ್ತಿ ವಿಷಯವನ್ನು ತಿಳಿದುಕೊಳ್ಳಬೇಕು, ಅಡ್ವೋಕೇಟ್ ಅವರನ್ನು ಕೇಳಿಯಾದರೂ ತಿಳಿದುಕೊಳ್ಳಬೇಕು. ಸರಿಯಾದ ಮಾಹಿತಿ ಪಡೆದುಕೊಳ್ಳದೇ ಪತ್ರಿಕೆಯಲ್ಲಿ ಬಂದಿರುವುದೇ ಸತ್ಯ ಎಂದು ತಿಳಿಯುವುದು ಸರಿಯಲ್ಲ. ಇವರು(ವಿರೋಧ ಪಕ್ಷ) ಮರ್ಯಾದೆ ಕಳೆದುಕೊಂಡಿದ್ದಾರೆ. ನಾವು ಮರ್ಯಾದಸ್ಥರು . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಪ್ರಜಾಪ್ರಭುತ್ವದಲ್ಲಿ . . . .(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನೀವು ಮಾತನಾಡಬೇಡಿ, ಕುಳಿತುಕೊಳ್ಳಿ. ಅಕ್ರಮ ಗಣಿಗಾರಿಕೆಯಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗಳ ಲೂಟಿಯಾಯಿತು. ಏನು ಬೇಕಾದರೂ ಮಾತನಾಡುವುದು ಸರಿಯಲ್ಲ. ಇದು ನಿಲುವಳಿ ಸೂಚನೆ ಅಡಿಯಲ್ಲೂ ಬರುವುದಿಲ್ಲ, ಬಾಯಿಗೆ ಬಂದ ಹಾಗೆ ಮಾತನಾಡುವುದು, ಏನಿದು? ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣವನ್ನು 21ನೇ ತಾರೀಖಿಗೆ ಮುಂದೂಡಿದ್ದಾರೆ. ಅಫಿಡವಿಟ್ ಹಾಕುವುದಕ್ಕೆ ಹೇಳಿದ್ದಾರೆ, ನಾವು ಅಫಿಡವಿಟ್ ಹಾಕುತ್ತಿದ್ದೇವೆ (ಗೊಂದಲ) ಕೋರ್ಟ್‌ನಲ್ಲಿ ಏನು ನಡೆಯಿತು ಎನ್ನುವುದನ್ನು ತಿಳಿದುಕೊಳ್ಳದೇ ಮಾತನಾಡುವುದು ಸರಿಯಲ್ಲ. ಒಂದು ಜವಾಬ್ದಾರಿ ಸ್ಥಾನದಲ್ಲಿರುವವರು, ಅಧಿಕೃತ ವಿರೋಧ ಪಕ್ಷದ ನಾಯಕರಾಗಿದ್ದಂಥವರು ಸರ್ಕಾರದ ವಿರುದ್ಧ ಏನು ಬೇಕಾದರೂ ಮಾತನಾಡಬಹುದು, ಯಾವ ತರಹ ಬೇಕಾದರೂ ಮಾತನಾಡಬಹುದು ಎನ್ನುವ ಮನೋಭಾವ ಸರಿಯಾದುದಲ್ಲ. . . .

**ಶ್ರೀ ರಾಮಚಂದ್ರಗೌಡ:-** ಈ ಕುರಿತು ಮಾತನಾಡಲು ವಿರೋಧ ಪಕ್ಷದ ನಾಯಕರಿಗೆ ಅವಕಾಶ ಸಿಗಲಿಲ್ಲ, ಅಪರಾಧದ ಬಗ್ಗೆ ಅವರು ಏನನ್ನೂ ಹೇಳಲಿಲ್ಲ, . . (ಗೊಂದಲ)

**ಶ್ರೀ ಸಿದ್ದರಾಮಯ್ಯ:–** ನಿಮಗೆ ಮಾನ–ಮರ್ಯಾದೆ, ನಾಚಿಕೆ ಇಲ್ಲ . . .(ಗೊಂದಲ) 'ಮೂರೂ ಬಿಟ್ಟವರು ಊರಿಗೆ ದೊಡ್ಡವರು' ಎಂದು ಹೇಳುತ್ತಾರೆ . . .(ಗೊಂದಲ)

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಗಳೆ, ಪ್ರಜಾಪ್ರಭುತ್ವದಲ್ಲಿ ಪ್ರತಿಪಕ್ಷದವರು ಮಾತನ್ನೂ ಆಡಬಾರದೇ? ಅವರು ನಿಲುವಳಿ ಸೂಚನೆ ತಂದ್ದಿದ್ದು ನಿಜ. ಅದರ ಅದರ ಮೇಲೆ ಅವರು ಏನೂ ಮಾತನಾಡಲಿಲ್ಲವಲ್ಲ? ಪತ್ರಿಕೆಗಳವರು ಹೇಳಿದ್ದಾರೆ, ನಾವೇನನ್ನೂ ಹೇಳಿಲ್ಲ. . . (ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಗಳೆ, ಈ ವಿಚಾರವಾಗಿ ನಾನು ಸ್ಟೇಟ್‌ಮೆಂಟ್ ಮಾಡಿದ್ದೇನೆ. . .(ಗೊಂದಲ) ನೀವು ಪತ್ರಿಕೆಯಲ್ಲಿ ಬಂದಿರುವುದರ ಬಗ್ಗೆ ಹೇಳುತ್ತಿದ್ದೀರಿ. ನನ್ನ ಹತ್ತಿರ ಕೋರ್ಟ್ ಆರ್ಡರ್ ಇದೆ ಅದನ್ನು ನೋಡಿ. (ಗೊಂದಲ) ಕೋರ್ಟ್ ಆದೇಶವನ್ನು ನಾನು ಓದಲೇ? (ಗೊಂದಲ)

**ಸಭಾಪತಿಗಳು:–** ದಯವಾಡಿ ಎಲ್ಲರೂ ಕುಳಿತುಕೊಳ್ಳಿ. ಸಿಎಂ ಮಾತನಾಡುತ್ತಿದ್ದಾರೆ . . .

**ಶ್ರೀ ಸಿದ್ದರಾಮಯ್ಯ:–** ಕೋರ್ಟಿನ ಆದೇಶವನ್ನು ಓದಲೇ? Then what is your objection?

**ಶ್ರೀ ರಾಮಚಂದ್ರಗೌಡ:–** ನಾವು ನಿಮ್ಮ ಮೇಲೆ ಆರೋಪ ಮಾಡಿಲ್ಲ. ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳಿದ್ದೇವೆ . . .

**ಶ್ರೀ ಸಿದ್ದರಾಮಯ್ಯ:–** ಅದು ನಿಲುವಳಿ ಸೂಚನೆ ಅಡಿಯಲ್ಲಿ ತರುವಂತಹ ವಿಚಾರವೇ? ನಾಚಿಕೆಗೆಟ್ಟವರು . . .

**(ಗೊಂದಲ)**

**ಶ್ರೀ ನಜೀರ್ ಅಹಮದ್:–** ಪತ್ರಿಕೆಯಲ್ಲಿ ನೀವೇ ತಾನೇ ಬರೆಸಿದವರು? . . .(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಈ ಸದನದಲ್ಲಿ ವಾಕ್‌ಸ್ವಾತಂತ್ರ್ಯ ಇಲ್ಲವೇ?. . .(ಗೊಂದಲ)

**ಶ್ರೀ ಗೋ. ಮಧುಸೂದನ್:–** ಈ ಪತ್ರಿಕೆಯ ಮೇಲೆ ಮಾನನಷ್ಟ ಮೊಕದ್ದಮೆ ಹಾಕುತ್ತೀರಾ, ಈ ಪತ್ರಿಕೆಯ ವಿರುದ್ಧ ಕ್ರಮ ಕೈಗೊಳ್ಳುತ್ತೀರಾ?

**ಶ್ರೀ ಸಿದ್ದರಾಮಯ್ಯ:–** ಪತ್ರಿಕೆಯವರು ನಿಮ್ಮ ಮೇಲೆ ಬರೆದಿದ್ದಾರೆ. ನೀವು ಮಾಡಿದಂಥದ್ದನ್ನು ಬರೆದಿದ್ದಾರೆ . . .

**ಶ್ರೀ ಗೋ. ಮಧುಸೂದನ್:–** ಹಾಗಾದರೆ ಈ ಪತ್ರಿಕೆಯವರು ತಪ್ಪು ವರದಿ ಮಾಡಿದ್ದಾರೆ ಎಂದು ಕ್ರಮ ಕೈಗೊಳ್ಳುತ್ತೀರಾ?

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಯಾರ ಕಾಲದಲ್ಲಿ ಮಾನ–ಮರ್ಯಾದೆ ಹೋಯಿತು, ಅಕ್ರಮ ಗಣಿಗಾರಿಕೆ ನಡೆಯಿತು, ಜೈಲಿಗೆ ಯಾರು ಹೋದರು, ಜೈಲಿನಲ್ಲಿ ಯಾರ್ಯಾರಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ.

**ಶ್ರೀ ಎಸ್.ಆರ್. ಪಾಟೀಲ್:–** ನಿಮ್ಮ ಮಾನ ಹೋದರೂ ಪರವಾಗಿಲ್ಲ, ಆದರೆ ನೀವು (ವಿರೋಧ ಪಕ್ಷ) ರಾಜ್ಯದ ಮರ್ಯಾದೆಯನ್ನು ತೆಗೆದಿರಿ. . . .(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಕೇಶವ ಕೃಪಾಗೆ ತಲೆತಗ್ಗಿಸುವ ಹಾಗೆ ಮಾಡಿದಿರಿ . . .(ಗೊಂದಲ)

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಮುಖ್ಯ ನ್ಯಾಯಾಧೀಶರಾದಂತಹ ದತ್ತುರವರು ಮಾಡಿರುವ ಕಾಮೆಂಟ್ ನಿಮಗೆ ಗೊತ್ತಿಲ್ಲವೇ? ಅವರು ಸರ್ಕಾರದ ಮೇಲೆ ಏನೂ ಕಾಮೆಂಟ್ ಮಾಡಿಲ್ಲವೇ?

**ಶ್ರೀ ಎಸ್.ಆರ್. ಪಾಟೀಲ್:–** ನಾವು ಕನ್ನಡಿಗರು ಎಂದು ಹೇಳದೇ ಇರುವ ಹಾಗೆ ನಡೆದುಕೊಂಡು ರಾಜ್ಯದ ಮರ್ಯಾದೆಯನ್ನು ನೀವು ಹರಾಜು ಹಾಕಿದಿರಿ . . (ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅಂದರೆ ನೀವೊಬ್ಬರೆ ಪ್ರಮಾಣಿಕರೆನ್ನುತ್ತಿರಾ?

**ಸಭಾಪತಿಗಳು:–** ಮಂತ್ರಿಗಳ ಮತ್ತು ಮುಖ್ಯಮಂತ್ರಿಗಳ ಹೇಳಿಕೆ ಮೇಲೆ ಚರ್ಚೆ ಮಾಡುವುದಕ್ಕೆ ನಮ್ಮ ನಿಯಮಾವಳಲ್ಲಿ ಅವಕಾಶ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ರೆಕಾರ್ಡ್ ಆಗಿದೆ.

**ಶ್ರೀ ಹೆಚ್.ಕೆ. ಪಾಟೀಲ್:–** ನೀವು (ವಿರೋಧ ಪಕ್ಷದವರು) ಹೇಳಿದ ಹಾಗೆ, ಮಾನ್ಯ ಸಭಾಪತಿಗಳು ಈ ಕುರಿತು ಚರ್ಚೆಗೆ ಅವಕಾಶ ಕೊಡಲಿಲ್ಲ. ಇದು ನಮಗೂ ಸ್ಪಷ್ಟವಾಗಿ ಗೊತ್ತಿದೆ, ನಿಮಗೂ ಗೊತ್ತಿದೆ. ಆದರೆ ಮಾತಿನ ಚಕಮಕಿ ಅಥವಾ ಮಾತುಕತೆಯಲ್ಲಿ ವಿರೋಧ ಪಕ್ಷದ ನಾಯಕರು ತೂಕ ತಪ್ಪಿ ಹಲವಾರು ಶಬ್ದಗಳನ್ನು ತಪ್ಪು ಬಳಕೆ ಮಾಡಿದರು. ಆ ಪದಗಳನ್ನೇನು ಬಳಸಿದರೋ ಅವೆಲ್ಲವನ್ನೂ ತೆಗೆಸಿ ಹಾಕಬೇಕೆಂದು ಮಾನ್ಯ ಸಭಾಪತಿಯವರಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಗಳು:–** ನಾನು ನೋಡುತ್ತೇನೆ. ಈಗ ವಿಧೇಯಕದ ಮೇಲೆ ಚರ್ಚೆ ಮುಂದುವರೆಸೋಣ. ಮಾನ್ಯ ಸಂಕನೂರುರವರು ಮಾತನಾಡುತ್ತಾರೆ . . .

**ಶ್ರೀ ರಾಮಚಂದ್ರಗೌಡ:–** ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ . . .(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ವಿರೋಧ ಪಕ್ಷದ ನಾಯಕರು ವಾಕ್‌ಔಟ್ ಮಾಡಿದ್ದು ನಾಳೆ ಪತ್ರಿಕೆಯಲ್ಲಿ ಬರುತ್ತದೆ . . .

**ಶ್ರೀ ಎಸ್.ಆರ್. ಪಾಟೀಲ್:–** ನೀವು ಹೇಗೆ ಬೇಕಾದರೂ ಲಾಗ ಹೊಡೆಯಿರಿ, ನೀವು ಆ ಕಡೆಯೇ ಶಾಶ್ವತವಾಗಿ ಕುಳಿತಿರುತ್ತೀರಿ. ಫೆವಿಕಾಲ್ ಹಾಕಿ ಆ ಕಡೆಯೇ ಫಿಕ್ಸ್ ಮಾಡಿ ಕೂಡಿಸಿಬಿಟ್ಟಿದ್ದೇವೆ. ಈ ಕಡೆಯಂತೂ ಕನಸು–ಮನಸ್ಸಿನಲ್ಲೂ ಬರುವ ಹಾಗಿಲ್ಲ . . . (ಗೊಂದಲ) ಖಾಯಂ ಆಗಿ ನೀವು ಅಲ್ಲೇ ಇರಬೇಕು . . .

**ಸಭಾಪತಿಗಳು:–** ಮುಖ್ಯಮಂತ್ರಿಗಳ ಹೇಳಿಕೆ ಮೇಲೆ ಚರ್ಚೆಗೆ ಅವಕಾಶ ಇಲ್ಲ. ಕ್ಲ್ಯಾರಿಫಿಕೇಷನ್‌ಗೂ ಅವಕಾಶ ಇಲ್ಲ. ಯಾವುದೇ ಕ್ಲಾರಿಫಿಕೇಷನ್ ಅಥವಾ ಚರ್ಚೆಗೆ ನಾನು ಅನುಮತಿ ಕೊಡುವುದಿಲ್ಲ. ಮಾನ್ಯ ಸಂಕನೂರರವರು ವಿಧೇಯಕದ ಬಗ್ಗೆ ಮಾತನಾಡುತ್ತಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. No more discussion on that. He (Chief Minister) has made a statement. That is the end of it.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಗಳೆ, ನಾನು ಬೇರೆ ವಿಚಾರದ ಬಗ್ಗೆ ಕೆಲವು ವಿಷಯ ಹೇಳಬಯಸುತ್ತೇನೆ. . .

**ಸಭಾಪತಿಗಳು:–** ಅದು close ಆಗಿದೆ. ನಾವು ವಿಧೇಯಕದ ಬಗ್ಗೆ ಮಾತನಾಡುತ್ತಿದ್ದೆವು. ಅದನ್ನು ಮುಂದುವರೆಸಬೇಕಿದೆ.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಗಳೆ, ಸದನದಿಂದ ತಪ್ಪು ಸಂದೇಶ ಹೋಗಬಾರದು. ನಿಲುವಳಿ ಸೂಚನೆಯನ್ನು. . .(ಗೊಂದಲ)

**ಸಭಾಪತಿಗಳು:–** ಅದರ ವಿಚಾರ ಬೆಳಿಗ್ಗೆ ಆಗಿಹೋಗಿದೆ. ಅದರ ಬಗ್ಗೆ ಸಭಾನಾಯಕರು ಮಾತನಾಡಿದ್ದಾರೆ. . . .

**ಶ್ರೀ ಟಿ.ಬಿ. ಜಯಚಂದ್ರ:–** ಒಂದೇ ಒಂದು ಕ್ಲಾರಿಫಿಕೇಷನ್ ಏನೆಂದರೆ . . .

**ಸಭಾಪತಿಗಳು:–** ಇಲ್ಲ, ಅದರ ಬಗ್ಗೆ ಚರ್ಚೆ ಬೇಡ. I have already given my ruling on the Adjournment Motion. ಅದು infructuous ಎಂದು ಹೇಳಿಬಿಟ್ಟಿದ್ದೇನೆ. ಆ ವಿಷಯ ಮುಗಿದಿದೆ. ಮತ್ತೆ ಆ ವಿಚಾರದ ಬಗ್ಗೆ ಚರ್ಚೆ ಮಾಡುವುದು ಬೇಡ.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಗಳೆ, ನಾನು ಆ ವಿಚಾರವಾಗಿ ಮಾತನಾಡುತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ಮೂವ್ ಮಾಡಿದ ಮೇಲೆ ಸರ್ಕಾರದ ಕಡೆಯಿಂದ ಒಂದು ಹೇಳಿಕೆ ಬಂದರೆ, ಅದನ್ನು ವಿರೋಧಿಸಿ ಸಭಾತ್ಯಾಗ ಮಾಡಬಹುದಾಗಿದೆ.

**(ಗಂಟೆ 2:30)**

ಅಥವಾ ಸಭಾಪತಿಯವರು ಕೊಟ್ಟಿರುವಂತಹ ರೂಲಿಂಗ್ ವಿರುದ್ಧವಾಗಿ ಸಭಾತ್ಯಾಗ ಮಾಡಬಹುದಾಗಿತ್ತು. ಆ ಎರಡು ಇಲ್ಲದೆ ಮೂವ್ ಮಾಡಿ ವಾಪಸ್ ಹೋದರಲ್ಲಾ ಅದು ಏನು? Is it back out?

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:–** ಇದು back out ಆಗುತ್ತದೆ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಯವರೇ, ಯಾರ ಹೇಳಿಕೆಯ ವಿರುದ್ಧವಾಗಿ ಹೋದರು? ಈಗ ಸಭಾತ್ಯಾಗ ಮಾಡಿದರು ಎಂದು ಪತ್ರಿಕೆಯಲ್ಲಿ ಬರುತ್ತದೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಇವರು ಯಾವ ನಿಯಮದಡಿಯಲ್ಲಿ ಏನು ಚರ್ಚೆಯನ್ನು ತೆಗೆದುಕೊಂಡಿದ್ದಾರೆ ಎನ್ನುವುದು ನಮಗೆ ಸ್ಪಷ್ಟನೆ ಬೇಕು.

**ಶ್ರೀ ಆರ್.ವಿ. ವೆಂಕಟೇಶ್:–** ಕೇವಲ ಇವರಿಗೆ ಪ್ರಚಾರ ಗಿಟ್ಟಿಸಿಕೊಂಡರೆ ಸಾಕು. ಕೇವಲ ಪ್ರಚಾರಕ್ಕಾಗಿಯೇ ಮಾಡುವುದು. ವಿರೋಧ ಪಕ್ಷ ಇರುವುದು ಕೇವಲ ಪ್ರಚಾರ ಪಡೆದುಕೊಳ್ಳುವುದಕ್ಕಷ್ಟೇ ಆಗಿಬಿಟ್ಟಿದ್ದಾರೆ.

**ಶ್ರೀ ಅರುಣ ಶಹಾಪುರ:–** ಬೆಳಿಗ್ಗೆ ಇವರಿಗೆ ಮಾಹಿತಿ ಇರಲಿಲ್ಲ. ಈಗ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ನೀವು ಹೊರಗಡೆ ಹೋದರೆ ಜನ ನಿಮಗೆ ಛೀ–ಥೂ ಎಂದು ಉಗುಳುತ್ತಾರೆ.

(ಗೊಂದಲ)

**ಶ್ರೀ ವಿ.ಎಸ್. ಉಗ್ರಪ್ಪ:–** ನಿಮಗೆ ಕೇಳುವಷ್ಟು ತಾಳ್ಮೆಯೇ ಇರಲಿಲ್ಲ. ನಿಮ್ಮ ಅವಧಿಯಲ್ಲಿ ಒಂದು ಲಕ್ಷ ಕೋಟಿ ರೂಪಾಯಿಯಷ್ಟು ಲೂಟಿಯಾಗಿರುವಂಥದ್ದು.

**ಸಭಾಪತಿಯವರು:–** ಎಲ್ಲರು ತಮ್ಮ ಭಾವನೆಯನ್ನು ಹೇಳಿದ್ದೀರಿ, ಕುಳಿತುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್:–** ನಿಮಗೆ 'it is utter failure of opposition' ಎಂದು ಪತ್ರಿಕೆಯಲ್ಲೇ ಬರೆದಿದ್ದಾರೆ. ಪತ್ರಿಕೆಯನ್ನು ಓದಿ. ಗೋ. ಮಧುಸೂದನ್‌ರವರೇ, ನಿಮ್ಮದು **'**failure' ಎಂದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ಚೆನ್ನಾಗಿ ಓದಿ.

**ಸಭಾಪತಿಯವರು:–** ಉಗ್ರಪ್ಪನವರೇ, ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವರು ಏನು ಹೇಳುತ್ತಾರೆಂದರೆ....

**ಸಭಾಪತಿಯವರು:–** ಸಾಕು, ಕುಳಿತುಕೊಳ್ಳಿ. ತಾವು ಹೇಳಬೇಕಾದ್ದನ್ನು ಹೇಳಿದ್ದೀರಿ. ತಮ್ಮ ಮನಸ್ಸಿನಲ್ಲಿ ಏನಿತ್ತೋ ಅದನ್ನು ಹೇಳಿದ್ದೀರಿ.

(ಗೊಂದಲ)

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ. ಸದನ ನಡೆಸುವುದಕ್ಕೆ ಬಿಡಿ. ನಾನು ಬಿಲ್ ಪಾಸ್ ಮಾಡಬೇಕು. Allow me to function.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಬೇಗ ಬಿಲ್ ತೆಗೆದುಕೊಂಡುಬಿಡಿ.

**ಸಭಾಪತಿಯವರು:–** ನೀವು ಮಾತನಾಡುವುದನ್ನು ನಿಲ್ಲಿಸಿದರೆ ನಾನು ಬಿಲ್ ತೆಗೆದುಕೊಳ್ಳಬಹುದು. ಹೊರಟ್ಟಿಯವರೇ, ದಯಮಾಡಿ ಕುಳಿತುಕೊಳ್ಳಿ. ಈಗ ಮಾನ್ಯ ಎಸ್.ವ್ಹಿ. ಸಂಕನೂರರವರು ಬಿಲ್ ಬಗ್ಗೆ ಮಾತನಾಡುತ್ತಾರೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,....

**ಸಭಾಪತಿಯವರು:–** ಆಗುವುದಿಲ್ಲ, ಕುಳಿತುಕೊಳ್ಳಿ. No, no, I will not allow. ಮಾನ್ಯ ಸಂಕನೂರರವರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ನಾರಾಯಣಸ್ವಾಮಿಯವರೇ, ಸಭಾಪತಿಯವರು ಹೇಳಿದರೂ ತಾವು ಕುಳಿತುಕೊಳ್ಳುವುದಿಲ್ಲವಲ್ಲಾ!

**(ಗೊಂದಲ)**

**ಸಭಾಪತಿಯವರು:–** ನಾರಾಯಣಸ್ವಾಮಿಯವರೇ, ಕುಳಿತುಕೊಳ್ಳಿ. ಈಗ ಬಿಲ್ ಬಗ್ಗೆ ಮಾತನಾಡುವುದಿಲ್ಲವೆ? ಹಾಗಾದರೆ ಬಿಲ್ ಬಗ್ಗೆ ಯಾರು ಮಾತನಾಡುವುದಿಲ್ಲವೆಂದರೆ ನಾನು ಮತಕ್ಕೆ ಹಾಕುತ್ತೇನೆ. ಈಗ ಸಂಕನೂರರವರು ಬಿಲ್ ಬಗ್ಗೆ ಮಾತನಾಡುತ್ತಾರೆ.

## 5. ಶಾಸನ ರಚನೆ

## (ಅ) ಕನ್ನಡ ಭಾಷಾ ಕಲಿಕೆ ವಿಧೇಯಕ, 2015 ರ ಬಗ್ಗೆ

## ಮುಂದುವರೆದ ಚರ್ಚೆ

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಕನ್ನಡ ಭಾಷಾ ಮಾಧ್ಯಮ ನೀತಿಯ ಬಗ್ಗೆ ಇತ್ತೀಚೆಗೆ ಸುಪ್ರೀಂ ಕೋರ್ಟ್‌ನ ತೀರ್ಪು ನಮ್ಮ ವಿರುದ್ಧವಾಗಿ ಬಂದಿರುವ ಹಿನ್ನೆಲೆಯಲ್ಲಿ ಅದನ್ನು ಸರಿಪಡಿಸುವುದಕ್ಕೆ ಇವೆರಡು ಮಸೂದೆಗಳನ್ನು ಇಲ್ಲಿ ಮಂಡಿಸಿದ್ದಾರೆ ಎಂದು ನಾನು ಭಾವಿಸುತ್ತಿದ್ದೇನೆ. ಕನ್ನಡ ಭಾಷಾ ಮಾಧ್ಯಮ ನೀತಿ ಕುರಿತು ಸುಪ್ರೀಂ ಕೋರ್ಟ್ ತೀರ್ಪು ನಮ್ಮ ವಿರುದ್ಧ ಬಂದಿರುವುದನ್ನು ನಾವೆಲ್ಲಾ ಪತ್ರಿಕೆಯಲ್ಲಿ ಓದಿದ್ದೇವೆ.

ನಮ್ಮ ಅಡ್ವೋಕೇಟ್ ಜನರಲ್‌ರವರು ಅಲ್ಲಿ ಸರಿಯಾಗಿ ವಾದ ಮಂಡಿಸಲಿಲ್ಲ. ಆ ಕಾರಣಕ್ಕಾಗಿ ಭಾಷಾ ಮಾಧ್ಯಮ ನೀತಿಯ ವಿರುದ್ಧ ತೀರ್ಪು ಬಂದಿದೆ. ಅದಕ್ಕೆ ನಾನು ಬಹಳ ವಿಷಾದವನ್ನು ವ್ಯಕ್ತಪಡಿಸುತ್ತಿದ್ದೇನೆ.

ಮೊದಲನೆ ವಿಧೇಯಕದಲ್ಲಿ 1 ರಿಂದ 5ನೇ ತರಗತಿಯವರೆಗೆ ಮಾತೃ ಭಾಷೆಯಲ್ಲಿಯೇ ಮಗು ಅಧ್ಯಯನ ಮಾಡಬೇಕೆನ್ನುವ ವಿಷಯದ ಬಗ್ಗೆ ಮಂಡನೆ ಮಾಡಿದ್ದಾರೆ. ಇದು ಬಹಳ ಸಂತೋಷವನ್ನು ತಂದಿದೆ. ಏಕೆಂದರೆ, 1 ರಿಂದ 5ನೇ ತರಗತಿಯವರೆಗೆ ಮಗುವಿನ ಮಾತೃ ಭಾಷೆಯಲ್ಲಿ ಅಧ್ಯಯನ ಮಾಡಬೇಕೆಂದು ಸಂವಿಧಾನ ಕೂಡ ಹೇಳುತ್ತದೆ, ಶಿಕ್ಷಣ ತಜ್ಞರು ಹೇಳಿದ್ದಾರೆ. ಇವತ್ತೇನು ಈ ಅಧಿನಿಯಮದ ವಿಧೇಯಕವನ್ನು ಪಾಸ್ ಮಾಡುತ್ತಿದ್ದಾರೆ, ಇದು ಮುಂದೆ ಸಂವಿಧಾನದಲ್ಲೂ ಕೂಡ ತಿದ್ದುಪಡಿ ಆಗಬೇಕು. ಆ ದಿಸೆಯಲ್ಲಿ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಹರಿಸಿ ಸಂವಿಧಾನದಲ್ಲಿ ಯಾವ ರೀತಿ ತಿದ್ದುಪಡಿ ಮಾಡಬೇಕೆಂದು ಆಸಕ್ತಿಯನ್ನು ವಹಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಎರಡನೆಯ ವಿಧೇಯಕ, 1 ರಿಂದ 10ನೇ ತರಗತಿಯವರೆಗೆ ಒಂದು ಕನ್ನಡ ವಿಷಯ ಓದಬೇಕು ಎನ್ನುವುದರ ಬಗ್ಗೆ ಇದೆ. ಒಂದಲ್ಲ, ಪ್ರಥಮ ಅಥವಾ ದ್ವಿತೀಯ ಭಾಷೆ ಕನ್ನಡ ಮಾಧ್ಯಮದಲ್ಲಿ ಓದಬೇಕೆನ್ನುವುದು ಇದ್ದರೆ ಸರಿಯಾಗುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯ. ಒಟ್ಟಾರೆ ಈ ಎರಡು ವಿಧೇಯಕಗಳು ಕನ್ನಡ ಭಾಷೆ ಉಳಿವಿಗಾಗಿ, ಅದರ ಬೆಳವಣಿಗೆಗಾಗಿ ಇರುವುದರಿಂದ ನಾನು ಈ ಎರಡು ವಿಧೇಯಕಗಳನ್ನು ಸ್ವಾಗತಿಸುತ್ತೇನೆ, ಧನ್ಯವಾದಗಳು.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೇ, ಈಗ ಸಮಯ ಮಧ್ಯಾಹ್ನ ಸುಮಾರು ಎರಡು ಮುಕ್ಕಾಲು ಆಗಿದೆ.

**ಸಭಾಪತಿಯವರು:–** ಈ ವಿಧೇಯಕವನ್ನು ಮುಗಿಸಿ ಬಿಡೋಣ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೇ, ತುಂಬಾ ಸಮಯ ಬೇಕಾಗುತ್ತದೆ. ಈ ವಿಚಾರ ಮುಗಿಯುವುದಕ್ಕೆ ಕನಿಷ್ಟ ಎರಡು ಗಂಟೆ ಸಮಯ ಬೇಕಾಗುತ್ತದೆ.

**ಸಭಾಪತಿಯವರು:–** ನೀವು ಪಾಸ್ ಮಾಡಿ ಕೊಡುತ್ತೇನೆಂದರೆ ಈಗಲೇ ಮತಕ್ಕೆ ಹಾಕಿಬಿಡುತ್ತೇನೆ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಮತಕ್ಕೆ ಹಾಕಿ. ಎಲ್ಲರ ಉದ್ದೇಶ ಪಾಸ್ ಆಗಲಿ ಎಂದೇ ಇದೆ. ವಿಧೇಯಕ ಪಾಸ್ ಆಗಲಿ.

**ಸಭಾಪತಿಯವರು:–** ಒಬ್ಬರು ಮಾತನಾಡುತ್ತೇನೆಂದು ಹೇಳುತ್ತಾರೆ, ನೀವು ಮತಕ್ಕೆ ಹಾಕಿ ಎಂದು ಹೇಳುತ್ತೀರಿ, ಇನ್ನು ಮಾತನಾಡುವವರು ಇದ್ದಾರೆ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಎಲ್ಲರ ಪರವಾಗಿದೆ, ಮತಕ್ಕೆ ಹಾಕಿ.

**ಸಭಾಪತಿಯವರು:–** ಒಂದು ನಿಮಿಷ ಕೇಳಿ. 'Mood of the House' ಅನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಎಲ್ಲರಿಗೂ ಸಾಮರ್ಥ್ಯ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. 'Mood of the House' ಏನೆಂದರೆ, ಬೇಗ ಮುಗಿಸಬೇಕು ಎಂದು. ನಮಗೆ ಅವಕಾಶ ಸಿಕ್ಕ ತಕ್ಷಣ 15 ನಿಮಿಷ ಮಾತನಾಡುತ್ತೇನೆ ಎಂದು ಯಾರಾದರೂ ಅಂದುಕೊಂಡರೆ ಕಷ್ಟವಾಗುತ್ತದೆ. ಸಮಾಧಾನವಾಗಿ ಒಂದು ನಿಮಿಷ ಅಥವಾ ಎರಡು ನಿಮಿಷದೊಳಗೆ ನಮ್ಮ ಅಭಿಪ್ರಾಯವನ್ನು ಹೇಳಬೇಕು. ಮರಿತಿಬ್ಬೇಗೌಡರೇ, ನಾನು ನಿಮ್ಮ ಕೈಯನ್ನು ಆಗಲೇ ನೋಡಿದೆ. ತಾವು ಮುಂದುಗಡೆ ಕುಳಿತಿದ್ದೀರಿ. ಹಾಗೆ ಕೈ ಎತ್ತುತ್ತಿದ್ದರೆ ನನಗೆ irritate ಆಗುವುದಿಲ್ಲವೆ? ಸಂದೇಶ್ ನಾಗರಾಜ್‌ರವರೇ, ದಯವಿಟ್ಟು ಕುಳಿತುಕೊಳ್ಳಿ. ಒಂದು ನಿಮಿಷ ಅಥವಾ ಎರಡು ನಿಮಿಷದಲ್ಲಿ ಮಾತನಾಡುವ ಹಾಗಿದ್ದರೆ ಅವಕಾಶ ಕೊಡೋಣ. ಇಲ್ಲದಿದ್ದರೆ ನಾನು ಮತಕ್ಕೆ ಹಾಕುತ್ತೇನೆ ಅಷ್ಟೆ. ಹಿಂದಿನ ಸಾಲಿನವರು ಹತ್ತು ನಿಮಿಷ ಮಾತನಾಡುತ್ತೇನೆಂದು ಹೇಳುತ್ತಿದ್ದಾರೆ. ನೀವು ಮತಕ್ಕೆ ಹಾಕಿ ಎಂದು ಹೇಳುತ್ತಿದ್ದೀರಿ. ನಿಮ್ಮ ಪಕ್ಷದವರಿಗೆ ಹೇಳಿ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರ ಏನು ಕನ್ನಡದ ವಿಷಯದಲ್ಲಿ ಈ ವಿಧೇಯಕವನ್ನು ತರುವಂತಹ ಪ್ರಯತ್ನ ಮಾಡಿದೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಒಂದೇ ಒಂದು ತಾಂತ್ರಿಕ ಸಮಸ್ಯೆಯಾಗಬಹುದು ಎನ್ನುವುದರ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕು. ವಿಧೇಯಕದಲ್ಲಿ **"ಶಾಲೆ"** ಎಂದರೆ, ಎನ್ನುವುದನ್ನು ಸೇರಿಸಿದ್ದಾರೆ. ಅದರಲ್ಲಿ **"**ರಾಜ್ಯ ಸರ್ಕಾರ ಅಥವಾ ಸ್ಥಳೀಯ ನಿಕಾಯಗಳಿಂದ ಸ್ಥಾಪಿತವಾದ ಮತ್ತು ನಿರ್ವಹಿಸಲ್ಪಡುತ್ತಿರುವ ಯಾವುದೇ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ, ಪ್ರೌಢ ಶಾಲೆ ಅಥವಾ ಉನ್ನತ ಪ್ರೌಢ ಶಾಲೆ**"** ಎಂದು ಇದೆ. ಇದರಲ್ಲಿ ಸಿ.ಬಿ.ಎಸ್.ಇ., ಐ.ಸಿ.ಎಸ್.ಇ. ಬರುತ್ತದೆಯೇ ಎನ್ನುವುದು ಒಂದನೇ ಪ್ರಶ್ನೆ. ಬರುವುದಿಲ್ಲವೆಂದರೆ, ಇದರಲ್ಲಿ ಪ್ರಾವಿಜನ್ ಮಾಡಿಕೊಂಡಿಲ್ಲ. ನಾನು ಕೇಳುತ್ತಿರುವುದು **"**ರಾಜ್ಯದಲ್ಲಿನ ಎಲ್ಲಾ ಶಾಲೆಗಳಲ್ಲಿ, ಎಲ್ಲಾ ತರಗತಿಗಳಲ್ಲಿ ಪ್ರಥಮ ಭಾಷೆಯಾಗಿ ಆಗಲೀ ಅಥವಾ ದ್ವಿತೀಯ ಭಾಷೆಯಾಗಿ ಆಗಲೀ ಕನ್ನಡ ಭಾಷೆಯನ್ನು ಕಡ್ಡಾಯ ಭಾಷೆಯನ್ನಾಗಿ ಹಂತಹಂತವಾಗಿ ಕಲಿಸತಕ್ಕದ್ದು**"** ಎಂದು ಹೇಳಿದ್ದಾರೆ. ಡೆಫನೇಷನ್‌ನಲ್ಲಿ ಶಾಲೆ ಎಂದು ಹೇಳುವಾಗ ಇಡೀ ರಾಜ್ಯದ ಎಲ್ಲಾ ಶಾಲೆಗಳು ಸಿ.ಬಿ.ಎಸ್.ಇ., ಐ.ಸಿ.ಎಸ್.ಇ., ಶಾಲೆಗಳು ಬಂತು. ಇದಕ್ಕೆ

ಹೇಗೆ ಅವಕಾಶ ನೀಡಲಾಯಿತು ಎನ್ನುವಂಥದ್ದು ಬೇಕು. ಅದನ್ನು ಹೊರತುಪಡಿಸಿ ಎಂದು ಕಾನೂನು ಮಾಡಿಲ್ಲ, ಅದನ್ನು ಸೇರಿಸಿ ಎಂದು ಹೇಳುವಾಗ ಅದಕ್ಕೆ ಯಾವ ರೀತಿ ಅವಕಾಶ ಕಲ್ಪಿಸುತ್ತೀರಿ? ಏಕೆಂದರೆ, ಕಾನೂನು ಮಾಡಿದ ಮೇಲೆ ಅವುಗಳಿಗೆ ಅನ್ವಯಿಸಬೇಕು; ಕಾನೂನು ಮಾಡಿ ಅವುಗಳಿಗೆ ಅನ್ವಯಿಸದ ಸ್ಥಿತಿ ಆಗಬಾರದು ಎನ್ನುವುದು ನನ್ನ ಅಭಿಪ್ರಾಯ, ಇದು ಒಂದನೆಯದು. ಎರಡನೆಯ ಸಂಗತಿ ಏನೆಂದರೆ, ಇದರ ಪರಿಣಾಮ ಏನಾಗುತ್ತದೆಂದರೆ ಸ್ಟೇಟ್ ಸಿಲಬಸ್‌ನಲ್ಲಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಈಗಾಗಲೇ ಕನ್ನಡ ಭಾಷೆಯನ್ನು ಕಲಿಯುತ್ತಿದ್ದಾರೆ. ಸ್ಟೇಟ್ ಸಿಲಬಸ್ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಮಾತ್ರ ಅನ್ವಯವಾಗುವುದಾದರೆ ಸ್ಟೇಟ್ ಸಿಲಬಸ್‌ನಲ್ಲಿ ಯಾರು ಇಂಗ್ಲಿಷ್ ಮಾಧ್ಯಮದ ಬಗ್ಗೆ ಕ್ರೇಜ್ ಇಟ್ಟುಕೊಂಡಿರುವ ಜನರು ಇದ್ದಾರೆ, ಸ್ಟೇಟ್ ಸಿಲಬಸ್‌ನಿಂದ ಐ.ಸಿ.ಎಸ್.ಇ., ಸಿ.ಬಿ.ಎಸ್.ಇ.,ಗೆ ವಲಸೆ ಹೋಗುವುದಕ್ಕೆ ಇದೊಂದು ಪ್ರಚೋದನೆಯಾಗುತ್ತದೆ. ಅಲ್ಲಿ commercialisation ಹೆಚ್ಚಾಗುತ್ತದೆ. ಐ.ಸಿ.ಎಸ್.ಇ., ಸಿ.ಬಿ.ಎಸ್.ಇ.,ಗೆ ಬೇಡಿಕೆ ಹೆಚ್ಚಾಗುತ್ತದೆ. ಈ ಹಿನ್ನೆಲೆಯಲ್ಲಿ ಸಿ.ಬಿ.ಎಸ್.ಇ., ಐ.ಸಿ.ಎಸ್.ಇ.ಯನ್ನು ಹೊರತುಪಡಿಸಿ ಮಾಡುತ್ತೀರೋ; ಅವರನ್ನು ಸೇರಿಸಿ ಮಾಡುವುದಕ್ಕೆ ಏನು ಮತ್ತು ತಾಂತ್ರಿಕವಾಗಿ ಮಾಡುವುದಕ್ಕೆ ಅವಕಾಶ ಇದೆಯೇ ಎನ್ನುವಂಥದ್ದು, ಇದು ಒಂದನೆಯದು. ಎರಡನೆಯದು, ಈ ರೀತಿ ಸಿ.ಬಿ.ಎಸ್.ಇ., ಐ.ಸಿ.ಎಸ್.ಇ. ಬೇರೆ ಬೇರೆ ಶಾಲೆಗಳು ಅಳವಡಿಸಿಕೊಳ್ಳದೆ ಹೋದರೆ ನಿಮ್ಮ ಸಕ್ಷಮ ಪ್ರಾಧಿಕಾರಕ್ಕೆ ಕೊಟ್ಟಿರುವಂಥ ಅಧಿಕಾರಗಳೇನು? ಯಾರು ಅಳವಡಿಸಿಕೊಳ್ಳುವುದಿಲ್ಲವೋ ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತಾರೆ ಎನ್ನುವುದಕ್ಕೆ ಈ ಆಕ್ಟ್‌ನಲ್ಲಿ ಯಾವುದೇ ಪ್ರಾವಿಷನ್ ಇಲ್ಲ. ಕನ್ನಡ ಭಾಷೆಯನ್ನು ಕಡ್ಡಾಯ ಮಾಡಬೇಕು ಎಂದು ಹೇಳಿದ ಮೇಲೆ, ಮಾಡದೆ ಇರುವವರ ಮೇಲೆ ಏನು ಕ್ರಮ ಕೈಗೊಳ್ಳುತ್ತಾರೆ? ಅದಕ್ಕೆ ಪ್ರಾವಿಜನ್ ಇಲ್ಲ. ಈ ಎರಡು ಸಂಗತಿಗಳ ಬಗ್ಗೆ ಮಾನ್ಯ ಸಚಿವರು ಏನು ಮಾಡುತ್ತಾರೆ ಎಂದು ಕೇಳಬಯಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕನ್ನಡ ನಾಡಿನಲ್ಲಿ ಮಾತೃಭಾಷೆ ಕನ್ನಡವನ್ನು ಉಳಿಸಲಿಕ್ಕೆ ಕಾಯಿದೆ ತಂದಿರತಕ್ಕಂಥದ್ದೆ ದೊಡ್ಡ ವಿಪರ್ಯಾಸ. ಆದರು ಕೂಡ ಇದು ಅನಿವಾರ್ಯ ಎಂದು ನಾನು ಭಾವಿಸುತ್ತೇನೆ. ಇಲ್ಲಿ ICSE Schools ಮತ್ತು CBSE Schools ಗಳಲ್ಲಿ ಬೋಧನೆ ಮಾಡತಕ್ಕಂಥ ಶಾಲೆಗಳಿಗೆ ಇದು ಅನ್ವಯಿಸುವುದಿಲ್ಲವೆಂದು ಸಚಿವರು ಮೊದಲೆ ಹೇಳಿದರು. ಈ ನಾಡಿನಲ್ಲಿರತಕ್ಕಂಥ ಯಾರೆ ಒಬ್ಬ ನೌಕರಿಯಲ್ಲಿ ಕೆಲಸ ಮಾಡತಕ್ಕಂಥವರು ಅದು ಸರ್ಕಾರಿ ಇರಬಹುದು, ಅರೆ ಸರ್ಕಾರಿ ಇರಬಹುದು, ಯಾವುದೇ ಒಬ್ಬ ನೌಕರ ಐ.ಎ.ಎಸ್. ಅಧಿಕಾರಿಯಿಂದ ಹಿಡಿದು ಅಟೆಂಡರ್ ದಲಾಯತ್‌ರವರೆಗೆ ಕೂಡ ಯಾವೊಬ್ಬನೂ ಕೂಡ ಈ ಸರ್ಕಾರಿ ಶಾಲೆಗಳಲ್ಲಿ ಮಕ್ಕಳನ್ನು ಸೇರಿಸುತ್ತಿಲ್ಲ.

ಎಲ್ಲರೂ ಕೂಡ ನಮ್ಮ ಮಗು ICSE Schools ಮತ್ತು CBSE Schools ಗಳಲ್ಲಿ ಓದಬೇಕು ಎಂದು ಹೇಳುತ್ತಾರೆ ಮತ್ತು ಅಲ್ಲಿಯೇ ಓದಿಸುತ್ತಿದ್ದಾರೆ. ಈ ಮಸೂದೆ ತರುತ್ತಿರತಕ್ಕಂಥದ್ದು ಅತ್ಯಂತ ಕಡುಬಡವರು ಸಾಮಾನ್ಯ ಜನರು ಈ ಶಾಲೆಗಳಲ್ಲಿ ಶಿಕ್ಷಣ ಪಡೆಯಲಿಕ್ಕೆ ಆಗದೆ ಇರತಕ್ಕಂಥ ಮಕ್ಕಳಿಗೆ ಮಾತ್ರ ಇದನ್ನು ಕಡ್ಡಾಯವಾಗಿ ಮಾಡುತ್ತಿದ್ದಾರೆ. ಈಗ ಮಾತನಾಡುತ್ತ ಅವರು ಕೇಂದ್ರ ಸರ್ಕಾರದ ಅನುಮತಿಯೊಡನೆ ಇವೆಲ್ಲಾ ಪ್ರಾರಂಭವಾಗಿವೆ ಅವುಗಳಿಗೆ ಅನ್ವಯಿಸುವಂತೆ ಇದನ್ನು ತೆಗೆದುಕೊಂಡು ಬಂದರೆ ಗೊಂದಲವಾಗಬಹುದು, ಇದು ಸುಪ್ರೀಂ ಕೋರ್ಟಿನಲ್ಲಿ ಚರ್ಚೆಯಾಗಬಹುದು ಎಂದು ಹೇಳಿದ್ದಾರೆ.

ಈಗಾಗಲೇ ನಮ್ಮ ಸದಸ್ಯರಾದ ಶ್ರೀ ಅರುಣ್ ಶಹಾಪೂರ್‌ರವರು ಬಹಳ ಚೆನ್ನಾಗಿ ಎಲ್ಲೋ ಒಂದು ಕಡೆ ಈ ಕಾಯಿದೆ ಬಂದ ಮೇಲೆ ICSE ಮತ್ತು CBSE ಶಾಲೆಗಳಿಗೆ ಒತ್ತಡಗಳು ಜಾಸ್ತಿಯಾಗಬಹುದೆಂದು ಹೇಳಿದರು. ರಾಜ್ಯದಲ್ಲಿ ದ್ವಂದ್ವ ನಿಲುವು. ಸರ್ಕಾರಿ ಶಾಲೆ, ರಾಜ್ಯ ಪಠ್ಯ ಕ್ರಮಗಳಲ್ಲಿ ಓದುತ್ತಿರತಕ್ಕಂಥವರು ಮಾತ್ರ 1–5ರವರೆಗೆ ಮತ್ತು 1ರಿಂದ 10ನೇ ತರಗತಿಯವರೆಗೆ ಕನ್ನಡವನ್ನು ಅಧ್ಯಯನ ಮಾಡತಕ್ಕಂಥ ನೀತಿ ಅನ್ವಯಿಸತಕ್ಕಂಥದ್ದು. ಸನ್ಮಾನ್ಯ ಹೊರಟ್ಟಿಯವರು ಶಿಕ್ಷಣ ಸಚಿವರು ಇದ್ದಂಥ ಸಂದರ್ಭದಲ್ಲಿ ಕನ್ನಡ ಮಾಧ್ಯಮ ಶಾಲೆಗಳಿಗೆ ಅನುಮತಿಯನ್ನು ಪಡೆದುಕೊಂಡು ಇಂಗ್ಲೀಷ್ ಮಾಧ್ಯಮದಲ್ಲಿ ಬೋಧನೆ ಮಾಡುತ್ತಿರತಕ್ಕಂಥದ್ದು ಬಹಳ ಕಾಲದಿಂದ ನಿರಂತರವಾಗಿ ನಡೆಸಿಕೊಂಡು ಬಂದಿರತಕ್ಕಂಥದ್ದನ್ನು ಪತ್ತೆ ಮಾಡಿ, ಅದನ್ನು ನಿಯಂತ್ರಣ ಮಾಡಲು ಮೊಟ್ಟ ಮೊದಲ ಬಾರಿಗೆ ಚಳುವಳಿ ಆರಂಭವಾಗಿದೆ. ಆದರೆ ನೀವು ಇವೊತ್ತು ಇದಕ್ಕೆ ಒಂದು ಕಾಯಿದೆ ತರುತ್ತಿದ್ದೀರಿ. ನಾವು ಇದನ್ನು ಸ್ವಾಗತ ಮಾಡುತ್ತೇವೆ. ನೀವು ಕೇಂದ್ರ ಸರ್ಕಾರದ ಅನುಮತಿಯಲ್ಲಿ ನಡೆಯುತ್ತಿರತಕ್ಕಂಥ ಸುಮಾರು 2700 ಶಾಲೆಗಳಿವೆ ಎಂದು ಹೇಳಿದ್ದೀರಿ. ಅಂತಹ ಶಾಲೆಗಳಲ್ಲಿ ಓದುತ್ತಿರತಕ್ಕಂಥ.. ಯಾವೊಬ್ಬ ಟೀಚರ್ ಕೂಡ ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುವುದಿಲ್ಲ. ಯಾವೊಬ್ಬ ಅಧಿಕಾರಿಗಳು ಕೂಡ ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುವುದಿಲ್ಲ. ಯಾವೊಬ್ಬ ಶಾಸಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸುವುದಿಲ್ಲ. ದೊಡ್ಡ ದೊಡ್ಡ ಸಾಹಿತಿಗಳ ಮಕ್ಕಳು ಕೂಡ ಸರ್ಕಾರಿ ಶಾಲೆಗಳಿಗೆ ಬರುವುದಿಲ್ಲ. ಇಂತಹವರಿಗೆಲ್ಲಾ ಈ ಕಾಯಿದೆಯಲ್ಲಿ ವಿನಾಯಿತಿ ಕೊಟ್ಟು ಬಿಡುತ್ತೀರಾ? ಇದರ ಬಗ್ಗೆ ಕೂಡ ಚಿಂತನೆ ಮಾಡಬೇಕಲ್ಲವೆ. ದಯಮಾಡಿ ಇದರ ಬಗ್ಗೆ ಸೂಕ್ತವಾದಂಥ ಚಿಂತನೆಯನ್ನು ಮಾಡಬೇಕು. ಇದನ್ನು ಸಹ ಸೇರಿಸಿದಂತೆ ಮುಂದಿನ ದಿನಗಳಲ್ಲಿ ತಕ್ಷಣ ಇದಕ್ಕೆ ತಿದ್ದುಪಡಿಯನ್ನು ತರಬೇಕೆನ್ನತಕ್ಕಂಥದ್ದನ್ನು ಒತ್ತಾಯಪೂರ್ವಕವಾಗಿ ಮನವಿ ಮಾಡುತ್ತೇನೆ. ಮತ್ತು ತಂದಿರತಕ್ಕಂಥ ಬಿಲ್ ಅನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಮಾತೃಭಾಷೆಯನ್ನು ಉಳಿಸತಕ್ಕಂಥದ್ದಕ್ಕೆ ಸರ್ಕಾರ ಏನು ಎರಡು ಬಿಲ್‌ಗಳನ್ನು ತಂದಿದ್ದಾರೆ ಅದು ನಿಜಕ್ಕೂ ಕೂಡ ಅತ್ಯಂತ ಸ್ವಾಗತಾರ್ಹವಾದಂಥದ್ದು. ಹಾಗಾಗಿ ಎರಡೂ ಬಿಲ್‌ಗಳನ್ನು ನಾನು ಸ್ವಾಗತ ಮಾಡುತ್ತೇನೆ.

ಸಂವಿಧಾನವನ್ನು ವಿಶ್ಲೇಷಣೆ ಮಾಡತಕ್ಕಂಥ ಅಧಿಕಾರ ಸುಪ್ರೀಮ್ ಕೋರ್ಟಿಗೆ ಇದೆ, ನಾನು ಇಲ್ಲ ಎಂದು ಹೇಳುವುದಿಲ್ಲ. ಆರ್ಟಿಕಲ್ 141ರ ಕೆಳಗಡೆ ಅವರು ಕೊಟ್ಟಿರತಕ್ಕಂಥ ತೀರ್ಪು ಎಲ್ಲಾ ರಾಜ್ಯ ಸರ್ಕಾರಗಳಿಗೆ ಬೈಂಡಿಂಗ್ ಇದೆ ಎನ್ನುವಂಥದ್ದು ಇದೆ. ಆದರೆ ಬೇಸರದ ಸಂಗತಿ ಎಂದರೆ ಆರ್ಟಿಕಲ್ 350ಎ, 46, 21ಎ ಈ ಮೂರರಲ್ಲಿ ಭಾಷಾ ನೀತಿ ಮತ್ತು Primary education ಯಾವ ರೀತಿ ಇರಬೇಕೆನ್ನುವಂಥ ಕಾನೂನನ್ನು ಮಾಡತಕ್ಕಂಥದ್ದು ಆಯಾ ರಾಜ್ಯಗಳಿಗೆ ದತ್ತವಾಗಿರತಕ್ಕಂಥ ಅಧಿಕಾರ ಸಂವಿಧಾನದಲ್ಲಿದೆ. But unfortunately, without taking cognizance of these provisions. ಸುಪ್ರೀಂ ಕೋರ್ಟಿನ ಕೆಲವು judges ಎಲ್ಲೋ ಒಂದು ಕಡೆ ಭಾಷಾ ವ್ಯಾಮೋಹದ ಹಿನ್ನಲೆಯಲ್ಲಿ, ಆಂಗ್ಲ ಭಾಷಾ ವ್ಯಾಮೋಹದ ಹಿನ್ನಲೆಯಲ್ಲಿ ಈ ಜಡ್ಜ್‌ಮೆಂಟ್ ನೀಡಿರಬಹುದು. ಇದನ್ನು ನಾನು ಹೇಳಬಾರದು ಆದರೆ ಹೇಳಬೇಕಾಗಿದೆ. ನನ್ನ ದೃಷ್ಟಿಯಲ್ಲಿ ಈ ಜಡ್ಜ್‌ಮೆಂಟ್ ಅನ್ನು overcome ಮಾಡಬೇಕಾದರೆ ultimately ಸಂವಿಧಾನಕ್ಕೆ ತಿದ್ದುಪಡಿಯಾಗಬೇಕು. 8ನೇ ಶೆಡ್ಯೂಲ್‌ನಲ್ಲಿ 22 ವಿಷಯಗಳಿವೆ. 7ನೇ ಶೆಡ್ಯೂಲ್ ಪ್ರಕಾರ State List ನಲ್ಲಿ ಈ 'education' ರಾಜ್ಯ ಸರ್ಕಾರಗಳಿಗೆ ದತ್ತವಾಗಿದೆ.

ನಾವೆಲ್ಲರೂ ಸಹಿತ ಕನ್ನಡ ಮಾಧ್ಯಮದಿಂದ ಬಂದಿರತಕ್ಕಂಥವರು. ಮಾನ್ಯ ಮುಖ್ಯಮಂತ್ರಿಗಳು ಕೂಡ ಕನ್ನಡ ಮಾಧ್ಯಮದಿಂದ ಬಂದಿದ್ದಾರೆ. ಅಷ್ಟು ಏಕೆ ನಮ್ಮ ದೇಶದ ಪ್ರಧಾನ ಮಂತ್ರಿಗಳು ಶ್ರೀ ನರೇಂದ್ರ ಮೋದಿ ಅವರು ಗುಜರಾತಿ ಭಾಷೆಯಲ್ಲಿ ಅಭ್ಯಾಸವನ್ನು ಮಾಡಿದ್ದಾರೆ. ಇತ್ತೀಚೆಗೆ ನಾನು ಅವರ ಪುಸ್ತಕವನ್ನು ಓದುತ್ತಿರುವಾಗ ಈ ವಿಚಾರವನ್ನು ತಿಳಿದುಕೊಂಡಿದ್ದೇನೆ. ಆದ್ದರಿಂದ ಸುಪ್ರೀಮ್ ಕೋರ್ಟಿನ ಜಡ್ಜ್‌ಮೆಂಟ್ ಅನ್ನು overcome ಮಾಡಬೇಕೆಂದರೆ ಮತ್ತು ಈ ಮಾತೃಭಾಷೆಯಲ್ಲಿ ಶಿಕ್ಷಣ ಸಿಗಬೇಕೆನ್ನುವ ಹಾಗಿದ್ದರೆ ಈ ಕಾನೂನಿನ ಜೊತೆಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸತಕ್ಕಂಥದ್ದಕ್ಕೆ ಎರಡೂ ಸದನಗಳು ಒಂದು ನಿರ್ಣಯವನ್ನು ಕೈಗೊಳ್ಳಬೇಕು ಮತ್ತು ಸರ್ಕಾರದ ಪರವಾಗಿ ಒಂದು delegation ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಈ ರಾಷ್ಟ್ರದ ಎಲ್ಲಾ ಮುಖ್ಯಮಂತ್ರಿಗಳ ಸಭೆ ಕರೆದು ಈ regional languages ನ್ನು ಉಳಿಸತಕ್ಕಂಥದ್ದಕ್ಕೆ ಸಂವಿಧಾನಕ್ಕೆ ತಿದ್ದುಪಡಿ ತರಬೇಕೆಂದು ಆಗ್ರಹಿಸತಕ್ಕಂಥದ್ದು ಅವಶ್ಯವಿದೆ. ಆ ದಿಕ್ಕಿನಲ್ಲಿ ಸರ್ಕಾರ ಚಿಂತನೆ ಮಾಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಪುಟ್ಟಣ್ಣ (ಉಪ ಸಭಾಪತಿಯವರು):–** ಮಾನ್ಯ ಸಭಾಪತಿಯವರೆ, ಈ ವಿಷಯದಲ್ಲಿ 2007ರಲ್ಲಿ ಮಾನ್ಯ ಹೊರಟ್ಟಿಯವರು ಹಾಗೂ ನನಗೆ ಒಂದು ಹೋರಾಟವೇ ಆಯಿತು. ನಾನು ಆವೊತ್ತು ಈ ಮಾತನ್ನು ಹೇಳಿದ್ದೇನೆ. ಕೇಂದ್ರೀಯ ಪಠ್ಯಕ್ರಮದ ಯಾವ ಯಾವ ಶಾಲೆಗಳು ಇವೆ ಆ ಎಲ್ಲಾ ಶಾಲೆಗಳಲ್ಲಿ ಕನ್ನಡವನ್ನು ಒಂದು ವಿಷಯವಾಗಿ ಮಾಡಿ ಎಂದು ಹೇಳಿದ್ದೆ. ಆದರೆ ಇವೊತ್ತು ಮಾನ್ಯ ಸಚಿವರು ಇದನ್ನು ತಂದಿದ್ದಾರೆ. ಆ ಕಾರಣಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ ಮತ್ತು ಈ ಬಿಲ್ ಅನ್ನು ಸ್ವಾಗತ ಮಾಡುತ್ತೇನೆ. ಇನ್ನು ಈ ರಾಜ್ಯದಲ್ಲಿ ಯಾರು ಬೇಕಾದರು ಯಾವುದೇ ಪಠ್ಯಕ್ರಮ ಬೋಧಿಸಲಿ ಅವರೆಲ್ಲರಿಗೂ ಕಡ್ಡಾಯ ಮಾಡಿಬಿಡಿ. ಇದರಿಂದ ಯಾರಿಗೂ ಹೊರಗಡೆ ಇಡಬೇಡಿ. ಕನ್ನಡವನ್ನು ಒಂದು ಭಾಷೆಯಾಗಿ ಕಲಿಸಲಿಕ್ಕೆ ಯಾರಿಗೂ ತೊಂದರೆ ಇಲ್ಲ. ನೀವು 100 ಅಂಕ ಇಡುತ್ತೀರೋ, 125 ಅಂಕ ಇಡುತ್ತೀರೋ; ಮೊದಲನೆ ಭಾಷೆಯಾಗಿ ಇಡುತ್ತೀರೋ, ಎರಡನೇ ಭಾಷೆಯಾಗಿ ಇಡುತ್ತೀರೋ ಅದು ಬೇರೆ ವಿಚಾರ. ಆದರೆ ಕನ್ನಡವನ್ನು ಒಂದು ಭಾಷೆಯನ್ನಾಗಿ ಕಲಿಸಲಿಕ್ಕೆ ಕಡ್ಡಾಯವಾದ ಕಾನೂನನ್ನು ಮಾಡಿ. ರಾಜ್ಯಭಾಷೆಯನ್ನು ನೀವು ಕಲಿಸಿದರೆ ಸುಪ್ರೀಂ ಕೋರ್ಟ್ ಕೂಡ ಅಡ್ಡ ಬರುವುದಿಲ್ಲವೆಂದು ನನ್ನ ಭಾವನೆ. ದಯಮಾಡಿ ಅದನ್ನು ಸಹ ಈ ವಿಧೇಯಕದಲ್ಲಿ ಸೇರಿಸಿದರೆ ಒಳ್ಳೆಯದೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಮಾನು ಸಭಾಪತಿಯವರೆ, ನಾನು ಎರಡು ವಿಧೇಯಕಗಳನ್ನು ಪರಿಶೀಲನೆ ಮಾಡಿದಾಗ ಇಲ್ಲಿ ಒಟ್ಟು ಮೂರು ಸಂಗತಿಗಳು ಬರುತ್ತಿವೆ. ಮೊದಲನೆಯದು ಭಾಷೆ, ಎರಡನೆಯದು ಭಾಷಾ ಮಾಧ್ಯಮ, ಮೂರನೆಯದು ಮಾತೃಭಾಷೆ. ಈಗಾಗಲೇ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್‌ನ ಪ್ರಸ್ತಾಪ ಆಗಿಹೋಗಿದೆ. ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್‌ನ ಪ್ರಕಾರ ಮಾತೃ ಭಾಷೆ ಯಾವುದು ಎನ್ನುವುದನ್ನು ತೀರ್ಮಾನ ಮಾಡಿ ಆಗಿದೆ. ಬಹಳ ಸ್ಪಷ್ಟವಾಗಿ ಹೇಳಿರತಕ್ಕಂಥದ್ದು ಮಾತೃ ಭಾಷೆಯ definition ನಮ್ಮ ಇಡೀ ಸಂವಿಧಾನದಲ್ಲಿ ಎಲ್ಲೂ ಕೂಡ ಇಲ್ಲ. 350ಎ ನಲ್ಲಿ ಪ್ರಸ್ತಾಪ ಆಗಿರತಕ್ಕಂಥದ್ದು ಕೂಡ ಒಂದು ರಾಜ್ಯಕ್ಕೆ ಸೀಮಿತವಾಗಿ ಪ್ರಸ್ತಾಪವಾಗಿರತಕ್ಕಂಥದ್ದು. ಆ ರಾಜ್ಯದಲ್ಲಿರತಕ್ಕಂಥ ಭಾಷಾ ಅಲ್ಪಸಂಖ್ಯಾತರ ಹಕ್ಕನ್ನು ರಕ್ಷಣೆ ಮಾಡುವುದಕ್ಕೆ ಇರತಕ್ಕಂಥ ಒಂದು ವಿಷಯ. ಹಾಗಾಗಿ ಮಾತೃಭಾಷೆ ಎನ್ನುವಂಥದ್ದು. ಕನ್ನಡ ಇಲ್ಲಿ ಮಾತೃಭಾಷೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಹಾಗಾಗಿ ಮಾತೃ ಭಾಷೆಯಲ್ಲಿ ಮಾಧ್ಯಮವನ್ನು ನಿರ್ವಹಿಸುತ್ತೇವೆ ಎನ್ನುವಂಥದ್ದಕ್ಕೆ ಸಾಧ್ಯತೆ ಇಲ್ಲದೆ ಇರುವಂಥದ್ದು. ಆದರೆ ಭಾಷೆ ಇವೊತ್ತಿನ ದಿವಸ ಉಳಿಯಬೇಕಾಗಿದೆ. ಅದಕ್ಕೆ ಅವಕಾಶ ಇರತಕ್ಕಂಥದ್ದು ಎಲ್ಲಿ ಎಂದು ಕೇಳಿದರೆ ನಾವೆ Official Languages Act of 1963 ಪಾಸ್ ಮಾಡಿದ್ದೇವೆ. ಕೇಂದ್ರ ಸರ್ಕಾರದಲ್ಲೂ ಒಂದು ಕಾಯಿದೆ ಇದೆ. ನಮ್ಮಲ್ಲೂ ಕೂಡ ಒಂದು ಕಾಯಿದೆ ಇದೆ. ಆ ಕಾಯಿದೆ ಪ್ರಕಾರ 1964ನೇ ಇಸ್ವಿಯಿಂದ ಈ

ರಾಜ್ಯದೊಳಗೆ ಆಡಳಿತ ಭಾಷೆ ಯಾವುದು ಎಂದು ಕೇಳಿದರೆ ಅಧಿಕೃತವಾಗಿರತಕ್ಕಂಥ ಆಡಳಿತ ಭಾಷೆ ಕನ್ನಡ. ಹಾಗಾಗಿ ಕನ್ನಡ ಆಡಳಿತ ಭಾಷೆ ಎಂದು ನಾವು declare ಮಾಡಿಕೊಂಡಿರಬೇಕಾದರೆ ಈ ಬಿಲ್‌ನಲ್ಲಿರುವ ಉದ್ದೇಶ ಮತ್ತು ಕಾರಣಗಳಲ್ಲಿ ನಮ್ಮ ಭಾಷಾ ನೀತಿ ಬೇಕಾಗಿಲ್ಲ, ಇಲ್ಲಿ ನಾವು ಸಂವಿಧಾನ ಬದ್ಧವಾಗಿ ಏನು ಕನ್ನಡ ಭಾಷೆಯನ್ನು declare ಮಾಡಿಕೊಂಡಿದ್ದೇವೆ ಅದಕ್ಕೆ ಪೂರಕವಾಗಿ ನಮ್ಮ ಉದ್ದೇಶ ಇರಬೇಕು. ಈಗಾಗಲೇ ಇರುವ ನಮ್ಮ ಸರ್ಕಾರದ ನೀತಿಯನ್ನು ಸುಪ್ರೀಂ ಕೋರ್ಟ್ ಒಪ್ಪಿಲ್ಲ. ಇದನ್ನು ನಮ್ಮ ಸರ್ಕಾರ ಗಮನಿಸಬೇಕಾಗಿದೆ. ಇದು ಒಂದು ಭಾಗ. ಇನ್ನೊಂದು ಕಡೆಯಲ್ಲಿ ಕಡ್ಡಾಯ ಭಾಷೆಯಾಗಿ ಕನ್ನಡ ಎಂದು ಇದೆ. ಇದರೊಳಗೆ ಪ್ರಸ್ತಾಪ ಆಗಿರತಕ್ಕಂತಾದ್ದು ಪ್ರಥಮ ಅಥವಾ ದ್ವಿತೀಯ ಎಂದು ಇದೆ. ಇಲ್ಲಿ ರಾಜ್ಯಭಾಷೆ ಕನ್ನಡ ಆಗಿರುವುದರಿಂದ ಒಂದು ವಿಷಯ ಕಡ್ಡಾಯ ಆಗಬೇಕಾಗುತ್ತದೆ. ನಾವು ಮಾಧ್ಯಮ ಬಯಸುತ್ತಿಲ್ಲ. ಇವತ್ತಿನ ದಿವಸ ಇದು ಏಕೆ ಬೇಕು ಎಂದು ಕೇಳಿದರೆ, ಇವತ್ತು ನಮ್ಮ ರಾಜ್ಯ ಆಡಳಿತ ನಡೆಸಬೇಕಾದರೆ, ಶಾಸಕಾಂಗ ಕಾರ್ಯಾಂಗ, ನ್ಯಾಯಾಂಗ ಈ ಮೂರೂ ಅಂಗದಲ್ಲೂ ಕೂಡ ಕನ್ನಡದಲ್ಲಿ ಆಡಳಿತ ನಡೆಸಬೇಕು ಎಂದರೆ, ಅದಕ್ಕೆ ಪೂರಕವಾದ ಮಾನವ ಸಂಪನ್ಮೂಲ ನಮಗೆ ಬೇಕಾಗುತ್ತದೆ. ಶಿಕ್ಷಣದ ಮೂಲಕ ಈ ಮಾನವ ಸಂಪನ್ಮೂಲ ಬರಬೇಕಾಗುತ್ತದೆ. ಶಿಕ್ಷಣಕ್ಕೆ ಎಲ್ಲಿಂದ ಬರಬೇಕು ಅಂದರೆ ಆ ಭಾಷೆ ಕಲಿತಂತಹ ವ್ಯಕ್ತಿಗಳು ಇದಕ್ಕೆ ಬರಬೇಕಾಗುತ್ತದೆ. ಆಗ ನಾವು ಕನ್ನಡವನ್ನು ರಾಜ್ಯ ಭಾಷೆಯನ್ನಾಗಿ ಏನು ಘೋಷಣೆ ಮಾಡಿಕೊಂಡಿದ್ದೇವೆ ಅದಕ್ಕೆ ಒಂದು ಅರ್ಥ ಬರುತ್ತದೆ. ಇದು ಸರಿಯಾದ ಉದ್ದೇಶ ಅಲ್ಲ. ಕೇವಲ ನಾವು ಒಂದು ನೀತಿಯನ್ನು ಮಾಡಿಕೊಂಡಿದ್ದೇವೆ, ಅದಕ್ಕೋಸ್ಕರ ಎಂದು ಅಲ್ಲ. ನಾವು ಈಗಾಗಲೇ ಕನ್ನಡ ಭಾಷೆಯನ್ನು ನಮ್ಮ ರಾಜ್ಯ ಭಾಷೆಯನ್ನಾಗಿ declare ಮಾಡಿಕೊಂಡಿದ್ದೇವೆ.

ಉಚಿತ ಕಡ್ಡಾಯ ಶಿಕ್ಷಣ ಎಂಬ ಕೇಂದ್ರದ ಕಾಯಿದೆಗೆ ತಿದ್ದುಪಡಿ ತರುವಂಥಾದ್ದು ಏನು ಇದೆ, ಇದರಲ್ಲಿ ಉದ್ದೇಶದ ಒಳಗೆ ಕೊನೆಯಲ್ಲಿ ಹೇಳಿರತಕ್ಕಂಥಾದ್ದು ಏನೆಂದರೆ, ರಾಜ್ಯದಲ್ಲಿ ಮಗುವಿನ ಮಾತೃಭಾಷೆ ಅಥವಾ ಕನ್ನಡದಲ್ಲಿ ಪ್ರಾಥಮಿಕ ಶಿಕ್ಷಣ 1 ರಿಂದ 5 ನೇ ತರಗತಿಯವರೆಗೆ ಶಿಕ್ಷಣವನ್ನು ನೀಡಬೇಕಾಗುತ್ತದೆ. ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್‌ನ ಹಿನ್ನೆಲೆಯೊಳಗೆ ಯಾವುದೇ ಕಾರಣಕ್ಕೂ ಕೂಡ ಈಗ ತಂದಿರತಕ್ಕಂತಹ ಕಾಯಿದೆ ಏನು ಇದೆ, ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ನಾವು ಈ ವಿಧೇಯಕವನ್ನು ಪಾಸ್ ಮಾಡುತ್ತಿರತಕ್ಕಂಥಾದ್ದೂ ಕೂಡ ಈ ಜಡ್ಜ್‌ಮೆಂಟ್‌ನ ವಿರುದ್ಧವಾಗಿ ಪಾಸ್ ಮಾಡುತ್ತಿರತಕ್ಕಂಥಾದ್ದು ಎಂದು ಹೇಳಬೇಕಾಗುತ್ತದೆ. ಇಲ್ಲಿ ಕೇವಲ ಕನ್ನಡದ ಪ್ರಶ್ನೆ ಇಲ್ಲ. ಈ ದೇಶದಲ್ಲಿ ಇರತಕ್ಕಂತಹ ಎಲ್ಲಾ ಪ್ರಾದೇಶಿಕ ಭಾಷೆಗಳ ಪ್ರಶ್ನೆ ಇವತ್ತು ಇಲ್ಲಿ ಇರತಕ್ಕಂಥಾದ್ದಾಗಿದೆ. ಪ್ರಾದೇಶಿಕ ಭಾಷೆ ಉಳಿದರೆ ಅಲ್ಲಿ ಪ್ರಾದೇಶಿಕ ಸಂಸ್ಕೃತಿ

ಉಳಿಯುತ್ತದೆ. ಕೇವಲ ಭಾಷೆ ಅಷ್ಟೇ ಅಲ್ಲ ಆಡಳಿತಕ್ಕೆ ಪೂರಕವಾಗಿ ಇರತಕ್ಕಂಥಾದ್ದಲ್ಲ, ಆ ಭಾಗದ ಸಂಸ್ಕೃತಿ ಕೂಡ ಉಳಿಯುತ್ತದೆ. ಇದಕ್ಕೆ ಪೂರಕವಾಗಿ ಒಂದು ಸಂಸ್ಕೃತಿ ಇರುತ್ತದೆ. ಆ ಭಾಷೆ ಉಳಿಯುವುದರ ಜೊತೆಗೆ ಇವತ್ತು ಸಂಸ್ಕೃತಿಯನ್ನು ಕೂಡ ಉಳಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಕನ್ನಡದ ಪ್ರಶ್ನೆ ಅಲ್ಲ. ಈ ದೇಶದಲ್ಲಿ ಇರತಕ್ಕಂತಹ ಎಲ್ಲಾ ಪ್ರಾದೇಶಿಕ ಭಾಷೆಗಳ ಪ್ರಶ್ನೆ ಇಲ್ಲಿ ಇರತಕ್ಕಂಥಾದ್ದಾಗಿದೆ. ಈಗಾಗಲೇ ಸುಪ್ರೀಂ ಕೋರ್ಟ್ declare ಮಾಡಿ ಬಿಟ್ಟಿದೆ. ಭಾಷಾ ಮಾಧ್ಯಮ ಏನು ಇದೆಯೋ, ಅದು ಪೋಷಕನ ಹಕ್ಕು. ಇದನ್ನು ನಾವ್ಯಾರೂ ತೀರ್ಮಾನ ಮಾಡುವುದಕ್ಕೆ ಬರುವುದಿಲ್ಲ. ಸರ್ಕಾರ ಮಧ್ಯ ಪ್ರವೇಶ ಮಾಡುವುದಕ್ಕೆ ಬರುವುದಿಲ್ಲ. ಹಾಗಾಗಿ ಅದು ಪೋಷಕರ ಹಕ್ಕು ಎಂದು ತೀರ್ಮಾನ ಮಾಡಿದೆ. ಈ ಎಲ್ಲಾ ಸಂಗತಿಗಳನ್ನು ಇಟ್ಟುಕೊಂಡು ನಾವು ಮುಂದೆ ಹೋಗಬೇಕು ಎಂದಾದರೆ, ಈ ಸಂವಿಧಾನಕ್ಕೆ ತಿದ್ದುಪಡಿ ಒಂದೇ ಇದಕ್ಕೆ ಪರಿಹಾರ ಇರತಕ್ಕಂಥಾದ್ದು. ಅದಕ್ಕೂ ಕೂಡ ಅವಕಾಶ ಇರತಕ್ಕಂಥಾದ್ದು ಎಲ್ಲಿ ಎಂದರೆ, ಇದು Freedom of Expression ಒಳಗಡೆ ಬರತಕ್ಕಂಥಾದ್ದು. ಆರ್ಟಿಕಲ್ 19 ರಲ್ಲಿ ಪ್ರಸ್ತಾಪವಾಗಿದೆ. ಅನುಚ್ಛೇಧ 19 ರಲ್ಲಿ ಏನು exemptions ಅನ್ನು ಕೊಟ್ಟಿದ್ದಾರೆ ಆ exemption ಅನುಚ್ಛೇಧ 19(2) ರೊಳಗೆ ಈ ಭಾಷೆಗೆ ಸಂಬಂಧಪಟ್ಟಂತೆ ಸೇರಿಸತಕ್ಕಂಥಾದ್ದು ಕೂಡ ಅವಶ್ಯಕತೆ ಇದೆ. ಇದನ್ನು ಕೇವಲ ನಾವಷ್ಟೇ ತೀರ್ಮಾನ ಮಾಡಿದರೆ ಸಾಕಾಗುವುದಿಲ್ಲ. ಆದರೆ ನಮ್ಮ ಸರ್ಕಾರ ಈ ದಿಸೆಯಲ್ಲಿ ಒಂದು ಹೆಜ್ಜೆ ಮುಂದೆ ಹೋಗಬೇಕಾಗುತ್ತದೆ. ಇದಕ್ಕೆ ಅಗತ್ಯವಾದಂತಹ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಥವಾ ಶಿಕ್ಷಣ ಮಂತ್ರಿಗಳ ಸಭೆಯನ್ನು ಮಾಡುವುದರಿಂದಲೋ ಎಲ್ಲಿಂದಲಾದರೂ ಇದನ್ನು ಪ್ರಾರಂಭ ಮಾಡಬೇಕಾಗುತ್ತದೆ. ಇದರ ಬಗ್ಗೆ ನಾಯಕತ್ವವನ್ನು ನಮ್ಮ ಸರ್ಕಾರ ತೆಗೆದುಕೊಂಡರೆ ಇದಕ್ಕೆ ಪರಿಹಾರ ಸಿಗುತ್ತದೆ ಎನ್ನುವುದನ್ನು ತಮ್ಮ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೇ ಇದರ ಬಗ್ಗೆ ಇನ್ನೂ ಚರ್ಚೆ . . .

**ಸಭಾಪತಿಯವರು:–** ನೀವು ಚರ್ಚೆ ಸಾಕು ಎಂದು ಹೇಳುತ್ತೀರಿ. ಆದರೆ ಇನ್ನೂ ಕೆಲವು ಸದಸ್ಯರು ಮಾತನಾಡಬೇಕೆಂದು ಹೇಳುತ್ತಾರೆ. ನಾನು ಏನು ಮಾಡುವುದಕ್ಕೆ ಆಗುತ್ತದೆ? ಈ ವಿಚಾರವೆಂದು ಅಲ್ಲ. ಅವರು ಎಲ್ಲವುದರ ಬಗ್ಗೆಯೂ ಮಾತನಾಡುವುದಕ್ಕೆ ಆಸಕ್ತಿ ತೋರುತ್ತಾರೆ. ಆಸಕ್ತಿ ಇರುವವರಿಗೆ ನಾನು ಹೇಗೆ ಬೇಡವೆಂದು ಹೇಳಲಿ.

**ಶ್ರೀ ಅರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ನಮ್ಮ ರಾಜ್ಯದ ರಾಜ್ಯಭಾಷೆಯಾದ ಕನ್ನಡವೇ ಸಾರ್ವಭೌಮ ಭಾಷೆಯಾಗಬೇಕಾದರೆ ಕನ್ನಡ ಅನ್ನ ಕೊಡುವ ಭಾಷೆಯಾಗಿ ಪರಿವರ್ತನೆ ಆಗಬೇಕಾಗಿದೆ. ತಂತ್ರಜ್ಞಾನದಲ್ಲಿ ಬಹಳ ಸುಧಾರಣೆಯಾಗಿ ಸಾಫ್ಟ್‌ವೇರ್ ಉದ್ಯೋಗಕ್ಕೆ ಇಂಗ್ಲೀಷ್ ಭಾಷೆ ಅತ್ಯಗತ್ಯ ಎಂಬ ಭಾವನೆ ಪಾಲಕರಲ್ಲಿ ಹೆಚ್ಚಾಗಿ ಇಂಗ್ಲೀಷ್ ವ್ಯಾಮೋಹ ಬೆಳೆದು ಬಂದಿದೆ. ಪ್ರತಿಯೊಬ್ಬ ಪಾಲಕರು ತಮ್ಮ ಮಕ್ಕಳು ಇಂಗ್ಲೀಷ್ ಮಾಧ್ಯಮದಲ್ಲಿಯೇ ಓದಬೇಕೆಂದು ಬಯಸುತ್ತಿದ್ದಾರೆ.  ಆದ್ದರಿಂದ ಕನ್ನಡವನ್ನು ಕೇವಲ ಮಾಧ್ಯಮ ಹಾಗೂ ಕಲಿಕೆಯಲ್ಲಿ ಕಡ್ಡಾಯ ಮಾಡಿದರೆ ಸಾಲದು. ಕರ್ನಾಟಕದಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಸರ್ಕಾರಿ ನೌಕರಿ ಎಂಬ ಕಾನೂನು ಅಥವಾ ನಿಯಮವನ್ನು ಅಳವಡಿಸಲು ಸಂವಿಧಾನದಲ್ಲಿ/ ಕಾನೂನಿನಲ್ಲಿ ಅವಕಾಶವಿದ್ದರೆ ಅದನ್ನು ಜಾರಿಗೊಳಿಸುವ ಇಚ್ಛಾ ಶಕ್ತಿಯನ್ನು ಸರ್ಕಾರ ಪ್ರದರ್ಶಿಸಿದಾಗ ಮಾತ್ರ ಕನ್ನಡ ಭಾಷೆ ಉಳಿದು ಬೆಳೆಯುವುದರಲ್ಲಿ ಯಾವುದೇ ಸಂದೇಹವಿರುವುದಿಲ್ಲವೆಂದು ನಾನು ಭಾವಿಸುತ್ತೇನೆ. ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇಲ್ಲಿಯವರೆಗೆ ಅನೇಕ ಸದಸ್ಯರು ಹೇಳಿದರು. ಮಾನ್ಯ ಉಗ್ರಪ್ಪನವರಲ್ಲಿ ನಾನು ಒಂದು ಮಾಹಿತಿಯನ್ನು ಕೇಳಬೇಕಾಗಿದೆ. 1992 ರಲ್ಲಿ ಸುಪ್ರೀಂ ಕೋರ್ಟ್‌ನವರು ಒಂದು ರೂಲಿಂಗ್ ಅನ್ನು ಕೊಟ್ಟಿದ್ದರು. "Every child should learn in mother tongue only up to lower primary" ಎಂದು ನೀಡಿದ್ದರು. ನಮ್ಮ ರಾಜ್ಯದಲ್ಲಿ ಡಾ: ಹೆಚ್. ನರಸಿಂಹಯ್ಯನವರ ಸಮಿತಿಯನ್ನು ರಚನೆ ಮಾಡಿದ್ದರು. ಎಲ್ಲಾ ಆಂಗ್ಲ ಮಾಧ್ಯಮಗಳೂ ಕೂಡ convert ಮಾಡಿ ಕನ್ನಡ ಮಾಧ್ಯಮ ಮಾಡಬೇಕೆಂದು ಆ ಸಮಿತಿಯವರು ವರದಿಯನ್ನು ನೀಡಿದರು. ಆ ವರದಿಯನ್ನು ಕೊಟ್ಟ ನಂತರ ಆ ಶಾಲೆಗಳವರು ಕೋರ್ಟ್‌ಗೆ ಹೋದಂತಹ ಸಂದರ್ಭದಲ್ಲಿ ಒಂದು ಅಗ್ರಿಮೆಂಟ್ ಆಯಿತು. ದಿನಾಂಕ 29–4–1994 ರಲ್ಲಿ ಕೋರ್ಟ್‌ನಲ್ಲಿ ಒಂದು ಅಫಿಡವಿಟ್ ಅನ್ನು ನೀಡಿದರು. ಅದರಲ್ಲಿ "Here onwards, we are not permitting any English medium schools" ಎಂದು ಕೋರ್ಟ್‌ನಲ್ಲಿ ಅಫಿಡವಿಟ್ ಕೊಟ್ಟರು. ದಿನಾಂಕ 29–04–2014 ರ ನಂತರ ನಮ್ಮ ರಾಜ್ಯದಲ್ಲಿ ಒಂದೂ ಪ್ರೈಮರಿ ಶಾಲೆ ಇಂಗ್ಲೀಷ್ ಮಾಧ್ಯಮದಲ್ಲಿ ಇಲ್ಲ. ಎಲ್ಲರೂ ಕನ್ನಡ ಮಾಧ್ಯಮದಲ್ಲಿ ಶಾಲೆಗಳನ್ನು ನಡೆಸುತ್ತೇವೆಂದು ಅನುಮತಿಯನ್ನು ತೆಗೆದುಕೊಂಡು ಇಂಗ್ಲೀಷ್ ಅನ್ನು ಕಲಿಸುವುದಕ್ಕೆ ಪ್ರರಂಭ ಮಾಡಿದರು. ಅಧಿಕಾರಿಗಳೂ ಕೂಡ ಸುಮ್ಮನೆ ಇದ್ದರು. ಎಲ್ಲಾ B.E.O., D.D.P.I. ಗಳಿಗೆ ಈ ವಿಚಾರ ಗೊತ್ತಿದ್ದರೂ ಸುಮ್ಮನಿದ್ದರು. ಕೊನೆಗೆ ನಾವು

ಬಂದಾಗ illegal ಶಾಲೆಗಳನ್ನು ರದ್ದು ಮಾಡುವಂತಹ ಕಾನೂನನ್ನು ಮಾಡಿದ್ದೆವು. ಆಗ ಶುರುವಾಯಿತು. ಅದಾದ ನಂತರ ನಮ್ಮ ರಾಜ್ಯದಲ್ಲಿ ಈ ಬಗ್ಗೆ ಬಹಳಷ್ಟು ಚರ್ಚೆ ಆಯಿತು.

ಬೆಳಗಾವಿ ಅಧಿವೇಶನದಲ್ಲಿ 30 ಮಂದಿ ಶಾಸಕರು ಮಾತನಾಡಿದರು. ಆ ಪೈಕಿ 29 ಮಂದಿ ಶಾಸಕರು ನೀವು ಮಾಡಿದ್ದು ತಪ್ಪು ಎಂದು ನನಗೆ ಹೇಳಿದರು. ಮಾತೃ ಭಾಷೆಯಲ್ಲಿ ತರಗತಿಗಳನ್ನು ನಡೆಸುತ್ತೇವೆಂದು ಅನುಮತಿಯನ್ನು ತೆಗೆದುಕೊಂಡು ಇಂಗ್ಲೀಷ್ ಮಾಧ್ಯಮದಲ್ಲಿ ತರಗತಿಗಳನ್ನು ನಡೆಸುವುದು ತಪ್ಪು; ಕಾನೂನು ಬಾಹಿರ ಎಂದು ಹೇಳಿದ್ದಕ್ಕೆ ಎಲ್ಲಾ ಶಾಸಕರು ನನ್ನ ವಿರುದ್ಧವಾಗಿ ಮಾತನಾಡಿದರು. ಶಿಕ್ಷಣ ಮಂತ್ರಿಗಳು ಮಾಡಿದ್ದು ತಪ್ಪು ಇದನ್ನು ಮಾಡಬಾರದಾಗಿತ್ತು ಎಂದು ಸುಮಾರು 30 ಶಾಸಕರ ಪೈಕಿ 29 ಮಂದಿ ಶಾಸಕರು ಮಾತನಾಡಿದರು. ಕನ್ನಡ ಶಾಲೆಗೆ ಅನುಮತಿಯನ್ನು ತೆಗೆದುಕೊಂಡು ಇಂಗ್ಲೀಷ್ ಶಾಲೆಗಳನ್ನು ನಡೆಸುವುದು ಕಾನೂನಿನ ಉಲ್ಲಂಘನೆ ಮಾಡಿದಂತಾಗುತ್ತದೆ. ಮಾನ್ಯ ಉಗ್ರಪ್ಪನವರೆ, ನಂತರ ಈ ಪ್ರಕರಣದಲ್ಲಿ ಸರ್ಕಾರ ಕೋರ್ಟ್‌ಗೆ ಹೋಯಿತು. ಮೊದಲನೆಯ ಜಡ್ಜ್‌ಮೆಂಟ್‌ನಲ್ಲಿ ಸರ್ಕಾರ ತೆಗೆದುಕೊಂಡಂತಹ ತೀರ್ಮ ಸರಿಯಾಗಿದೆ ಎಂದು ತೀರ್ಪನ್ನು ನೀಡಿದರು. ಕೊನೆಗೆ ಈ ಪ್ರಕರಣ ಸುಪ್ರೀಂ ಕೋರ್ಟ್‌ಗೆ ಹೋಯಿತು. ಮಕ್ಕಳಿಗೆ ಯಾವ ಭಾಷೆಯಲ್ಲಿ ಅಥವಾ ಮಾತೃಭಾಷೆಯಲ್ಲಿ ಕಲಿಸಬೇಕೆಂಬ ಬಗ್ಗೆ ತಂದೆ ತಾಯಿ/ ಪೋಷಕರೇ ನಿರ್ಧಾರ ಮಾಡಬೇಕೆಂದು ಜಡ್ಜ್‌ಮೆಂಟ್ ಅನ್ನು ನೀಡಿದರು. ಸರ್ಕಾರದ ಕಾರ್ಯಕ್ರಮ ಸರಿ ಇದೆ ಎಂದು ಹೇಳಿತು. ದಿನಾಂಕ: 21–7–2009 ರಲ್ಲಿ ಹಿಂದೆ ವಿಭಾಗೀಯ ಪೀಠ ದಿನಾಂಕ 02–07–2008 ರಂದು ನೀಡಿದ ತೀರ್ಪಿನ ಬಗ್ಗೆ ತಡೆಯಾಜ್ಞೆ ನೀಡುವುದಿಲ್ಲವೆಂದು ಹಾಗೂ ಸರ್ಕಾರವು ಅನಧಿಕೃತ ಶಾಲೆಗಳ ವಿರುದ್ಧ ಕ್ರಮ ಕೈಗೊಂಡು ಅವುಗಳನ್ನು ಮುಚ್ಚಲು ಯಾವುದೇ ರೀತಿಯ ಆದೇಶ ಹೊರಡಿಸಬಾರದೆಂದು ತಿಳಿಸಿ ಇದಕ್ಕೆ ತಡೆಯಾಜ್ಞೆಯನ್ನು ನೀಡಿದರು; ಕಾನೂನು ಬಾಹಿರವಾದ ಶಾಲೆಗಳನ್ನು ನೀವು ಮುಚ್ಚಬಾರದು ಎಂದು ಹೇಳಿದೆ.

ಮಾನ್ಯ ಉಗ್ರಪ್ಪನವರೆ, ಈ ರೀತಿಯ ಶಾಲೆಗಳನ್ನು ಮುಚ್ಚುವುದಕ್ಕೆ ಸರ್ಕಾರ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬುದನ್ನು ನೀವೇ ಹೇಳಿ. ಕೋರ್ಟ್‌ಗಳು ಈ ರೀತಿ ಹೇಳಿದ ನಂತರ ನಮಗೆ ಮುಂಚೆ ಏನು ಮಾಡುವುದಕ್ಕೆ ಸಾಧ್ಯವಿದೆ? ಯಾರು ತಜ್ಞರು ಇರಲಿ, ಯಾರೇ ಕಾನೂನು ಬಲ್ಲವರು ಇರಲಿ ಇದರ ಸಾಧಕ ಬಾಧಕಗಳನ್ನು ಕುರಿತು ಚರ್ಚೆ ಮಾಡಿ ಮುಂದೆ ಇಂತಹ ಪರಿಸ್ಥಿತಿ ನಿರ್ಮಾಣವಾಗದಂತೆ ಮಾಡಿದರೆ ಮಾತ್ರ ಇದಕ್ಕೆ ಏನಾದರೂ ಒಂದು ಬೆಲೆ ಬರುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕು. ಕಾನೂನು ತಜ್ಞರು ಇದರ ಬಗ್ಗೆ ಸಾಕಷ್ಟು ವಿಚಾರ

ಮಾಡಬೇಕಾಗಿದೆ. ಇದರ ಬಗ್ಗೆ ಬಹಳ ಚರ್ಚೆಯಾಗಿತ್ತು. ಕಾನೂನು ಬಾಹಿರವಾಗಿ ಕೆಲಸ ಮಾಡಿದವರ ಮೇಲೆ ಕ್ರಮ ತೆಗೆದುಕೊಂಡರೆ, ಆ ರೀತಿಯ ಕ್ರಮ ತೆಗೆದುಕೊಂಡದ್ದೇ ತಪ್ಪು ಎಂದು ಹೇಳಿದಾಗ ಸರ್ಕಾರ ಏನು ಮಾಡಬೇಕು ಹೇಳಿ. ನನ್ನ ಕಾಲದಲ್ಲಿ ನಡೆದಂತಹ ವಿಚಾರಗಳ ಬಗ್ಗೆ ಇಂದು ಸುಪ್ರೀಂ ಕೋರ್ಟ್‌ಗೆ ಹೋಗಿದೆ. ಇದರ ಸಲುವಾಗಿಯೇ ಇದು ಅಲ್ಲಿಗೆ ಹೋಗಿದೆ. ಇದಕ್ಕೆ ಏನು ಮಾಡುವುದಕ್ಕಾಗುತ್ತದೆ ಹೇಳಿ. ಇದರ ಬಗ್ಗೆ ಇನ್ನೊಂದಿಷ್ಟು ತಜ್ಞರ ಜೊತೆಯಲ್ಲಿ ವಿಚಾರ ಮಾಡಿ ಮಾಡಬೇಕಾಗುತ್ತದೆ. C.B.S.E., I.C.S.E. ಶಾಲೆಗಳಿಗೆ ಸರ್ಕಾರದವರು ಇವುಗಳಿಗೆ N.O.C. ಕೊಡುವುದಷ್ಟೇ ಅವರ ಕೆಲಸ. ದಯಮಾಡಿ ಇವರಿಗೆ ಇನ್ನು ಮೇಲೆ N.O.C. ಕೊಡುವುದನ್ನು ನಿಲ್ಲಿಸಿದರೆ ಬಹಳ ಒಳ್ಳೆಯದೆಂದು ನನಗನ್ನಿಸುತ್ತದೆ.

**ಶ್ರೀ ಅರುಣ ಶಹಾಪುರ:–** ಈಗ ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ N.O.C. ಬೇಕಾಗಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, C.B.S.E., I.C.S.E. ಶಾಲೆಗಳನ್ನು ಪ್ರಾರಂಭ ಮಾಡಿದರೆ ಕೇಂದ್ರ ಸರ್ಕಾರ ಅನುಮತಿ ಕೊಡುವವರೆಗೆ ಅವರು ಕನ್ನಡ ಮಾಧ್ಯಮ ಅಂದರೆ, ಮಾತೃ ಭಾಷೆಯಲ್ಲಿಯೇ ಶಿಕ್ಷಣವನ್ನು ನೀಡಬೇಕೆಂದು ಇದೆ. ಅದನ್ನು ನೋಡಿ ಏನು ಮಾಡುವುದಕ್ಕಾಗುತ್ತದೆ ಎಂಬುದರ ಬಗ್ಗೆ ವಿಚಾರ ಮಾಡಿ. ಆಂಗ್ಲ ಮಾಧ್ಯಮ ಶಾಲೆ ಏನು ನಡೆಯುತ್ತದೆ ಅಲ್ಲೂ ಸಹ ಶಿಕ್ಷಕರ ನೇಮಕಾತಿಗೆ ಪದವಿ ಅಗತ್ಯ ಇದೆ. ಪ್ರೈಮರಿಗೆ D.Ed ಇದೆ. ಹೈಸ್ಕೂಲ್‌ಗೆ B.Ed ಇದೆ. ಆದರೆ ಈ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಒಬ್ಬ ಟೀಚರ್ ಸಹ D.Ed ಇದ್ದವನು ಇಲ್ಲ. ಡಿಪ್ಲೊಮಾ, ಎಂ.ಎ., ಎಲ್.ಎಲ್.ಬಿ. ಯವರು ಇಂಥವರನ್ನೆಲ್ಲಾ ನೇಮಕ ಮಾಡಿಕೊಂಡು ಶಾಲೆಗಳನ್ನು ನಡೆಸುತ್ತಾರೆ.

**(ಗಂಟೆ 3:00)**

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ನಮ್ಮ ರಾಜ್ಯದಲ್ಲಿ ಇಂಗ್ಲೀಷ್ ಮೀಡಿಯಂನ ಎಷ್ಟು ಡಿಎಡ್ ಕಾಲೇಜುಗಳಿವೆ ಎಂದು ತೆಗೆದುಕೊಳ್ಳಿ. ಒಂದು ಅಥವಾ ಎರಡು ಇರಬಹುದು. ಆದರೆ ಅಲ್ಲಿ ಒಬ್ಬರು ಕೂಡ ಡಿಎಡ್ ಇದ್ದ ಟೀಚರ್ಸ್ ಇಲ್ಲ. ಅವರೆಲ್ಲಾ ಕಾನೂನು ಉಲ್ಲಂಘನೆ ಮಾಡಿದ ಹಾಗೆ. ಅಂತಹ ಕಡೆಗಳಲ್ಲಿ ನೀವು ಸರಿಯಾದ ರೀತಿಯಲ್ಲಿ ಬಿಗಿ ಮಾಡಿದರೆ ಸ್ವಲ್ಪ ಸರಿಯಾದ ದಾರಿಗೆ ಬರುತ್ತಾರೆ. ಅದರ ಜೊತೆಗೆ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ನಮ್ಮ ರಾಜ್ಯದಲ್ಲಿ ಕೆ.ಪಿ.ಎಸ್.ಸಿ. ಸೆಲೆಕ್ಷನ್ ಅಥವಾ ಮತ್ತೆ ಇನ್ನಾವುದಾದರು ಸೆಲೆಕ್ಷನ್ ಇರಬಹುದು ಯಾವುದೇ ಸೆಲೆಕ್ಷನ್ ಇದ್ದರು ಸಹಿತ ಕನ್ನಡವನ್ನು ಕಡ್ಡಾಯವಾಗಿ ಕಲಿತಂಥವರಿಗೆ ಮಾತ್ರ ನೌಕರಿಯಲ್ಲಿ ಆದ್ಯತೆಯನ್ನು ಕೊಡುವಂಥ ವ್ಯವಸ್ಥೆ ಮಾಡಿದರೆ ಸೂಕ್ತವಾಗುತ್ತದೆ.

ಆದ್ದರಿಂದ ಇಂತಹ ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಿ ನಿರ್ಣಯಗಳನ್ನು ಕೈಗೊಳ್ಳಿ ಎಂದು ಹೇಳ ಬಯಸುತ್ತೇನೆ. ಏನೆ ಇರಲಿ ತಾವು ಈ ಬಿಲ್ ಅನ್ನು ತಂದಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಇನ್ನು ತಾವು ಆರ್.ಟಿ.ಐ ತಂದಿದ್ದೀರಿ. ಇದರಿಂದ ಸರ್ಕಾರವೇ ಕುಳಿತುಕೊಂಡು ಕನ್ನಡ ಮಾಧ್ಯಮವನ್ನು ಮುಚ್ಚುವುದಕ್ಕೆ ಹೊರಟಿದೆ. ನೀವು ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳಿಗೆ ಕನ್ನಡ ಮಾಧ್ಯಮದ ಶಾಲೆಯ ಮಕ್ಕಳನ್ನು ಕಳುಹಿಸುತ್ತಿದ್ದೀರಿ. ನೀವು ಒಂದೊಂದು ಶಾಲೆಗೆ ಇಂತಿಷ್ಟು ಮಕ್ಕಳು ಎಂದು ಕಡ್ಡಾಯವಾಗಿ ಕಳುಹಿಸಿ ಅದರ ಫೀ ಅನ್ನು ಕೂಡ ಕೊಡುತ್ತಿದ್ದೀರಿ. ಈಗ 400 ಕೋಟಿ ಕೊಡುತ್ತಿದ್ದೀರಿ. ಇನ್ನೊಂದು ಸ್ವಲ್ಪ ದಿವಸದಲ್ಲಿ ಅದು ಸಾವಿರ ಕೋಟಿ ಆಗುತ್ತದೆ. ಶೇಕಡಾ 25ರಷ್ಟು ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳು ಇವೊತ್ತು ಆಂಗ್ಲ ಮಾಧ್ಯಮಕ್ಕೆ ಹೋಗುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು. ನೀವೆ ಕುಳಿತುಕೊಂಡು ಒಂದು ಸಾವಿರ ಕೋಟಿ ಖರ್ಚು ಮಾಡಿ ಕನ್ನಡ ಮಾಧ್ಯಮದ ಮಕ್ಕಳನ್ನು ಆಂಗ್ಲ ಮಾಧ್ಯಮಕ್ಕೆ ಕಳುಹಿಸುವ ಅಧಿಕಾರ ನಿಮಗೇನಿದೆ ಎನ್ನುವ ಪ್ರಶ್ನೆ ಕೂಡ ನಾಳೆ ಉದ್ಭವಿಸುತ್ತದೆ. ಹಾಗೆ ಮಾಡಿದಾಗ ಕನ್ನಡ ಮಾಧ್ಯಮ ಶಾಲೆಗಳು ಹೇಗೆ ಮುಂದುವರೆಯುತ್ತವೆ. ನಮ್ಮ ಕನ್ನಡ ಮಾಧ್ಯಮದಲ್ಲಿ ಅಷ್ಟು ಮಕ್ಕಳ ಸಂಖ್ಯೆ ಕಡಿಮೆಯಾಗಿ ರಾಜ್ಯದಲ್ಲಿನ 600 ಕನ್ನಡ ಮಾಧ್ಯಮ ಶಾಲೆಗಳು ಮುಚ್ಚುವ ಸ್ಥಿತಿಯಲ್ಲಿವೆ. ಆರ್‌ಟಿಐ ಬಂದ ಮೇಲೆ ಎಷ್ಟು ಕನ್ನಡ ಮಾಧ್ಯಮದ ಮಕ್ಕಳು ಆಂಗ್ಲ ಮಾಧ್ಯಮಕ್ಕೆ ಹೋಗಿದ್ದಾರೆಂದು ನೀವು ಸ್ಟಾಟಿಸ್ಟಿಕ್ಸ್ ತೆಗೆದು ನೋಡಿ. ಅದಕ್ಕೆ ಸರ್ಕಾರ ಎಷ್ಟು ದುಡ್ಡು ಕೊಡುತ್ತಿದೆ? ಆ ರೀತಿ ಕಳುಹಿಸುವಂಥ ಅವಶ್ಯಕತೆ ಇದೆಯೇ? ಅದನ್ನು ಏಕೆ ನಿಲ್ಲಿಸಬಾರದು? ಒಂದು ಕಡೆ ನೀವು ಈ ಬಿಲ್ ಅನ್ನು ತಂದಿದ್ದೀರಿ. ಇನ್ನೊಂದು ಕಡೆ ನೀವೇ ಕನ್ನಡ ಶಾಲೆಯನ್ನು ಮುಚ್ಚಿ ವಿದ್ಯಾರ್ಥಿಗಳನ್ನು ಆಂಗ್ಲ ಮಾಧ್ಯಮಕ್ಕೆ ಕಳುಹಿಸುತ್ತಿದ್ದೀರಿ. ಇದು ಸರಿಯಾದುದಲ್ಲ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಪುಟ್ಟಣ್ಣ (ಉಪ ಸಭಾಪತಿಯವರು):–** ಮಾನ್ಯ ಸಭಾಪತಿಯವರೆ, ಆರ್‌ಟಿಐ ಬಗ್ಗೆ ಒಂದು ಸಲಹೆಯನ್ನು ಕೊಡಲಿಚ್ಛಿಸುತ್ತೇನೆ. ಈ ಬಾರಿ ಆರ್‌ಟಿಐನಲ್ಲಿ ಆನ್‌ಲೈನ್ ಮಾಡಬೇಕೆಂದು ಹೊರಟಿದ್ದೀರಿ. ಇದರಲ್ಲಿ ಸಿಕ್ಕಾಪಟ್ಟೆ ಲೋಪದೋಷವಾಗಿದೆ. ಅದೊಂದು ಮಾರಾಟದ ದಂಧೆಯಾಗಿ ಪರಿವರ್ತನೆಯಾಗಿದೆ ಎಂದು ಈಗಾಗಲೇ ನಾನು ನಿನ್ನೆ ಹೇಳಿದ್ದೇನೆ. ಮಾನ್ಯ ಹೊರಟ್ಟಿಯವರು ಹೇಳಿದ ಹಾಗೆ ಇನ್ನು ಮೂರ್‍ನಾಲ್ಕು ವರ್ಷಗಳ ನಂತರ ಒಂದು ಸಾವಿರ ಕೋಟಿಗಿಂತ ಹೆಚ್ಚು ಹಣವನ್ನು ಖಾಸಗಿಯವರಿಗೆ ಕೊಡಬೇಕಾಗುತ್ತದೆ. ಅದರ ಬದಲು ನನ್ನ ವೈಯಕ್ತಿಕ ಅಭಿಪ್ರಾಯವೇನೆಂದರೆ, ನೀವು ಅದೇ ದುಡ್ಡನ್ನು ಪ್ರತಿ ವರ್ಷ

ಹೋಬಳಿಗೊಂದು ಶಾಲೆಗೆ ಒಂದೊಂದು ಕೋಟಿ ದುಡ್ಡು ಕೊಡಿ. ಎಲ್ಲಿ ಮಕ್ಕಳ ಸಂಖ್ಯೆ ಜಾಸ್ತಿ ಬರುತ್ತಿದೆ, ಆ ಶಾಲೆಯನ್ನು ಅಪ್‌ಗ್ರೇಡ್ ಮಾಡಿ. ಕೇಂದ್ರೀಯ ಮಾದರಿಯ ಅಥವಾ ಕೇಂದ್ರೀಯ ಶಾಲೆಗಳು ಏನು ಇವೆ, ಅದೇ ಮಾದರಿಯಲ್ಲಿ ನೀವು ಪ್ರತಿ ವರ್ಷ ಒಂದು ಸಾವಿರ ಶಾಲೆಗಳನ್ನು ನೀವು ಮಾಡಿದರೆ ಅಲ್ಲಿಯೇ ನೀವು ಒಳ್ಳೆಯ ಗುಣಮಟ್ಟದ ಶಿಕ್ಷಣ ಕೊಡಬಹುದು. ಈ ಖಾಸಗಿಯವರಿಗೆ ದುಡ್ಡು ಕೊಡುವ ಬದಲು ನಮ್ಮ ಆಸ್ತಿಯಲ್ಲಿ ನಾವೆ ಬಿಲ್ಡಿಂಗ್ ಕಟ್ಟಿಕೊಂಡು ಸ್ವಂತ ಕಟ್ಟಡದಲ್ಲಿ ನಾವೆ ಗುಣಮಟ್ಟದ ಶಿಕ್ಷಣ ಕೊಡುವಂಥ ವ್ಯವಸ್ಥೆಯನ್ನು ರೂಪಿಸಬಹುದು. ಆದರೆ ಅದಕ್ಕೆ ಮನಸ್ಸು ಮಾಡಬೇಕಾಗುತ್ತದೆ. ಇದೊಂದು ನನ್ನ ಸಲಹೆ.

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರುಗಳಾದ ರಾಮಚಂದ್ರಗೌಡರು, ಮಧುಸೂದನ್‌ರವರು, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು, ಸಂಕನೂರ್‌ರವರು, ಅರುಣ್ ಶಹಾಪೂರರವರು, ಮರಿತಿಬ್ಬೇಗೌಡರು, ಉಗ್ರಪ್ಪನವರು, ಪುಟ್ಟಣ್ಣರವರು, ಸಿದ್ದರಾಮಣ್ಣನವರು, ಹೊರಟ್ಟಿಯವರು ಮತ್ತು ಚೌಡರೆಡ್ಡಿಯವರು ಎರಡೂ ಕಾಯಿದೆಗಳ ಬಗ್ಗೆ ಅನೇಕ ಸಲಹೆಗಳನ್ನು, ಮಾರ್ಗದರ್ಶನಗಳನ್ನು, ಮತ್ತು ತಮ್ಮ ಬೆಂಬಲವನ್ನು ಘೋಷಿಸುವುದರ ಮೂಲಕ ಬಿಲ್ ಅನ್ನು ಸ್ವಾಗತ ಮಾಡಿದ್ದಾರೆ. ಅವರೆಲ್ಲರೂ ಇದು ಕೇಂದ್ರ ಸರ್ಕಾರದಲ್ಲಿ ತೀರ್ಮಾನ ಆಗತಕ್ಕಂಥ ಕಾಯಿದೆ ಎಂದು ಹೇಳಿದ್ದಾರೆ. ಅದು ನಮಗೂ ಕೂಡ ಗೊತ್ತಿದೆ. ಇನ್ನು ತಾವು ಮಾತನಾಡುತ್ತಿರುವಂಥ ಸಂದರ್ಭದಲ್ಲಿ ಇದು ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಕಾರಣಕ್ಕಾಗಿಯೇ ಬಂದಿದೆ ಎಂದು ಹೇಳಿದ್ದೀರಿ. ಅದು ಸರಿ ಇದೆ. ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ನಮಗೆ ವಿರುದ್ಧ ಆಗದಿದ್ದರೆ ಈ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ. ಸುಪ್ರೀಮ್ ಕೋರ್ಟ್ ರಾಜ್ಯ ಸರ್ಕಾರ 1994ನೇ ಇಸ್ವಿಯಲ್ಲಿ ತಮ್ಮ ಅವಧಿಯಲ್ಲಿ ತೆಗೆದುಕೊಂಡಿರತಕ್ಕಂಥ ತೀರ್ಮಾನವನ್ನು ಸಂವಿಧಾನ ಪೀಠ ಚರ್ಚೆ ಮಾಡಿ ತಿರಸ್ಕರಿಸಿದ ಕಾರಣ ಈ ಬಿಲ್ ಅನ್ನು ತರುವಂಥ ಅನಿವಾರ್ಯತೆ ನಮಗೆ ಬಂತು. ಕಾಯಿದೆಯನ್ನು ಅನುಷ್ಠಾನಗೊಳಿಸಬೇಕು ಇಲ್ಲದಿದ್ದರೆ contempt of court proceedings ಗೆ ಎದುರಾಗಬೇಕಾದಂಥ ಪರಿಸ್ಥಿತಿಗೆ ನಾವು ತಲುಪಿದೆವು. ಆ ಸಂದರ್ಭದಲ್ಲಿ ಈ ನಿಲುವನ್ನು ಸರ್ಕಾರ ತೆಗೆದುಕೊಂಡಿದೆ. ಈ ತೀರ್ಮಾನ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಈ ನಾಡಿನ ಎಲ್ಲಾ ಖ್ಯಾತ ಸಾಹಿತಿಗಳು, ಬರಹಗಾರರು, ಪ್ರಮುಖರನ್ನು ನಾನು ಕೂಡ ಪ್ರತ್ಯೇಕವಾಗಿ ಕರೆದು ಚರ್ಚಿಸಿದ್ದೇನೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿಯೂ ಕೂಡ ಎರಡು ಸಭೆಗಳನ್ನು ಮಾಡಿ ಅವರ ಅಭಿಪ್ರಾಯ ಪಡೆದು ಅಂತಿಮವಾಗಿ ನಾವು ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಮಾನ್ಯ ಹೊರಟ್ಟಿಯವರು ಒಂದು ಪ್ರಶ್ನೆಯನ್ನು ಮಾಡಿದರು. ನನಗೂ ಕೂಡ ಸುಪ್ರೀಂ ಕೋರ್ಟಿನವರು ನೀಡಿರತಕ್ಕಂಥ ತೀರ್ಪಿನಲ್ಲಿ ಅಸಮಾಧಾನ ಇದೆ. ಅದಕ್ಕೆ ಕಾರಣವೇನೆಂದರೆ ನಾವು ನಮ್ಮ ದೇಶದಲ್ಲಿ ನಾವು ಎರಡು ಕಾನೂನುಗಳನ್ನು ಅನುಸರಿಸುತ್ತಿದ್ದೇವೆ. ಒಂದು ನಾವೇನು ಶಾಸನಬದ್ಧವಾದ ಕಾನೂನುಗಳನ್ನು ಮಾಡುತ್ತೇವೆ. ಅದಕ್ಕೆ that is enforceable under law and second one is judgment law. ಇದರ ಇಂಟರ್‌ಪ್ರಿಟೇಶನ್ ಆಗಬಹುದು, ಇನ್ನೊಂದು ರೀತಿಯಲ್ಲಿ ಬರತಕ್ಕಂಥದ್ದು that is also enforceable under law. ಆದರೆ ಜಡ್ಜ್‌ಮೆಂಟ್ ಲಾ ನಲ್ಲಿ ಅವರು ಯಾವಾಗಲೂ ಕೂಡ ಶಾಸಕಾಂಗ ಮತ್ತು ಸಂಸತ್ತಿನಲ್ಲಿ ನಾವೇನು ತೀರ್ಮಾನ ತೆಗೆದುಕೊಂಡಿದ್ದೇವೆ ಅದಕ್ಕೆ ಅನೇಕ ಬಾರಿ ಅತ್ಯಂತ ಕೆಟ್ಟ ರೀತಿಯಾದ ವಿಡಂಬನೆಗಳನ್ನು, ಹಾಸ್ಯಗಳನ್ನು ಮಾಡಿದ್ದನ್ನು ನಾವು ಕೇಳಿದ್ದೇವೆ. ನಾವು ಮಾಡತಕ್ಕಂಥ ತೀರ್ಮಾನದ ವಿರುದ್ಧ ತೀರ್ಪನ್ನು ನೀಡತಕ್ಕಂಥದ್ದನ್ನು ನಾವು ದಿನ ನಿತ್ಯ ನೋಡುತ್ತಿದ್ದೇವೆ. ಆದರೆ ಅದನ್ನು ನಾವು ಯಾರೂ ಕೂಡ ಸದನದ ಹೊರಗೆ ಪ್ರತಿಕ್ರಿಯಿಸುವ ಪ್ರಶ್ನೆ ಇಲ್ಲ. ಆದರೆ ಇದರೊಳಗೆ ನನಗೆ ಸ್ವಲ್ಪ ನೋವಾಗುವುದೇನೆಂದರೆ, ಸಿದ್ದರಾಮಣ್ಣನವರು ಹಾಗೂ ಉಗ್ರಪ್ಪನವರು ಕೂಡ 'ಮಾತೃಭಾಷೆ' ಎನ್ನುವಂಥದ್ದು ಏನಿದೆ ಅದನ್ನು ಹೇಳಿದರು. ಈ ಮಾತೃಭಾಷೆಗೆ ಸಂಬಂಧಪಟ್ಟಿರತಕ್ಕಂಥ ಆರ್ಟಿಕಲ್ 19 (2) 21(ಎ) 30ರಲ್ಲಿ ಆಗಬಹುದು, ಎಜುಕೇಶನ್‌ಗೆ ಸಂಬಂಧಪಟ್ಟ ಆರ್ಟಿಕಲ್ 40ರಲ್ಲಿ ಆಗಬಹುದು, 46 ಆಗಬಹುದು, 350ಎ ಆಗಬಹುದು, ಎಜುಕೇಶನ್‌ಗೆ ಸಂಬಂಧಪಟ್ಟಂಥ ವಿಸ್ತಾರವಾದ ಚರ್ಚೆ ನಡೆದಿದೆ. ಇದರಲ್ಲಿ ಪ್ರಮುಖವಾಗಿ ನಮಗೆ ನೋವು ಆಗತಕ್ಕಂಥದ್ದೇನೆಂದರೆ ಇಂತಹ ತೀರ್ಪು ಕೊಡುವಾಗ ಪ್ರಮುಖವಾಗಿ ಸಪೋಸ್ 1994 ದಿಂದ ಇಲ್ಲಿಯವರೆಗೆ ಸುಮಾರು 1500–1600 ಜನ ನಾವು ಕನ್ನಡದಲ್ಲಿಯೇ ಶಾಲೆಯನ್ನು ನಡೆಸುತ್ತಿದ್ದೇವೆಂದು ಅಫಿಡೆವಿಟ್ ಹಾಕಿದ್ದಾರೆ. ಕನ್ನಡದಲ್ಲಿಯೇ ಪ್ರತಿ ವರ್ಷ ನವೀಕರಣ ಮಾಡಿಕೊಂಡು ಬಂದಿದ್ದಾರೆ. ನಮ್ಮ ಐಪಿಸಿ ಏನು ಹೇಳುತ್ತಿದೆ? Whether it is not known to the Court? ನಾವು ಫೋರ್ಜರಿಗೆ ಏನು explanation ಕೊಡುತ್ತೇವೆ? 420ಕ್ಕೆ ನಾವು ಏನು explanation ಕೊಡುತ್ತೇವೆ, when a person filed an affidavit before our Education Department that we are following the directions of Educational Act. ನಾವು ಮೀಡಿಯಮ್ ಆಫ್ ಇನ್‌ಸ್ಟ್ರಕ್ಷನ್ ಕನ್ನಡದಲ್ಲಿಯೇ ಮಾಡುತ್ತೇವೆಂದು ಕಳೆದ 10–15–20 ವರ್ಷಗಳಿಂದ ಪ್ರತಿ ವರ್ಷ ನವೀಕರಣ ಮಾಡಿ ಕೋರ್ಟಿಗೆ ಹೋಗಿ ಕೋರ್ಟಿನಲ್ಲಿ ನಾವು ಮಾಡಿದ್ದು ಹೌದು, at least Court should not have impose the fine on that? ನಾನು ಕೂಡ ಒಬ್ಬ ವಕೀಲನಾಗಿ ಪ್ರ್ಯಾಕ್ಟೀಸ್ ಮಾಡಿದವನು. ನಾವು ಒಂದು ಫೈಲ್‌ನಲ್ಲಿ ಅಫಿಡೇವಿಟ್ ರಾಂಗ್ ಮಾಡಿದರೆ a case will registered against us. Suppose if we submit any wrong submission before the High Court,

we may take to the custody immediately. 1700 institutions have filed false affidavit. What is the action taken by the Court? No action. Suppose, if it done by our legislators or any parliaments member. Should the court would have been treated like that? ಇದು ಒಂದು ಭಾಗ. ನಮ್ಮನ್ನು ಅಷ್ಟು contemptuous ಆಗಿ ನೋಡತಕ್ಕಂಥ ಕೋರ್ಟ್ ಇದರ ಬಗ್ಗೆ ಏಕೆ ಚರ್ಚೆ ಮಾಡಲಿಲ್ಲ? ಒಬ್ಬರು ವಕೀಲರು ಬಂದು ನನಗೆ ಹೇಳುತ್ತಾರೆ, we have plead the fraud, but Supreme Court has given consent for that. ನೀವೇನು ಮಾಡುತ್ತೀರೆಂದು ಕೇಳಿದರು. ನಾನೇನು ಹೇಳಬೇಕು? Advocate appearing for the institutions, ನಾವು ಫ್ರಾಡ್ ಮಾಡಿದ್ದೇವೆ, we have plead the fraud, but Supreme Court has given consent for that. ಇದಕ್ಕೆ ನಾವು ಸಾರ್ವಜನಿಕರಿಗೆ ಏನು ಉತ್ತರ ಹೇಳಬೇಕು? ಇದು ಒಂದು ಭಾಗ. ಮಾತೃಭಾಷೆ ಎಂದು ಹೇಳಿದರೆ ಈ ದೇಶದಲ್ಲಿ 3600 ಭಾಷೆಗಳಿವೆ. 3600 ಭಾಷೆಗಳಿಗೆ ನಾವು ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ಮಾಡುವುದಕ್ಕೆ ಆಗುತ್ತದೆಯೇ? Whether it is practicable? ಕರ್ನಾಟಕದಲ್ಲಿ ಮಾತೃಭಾಷೆ ಒಂದೆ ಇದೆಯೇ? ರಾಜ್ಯಭಾಷೆಗೆ explanation ಆಗಲೇಬೇಕಾಗುತ್ತದೆ. ಅದು ಮ್ಯಾಂಡೆಟರಿ ಇದೆ. We have to go for amendment in the Constitution. ರಾಜ್ಯ ಭಾಷೆಯನ್ನು ನಾವು ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ not only for Karnataka, it is necessary for entire Country. ಆದ್ದರಿಂದ ಈ ವಿಚಾರದಲ್ಲಿ ಏನು ಮಾನ್ಯ ಸದಸ್ಯರುಗಳು ಒಪ್ಪಿಗೆ ಕೊಟ್ಟಿದ್ದಾರೆ, Constitutional crisis ಆಗಿಯೇ ಆಗುತ್ತದೆ. We will be pioneers for that. ಈಗ ಏನು ನಾವು ಮಾಡಿದ್ದೇವೆ, we will be pioneers for that. ಖಂಡಿತವಾಗಿಯೂ ಕೂಡ ಇದು ನಿಲ್ಲುವುದಿಲ್ಲ.

ಇದು ನಮ್ಮ ಸಮಸ್ಯೆ ಮಾತ್ರ ಅಲ್ಲ. ಈ ಸಮಸ್ಯೆ ವೆಸ್ಟ್-ಬೆಂಗಾಲ್‌ನಲ್ಲಿದೆ, ಕೇರಳದಲ್ಲಿದೆ, ತಮಿಳುನಾಡಿನಲ್ಲಿದೆ, ಆಂಧ್ರಪ್ರದೇಶದಲ್ಲಿದೆ, ಉತ್ತರ ಪ್ರದೇಶದಲ್ಲಿದೆ, ಒರಿಸ್ಸಾದಲ್ಲಿದೆ. ಎಲ್ಲಾ ರಾಜ್ಯದಲ್ಲಿ ಈ ಭಾಷೆಯ ಪ್ರಶ್ನೆ ಇದೆ. ಎಲ್ಲಾ ರಾಜ್ಯಗಳಲ್ಲಿಯೂ ಇಂಗ್ಲೀಷ್ ಬೆಳೆಯುತ್ತಿದೆ. ಈ ವಿಚಾರದಲ್ಲಿ ನಮಗೆ ಸಂತೋಷವಾಗಿರತಕ್ಕಂಥದ್ದೇನೆಂದರೆ, ನಾನು ನಿನ್ನೆ ಕೆಳಮನೆಯಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದೆ ಸನ್ಮಾನ್ಯ ಲೋಹಿಯಾ ರಾಮಮನೋಹರ ರವರು ಯಾವಾಗಲೂ ಕೂಡ ಹೇಳುತ್ತಿದ್ದರು. ಅವರ ಮೂರು ಪ್ರಮುಖ ಪುಸ್ತಕಗಳು ಇವೆ. Interval between the Politics, The Caste system in India and The wheel of history. ಎಲ್ಲಾ ಪುಸ್ತಕಗಳಲ್ಲಿಯೂ ಕೂಡ ಅವರು ರಾಜ್ಯ ಭಾಷೆಗಳಿಗೆ

ಪ್ರಾಮುಖ್ಯತೆಯನ್ನು ಕೊಡಬೇಕು; ಅದನ್ನು ನಾವು ಉಳಿಸಬೇಕು ಎನ್ನುವ ಉದ್ದೇಶದಿಂದ ಹಿಂದಿ ಭಾಷೆ ಮತ್ತು ರಾಜ್ಯ ಭಾಷೆಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದರು. Actually, when I gone through the ಚಿಂತನ ಗಂಗಾ ಮತ್ತು ಕೃತಿ ರಂಗಸಂಗ ದರ್ಪಣ ಏನಿದೆ ಅದನ್ನು ಕೂಡ ನಾನು ಓದಿದ್ದೇನೆ. ಅದರ ಬಗ್ಗೆ ಪೇಜ್‌ವೈಸ್ ಕೂಡ ನಾನು ಹೇಳುವುದಕ್ಕೆ ಸಿದ್ಧನಿದ್ದೇನೆ. ಅದರೊಳಗೆ ಹಿಂದಿಗೆ ಪ್ರಾಮುಖ್ಯತೆ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ, ಇತ್ತೀಚೆಗೆ ಬಂದ ಹೇಳಿಕೆಗಳು ಖಂಡಿತವಾಗಿ ನನಗೆ ಬಹಳ ಸಂತೋಷವನ್ನು ಕೊಟ್ಟಿವೆ. ಸ್ಥಳೀಯ ರಾಜ್ಯ ಭಾಷೆಗೆ ಪ್ರಾಮುಖ್ಯತೆ ಕೊಡಬೇಕೆನ್ನತಕ್ಕಂಥ ನಿಲುವು ಏನಿದೆ, ಅದರ ಬಗ್ಗೆ ನನಗೆ ಬಹಳ ಸಂತೋಷವಾಗಿದೆ. I have congratulate that organization for taking this stand. ಈ ವಿಚಾರದಲ್ಲಿ. ಶ್ರೀ ಮರಿತಿಬ್ಬೇಗೌಡರು ಮತ್ತು ಅರುಣ ಶಹಾಪೂರರವರು ಎರಡು ಪ್ರಶ್ನೆಗಳನ್ನು ಎತ್ತಿದ್ದಾರೆ. ಅದಕ್ಕೆ ನಾನು ಆರಂಭದಲ್ಲಿಯೇ ಉತ್ತರ ಹೇಳಿದ್ದೇನೆ. ವಾಸ್ತವದಲ್ಲಿ ನಾವು ಅದಕ್ಕೂ ಕೂಡ ತಿದ್ದುಪಡಿ ತರುತ್ತೇವೆ. ಇದರೊಳಗೆ ಏಕೆ ತರಲಿಲ್ಲವೆಂದರೆ, ಇದರಲ್ಲಿ ತಂದರೆ ಇದು ಕೂಡ ಸುಪ್ರೀಮ್ ಕೋರ್ಟಿಗೆ ಹೋಗುತ್ತದೆ. ಎರಡನೇ ಕಾಯಿದೆ ಬಗ್ಗೆ ಹೇಳುವುದಾದರೆ ಈಗ ನಾವು ಏನು ಮಾಡಿದ್ದೇವೆಂದರೆ, ಮೊದಲು ನಮ್ಮಲ್ಲಿ ಎನ್‌ಓಸಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇತ್ತು. ಈಗ ಎನ್‌ಓಸಿ ಇಲ್ಲದೆ ಅವರಿಗೆ ಡೈರೆಕ್ಟ್ ಆಗಿ ಸೆಂಟ್ರಲ್ ಬೋರ್ಡ್‌ನವರು ಪರವಾನಿಗೆ ನೀಡಬಹುದೆಂದು ಇದೆ. ಅದಕ್ಕೆ ನಾವೇನು ಮಾಡಿದ್ದೇವೆಂದರೆ, ಅದನ್ನು ಹೊರತು ಪಡಿಸಿ ಎಂದು ಕೂಡ ಹೇಳಿಲ್ಲ. ಆದರೆ ಅವರ ಮೇಲೆ ನಾವು ರಿಸ್ಟ್ರಿಕ್ಷನ್ ಹೇರುವ ಪರಿಸ್ಥಿತಿಯಲ್ಲಿಲ್ಲ. ಅದನ್ನು ಇದರೊಳಗೆ ಸೇರಿಸಿದರೆ only for that purpose you have omitted. ಅದನ್ನು ಸೇರಿಸಿದರೆ ಅದು Constitutional crisis ಆಗಿ ಮತ್ತೆ ಅದು ಸುಪ್ರೀಂ ಕೋರ್ಟಿಗೆ, ರಾಷ್ಟ್ರಪತಿಯವರ ಅಸೆಂಟ್‌ಗೆ ಹೋಗುವುದು ಬೇಡ ಎಂದು ಇದರಲ್ಲಿ ತರಲಿಲ್ಲ. ಇದಕ್ಕೆ ಸುಪ್ರೀಂ ಕೋರ್ಟಿಗೆ at this stage it is not possible. ಏತಕ್ಕೆಂದರೆ ಎರಡನೇ ಕಾಯಿದೆ ಏನಿದೆ, ಸುಪ್ರೀಂ ಕೋರ್ಟಿಗೆ ಹೋಗಿ ಅಲ್ಲಿ ತಮಿಳುನಾಡಿನವರು ಅದನ್ನು ಗೆದ್ದು ಬಂದಿದ್ದಾರೆ. ಅದನ್ನೆ ನಾವು ಫಾಲೋ ಮಾಡುತ್ತಿದ್ದೇವೆ.

ನಾವು ಐದಾರು ರಾಜ್ಯಗಳ ಭಾಷಾ ನೀತಿಯನ್ನು ತರಿಸಿಕೊಂಡಿದ್ದೆವು. ಅದರೊಳಗಡೆ State of Tamil Nadu has followed this procedure. 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಭಾಷೆಯನ್ನು ಎರಡನೇ ಭಾಷೆಯನ್ನಾಗಿ ನಾವು ಇಂಟ್ರಡ್ಯೂಸ್ ಮಾಡುತ್ತಿದ್ದೇವೆ, that has been questioned in High Court. Subsequently, questioned in the Supreme Court. Supreme Court upheld the decision taken by the State of Tamil Nadu. ಅದನ್ನು

ನಾವು ಗಮನದಲ್ಲಿಟ್ಟುಕೊಂಡು ಅದನ್ನೆ ನಾವು ಇದರೊಳಗಡೆ ಅಳವಡಿಸುವಂಥ ಒಂದು ಪ್ರಯತ್ನವನ್ನು ಮಾಡಿದ್ದೇವೆ. ನಾನು ಎಲ್ಲಾ ವಿಷಯಗಳನ್ನು ವಿಸ್ತಾರ ಮಾಡಿ ಹೇಳುತ್ತ ಹೋದರೆ ತುಂಬಾ ವಿಳಂಬ ಆಗುತ್ತದೆ. ಬೇಕೆಂದರೆ ನಾನು ಪ್ರತಿಯೊಂದಕ್ಕೂ ವಿಸ್ತಾರವಾಗಿ ಹೇಳುವುದಕ್ಕೆ ಸಿದ್ಧ ಇದ್ದೇನೆ. ಆದರೆ ಅದರ ಅಗತ್ಯ ಇಲ್ಲವೆಂದು ಅನಿಸುತ್ತದೆ.

ಇನ್ನು ಆರ್‌ಟಿಇ ಬಗ್ಗೆ ಹೇಳಿದ್ದೀರಿ. ಅದನ್ನು ನಮ್ಮ ಕಾಯಿದೆಯಲ್ಲಿ ನಾವು ಅನುಸರಿಸತಕ್ಕಂಥ ನೀತಿಯಲ್ಲ. It is also a subject matter of the Central Government. ಆರ್‌ಟಿಐ ಆಕ್ಟ್ 2009ರಲ್ಲಿರತಕ್ಕಂಥದ್ದು. ತಾವು ಹೇಳಿದ್ದು ಸತ್ಯ. ನಾನು ಕೂಡ ಹೆಚ್.ಆರ್.ಡಿ. ಮಿನಿಸ್ಟರ್ ಜೊತೆಗೆ ಮಾತನಾಡಿದ್ದೇನೆ. ಅವರು ಎಜುಕೇಶನ್ ಸಿಸ್ಟಮ್‌ನಲ್ಲಿರತಕ್ಕಂಥದ್ದನ್ನು ಪೂರ್ಣವಾಗಿ ಬದಲಾವಣೆ ಮಾಡತಕ್ಕಂಥದ್ದು, School Education and Higher Education ಎರಡನ್ನು ಕೂಡ ಬದಲಾವಣೆ ಮಾಡುವ ನಿಟ್ಟಿನಲ್ಲಿದ್ದಾರೆ. ಅದರ ಬಗ್ಗೆ ಸೆಮಿನಾರ್ ಕೂಡ ಮಾಡಿದ್ದಾರೆ. ಅದರಲ್ಲಿ ನಾನು ಪಾರ್ಟಿಸಿಪೇಟ್ ಮಾಡಿದ್ದೆ. We have discussed this matter. ನಮ್ಮ ಶಾಲೆಗಳಿಗೆ ನಮ್ಮ ಹತ್ತಿರ ಹಣದ ಕೊರತೆ ಇದೆ. ಶೌಚಾಲಯಕ್ಕೆ, ಕುಡಿಯುವ ನೀರಿಗೆ ಹಣ ಇಲ್ಲ. ಈಗ ಪರಿಸ್ಥಿತಿ ಹೇಗಾಗಿದೆ ಎಂದರೆ, ಪ್ರತಿ ವರ್ಷ ಒಂದು ಲಕ್ಷ ಜನರನ್ನು ಸರ್ಕಾರದಿಂದ ಸರ್ಕಾರಿ ಶಾಲೆಯ ಮಕ್ಕಳನ್ನು ನಾವು ಖಾಸಗಿ ಶಾಲೆಗಳಿಗೆ ಕಳುಹಿಸುತ್ತಿದ್ದೇವೆ, 8ನೇ ತರಗತಿಯವರೆಗೆ ಅದರ ಪ್ರಾವಿಜನ್ ಇದೆ. ಈಗಾಗಲೇ 300–350–400ಕೋಟಿಗಳಷ್ಟು ಪೇಮೆಂಟ್ ಆಗಿದೆ. ಹೀಗೆಯೇ ಮುಂದುವರೆದರೆ ಪ್ರತಿ ವರ್ಷ ಒಂದು ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ನಾವು ಖಾಸಗಿ ಶಾಲೆಗಳಿಗೆ ನಮ್ಮ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವಂಥ ಮಕ್ಕಳನ್ನು ಕರೆದುಕೊಂಡು ಹೋಗಿ ಬಿಟ್ಟು ಬರುತ್ತೇವೆ. ಮೊದಲೆ ನಮಗೆ ಸಮಸ್ಯೆ ಇದೆ. We have to rethink about those things. ಆದರೆ ಇದು ಕೇಂದ್ರ ಸರ್ಕಾರದ ನಿರ್ಧಾರ, ಅದನ್ನು ನಾನು ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಅದರ ಬಗ್ಗೆ ನಾವು ಖಂಡಿತವಾಗಿಯೂ ಚರ್ಚೆ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಾನು ಸೆಮಿನಾರ್‌ಗೆ ಹೋದಾಗ ಹೆಚ್.ಆರ್.ಡಿ.ಮಿನಿಸ್ಟರ್ ಜೊತೆಗೆ ಈ ವಿಚಾರದಲ್ಲಿ ಸಹ ಮಾತನಾಡಿದ್ದೇನೆ.

**ಶ್ರೀ ಪುಟ್ಟಣ್ಣ (ಉಪ ಸಭಾಪತಿಯವರು):–** ಮಾನ್ಯ ಸಭಾಪತಿಯವರೆ, ತಾವು ಭಾಷಾ ನೀತಿ ಬಗ್ಗೆ ಬೇರೆ ಬೇರೆ ರಾಜ್ಯಗಳಿಂದ ಹೇಗೆ ಮಾಹಿತಿ ತರಿಸಿದ್ದೀರಿ, ಅದೇ ರೀತಿ ಆರ್‌ಟಿಇ ಬಗ್ಗೆ ಬೇರೆ ಬೇರೆ ರಾಜ್ಯಗಳಲ್ಲಿ ಅಥವಾ ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿ ಯಾವ ನೀತಿ ಇದೆ ಎಂಬುದರ ಬಗ್ಗೆ ಸಹ ಮಾಹಿತಿ ತರಿಸಿ.

**ಶ್ರೀ ಕಿಮ್ಮನೆ ರತ್ನಾಕರ್:–** ಮಾನ್ಯ ಸಭಾಪತಿಯವರೆ, ಆ ಬಗ್ಗೆ ನಾನು ಈಗ ಪತ್ರವನ್ನು ಬರೆಯುತ್ತಿದ್ದೇನೆ. ನಮ್ಮ ದೇಶದಲ್ಲಿರತಕ್ಕಂಥ ಎಲ್ಲಾ ಶಿಕ್ಷಣ ಸಚಿವರಿಗೆ ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು, we should have a discussion on both language policy and education system. ಇದರ ಬಗ್ಗೆ ನಾವು ಚರ್ಚೆ ಮಾಡತಕ್ಕಂಥ ಅಗತ್ಯತೆ ಇದೆ. ಇಲ್ಲದಿದ್ದರೆ ನಾವು ಎಜುಕೇಶನ್ ಸಿಸ್ಟಂ ಅನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲ. ಮತ್ತೆ ಗೌರವಾನ್ವಿತ ಹೆಚ್.ಆರ್.ಡಿ. ಸಚಿವರು ಕಳೆದ ಬಾರಿ ಮಾತನಾಡಿದಾಗ ಒಂದು ವಿಷಯವನ್ನು ಎಕ್ಸ್‌ಪ್ರೆಸ್ ಮಾಡಿದ್ದಾರೆ. An examination is necessary. 8ನೇ ಕ್ಲಾಸ್‌ನಲ್ಲಿ ಅದು ಪಾಸ್ ಆಗಬೇಕು, ಫೇಲ್ ಆಗಬೇಕೆನ್ನುವ ಪ್ರಶ್ನೆ ಇಲ್ಲ. An examination is necessary with respect to 6ನೇ, 7ನೇ, 8ನೇ ತರಗತಿಯಲ್ಲಿ to assess the student. ಬೇಕಾದರೆ ಮುಂದಕ್ಕೆ ಹೋಗಲಿ, ಅಸೆಸ್‌ಮೆಂಟ್ ಆಗಬೇಕು and it should known to the parents and also the teachers ಎನ್ನತಕ್ಕಂಥ ಮಾಹಿತಿ ಇದೆ. ಅದರ ಬಗ್ಗೆ ಕೂಡ ಡಿಸ್ಕಸ್ ಆಗುತ್ತಿದೆ. ಕೆಳಗಿನ ಸದನದಲ್ಲಿ ಕೂಡ ಒಳ್ಳೆಯ ಚರ್ಚೆಯಾಗಿರುವುದರಿಂದ ತಾವೆಲ್ಲರೂ ಕೂಡ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಿಮ್ಮ ಪತ್ರದ ಜೊತೆಗೆ ಮಾತೃಭಾಷೆ ಮತ್ತು ರೀಜನಲ್ ಲ್ಯಾಂಗ್ವೇಜ್ ಮೇಲೆ constituent assembly ಯಲ್ಲಿ ಏನು ಡಿಸ್ಕಶನ್ ಆಗಿದೆ, ಅದರಲ್ಲಿ ಬಹಳ ಕ್ಲಾರಿಟಿ ಇದೆ. ಆ constituent assembly ಡಿಸ್ಕಶನ್ ಬೇಸಿಸ್ ಮೇಲೆ ಬಹುಶಃ ಪ್ರಧಾನ ಮಂತ್ರಿಗಳಿಗೆ ಇತರ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಅಥವಾ ಶಿಕ್ಷಣ ಸಚಿವರಿಗೆ ಪತ್ರ ಬರೆದು ಅದರಿಂದ ಮಾಹಿತಿಯನ್ನು ತೆಗೆದುಕೊಳ್ಳುವಂಥದ್ದು ಸೂಕ್ತ ಎಂಬುದು ನನ್ನ ಅಭಿಪ್ರಾಯ.

**ಶ್ರೀ ಕಿಮ್ಮನೆ ರತ್ನಾಕರ್:–** ಮಾನ್ಯ ಸಭಾಪತಿಯವರೆ constituent assembly ನಲ್ಲಿ ಆದಂಥ ಡಿಸ್ಕಶನ್ ಅನ್ನು ನಾನು ಪಡೆದುಕೊಂಡಿದ್ದೇನೆ. ಆ ಸಂದರ್ಭದಲ್ಲಿ ಆ ಪತ್ರ ಬರೆಯುವಾಗ ತಮಗೆ ತೋರಿಸುತ್ತೇನೆ. ಈಗಾಗಲೇ ನಾವು peripheral opinion ಕೇಳುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಗ್ರಾಮ ಪಂಚಾಯ್ತಿಯಿಂದ ತಾಲ್ಲೂಕು ಪಂಚಾಯ್ತಿಯಿಂದ, ಜಿಲ್ಲಾ ಪಂಚಾಯ್ತಿಯವರೆಗೆ ಸಂಪೂರ್ಣವಾಗಿ ಇಡೀ ದೇಶದ ಎಲ್ಲಾ ಮೂಲಗಳಿಂದ ಸ್ಕೂಲ್ ಎಜುಕೇಶನ್ ಮತ್ತು ಹೈಯರ್ ಎಜುಕೇಶನ್‌ಗೆ ಬದಲಾವಣೆ ತರಬೇಕಾದಂಥದ್ದಕ್ಕೆ ಸಲಹೆ ಕೊಡಿ ಎನ್ನತಕ್ಕಂಥದ್ದನ್ನು ಅವರು ಕೇಳಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು

ನಾವು ಈ ಪ್ರಯತ್ನವನ್ನು ಮಾಡುತ್ತೇವೆ. ಒಟ್ಟಾರೆಯಾಗಿ ನಾವು ಏನು ಈ ಎರಡು ಮಸೂದೆಗಳನ್ನು ತಂದಿದ್ದೇವೆ..

**ಶ್ರೀ ಅರುಣ ಶಹಾಪೂರ:–** ಮಾನ್ಯ ಸಭಾಪತಿಯವರೆ, ನೀವು 'ಸಕ್ಷಮ ಪ್ರಾಧಿಕಾರ' ಎಂದು ಮಾಡಿದ್ದೀರಿ. ಕನ್ನಡ ಮಾಧ್ಯಮ ಶಾಲೆಯ ಪರವಾನಿಗೆಯನ್ನು ಪಡೆದು ಇಂಗ್ಲೀಷ್ ಮಾಧ್ಯಮ ಶಾಲೆಯನ್ನು ನಡೆಸುವ ರೀತಿಯಲ್ಲಿ ನಾಳೆ ಕನ್ನಡ ವಿಷಯವನ್ನು ಕೂಡ ನಡೆಸುತ್ತೇವೆಂದು ಮಾಡಬಹುದು. ಈ ಉಲ್ಲಂಘನೆಗೆ ದಂಡ, ಶಿಕ್ಷೆ ಈ ರೀತಿಯ ಕ್ಲಾಸ್ ಹಾಕುವುದು ಸೂಕ್ತವೆನಿಸುತ್ತದೆ.

**ಶ್ರೀ ಕಿಮ್ಮನೆ ರತ್ನಾಕರ್:–** ಮಾನ್ಯ ಸಭಾಪತಿಯವರೆ, ಸತ್ಯ ಹೇಳಬೇಕೆಂದರೆ ಅದನ್ನೆಲ್ಲಾ ನಾನು ನಿಮಗೆ ಏಕೆ ಹೇಳುವುದಕ್ಕೆ ಹೋಗಲಿಲ್ಲವೆಂದರೆ, it is in our Acts itself. ನಮ್ಮ 1993ರ ಎಜುಕೇಶನ್ ಆಕ್ಟ್ ಏನಿದೆ, that provided everything. ನಾವು ಕಾಯಿದೆ ಮಾಡುತ್ತೇವೆ ಆದರೆ ಉಲ್ಲಂಘನೆ ಮಾಡಿದರೆ we have ample power in our Act itself. ಅದನ್ನು ಸೆಪರೇಟ್ ಆಗಿ ಹೇಳುವ ಪ್ರಶ್ನೆ ಬರುವುದಿಲ್ಲವೆಂದು ನನ್ನ ಭಾವನೆ. ಆದ್ದರಿಂದ ಮಾನ್ಯ ಗೌರವಾನ್ವಿತ ಎಲ್ಲಾ ಸದಸ್ಯರುಗಳು ನಾವು ಮಂಡಿಸಿರತಕ್ಕಂಥ ಎರಡೂ ಮಸೂದೆಗೆ ಒಪ್ಪಿಗೆ ಕೊಡಬೇಕೆಂದು ಹೇಳಿ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಕನ್ನಡ ಭಾಷಾ ಕಲಿಕೆ ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಖಂಡ 2 ರಿಂದ 9

**ಸಭಾಪತಿಯವರು:–** "ಖಂಡ 2 ರಿಂದ 9 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

(ಖಂಡ 2 ರಿಂದ 9ನ್ನು ವಿಧೇಯಕಕ್ಕೆ ಸೇರಿಸಲಾಯಿತು)

<u>ಖಂಡ 1 ಇತ್ಯಾದಿ</u>

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

## <u>ಪ್ರಸ್ತಾವದ ಅಂಗೀಕಾರ</u>

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಕನ್ನಡ ಭಾಷಾ ಕಲಿಕೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಕನ್ನಡ ಭಾಷಾ ಕಲಿಕೆ ವಿಧೇಯಕವನ್ನು ಅಂಗೀಕರಿಸುವುದು."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>

(ಆ) <u>ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು (ಕರ್ನಾಟಕ ತಿದ್ದುಪಡಿ) ವಿಧೇಯಕ, 2015</u>

<u>ಪರ್ಯಾಲೋಚನಾ ಪ್ರಸ್ತಾವ</u>

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

<u>ಪ್ರಸ್ತಾವವನ್ನು ಮಂಡಿಸಲಾಯಿತು</u>

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, **"**ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.**"**

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.</u>

<u>ಖಂಡ 2</u>

**ಸಭಾಪತಿಯವರು:– "**ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ**"**

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

**(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

<u>ಖಂಡ 1 ಇತ್ಯಾದಿ</u>

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, **"**ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ**"**

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

<u>ಪ್ರಸ್ತಾವದ ಅಂಗೀಕಾರ</u>

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

6. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ದಿನಾಂಕ:16/03/2015 ರಿಂದ 31/03/2015ರ ವರೆಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪೈಕಿ ಈಗಾಗಲೇ ಸದನದಲ್ಲಿ ಮಂಡಿಸಿದ ನಂತರ ಸ್ವೀಕೃತವಾದ ಒಟ್ಟು 378 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

(ಮಾನ್ಯ ಸದಸ್ಯರಿಗೆ ಉತ್ತರಗಳನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ)

7. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು

**(ಅ) "ಅಕ್ಷರ ದಾಸೋಹದಲ್ಲಿ ನಕಲಿ ಫೈರ್‌ಪ್ರೂಫ್ ಏಪ್ರಾನ್ ಖರೀದಿಸಿ ಅಕ್ರಮವೆಸಗಿರುವ ಬಗ್ಗೆ"**

**– – – –**

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ದಿನಾಂಕ:25/03/2015 ರಂದು ಮಾನ್ಯ ಸದಸ್ಯರಾದ ಶ್ರೀ ಜಿ.ಎಸ್. ನ್ಯಾಮಗೌಡರವರು ಪ್ರಸ್ತಾಪಿಸಿದ ವಿಷಯ ಕುರಿತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

"ಅಡುಗೆ ಸಿಬ್ಬಂದಿಯವರ ಸುರಕ್ಷತೆ ಹಾಗೂ ಶುಚಿತ್ವದ ಹಿತದೃಷ್ಟಿಯಿಂದ ಫೈರ್‌ಪ್ರೋಫ್ ಏಪ್ರಾನ್‌ನ್ನು ಶಾಲೆಯಲ್ಲಿರುವ ಉಳಿಕೆ ಅನುದಾನ ಅಥವಾ ಚಾಲ್ತಿ ಮತ್ತು ಸಂಚಿತ ನಿಧಿಯಿಂದ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಉತ್ತಮ ಗುಣಮಟ್ಟದ ಫೈರ್‌ಪ್ರೂಫ್ ಏಪ್ರಾನ್‌ನ್ನು ಶಾಲಾ ಹಂತದಲ್ಲಿ ಎಸ್.ಡಿ.ಎಂ.ಸಿ.ಗಳ ಮೂಲಕ ಖರೀದಿಸಲು 01–07–2013ರಲ್ಲಿ ಸೂಚನೆ ನೀಡಲಾಗಿರುತ್ತದೆ.

ಅಕ್ಷರ ದಾಸೋಹ ತಯಾರಿಕೆಯ ಅಡುಗೆಯವರಿಗಾಗಿ ಖರೀದಿಸಿರುವ ಏಪ್ರಾನ್‌ಗಳು ನಕಲಿ ಎಂದು ವರದಿಯಾಗಿರುತ್ತದೆ. ಈ ಬಗ್ಗೆ ಈಗಾಗಲೇ ಜಿಲ್ಲಾ ಪಂಚಾಯತ್ ವತಿಯಿಂದ ತನಿಖೆ ಪ್ರಾರಂಭಗೊಂಡಿದೆ. ತನಿಖಾ ವರದಿಯನ್ನು ಪಡೆದು ಮುಂದಿನ ಕ್ರಮ ವಹಿಸಲಾಗುವುದು."

**(ಆ) "ರಾಜ್ಯದ ಮುಜರಾಯಿ ಇಲಾಖೆಯಡಿ ಇರುವ ದೇವಸ್ಥಾನಗಳ ಆರ್ಥಿಕ ಪರಿಸ್ಥಿತಿಯ ನಿರ್ವಹಣೆಯಲ್ಲಿರುವ ಕೊರತೆಗಳಿಂದಾಗಿ ಸಾರ್ವಜನಿಕರ ಮನಸ್ಸಿನಲ್ಲಿ ಆತಂಕ ಉಂಟಾಗಿರುವ ಬಗ್ಗೆ."**

– – – –

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ದಿನಾಂಕ:30/03/2015ರಂದು ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಪ್ರಸ್ತಾಪಿಸಿದ ವಿಷಯ ಕುರಿತು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

"ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಈ ಕೆಳಕಂಡ ದೇವಾಲಯಗಳು ಧಾರ್ಮಿಕ ದತ್ತಿ ಇಲಾಖೆಯ 'ಎ' ಪ್ರವರ್ಗದ ಅಧಿಸೂಚಿತ ದೇವಾಲಯವಾಗಿರುತ್ತದೆ.

- ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಕುಕ್ಕೆ ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ,
- ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ, ನಂಜನಗೂಡು, ಮೈಸೂರು ಜಿಲ್ಲೆ.
- ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಮಂದಾರ್ತಿ, ಉಡುಪಿ ಜಿಲ್ಲೆ. ಉಡುಪಿ.

ಸುಳ್ಯ ತಾಲ್ಲೂಕು ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಪ್ರತಿ ವರ್ಷವು ಸದರಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಯವರು ಆದಾಯ ವೆಚ್ಚ ಪಟ್ಟಿಯನ್ನು ತಯಾರಿಸಿ, ಮಂಜೂರಾತಿಗಾಗಿ ಸಲ್ಲಿಸುತ್ತಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಿ, ಮಂಜೂರಾತಿ ನೀಡಲಾಗುತ್ತಿದೆ. ದೇವಸ್ಥಾನದ ಆದಾಯ ಮತ್ತು ವೆಚ್ಚದ ವಿವರಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪಡೆದುಕೊಳ್ಳಬಹುದಾಗಿರುತ್ತದೆ.

ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನಕ್ಕೆ ಬರುವ ಆದಾಯದಲ್ಲಿ ವಂತಿಗೆ / ಧನ ಸಹಾಯವನ್ನು 2008 ರಿಂದ 2014 ರವರೆಗೆ ಹೊರಗಿನ ಯಾವುದೇ ವ್ಯಕ್ತಿ / ಸಂಸ್ಥೆಗಳಿಗೆ ಧನಸಹಾಯ ಮಾಡಿರುವುದಿಲ್ಲ ಎಂಬ ಮಾಹಿತಿಯನ್ನು ಈಗಾಗಲೇ ಮನವಿದಾರರಿಗೆ ಮಾಹಿತಿ ಹಕ್ಕು ಕಾಯ್ದೆಯಡಿ ನೀಡಲಾಗಿರುತ್ತದೆ.

ಉಡುಪಿ ಜಿಲ್ಲೆ, ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ 2012-13ನೇ ಸಾಲಿನಲ್ಲಿ ಗಣಕಯಂತ್ರಗಳ ನಿರ್ವಹಣೆಗೆ ₹.19,900.00, ಸೇವಾ ಕೌಂಟರ್‌ಗಳಿಗೆ ಕಂಪ್ಯೂಟರ್‌ಗಳು, ಸರ್ವರ್, ಬ್ಯಾಟರಿ ಅಳವಡಿಕೆ ಮತ್ತು ನಿರ್ವಹಣೆಗೆ 2013-14ನೇ ಸಾಲಿನಲ್ಲಿ ₹.2,26,934.00 ಮತ್ತು ಕಂಪ್ಯೂಟರ್ ನಿರ್ವಹಣೆಗೆ 2014-15ರಲ್ಲಿ (1.4.2014 ರಿಂದ 28.02.2015 ರವರೆಗೆ) ₹.28,458.00 ವೆಚ್ಚ ಮಾಡಲಾಗಿದೆ. ದೇವಸ್ಥಾನದ ಗಣಕೀಕರಣ ಬಗ್ಗೆ ಒಂದೇ ವರ್ಷದಲ್ಲಿ ₹.18.00 ಲಕ್ಷ ವೆಚ್ಚ ಮಾಡಿರುವುದಿಲ್ಲ.

ದೇವಳದ ಸಿಬ್ಬಂದಿಗಳಿಗೆ 2001-02ನೇ ಸಾಲಿನಿಂದ ಭವಿಷ್ಯ ನಿಧಿ ಸೌಲಭ್ಯವನ್ನು ನೀಡಲಾಗಿದೆ. ದೇವಳದ ಸಿಬ್ಬಂದಿಗಳ ಭವಿಷ್ಯ ನಿಧಿಗೆ 2012-13ನೇ ಸಾಲಿನಲ್ಲಿ ₹.9,82,271.00, 2013-14ನೇ ಸಾಲಿನಲ್ಲಿ ₹.10,46,953.00 ಮತ್ತು 2014-15 ರಲ್ಲಿ (1.4.2014 ರಿಂದ 28.02.2015 ರವರೆಗೆ) ₹.12,71,891.00 ವೆಚ್ಚ ಮಾಡಲಾಗಿದೆ.

ಯಕ್ಷಗಾನ ಮೇಳದ ಕಲಾವಿದರಿಗೆ ಭವಿಷ್ಯ ನಿಧಿ ಸೌಲಭ್ಯ ಇರುವುದಿಲ್ಲ. ಇವರು ಗೌರವ ಸಂಭಾವನೆಯ ಕಲಾವಿದರಾಗಿದ್ದು, ಮೇಳದ ಕಲಾವಿದರಿಗೆ ಕರಾರು ಮೂಲಕ ನವಂಬರ್ 18 ರಿಂದ ಮೇ 31 ರವರೆಗಿನ ಅವಧಿಗೆ ಗೌರವಧನ ನಿಗದಿ ಪಡಿಸಿ ಪಾವತಿಸಲಾಗಿರುತ್ತದೆ.

ಯಕ್ಷಗಾನ ಮೇಳದ ಕಲಾವಿದರ ಗೌರವ ಸಂಭಾವನೆ ಬಗ್ಗೆ ಬಜೆಟ್ ಮಂಜೂರಾತಿಯಂತೆ ಚಾಲ್ತಿ ಸಾಲಿನ ಸಂಭಾವನೆಯೊಂದಿಗೆ ಮುಂದಿನ ಸಾಲಿನ ಮುಂಗಡವನ್ನು ಪಾವತಿಸಿ, ಕಲಾವಿದರನ್ನು ಹಿಡಿದಿಟ್ಟುಕೊಳ್ಳುವುದು ಅನಿವಾರ್ಯವಾಗಿದ್ದು, ಈ ಶೀರ್ಷಿಕೆಯಲ್ಲಿ ಹೆಚ್ಚು ಖರ್ಚು ಬಂದಿರುವುದು ಅನಿವಾರ್ಯವಾಗಿದೆ.

ಯಕ್ಷಗಾನ 5 ಮೇಳಗಳ ಕಲಾವಿದರ ಗೌರವ ಸಂಭಾವನೆ 2012-13ನೇ ಸಾಲಿನಲ್ಲಿ ₹.74,76,021/-, 2013-14ನೇ ಸಾಲಿನಲ್ಲಿ ₹.1,13,70,153/- ಮತ್ತು ದಿನಾಂಕ:1.4.2014 ರಿಂದ 28.2.2015 ರವರೆಗೆ ₹.1,17,83,018/-ಗಳ ಸಂಭಾವನೆ ನೀಡಲಾಗಿದೆ.

ದೇವಳಕ್ಕೆ ಟಾಟಾ ಎಸ್. ವಾಹನ ಖರೀದಿ ಮತ್ತು ಬೊಲೆರೋ ವಾಹನ ದುರಸ್ಥಿ, ಇಂದನ ವೆಚ್ಚ ಸಹಿತ ನಿರ್ವಹಣೆ ಬಗ್ಗೆ 2012-13ನೇ ಸಾಲಿನಲ್ಲಿ ₹.4,35,998/-, 2013-14ನೇ ಸಾಲಿನಲ್ಲಿ ₹.2,20,311/- ಮತ್ತು ದಿನಾಂಕ:1.4.2014 ರಿಂದ 28.2.2015 ರವರೆಗೆ ₹.1,26,233/- ವೆಚ್ಚ ಮಾಡಲಾಗಿದೆ.

ದಶಾವತಾರ ಮೇಳಗಳ ಬಸ್ ಸಿಟಿ ಎಕ್ಸ್ 6266, ಸಿಟಿ ಎಕ್ಸ್ 6058, ಕೆ.ಎ.20-3976, ಕೆಎ20-(ಎ)2277, ಕೆಎ 15.2109 ಈ ಬಸ್ಸುಗಳು 1988 ರಿಂದ 2000 ರವರೆಗಿನ ಮಾಡಲ್ ಗಳಾಗಿದ್ದು, ಇವುಗಳ ದುರಸ್ಥಿ ಮತ್ತು ನಿರ್ವಹಣೆ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ದುರಸ್ಥಿ ಬಗ್ಗೆ ದೃಡೀಕರಣ, ದೃಡಪತ್ರ ಪಡೆದು ಟೆಂಡರ್ ಬುಲೆಟ್‌ನ/ದಿನಪತ್ರಿಕೆಯ ಮೂಲಕ ಪ್ರಕಟಣೆ ಹೊರಡಿಸಿ, ದರ ಪಟ್ಟಿ ಕರೆದು ಕನಿಷ್ಠ ದರಪಟ್ಟಿ ಸಲ್ಲಿಸಿದವರಿಂದ ದುರಸ್ಥಿ ಪಡಿಸಿ, ಮೇಳದ ತಿರುಗಾಟಕ್ಕೆ ಉಪಯೋಗಿಸಿಕೊಳ್ಳಲಾಗಿರುತ್ತದೆ. ದಶಾವತಾರ 5 ಮೇಳಗಳ ತಿರುಗಾಟವು ಪ್ರತಿ ವರ್ಷ ನವೆಂಬರ್ 8 ರಿಂದ ಮೇ 28 ರವರೆಗೆ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿನ ಸೇವಾರ್ಥಿಗಳ ಸೇವಾ ನಿರ್ವಹಣೆ ಬಗ್ಗೆ ಸಾಹಿತ್ಯ ಸಾಮಗ್ರಿಗಳನ್ನು ಸಾಗಿಸಲು ಈ ವಾಹನಗಳನ್ನು ಉಪಯೋಗಿಸಲಾಗುತ್ತಿದೆ.

ದಶವತಾರಗಳ ವಾಹನ ದುರಸ್ಥಿ, ಬಿಡಿಭಾಗಗಳ ಪೂರೈಕೆ, ತಿರುಗಾಟದ ಸಮಯದಲ್ಲಿ ಡೀಸೆಲ್ ಖರೀದಿ, ಜನರೇಟರ್‌ಗೆ ಡೀಸೆಲ್ ಖರೀದಿ, ದುರಸ್ಥಿಗಾಗಿ 2012-13ನೇ ಸಾಲಿನಲ್ಲಿ ₹.19,14,988/-, 2013-14ನೇ ಸಾಲಿನಲ್ಲಿ ₹.17,48,624/- ಮತ್ತು ದಿನಾಂಕ:1.4.2014 ರಿಂದ 28.2.2015 ರವರೆಗೆ ₹.18,16,620/- ವೆಚ್ಚ ಮಾಡಲಾಗಿದೆ.

ರಾಜ್ಯದ ಮುಜರಾಯಿ ಇಲಾಖಾಯಡಿ ಇರುವ ದೇವಸ್ಥಾನಗಳ ಆರ್ಥಿಕ ನಿರ್ವಹಣೆಯಲ್ಲಿ ಯಾವುದೇ ಕೊರತೆಗಳು ಇರುವುದಿಲ್ಲ. ”

## (ಇ) "ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಹೊರಗುತ್ತಿಗೆ ನೇಮಕದ ಬಗ್ಗೆ"

– – – –

ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):– ಸನ್ಮಾನ್ಯ ಸಭಾಪತಿಯವರೇ, ದಿನಾಂಕ:30/03/2015ರಂದು ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ. ಸಂಕನೂರ ಅವರು ಪ್ರಸ್ತಾಪಿಸಿದ ವಿಷಯ ಕುರಿತು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

"1) ಕೇಂದ್ರ ಸರ್ಕಾರದ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು ರಾಜ್ಯದಲ್ಲಿ 2009–10ನೇ ಸಾಲಿನಿಂದ ಜಾರಿಗೆ ತರಲಾಗಿದೆ.

2) ಐ.ಸಿ.ಪಿ.ಎಸ್ ಮಾರ್ಗಸೂಚಿಯಲ್ಲಿ ಈ ಕೆಳಕಂಡಂತೆ ಸ್ಪಷ್ಟಪಡಿಸಿದೆ.

> "Individual Terms of Reference (TOR) will be drawn up for each post by the State Government. This will give State Governments the flexibility to appoint people with State specific requirements. Every personnel shall have a contract of three years extendable by two years on the basis of performance appraisal reports. A review of performance of each personnel shall be undertaken by the Secretary at the State Level and by District Magistrate at the District Level".

ರಾಜ್ಯ ಸರ್ಕಾರವು ದಿನಾಂಕ:19–08–2011ರ ಆದೇಶದಲ್ಲಿ ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ವತಿಯಿಂದ 18 ಹುದ್ದೆಗಳನ್ನು ಹಾಗೂ ಪ್ರತಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ 12 ಹುದ್ದೆಗಳಂತೆ 30 ಜಿಲ್ಲೆಗಳಿಗೆ 360 ಹುದ್ದೆಗಳು ಸೇರಿ ಒಟ್ಟು 378 ಹುದ್ದೆಗಳನ್ನು ಸೃಜಿಸಿ ನೇಮಕಾತಿ ವಿಧಾನವನ್ನು ನಿಗಧಿಪಡಿಸಿದೆ. ಈ ಹುದ್ದೆಗಳ ಪೈಕಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಹುದ್ದೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಿಯೋಜನೆಯ ಮೇಲೆ, ಲೀಗಲ್–ಕಂ–ಪರಿವೀಕ್ಷಣಾಧಿಕಾರಿ ಹಾಗೂ ಲೆಕ್ಕಿಗರ ಹುದ್ದೆಗಳನ್ನು ನಿಯೋಜನೆ/ಹೊರಗುತ್ತಿಗೆ ಮೇಲೆ ತುಂಬಲು ಮತ್ತು ಉಳಿದ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ತುಂಬಲು ಅವಕಾಶ ಕಲ್ಪಿಸಲಾಗಿದೆ.

3) ಐ.ಸಿ.ಪಿಎಸ್. ಯೋಜನೆಯ ಪರಿಷ್ಕೃತ ಮಾರ್ಗಸೂಚಿಯಲ್ಲಿ "All recruitments shall be made as per the guidelines of the respective Government" ಎಂದು ಸ್ಪಷ್ಟಪಡಿಸಿದೆ. ಆದುದರಿಂದ ರಾಜ್ಯ ಸರ್ಕಾರವು ಆದೇಶ ದಿನಾಂಕ:19.08.2011ರ ಪ್ರಕಾರ ಸಮಗ್ರ ಮಕ್ಕಳ ಹಕ್ಕುಗಳ ರಕ್ಷಣಾ ಯೋಜನೆಯ ಹುದ್ದೆಗಳಿಗೆ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಕ್ರಮವಹಿಸಲಾಗುವುದು."

**(ಈ) "ಕರ್ನಾಟಕ ರಾಜ್ಯದ ನಿವೃತ್ತ ಪೊಲೀಸ್ ಸಿಬ್ಬಂದಿ/ಅಧಿಕಾರಿಗಳಿಗೆ ಆರೋಗ್ಯ ಭಾಗ್ಯ ಯೋಜನೆಯನ್ನು ಕ್ಯಾಂಟೀನ್ ಸೌಲಭ್ಯವನ್ನು, ಶವ ಸಂಸ್ಕಾರಕ್ಕೆ ಆರ್ಥಿಕ ನೆರವು ನೀಡಬೇಕೆಂಬ ವಿವಿಧ ಬೇಡಿಕೆಗಳನ್ನು ಒತ್ತಾಯಿಸಿ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘ ಮಂಗಳೂರು ನಗರದಲ್ಲಿ ಜಾತಾ ನಡೆಸಿರುವುದಲ್ಲದೆ ಏಪ್ರಿಲ್ 2ರಂದು ನಡೆಯುವ ಪೊಲೀಸ್ ಫ್ಲ್ಯಾಗ್ ಡೇ ಬಹಿಷ್ಕರಿಸುವುದಾಗಿ ತಿಳಿಸಿರುವ ಬಗ್ಗೆ"**

**– – – –**

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ದಿನಾಂಕ:31/03/2015ರಂದು ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಪ್ರಸ್ತಾಪಿಸಿದ ವಿಷಯ ಕುರಿತು ಮಾನ್ಯ ಗೃಹ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(1) ಪ್ರಸ್ತುತ ಆರೋಗ್ಯ ಭಾಗ್ಯ ಯೋಜನೆಯ ಸೌಲಭ್ಯವನ್ನು ಸೇವೆಯಲ್ಲಿರುವ ಪೊಲೀಸ್ ಅಧಿಕಾರಿ:ಸಿಬ್ಬಂದಿಗಳಿಗೆ (ಲಿಪಿಕ ಸಿಬ್ಬಂದಿ ಸೇರಿದಂತೆ) ಮತ್ತು ಅವರ ಅವಲಂಬಿತ ಕುಟುಂಬ ಅಂದರೆ ಪತಿ/ಪತ್ನಿ, ಅವಲಂಬಿತ ಮಕ್ಕಳು ಮತ್ತು ಅವಲಂಬಿತ ತಂದೆ ತಾಯಿರವರಿಗೆ ಮಾತ್ರ ನೀಡಲಾಗಿದೆ. ಆರೋಗ್ಯ ಭಾಗ್ಯ ಯೋಜನೆಯು ಪ್ರಮುಖವಾಗಿ ವೈದ್ಯಕೀಯ ವೆಚ್ಚ ಮರು ಪಾವತಿಯ ಮೇಲೆ ಅವಲಂಬಿತವಾಗಿದೆ.

ಕರ್ನಾಟಕ ಸರ್ಕಾರಿ ನೌಕರರ(ವೈದ್ಯಕೀಯ ಹಾಜರಾತಿ)ನಿಯಮ 1963ರಲ್ಲಿ ಸರ್ಕಾರಿ ನೌಕರರು ಮತ್ತು ನಿಯಮದಲ್ಲಿ ಅರ್ಥೈಸಿದ ಕುಟುಂಬದ ಸದಸ್ಯರಿಗೆ ಈ ನಿಯಮದಡಿಯಲ್ಲಿ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಯ ವೆಚ್ಚ ಮರು ಪಾವತಿಗೆ ಅವಕಾಶ ಕಲ್ಪಿಸಲಾಗಿದೆ. ಆದರೆ ಸೇವೆಯಿಂದ ನಿವೃತ್ತರಾದವರಿಗೆ ವೈದ್ಯಕೀಯ ವೆಚ್ಚ ಮರು ಪಾವತಿ ಸೌಲಭ್ಯವನ್ನು ನಿಯಮದಲ್ಲಿ ಕಲ್ಪಿಸಲಾಗಿಲ್ಲ. ಆದ್ದರಿಂದ ನಿವೃತ್ತ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ ಆರೋಗ್ಯ ಭಾಗ್ಯ ಯೋಜನೆಯ ಸೌಲಭ್ಯವನ್ನು ವಿಸ್ತರಿಸಲು ಸಾಧ್ಯವಾಗುತ್ತಿಲ್ಲ.

(2) ಪ್ರಸ್ತುತ ಸೇವೆಯಲ್ಲಿರುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕ್ಯಾಂಟೀನ್ ಸೌಲಭ್ಯ ನೀಡಲು ವ್ಯವಸ್ಥೆ ಮಾಡಲಾಗಿರುತ್ತದೆ. ಇದನ್ನು ನಿವೃತ್ತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ವಿಸ್ತರಿಸುವ ಪ್ರಸ್ತಾವವಿದ್ದು ಹಾಲಿ ವ್ಯವಸ್ಥೆ ಸಂಪೂರ್ಣ ಕಾರ್ಯಗತಗೊಂಡ ನಂತರ ಕ್ಯಾಂಟೀನ್ ಸೌಲಭ್ಯ ನೀಡುವ ಬಗ್ಗೆ ಪರಿಶೀಲಿಸಿ ತೀರ್ಮಾನಿಸಲಾಗುತ್ತದೆ.

(3) ನಿವೃತ್ತ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಮೃತರಾದ ಸಂದರ್ಭದಲ್ಲಿ ಶವ ಸಂಸ್ಕಾರಕ್ಕೆ ರೂ 5000/-ಗಳನ್ನು ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮನಿಧಿಯಿಂದ ನೀಡಲಾಗುತ್ತದೆ.

(4) ನಿವೃತ್ತ ಪೊಲೀಸ್ ಕಲ್ಯಾಣ ನಿಧಿಗೆ ಆಯವ್ಯಯದಲ್ಲಿ ಪ್ರತಿ ವರ್ಷ ರೂ 5.00ಕೋಟಿ ಮೀಸಲಿಟ್ಟು ನಿವೃತ್ತ ಪೊಲೀಸರಿಗೆ ವೈದ್ಯಕೀಯ ಸೌಲಭ್ಯ ನೀಡಬೇಕು ಎಂಬ ಅಂಶದ ಬಗ್ಗೆ ಪರಿಶೀಲಿಸಲಾಗುವುದು.

(5) ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮನಿಧಿ ನಿಯಮ 1975ರಲ್ಲಿ ಕಲ್ಪಿಸಲಾದ ಅವಕಾಶದಂತೆ ವೈದ್ಯಕೀಯ ಚಿಕಿತ್ಸೆ ವೆಚ್ಚಕ್ಕಾಗಿ ಒಂದು ವರ್ಷಕ್ಕೆ ಗರಿಷ್ಟ ರೂ 50,000/-ವರೆಗೆ ಧನ ಸಹಾಯ ನೀಡಲಾಗುತ್ತದೆ ”

**(ಉ) "ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಖಾಲಿ ಇದ್ದ 472 ಕಿರಿಯ ಇಂಜಿನಿಯರ್ ಮತ್ತು 207 ಸಹಾಯಕ ಇಂಜಿನಿಯರ್ ವೃಂದದ ಹುದ್ದೆಗಳನ್ನು ವಿಶೇಷ ನೇಮಕಾತಿ ಸಮಿತಿಯ ಮೂಲಕ ಆಯ್ಕೆ ಮಾಡುವ ಬಗ್ಗೆ."**

– – – – –

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ದಿನಾಂಕ:31/03/2015ರಂದು ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು ಮತ್ತು ಮಾನ್ಯ ಎಸ್.ವ್ಹಿ. ಸಂಕನೂರ ಅವರು ಪ್ರಸ್ತಾಪಿಸಿದ ವಿಷಯ ಕುರಿತು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

"ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಖಾಲಿ ಇದ್ದ 472 ಕಿರಿಯ ಇಂಜಿನಿಯರ್ (442 ಸಿವಿಲ್ + 30 ಎನ್‌ವಿರಾನ್‌ಮೆಂಟಲ್) ಮತ್ತು 207 ಸಹಾಯಕ ಇಂಜಿನಿಯರ್ ವೃಂದದ ಹುದ್ದೆಗಳನ್ನು ವಿಶೇಷ ನೇಮಕಾತಿ ಸಮಿತಿಯ ಮೂಲಕ ಆಯ್ಕೆ ಮಾಡಲು ತೀರ್ಮಾನಿಸಿ, ಈ ಸಂಬಂಧದ ನಿಯಮಗಳನ್ನು ರಚಿಸಿ ದಿನಾಂಕ:1.12.2014 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರನ್ನು ವಿಶೇಷ ನೇಮಕಾತಿ ಸಮಿತಿಯ ಅಧ್ಯಕ್ಷರನ್ನಾಗಿ ಹಾಗೂ ಇತರೆ 4 ಜನ ಸದಸ್ಯರು ಹಾಗೂ ಸದಸ್ಯ ಕಾರ್ಯದರ್ಶಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ. ಸದರಿ ಪ್ರಕ್ರಿಯೆಯಲ್ಲಿ ಹೈದರಾಬಾದ್ – ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ 166 ಕಿರಿಯ ಇಂಜಿನಿಯರ್ ಮತ್ತು 67 ಸಹಾಯಕ ಇಂಜಿನಿಯರ್ ವೃಂದದ ಹುದ್ದೆಗಳು ಸೇರಿರುತ್ತವೆ.

ಈಗಾಗಲೇ ಕಿರಿಯ ಇಂಜಿನಿಯರ್ ವೃಂದದ ಹುದ್ದೆಗಳಿಗೆ ಆಯ್ಕೆಯನ್ನು ಮುಖ್ಯ ಇಂಜಿನಿಯರ್, ರವರು ಅಖೈರುಗೊಳಿಸಿದ್ದು, ಸದರಿ ವೃಂದದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಹ ಪ್ರಕಟಿಸಿರುತ್ತಾರೆ. ಮುಂದುವರೆದು ಸಹಾಯಕ ಇಂಜಿನಿಯರ್ ವೃಂದದ ಹುದ್ದೆಗಳಿಗೆ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಆಯ್ಕೆ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಸ್ವಾಯತ್ತ ಕಾಲೇಜುಗಳು ಕೇಂದ್ರ / ರಾಜ್ಯ ಸರ್ಕಾರಗಳ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯಗಳಾಗಿದ್ದು, ಅವುಗಳಲ್ಲಿ ನಿಯಮಗಳನ್ವಯ ಗ್ರೇಡಿಂಗ್ ಸಿಸ್ಟಮ್ ನಲ್ಲಿ ಅಂಕಗಳನ್ನು ನೀಡುವ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದ್ದು, ಇದು ನಿಯಮ ಬದ್ಧವಾದ ಕ್ರಮವಾಗಿರುತ್ತದೆ. ಗ್ರೇಡಿಂಗ್ ಸಿಸ್ಟಮ್‌ನಲ್ಲಿ ಪಡೆಯುವ ಗ್ರೇಡನ್ನು (CGPA) ಕರ್ನಾಟಕ ಲೋಕ ಸೇವಾ ಆಯೋಗ ಮತ್ತು AICTE ಯು ಅನುಸರಿಸುತ್ತಿರುವ ಪರಿವರ್ತನಾ ಸೂತ್ರವನ್ನು [%=(CGPA–0.75)X10] ಅಳವಡಿಸಿಕೊಂಡು ಶೇಕಡವಾರು ಅಂಕಗಳನ್ನಾಗಿ ಪರಿವರ್ತಿಸಲಾಗುವುದು. ಉದಾಹರಣೆಗೆ ಗ್ರೇಡಿಂಗ್ ಪದ್ಧತಿಯಲ್ಲಿ ವಿದ್ಯಾರ್ಥಿಯೊಬ್ಬ ಗರಿಷ್ಟ ಗರಿಷ್ಠ 10 ಗ್ರೇಡಿಗೆ 7.5 ಗ್ರೇಡ್ ಗಳಿಸಿದ್ದಲ್ಲಿ ಆತನ / ಅವಳ ಶೇಕಡವಾರು ಅಂಕಗಳು 75 ಆಗದೇ, ಸೂತ್ರದ ಅನುಸಾರ [ಶೇಕಡವಾರು ಅಂಕ =(7.5 – 0.75) X 10= 67.5%] ಎಂದು ಪರಿಗಣಿಸಲಾಗುತ್ತದೆ. ಒಟ್ಟಾರೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಪಡೆದಿರುವ ಒಟ್ಟಾರೆ ಶೇಕಡವಾರು ಅಂಕಗಳನ್ನು ಆಧರಿಸಿ ಅರ್ಹತಾ ಕ್ರಮಾನುಸಾರ ಹಾಗೂ ಚಾಲ್ತಿಯಲ್ಲಿರುವ ಯಾವುದೇ ಕಾನೂನು ಅಥವಾ ಆದೇಶಾನುಸಾರ ಹುದ್ದೆಗಳಿಗೆ ಕಲ್ಪಿಸಿರುವ ಮೀಸಲಾತಿಗೆ ಒಳಪಟ್ಟು ಆಯ್ಕೆ ಮಾಡಲಾಗುತ್ತದೆ.

ಪ್ರಸಕ್ತ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಒಟ್ಟಾರೆ ಶೇಕಡವಾರು ಅಂಕಗಳನ್ನು ಆಧರಿಸಿ ಮೇಲೆ ತಿಳಿಸಿರುವಂತೆ ಅರ್ಹತಾ ಕ್ರಮಾನುಸಾರ ಹಾಗೂ ಚಾಲ್ತಿಯಲ್ಲಿರುವ ಯಾವುದೇ ಕಾನೂನು ಅಥವಾ ಆದೇಶಾನುಸಾರ ಹುದ್ದೆಗಳಿಗೆ ಕಲ್ಪಿಸಿರುವ ಮೀಸಲಾತಿಗೆ ಒಳಪಟ್ಟು ಆಯ್ಕೆ ಮಾಡಲಾಗುತ್ತಿದೆ ಎಂಬ ಮಾಹಿತಿಯನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಾಗಿದೆ."

# 8. ಸಾರಾಂಶ

***ಸಭಾಪತಿಯವರು:–***

ವಿಧಾನ ಪರಿಷತ್ತಿನ 127ನೇ ಅಧಿವೇಶನದ ಮುಂದುವರೆದ ಉಪವೇಶನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುವ ಪೂರ್ವದಲ್ಲಿ ಸದರಿ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನದ ಉಪವೇಶನವು ಒಟ್ಟು 14 ದಿನಗಳು ನಡೆದಿರುತ್ತದೆ.

ದಿನಾಂಕ: 13.03.2015 ರಂದು ಮಧ್ಯಾಹ್ನ 12.37 ಗಂಟೆಗೆ ಕಾರ್ಯಕಲಾಪ ಪ್ರಾರಂಭಗೊಂಡಿತು.

2015–16ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸಭೆಯ ಮುಂದೆ ಮಂಡಿಸಲಾಯಿತು ಹಾಗೂ ಆಯವ್ಯಯ ಅಂದಾಜುಗಳ ಮೇಲೆ ಸುಮಾರು 12 ಗಂಟೆಗಳಿಗೂ ಹೆಚ್ಚು ಕಾಲ ಚರ್ಚಿಸಲಾಯಿತು ಮತ್ತು ದಿನಾಂಕ: 30.03.2015ರಂದು ಸರ್ಕಾರದಿಂದ ಉತ್ತರಿಸಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಮೂರನೇ ಹಾಗೂ ನಾಲ್ಕನೇ ಪಟ್ಟಿಗಳನ್ನು ಮಂಡಿಸಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ರಾಷ್ಟ್ರಪತಿಯವರಿಂದ/ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಲಾಯಿತು.

ಅರ್ಜಿಗಳ ಸಮಿತಿಯ ನಾಲ್ಕು ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಯಿತು.

.12

ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ 2ನೇ ವರದಿ, 2014-15ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಎರಡನೇ ವರದಿ ಹಾಗೂ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಮೂರನೇ ವರದಿಯನ್ನು ಸದನಕ್ಕೆ ಒಪ್ಪಿಸಲಾಯಿತು.

ಭಾರತ ಸಂವಿಧಾನದ 205(1(ಎ)ನೆಯ ಅನುಚ್ಛೇದದ ಮೇರೆಗೆ 2014-15ನೇ ಸಾಲಿನ ಪೂರಕ ಅಂದಾಜುಗಳ (ಮೂರನೇ ಹಾಗೂ ಅಂತಿಮ ಕಂತು) ವರದಿಯನ್ನು ಮಂಡಿಸಲಾಯಿತು.

ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು 31ನೇ ಮಾರ್ಚ್, 2014ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು ಹಾಗೂ ಸಾಮಾನ್ಯ ಮತ್ತು ಸಾಮಾಜಿಕ ವಲಯ ವರದಿಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆಯ 39 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, 35 ಸೂಚನೆಗಳಿಗೆ ಉತ್ತರಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ 1794 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 180 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳಾಗಿ ಅಂಗೀಕರಿಸಿದ್ದು, 109 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 47 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 1614 ಪ್ರಶ್ನೆಗಳ ಪೈಕಿ, 1339 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸಲಾಯಿತು.

ನಿಯಮ 72 ರಡಿಯಲ್ಲಿ 93 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 08 ಸೂಚನೆಗಳನ್ನು ಸದನದಲ್ಲಿ ಚರ್ಚಿಸಿ ಉತ್ತರಿಸಲಾಗಿರುತ್ತದೆ ನಿಯಮ 330 ರಡಿಯಲ್ಲಿ 50 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 05 ಸೂಚನೆಗಳನ್ನು ಸದನದಲ್ಲಿ ಚರ್ಚಿಸಿ ಉತ್ತರಿಸಲಾಗಿದೆ.

ನಿಯಮ 59ರಡಿಯಲ್ಲಿ 03 ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ 01 ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿ, ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ ಹಾಗೂ 01 ಸೂಚನೆಯನ್ನು ಚರ್ಚಿಸಿ ಉತ್ತರಿಸಲಾಗಿದೆ. ನಿಯಮ 68ರಡಿಯಲ್ಲಿ 04 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಅದರಲ್ಲಿ 01 ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ.

**ಈ ಕೆಳಕಂಡ ಜಂಟಿ ಸದನ ಸಮಿತಿ ಹಾಗೂ ವಿಶೇಷ ಜಂಟಿ ಸದನ ಸಮಿತಿಗಳ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವಕ್ಕೆ ಸದನದ ಸಹಮತಿಯನ್ನು ಪಡೆಯಲಾಯಿತು.**

ಅ) 2013ನೇ ಸಾಲಿನ "ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕದ ಬಗ್ಗೆ" ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ: 30.06.2015ರವರೆಗೆ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವನೆಗೆ ಸದನವು ಸಹಮತಿ ನೀಡಿತು.

ಆ) "ಹೊರ ರಾಜ್ಯದ ಹಾಗೂ ರಾಜ್ಯದ ಗಡಿ ಭಾಗಗಳಲ್ಲಿ ನೆಲೆಸಿರುವ ಕನ್ನಡಿಗರ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅವಶ್ಯಕತೆಗಳ ಕುರಿತು" ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸದನಕ್ಕೆ ಸಲ್ಲಿಸಲು ದಿನಾಂಕ: 30.06.2015ರವರೆಗೆ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವನೆಗೆ ಸದನವು ಸಹಮತಿ ನೀಡಿತು.

ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 16 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಅಂಗೀಕಾರವನ್ನು ನೀಡಿರುತ್ತದೆ.

ಮಾನ್ಯ ಮುಖ್ಯಮಂತ್ರಿಗಳಿಗೆ, ಸಭಾನಾಯಕರಿಗೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ, ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರಿ ಮುಖ್ಯ ಸಚೇತಕರಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ಹಾಗೂ ವಿವಿಧ ಶಾಸಕಾಂಗ ಪಕ್ಷದ ನಾಯಕರುಗಳಿಗೆ, ಪತ್ರಿಕಾ ಹಾಗೂ ಮಾಧ್ಯಮಗಳ ವರದಿಗಾರರಿಗೆ, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ/ನೌಕರವರ್ಗದವರಿಗೆ ಮತ್ತು ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ ನೌಕರವರ್ಗದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ,.

(ಗಂಟೆ 3:30)

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):** ಸನ್ಮಾನ್ಯ ಸಭಾಪತಿಯವರೇ, ತಾವು ಶತಮಾನದ ಇತಿಹಾಸವುಳ್ಳಂತಹ ಈ ಸದನದ ಪೀಠದ ಮೇಲೆ ವಿರಾಜಮಾನರಾಗಿ ಕುಳಿತುಕೊಂಡು ಆ ಸ್ಥಾನದ ಹಿರಿಮೆ ಗೌರವವನ್ನು ಹೆಚ್ಚಿಸಿರುವುದಷ್ಟೇ ಅಲ್ಲದೆ, ಆ ಕುರ್ಚಿಗಿಂತ ಎತ್ತರವಾದ ವ್ಯಕ್ತಿತ್ವದಿಂದ ಅತ್ಯುತ್ತಮವಾಗಿ, ನಿಷ್ಪಕ್ಷಪಾತವಾಗಿ ಈ ಸದನದ ಗೌರವವನ್ನು ಎತ್ತಿ ಹಿಡಿಯುವ ರೀತಿಯಲ್ಲಿ ಸದನವನ್ನು ನಡೆಸಿಕೊಟ್ಟ ತಮಗೆ ಈ ಸರ್ಕಾರದ ಪರವಾಗಿ ಅಭಿನಂದನೆಯನ್ನು ಸಲ್ಲಿಸಬಯಸುತ್ತೇನೆ.

ಅದೇ ರೀತಿ ನಮ್ಮ ಉಪ ಸಭಾಪತಿಯವರಾದಂತಹ ಶ್ರೀ ಪುಟ್ಟಣ್ಣನವರು ತಮ್ಮ ಅನುಪಸ್ಥಿತಿಯಲ್ಲಿ ಆ ಸ್ಥಾನದಲ್ಲಿ ಕುಳಿತುಕೊಂಡು ಬಹಳ ಚೆನ್ನಾಗಿ ಕಲಾಪಗಳನ್ನು ನಡೆಸಿಕೊಟ್ಟಿದ್ದಾರೆ. ಅವರು ಬಹಳ ಉತ್ಸಾಹಿ ಯುವಕರಾಗಿರುವುದರಿಂದ ಕಲರ್‌ಫುಲ್ ಫುಲ್‌ಸೂಟ್‌ನಲ್ಲಿ ಉತ್ತಮ ರೀತಿಯಲ್ಲಿ ಸದನವನ್ನು ನಡೆಸಿಕೊಟ್ಟಿದ್ದಾರೆ. ನನಗೆ ಈ ಸಂದರ್ಭದಲ್ಲಿ ಒಂದು ವಿಷಯ ನೆನಪಿಗೆ ಬರುತ್ತಿದೆ. ಏನೆಂದರೆ, ನಮ್ಮ ಉಪ ಸಭಾಪತಿಯವರು ಆ ಸ್ಥಾನದಲ್ಲಿ ಕುಳಿತುಕೊಂಡಾಗ ಲೋಕಸಭೆಯಲ್ಲಿ ಯಾವ ರೀತಿ ಪ್ರಶ್ನೋತ್ತರ ವೇಳೆಯನ್ನು ನಡೆಸಿಕೊಡುತ್ತಾರೆ ಅದೇ ಮಾದರಿಯಲ್ಲಿಯೇ ನಡೆಸುತ್ತಿದ್ದರು. ಅಂದರೆ, ಪ್ರಶ್ನೋತ್ತರ ಅವಧಿ ಒಂದು ಗಂಟೆಗೆ ಮುಗಿಯಬೇಕೆಂದರೆ ಸರಿಯಾಗಿ ಒಂದು ಗಂಟೆಗೆ ಮುಗಿಸುತ್ತಿದ್ದರು. ಅಷ್ಟು ಶಿಸ್ತುಬದ್ಧರಾಗಿ ಒಂದು ಗಂಟೆಯಲ್ಲಿಯೇ ಪ್ರಶ್ನೋತ್ತರ ಕಲಾಪವನ್ನು ಮುಗಿಸುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಿ, ಉತ್ತಮವಾದ ರೀತಿಯಲ್ಲಿ ಈ ಸದನವನ್ನು ನಡೆಸಿಕೊಟ್ಟಿದ್ದಕ್ಕಾಗಿ ಅವರಿಗೂ ಸಹ ತುಂಬು ಹೃದಯದ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ನಮ್ಮ ಗೌರವಾನ್ವಿತ ಮುಖ್ಯ ಮಂತ್ರಿಗಳಾಗಿರುವಂತಹ ಶ್ರೀಮಾನ್ ಸಿದ್ದರಾಮಯ್ಯನವರು 2015–16ನೇ ಸಾಲಿನ ಆಯವ್ಯಯದ ಬಗ್ಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಹಾಗೂ ಈ ಸದನದ ಅನೇಕ ಕಲಾಪಗಳಲ್ಲಿ ಬಹಳಷ್ಟು ಸಮಯವನ್ನು ವಿನಿಯೋಗ ಮಾಡಿ, ಈ ಸದನದ ಎಲ್ಲಾ ಸದಸ್ಯರೊಂದಿಗೆ ಬಹಳಷ್ಟು ಉತ್ತಮವಾದಂತಹ ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ಸ್ವಾರಸ್ಯಕರವಾದಂತಹ ಭಾಷಣವನ್ನು ಮಾಡಿ, ಸದನದ ಎಲ್ಲಾ ಸದಸ್ಯರ ವಿಶ್ವಾಸವನ್ನು ಹಾಗೂ ಪ್ರೀತಿಯನ್ನು ಗಳಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ಯಾವಾಗ ಸಮಯ ದೊರಕುತ್ತದೆ ಆಗೆಲ್ಲಾ ಮೇಲ್ಮನೆಗೆ ಬಂದು ಹಾಗೂ ಯಾವಾಗ ಅವಶ್ಯಕತೆ ಇದೆ, ಆ ಸಮಯದಲ್ಲಿ ನಮ್ಮ ಅಪೇಕ್ಷೆ ಮೇರೆಗೆ ಬಂದು ಸದನದ ಕಲಾಪಗಳಲ್ಲಿ

ಭಾಗವಹಿಸಿ ಬಹಳಷ್ಟು ತಮ್ಮ ಅಮೂಲ್ಯ ಸಮಯವನ್ನು ವಿನಿಯೋಗ ಮಾಡಿದ್ದಾರೆ. ಆದಕಾರಣ ಅವರಿಗೂ ಸಹ ಹೃದಯಪೂರ್ವಕವಾದಂತಹ ಧನ್ಯವಾದಗಳನ್ನರ್ಪಿಸುತ್ತೇನೆ.

ಇನ್ನು ಕಾನೂನಿನ ಬಗ್ಗೆ ಅಪಾರ ಪಾಂಡಿತ್ಯವನ್ನು ಹೊಂದಿರುವಂಥವರು ಸಂಸದೀಯ ವ್ಯವಹಾರಗಳ ಬಗ್ಗೆ ಬಹಳಷ್ಟು ವಿಷಯಗಳನ್ನು ತಿಳಿದುಕೊಂಡಿರುವಂತಹ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಇಲ್ಲಿಗೆ ಬಂದು ನಮ್ಮ ಜೊತೆ ಬಹಳಷ್ಟು ಸಮಯವನ್ನು ಕಳೆದು, ಸದನದ ಕಲಾಪಗಳು ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕೆ ಸಹಕಾರ ನೀಡಿದಂತಹ ಸಂಸದೀಯ ವ್ಯವಹಾರಗಳ ಸಚಿವರಾದಂತಹ ಶ್ರೀ ಟಿ.ಬಿ. ಜಯಚಂದ್ರರವರಿಗೂ ಕೂಡ ತುಂಬು ಹೃದಯದ ಅಭಿನಂದನೆಯನ್ನು ಸಲ್ಲಿಸಲಿಚ್ಛಿಸುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಶ್ರೀ ಕೆ.ಎಸ್. ಈಶ್ವರಪ್ಪನವರು ಸರ್ಕಾರದ ಬಗ್ಗೆ ಬಹಳಷ್ಟು ಟೀಕೆ ಮಾಡಿದ್ದಾರೆ. ಅದೇ ರೀತಿ ಅನೇಕ ಸಲಹೆಗಳನ್ನು ಸಹ ನೀಡಿದ್ದಾರೆ. ಆದರೆ ಅವರು ಮಾಡಿರುವಂತಹ ಟೀಕೆಗಳನ್ನು ರಚನಾತ್ಮಕವಾದಂತಹ ಟೀಕೆಗಳೆಂದೇ ಭಾವಿಸಿದ್ದೇನೆ. ಸಂಸದೀಯ ವ್ಯವಸ್ಥೆಯಲ್ಲಿ ಕೊಡುವುದು ಇರುತ್ತದೆ ತೆಗೆದುಕೊಳ್ಳುವುದು ಇರುತ್ತದೆ ಅಂದರೆ, give and take ಇರುತ್ತದೆ. ಅವರೂ ಕೂಡ ಪರಿಣಾಮಕಾರಿಯಾಗಿ ಈ ಸದನದಲ್ಲಿ ಭಾಗವಹಿಸಿ ಈ ಸರ್ಕಾರಕ್ಕೆ ಅನೇಕ ಅಮೂಲ್ಯವಾದಂತಹ ಸಲಹೆಗಳನ್ನು ಕೊಟ್ಟು ಸದನದ ಕಾರ್ಯಕಲಾಪಕ್ಕೆ ಸಹಕಾರ ನೀಡಿದ್ದಾರೆ. ಆದಕಾರಣ ಅವರಿಗೂ ಸಹ ಸರ್ಕಾರದ ಪರವಾಗಿ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಹೇಳಿದಂತೆ ನಾನು cool temperament ನಲ್ಲಿ ಬೆಳೆದವನು. ನನಗೆ ಸಿಟ್ಟು ಬರುವುದು ಬಹಳ ಕಡಿಮೆ. ಅಪರೂಪಕ್ಕೆ ನನಗೆ ಸಿಟ್ಟು ಬರುತ್ತದೆ. ತಾಳ್ಮೆ, ಸಹನೆ ನಮ್ಮ ತಾಯಿಯ ಸಂಸ್ಕಾರದಿಂದ ಬಂದಿದೆ. ನಾನು ಶಾಲಾ ಬಾಲಕನಿದ್ದಾಗ ನಮ್ಮ ತಾಯಿ ಹೇಳಿದಂತಹ ಒಂದು ಮಾತು ಇವತ್ತಿಗೂ ನನಗೆ ನೆನಪಿದೆ. ನನ್ನ ತಾಯಿ ಏನು ಹೇಳಿದ್ದರೆಂದರೆ, ನಿನಗೆ ಯಾರಾದರು ಕೆಟ್ಟದ್ದಾಗಿ ಮಾತನಾಡಿದರೆ ನೀನು ಅದಕ್ಕೆ ಉತ್ತರ ಕೊಡಬೇಡ ಎಂದು ಹೇಳುತ್ತಿದ್ದರು. ಆದಾಗ್ಯೂ ಕೂಡ ತಾವು ಹೇಳಿದಂತೆ ಒಂದು ಸಂದರ್ಭದಲ್ಲಿ ನನಗೆ ಕೋಪ ಬಂತು, ಆದರೆ ನಂತರ ಅನೇಕ ನನ್ನ ಸ್ನೇಹಿತರು ನೀವು ಯಾವತ್ತು ಇಷ್ಟು ಸಿಟ್ಟಾಗಿದ್ದನ್ನು ನಾವು ನೋಡಿಲ್ಲ, ಇವತ್ತು ಏಕೆ ಸಿಟ್ಟಾದಿರಿ ಎಂದು ಕೇಳಿದರು. ನಾನು ಆ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಸಂಪರ್ಕ ಮಾಡಲು ಪ್ರಯತ್ನಿಸಿದೆ. ನಂತರ ಮಾನ್ಯ ವಿರೋಧ ಪಕ್ಷದ ನಾಯಕರೆ ನನ್ನ ಜೊತೆ ಬಹಳ ಪ್ರೀತಿ ವಿಶ್ವಾಸದಿಂದ ನನ್ನ ಜೊತೆ ನನ್ನ ಕೊಠಡಿಯಲ್ಲಿಯೇ ಕಾಲ ಕಳೆದರು. ಆದಕಾರಣ ಈ ಸಂದರ್ಭದಲ್ಲಿ ಆ ಘಟನೆಯ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

ಅತ್ಯಂತ ಹಿರಿಯರಾದಂತಹ ನಮ್ಮ ವಿರೋಧ ಪಕ್ಷದ ಉಪನಾಯಕರಾದಂತಹ ಶ್ರೀ ಕೆ.ಬಿ. ಶಾಣಪ್ಪನವರು ರಾಜ್ಯ ಸಭಾದಲ್ಲಿಯೂ ಕೆಲಸ ಮಾಡಿದಂತವರು, ಅವರೂ ಸಹ ಪ್ರತಿಪಕ್ಷದ ಉಪ ನಾಯಕರಾಗಿ ಬಹಳ ಮಹತ್ವದ ವಿಚಾರಗಳನ್ನು ನಮಗೆ ತಿಳಿಸುವುದರ ಜೊತೆಗೆ ಅನೇಕ ಸಲಹೆಗಳನ್ನು ಕೊಟ್ಟು ಸದನದ ಕಲಾಪದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಅವರಿಗೂ ಸಹ ಸರ್ಕಾರದ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಅದೇ ರೀತಿ ಜನತಾದಳದ ನಾಕರಾದಂತಹ ಶ್ರೀ ಬಸವರಾಜ ಹೊರಟ್ಟಿಯವರು ಬಹುಶಃ ನಮ್ಮ ರಾಜ್ಯದಲ್ಲಷ್ಟೇ ಅಲ್ಲ, ಇಡೀ ರಾಷ್ಟ್ರದಲ್ಲಿಯೇ ಅತ್ಯಂತ ಹಿರಿಯ ವಿಧಾನ ಪರಿಷತ್ತಿನ ಸದಸ್ಯರು. ಅವರು ಸದನದಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಹಿರಿತನದ ಮುಖಾಂತರ ಅಪಾರವಾದ ಅನುಭವದಿಂದ ಈ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದರ ಜೊತೆಗೆ, ಸರ್ಕಾರಕ್ಕೂ ಸಹ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರದ ನಿಲುವು ಸರಿ ಇದ್ದಾಗ ನಮ್ಮ ಜೊತೆಯಲ್ಲಿಯೇ ಬಂದಿದ್ದಾರೆ, ಅದೇ ರೀತಿ ನಾವು ತಪ್ಪು ಮಾಡಿದಾಗ ನೇರವಾಗಿ ನಮ್ಮನ್ನು ಖಂಡಿಸಿ, ಸದನದ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಆದಕಾರಣ ಅವರಿಗೂ ಸಹ ಸರ್ಕಾರದ ಪರವಾಗಿ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸಲಿಚ್ಛಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಜನತಾದಳದ ಉಪ ನಾಕರಾದಂತಹ ಶ್ರೀ ಮರಿತಿಬ್ಬೇಗೌಡರು ಈ ಸಲ ವಿಶೇಷವಾಗಿ ಹೇಳಬೇಕೆಂದರೆ, ಅವರು ಎಂದೂ ಸಹ ತಮ್ಮ ಗೆರೆ ದಾಟಿ ಹೋಗಿಲ್ಲ, ಒಮ್ಮೊಮ್ಮೆ ಏನಾಗುತ್ತಿತ್ತೆಂದರೆ ಅವರನ್ನು ನಿಯಂತ್ರಣ ಮಾಡುವುದಕ್ಕೆ ತಮಗೂ ಸಹ ಕಷ್ಟವಾಗುತ್ತಿತ್ತು. ಆದರೆ ಈ ಸಲ ಸಂಸದೀಯ ಚೌಕಟ್ಟಿನ ಗಡಿ ದಾಟಿ ಹೋಗದಂತೆ ಬಹಳಷ್ಟು ಅತ್ಯುತ್ತಮವಾಗಿ ತಮ್ಮ ವಾಗ್ಝರಿಯ ಮುಖಾಂತರ ಬಹಳ ವಿಚಾರಗಳನ್ನು ಸರ್ಕಾರಕ್ಕೆ ತಿಳಿಸಿದ್ದಾರೆ, ಆದಕಾರಣ ಅವರಿಗೂ ಸಹ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅದೇ ರೀತಿ ನಮ್ಮ ಸರ್ಕಾರದ ಎಲ್ಲಾ ಸಚಿವರು ಪೂರ್ಣ ಪ್ರಮಾಣವಾಗಿ ಹಾಜರಾಗಿದ್ದಲ್ಲದೆ, ಕ್ರಮಬದ್ಧವಾದಂತಹ ಉತ್ತರವನ್ನು ಹಾಗೂ ಸಂಸದೀಯ ವ್ಯವಸ್ಥೆಗೆ ಪೂರಕವಾದಂತಹ ಅನೇಕ ವಿಚಾರಗಳನ್ನು ಹಿರಿಯ ಸಚಿವರು, ಕಿರಿಯ ಸಚಿವರು ಎಲ್ಲರೂ ಕೂಡ ಅತ್ಯುತ್ತಮ ರೀತಿಯಿಂದ ತಮ್ಮ ಎಲ್ಲಾ ಟೀಕೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ಒಮ್ಮೆಯೂ ಸಹ ನಿಮ್ಮ ಮೇಲೆ ಕೋಪವನ್ನು ತೋರ್ಪಡಿಸಿಕೊಳ್ಳದೆ ಅತ್ಯತ್ತಮ ರೀತಿಯಿಂದ ಈ ಸದನದ ಕಾರ್ಯ ಕಲಾಪಗಳಲ್ಲಿ ಸಕಾರಾತ್ಮಕವಾಗಿ ಭಾಗವಹಿಸಿ ಪ್ರತಿಪಕ್ಷದ

ಸದಸ್ಯರ ಎಲ್ಲಾ ವಿಚಾರಗಳನ್ನು ನೇರವಾಗಿ ಹೃದಯಕ್ಕೆ ತೆಗೆದುಕೊಂಡು ಅವರ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಬದ್ಧತೆಯಿಂದ, ನಿಷ್ಠೆಯಿಂದ ಕೆಲಸ ಮಾಡಿದಂತಹ ನನ್ನ ಎಲ್ಲಾ ಸಹದ್ಯೋಗಿ ಸಚಿವರುಗಳಿಗೂ ಹೃದಯಪೂರ್ವಕವಾದಂತಹ ಕೃತಜ್ಞತೆಗಳನ್ನು ಸಲ್ಲಿಸಲಿಚ್ಚಿಸುತ್ತೇನೆ. ಇನ್ನು ಸರ್ಕಾರದ ಮುಖ್ಯ ಸಚೇತಕರಾದ ಮಾನ್ಯ ಆರ್.ವಿ. ವೆಂಕಟೇಶ್‌ರವರು ನಮಗೆ ಬಹಳಷ್ಟು ಸಹಕಾರವನ್ನು ನೀಡಿದ್ದಾರೆ. ಅವರಿಗೆ ನನ್ನ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ಸದನದಲ್ಲಿ ಸಚಿವರು ಇಲ್ಲದಿದ್ದರೆ ಸ್ವತಃ ಅವರೇ ಹೋಗಿ ಸಚಿವರುಗಳನ್ನು ಸದನಕ್ಕೆ ಕರೆದುಕೊಂಡು ಬಂದು ಸದನದ ಕಲಾಪ ಸುಗಮವಾಗಿ ನಡೆಯುವಂತೆ ಮಾಡಿ ಬಹಳಷ್ಟು ಸಹಕಾರವನ್ನು ನಮಗೆ ನೀಡಿದ್ದಾರೆ. ಮುಖ್ಯ ಸಚೇತಕರ ಕೆಲಸದ ಜೊತೆಗೆ ಈ ಸದನದಲ್ಲಿಯೂ ಸಹ ಬಹಳ ಸಕ್ರಿಯವಾಗಿ ಭಾಗವಹಿಸಿ, ಈ ಸದನದ ಕಲಾಪಕ್ಕೆ ಮೆರಗು ನೀಡಿದಂತಹ ಮಾನ್ಯ ಆರ್.ವಿ. ವೆಂಕಟೇಶ್‌ರವರಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ಇನ್ನು ವಿರೋಧ ಪಕ್ಷದ ಮುಖ್ಯ ಸಚೇತಕರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಬಹಳ ಕ್ರಮಬದ್ಧವಾಗಿ ಕೆಲಸ ಮಾಡಿದ್ದಾರೆ. I really appreciate him. ಅವರಿಗೆ ಅಭಿನಂದನೆ ಮತ್ತು ಕೃತಜ್ಞತೆಗಳನ್ನು ಹೇಳುವುದರ ಜೊತೆಗೆ, ಅವರ ಬಗ್ಗೆ ನನಗೆ ವಿಶೇಷವಾಗಿ ಗೌರವಾದರಗಳಿವೆ. ಅವರು ಬಹಳ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಮಾನ್ಯ ಮಧುಸೂದನ್‌ರವರು ಅವರನ್ನು ದಾರಿ ತಪ್ಪಿಸಿದರೂ ಸಹ ದಾರಿ ತಪ್ಪದಂತೆ ತಾವು ಈ ಸದನದ ಕಲಾಪಗಳಲ್ಲಿ ಭಾಗವಹಿಸಿ ಅತ್ಯುತ್ತಮ ರೀತಿಯಲ್ಲಿ ಅವರು ಕೆಲಸವನ್ನು ಮಾಡಿದ್ದಾರೆ. ಅವರಿಗೂ ಸಹ ನಾನು ಹೃದಯ ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಇನ್ನು ಭಾರತೀಯ ಜನತಾ ಪಕ್ಷ ಮತ್ತು ಜನತಾದಳದ ಎಲ್ಲಾ ವಿರೋಧ ಪಕ್ಷದ ನಾಯಕರುಗಳು ಅದ್ಭುತ ರೀತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಭಾಗವಹಿಸಿ ಸಲಹೆಸೂಚನೆಗಳು ಮತ್ತು ಅತ್ಯುತ್ತಮವಾದ ಮಾರ್ಗದರ್ಶನವನ್ನು ಈ ಸದನಕ್ಕೆ ನೀಡಿದ್ದಾರೆ. ಸಮರ್ಥ ಪ್ರತಿಪಕ್ಷ ಎನ್ನುವ ರೀತಿಯಲ್ಲಿ ತಾವು ಕಲಾಪಗಳನ್ನು ಸುಲಭವಾಗಿ ನಡೆಸಿಕೊಂಡು ಹೋಗಿರುವುದಕ್ಕೆ ತಮ್ಮೆಲ್ಲರಿಗೂ ಸಹ ಅನಂತ ಅನಂತ ಕೃತಜ್ಞತೆಗಳನ್ನು ಈ ಸಂದರ್ಭದಲ್ಲಿ ಅರ್ಪಿಸ ಬಯಸುತ್ತೇನೆ.

ಇನ್ನು ನಮ್ಮ ಪಕ್ಷದ ಸದಸ್ಯರು Treasury Bench ಇರುವವರು ನಿಜವಾಗಿ ಎಲ್ಲಾ ಸದಸ್ಯರು ಬಹಳಷ್ಟು ಅನುಭವ ಹೊಂದಿರುವ ಸಂಸದೀಯ ಪಟುಗಳು, ಕಿರಿಯ ಸದಸ್ಯರು ಕೂಡ ಬಹಳ ಅನುಭವ ಹೊಂದಿದ್ದು, ಪ್ರತಿಪಕ್ಷದ ಸಲಹೆಗಳಿಗೂ ಸಹ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಯಾರು ಏನೇ ಹೇಳಿದರೂ

ಸಹ ಶಾಂತ ರೀತಿಯಿಂದ ಕೇಳಿ ಸರಿಯಾಗಿ ಉತ್ತರ ನೀಡಿದಂತಹ ನಮ್ಮ ಪಕ್ಷದಎಲ್ಲಾ Treasury Bench ನಲ್ಲಿರುವ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಸಚಿವಾಲಯ, ಎಲ್ಲಾ ಇಲಾಖೆಯ ಅಧಿಕಾರಿಗಳು ಸಹ ನಮ್ಮ Treasury Bench ಗೆ ಬಹಳಷ್ಟು ಸಹಾಯವನ್ನು ಮಾಡಿದ್ದಾರೆ. ನಿಜವಾಗಿಯೂ ಅವರ presence ಇಲ್ಲಿ ಇರದಿದ್ದರೆ ವಿರೋಧ ಪಕ್ಷದವರಿಗಿಂತಲೂ ಹೆಚ್ಚು ನಮಗೆ ತೊಂದರೆ ಆಗುತ್ತದೆ, Treasury Bench ಗೆ ಸಹಾಯ ಮಾಡಲು ಇರುವಂತಹ ನಮ್ಮ ಅತ್ಯಂತ ಸಮರ್ಥ, ಪ್ರಾಮಾಣಿಕ, ನಿಷ್ಠಾವಂತ ಅಧಿಕಾರಿಗಳು ಸಹ ಸದನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಚಿವರಿಗೆ ಮತ್ತು ಸದನಕ್ಕೆ ಎಲ್ಲಾ ರೀತಿಯ ಸಹಕಾರಗಳನ್ನು ನೀಡಿದ್ದಾರೆ. ಹಾಗಾಗಿ ಎಲ್ಲಾ ಅಧಿಕಾರಿ ಮಿತ್ರರಿಗೂ ಸಹ ನನ್ನ ಅಭಿನಂದನೆಗಳನ್ನು ತಿಳಿಸುತ್ತೇನೆ.

ಇನ್ನು ಮಾಧ್ಯಮದ ಮಿತ್ರರು, ದೃಶ್ಯ ಮಾಧ್ಯಮ ಇರಬಹುದು, ಪ್ರತಿಕಾ ಮಾಧ್ಯಮ ಇರಬಹುದು ಅವರು ಈ ಸದನದ ವರದಿಯನ್ನೇನು ಮಾಡಿದ್ದಾರೆ, ಅದು ಇಡೀ ನಾಡಿನ ಜನತೆಗೆ ಮಾತ್ರವಲ್ಲದೇ nation wide circulation ಇರುವಂತಹ ತಮ್ಮ ಮಾಧ್ಯಮದ ಮೂಲಕ ಇಡೀ ರಾಷ್ಟ್ರಕ್ಕೆ ತಮ್ಮ ವರದಿಯನ್ನು ನೀಡಿದ್ದಾರೆ. ಬಹಳಷ್ಟು ಅತ್ಯುತ್ತಮ ರೀತಿಯಿಂದ ಸದನದ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿ ಸದನದಲ್ಲಿ ಭಾಗವಹಿಸಿದ್ದಾರೆ. ಮಾಧ್ಯಮದ ಮಿತ್ರರು ಸದನದಲ್ಲಿ ನೂರಕ್ಕೆ ನೂರು ಹಾಜರಾತಿಯಲ್ಲಿ ಸದನದ ಕಲಾಪಗಳಲ್ಲಿ ಆಸಕ್ತಿಯನ್ನು ತೋರಿಸಿ, ನಾಡಿನ ಜನತೆಗೆ ಮತ್ತು ಈ ರಾಷ್ಟ್ರದ ಜನತೆಗೆ ಶತಮಾನಗಳ ಇತಿಹಾಸ ಹೊಂದಿರುವಂತಹ ಈ ಸದನದ ಘನತೆ ಗೌರವವನ್ನು ಹೆಚ್ಚಿಸತಕ್ಕ ಕೆಲಸವನ್ನು ಅವರು ಮಾಡಿದ್ದಾರೆ. ಅವರಿಗೂ ಸಹ ನಾನು ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಇನ್ನು ನಮ್ಮ ಸಚಿವಾಲಯದ ಅಧಿಕಾರಿಗಳು, ಕಾರ್ಯದರ್ಶಿಯವರಾದ ಶ್ರೀ ವಿ. ಶ್ರೀಶ್ ರವರನ್ನು ಒಳಗೊಂಡು ಎಲ್ಲಾ ಅಧಿಕಾರಿ/ನೌಕರರಿಗೂ ಸಹ ನಾನು ಈ ಸಂದರ್ಭದಲ್ಲಿ ವಿಶೇಷವಾದಂತಹ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ಸದಾ ಬಹಳ ತಾಳ್ಮೆಯಿಂದ ಕೆಲಸ ಮಾಡಿ ಈ ಅಧಿವೇಶನವನ್ನು ಯಶಸ್ವಿಗೊಳಿಸುವಲ್ಲಿ ಬಹಳ ಸಹಕಾರವನ್ನು ನೀಡಿರುವುದರಿಂದ ವಿಶೇಷವಾಗಿ ಸರ್ಕಾರದ ಪರವಾಗಿ ಅವರಿಗೆ ಸಹ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಕರ್ನಾಟಕ ವಿಧಾನ ಪರಿಷತ್ತಿನ 127ನೇ ಅಧಿವೇಶನ ಹಾಗೂ ಮುಂದುವರೆದ ಉಪವೇಶನಗಳನ್ನು ಸುಗಮವಾಗಿ ನಡೆಸಲು ಕಾರಣ ಕರ್ತರಾದ ತಮಗೆ ವಿಶೇಷವಾಗಿ ನಮ್ಮ ಪಕ್ಷದ ಕಡೆಯಿಂದ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಅದೇ ರೀತಿ ಮಾನ್ಯ ಉಪ ಸಭಾಪತಿಗಳಿಗೂ ಸಹ ವಿಶೇಷವಾದ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಭಾನಾಯಕರು ಅದರಲ್ಲಿಯೂ ನಮ್ಮ ಸಭಾನಾಯಕರು ಬಹಷ್ಟು ಕಾಲ ನಮ್ಮ ವಿಧಾನ ಪರಿಷತ್ತಿನಲ್ಲಿಯೇ ಕಾಲವನ್ನು ಕಳೆದಿದ್ದಾರೆ. ಹಾಗಾಗಿ ಅವರಿಗೂ ಸಹ ನನ್ನ ಅಭಿನಂದನೆಗಳು. ತಾಳ್ಮೆಗೆ ಮತ್ತೊಂದು ಹೆಸರಾದಂತಹ ಸನ್ಮಾನ್ಯ ಸಭಾನಾಯಕರು ಯಾವುದೇ ಸಂದರ್ಭದಲ್ಲಿಯೂ ಕೂಡ ತಮ್ಮ ತಾಳ್ಮೆಯನ್ನು ಕಳೆದುಕೊಳ್ಳದೇ ಕೆಲಸ ಮಾಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ನಾವು ಅವರಿಗೆ ತೊಂದರೆಯನ್ನು ಕೊಟ್ಟಿದ್ದೇವೆ. ಆದರೂ ಸಹ ಅದನ್ನೆಲ್ಲ ನಿಭಾಯಿಸಿ ಕೆಲಸವನ್ನು ಮಾಡಿದ್ದಾರೆ. ಅವರಿಗೂ ಸಹ ನನ್ನ ಅಭಿನಂದನೆಗಳು. ಇನ್ನು ವಿಶೇಷವಾಗಿ ನಮ್ಮ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಸರ್ಕಾರದಲ್ಲಿನ ಮಂತ್ರಿ ಮಂಡಲದಲ್ಲಿರುವ ಎಲ್ಲಾ ಸಂಪುಟ ದರ್ಜೆ ಮತ್ತು ರಾಜ್ಯಮಂತ್ರಿಗಳಿಗೂ ಸಹ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸರ್ಕಾರದ ಮುಖ್ಯ ಸಚೇತಕರು, ವಿರೋಧ ಪಕ್ಷದ ಮುಖ್ಯ ಸಚೇತಕರು ಮತ್ತು ನಮ್ಮ ವಿರೋಧ ಪಕ್ಷದ ನಾಯಕರು ಇಲ್ಲದಿರುವ ಕಾರಣ ಅವರ ಪರವಾಗಿ ಮಾತನಾಡುತ್ತಿರುವ ಸಂದರ್ಭದಲ್ಲಿ ಅವರಿಗೂ ಮತ್ತು ನಮ್ಮ ಉಪನಾಯಕರಿಗೂ ಸಹ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಜ್ಯಾತ್ಯಾತೀತ ಜನತಾ ದಳದ ನಾಯಕರು ಮತ್ತು ಉಪನಾಯಕರು, ಹಾಗೂ ಸದನದ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ವಿಧಾನ ಪರಿಷತ್ತಿನ ಕಾರ್ಯದರ್ಶಿಗಳು, ಸಿಬ್ಬಂದಿ ವರ್ಗ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳ ವರ್ಗ ಮತ್ತು ಸಿಬ್ಬಂದಿ ವರ್ಗದವರಿಗೂ ಸಹ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಇನ್ನು ವಿಶೇಷವಾಗಿ ಮಾಧ್ಯಮದ ಮಿತ್ರರು ಮತ್ತು ಪತ್ರಕರ್ತರಿಗೂ ಸಹ ಕೃತಜ್ಞತೆಗಳನ್ನು ಸಲ್ಲಿಸುವ ಮುಖಾಂತರ ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಸದನವನ್ನು ರಾಷ್ಟ್ರಗೀತೆಯೊಂದಿಗೆ ಅರ್ನಿದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

(ಸದನವುಮಧ್ಯಾಹ್ನ 3 ಗಂಟೆ 45 ನಿಮಿಷಕ್ಕೆ
ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)